
ಡಿ.ಎ. ಪಾಂಡು ಸ್ಮೃತಿ ಗ್ರಂಥಮಾಲೆ-೨೩





ಕನ್ನಡ ಸಾಹಿತ್ಯ ದಿಗ್ಗಜರು

ಪ್ರೊ. ಜಿ. ಅಶ್ವತ್ಥನಾರಾಯಣ









ಸಿಂಚನ ಕನ್ನಡ ವೇದಿಕೆ
ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು-೫೬೦ 041.

ಡಿ.ಎ.ಪಾಂಡು ಸ್ಮೃತಿಗ್ರಂಥಮಾಲೆ-೨೩

ಕನ್ನಡ ಸಾಹಿತ್ಯ ದಿಗ್ಗಜರು

ಪ್ರೊ. ಜಿ. ಅಶ್ವತ್ಥನಾರಾಯಣ

ಸಿಂಚನ : ಕನ್ನಡವೇದಿಕೆ
ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಎಸ್.ಎಸ್.ಎಂ.ಆರ್.ವಿ. ಕಾಲೇಜು ಆವರಣ, ಸಿ.ಎ. ೧೭
೨೬ನೇ ಮುಖ್ಯರಸ್ತೆ, ೩೬ನೇ ಅಡ್ಡರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ
ಬೆಂಗಳೂರು - ೫೬೦ ೦೪೧

KANNADA SAAHITYA DIGGAJARU - by Prof. G. Aswathanarayana
Published by Sinchana Kannada Vedike, R.V. Institute of Management, C.A. 17, 26th Main, 36th Cross, 4th 'T' Block, Jayanagar, Bangalore - 41.

First Impression : 2014 Pages : xii + 192 = 204 Price : ₹ **150/-**

ಕನ್ನಡ ಸಾಹಿತ್ಯ ದಿಗ್ಗಜರು (ವ್ಯಕ್ತಿಚಿತ್ರಗಳು) ಲೇಖಕರು : ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರಕಾಶಕರು: ಸಿಂಚನ ಕನ್ನಡ ವೇದಿಕೆ, ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸಿ.ಎ. ೧೭, ೨೬ನೇ ಮುಖ್ಯರಸ್ತೆ, ೩೬ನೇ ಅಡ್ಡರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೪೧.

ಮೊದಲ ಮುದ್ರಣ : ೨೦೧೪ ಪುಟಗಳು : xii + ೧೯೨ = ೨೦೪ ಬೆಲೆ : ₹ ೧೫೦/-

ಮುದ್ರಣ
ಇಳಾ ಮುದ್ರಣ
ಬೆಂಗಳೂರು - ೫೬೦ ೦೨೬
✆ : ೨೬೭೫೭೧೫೯

ಲೇಖಕರ ನುಡಿ

ನಮ್ಮ ನಾಡಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಜನಿಸಿದ ಸಾಹಿತಿ–ವಿದ್ವಾಂಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಕೃತಿಗಳಿಂದ ಛಾಪನ್ನು ಮೂಡಿಸುವುದರ ಜತೆಗೆ ತಮ್ಮ ವ್ಯಕ್ತಿತ್ವ – ಚಾರಿತ್ರ್ಯಗಳಿಂದ ಜನಪ್ರೀತಿಗಳಿಸಿ ಜನಪ್ರಿಯರಾಗಿದ್ದರು. ಅವರೆಲ್ಲ ಸದ್ಗೃಹಸ್ಥರಾಗಿದ್ದರು; ಸಜ್ಜನರಾಗಿದ್ದರು; ಸಾತ್ತ್ವಿಕ ಸ್ವಭಾವದವರಾಗಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇತರರಿಗೆ ಆದರ್ಶಪ್ರಾಯರಾದ ಮಹನೀಯರಾಗಿದ್ದರು. ಇಂಥವರಲ್ಲಿ ಹತ್ತಾರು ಮಂದಿಯನ್ನು ಕಂಡು ಮಾತನಾಡಿದ ಭಾಗ್ಯ ನನ್ನದು. ಅವರ ಬರಹಗಳಿಂದಷ್ಟೇ ಅಲ್ಲದೆ ಅವರ ವ್ಯಕ್ತಿತ್ವ ಸ್ವಭಾವಗಳಿಂದ ಸ್ಫೂರ್ತಿಗೊಂಡವನು ನಾನು. ಇಂಥವರಲ್ಲಿ ೫೦ ಮಂದಿ ಮಹನೀಯರನ್ನು ಕುರಿತು ರಚಿಸಿದ ಮಾಲಿಕೆಯಲ್ಲಿ ವ್ಯಕ್ತಿಚಿತ್ರಗಳಲ್ಲಿ ೧೨ ಇಲ್ಲಿವೆ. ಇವೆಲ್ಲ ರೇಡಿಯೋನಲ್ಲಿ ಪದೇ ಪದೇ ಪ್ರಸಾರವಾಗಿ ಜನಮನ್ನಣೆ ಗಳಿಸಿವೆ. ಇವರ ಬಗ್ಗೆ ಹತ್ತಾರು ಕಡೆ ಉಪನ್ಯಾಸಗಳನ್ನು ಸಾರ್ವಜನಿಕ ಸಭೆಗಳಲ್ಲಿ ನೀಡಿದ್ದೇನೆ. ಕೇಳಿದವರೆಲ್ಲ ಆನಂದಿಸಿ ಈ ಉಪನ್ಯಾಸಗಳನ್ನೆಲ್ಲ ಅಚ್ಚುಮಾಡಿಸಿ ಎಂದು ಒತ್ತಾಯಿಸುತ್ತಿದ್ದರು.

ಅದಕ್ಕೀಗ ಕಾಲ ಕೂಡಿಬಂದಿದೆ. ಕನ್ನಡ ಸಿಂಚನ ವೇದಿಕೆಯ ಪ್ರಧಾನ ಸಂಪಾದಕರೂ ಆತ್ಮೀಯರೂ ಆದ ಡಾ॥ ಟಿ.ವಿ. ರಾಜು ಅವರು ಇದನ್ನು ಸಿಂಚನ ಕನ್ನಡ ಪ್ರಕಟನೆಗಳ ಮಾಲೆಯಲ್ಲಿ ಪ್ರಕಟಿಸುತ್ತಿದ್ದಾರೆ.

ಸಹೃದಯ ಸಾಹಿತ್ಯಪ್ರಿಯರೂ ಶ್ರೇಷ್ಠ ಆಡಳಿತಗಾರರೂ ಸ್ನೇಹಪ್ರಿಯ, ಸಾಹಿತ್ಯಾಭಿಮಾನಿಗಳೂ ಅಧ್ಯಯನಶೀಲರೂ ಸದಾ ಉತ್ಸಾಹಿಗಳೂ ಆದ ಡಾ॥ ಟಿ.ವಿ. ರಾಜು ಅವರು ಇತರರನ್ನು ಪ್ರೋತ್ಸಾಹಿಸುವುದರಲ್ಲಿ ಅಗ್ರಗಣ್ಯರು. ಡಾ॥ ಟಿ.ವಿ. ರಾಜು ಅವರು "ನಮ್ಮ ನಾಡಿನ ಶ್ರೇಷ್ಠ ಸಾಹಿತ್ಯ ರತ್ನಗಳಲ್ಲಿ ನೂರಾರು ಮಂದಿಯನ್ನು, ಬರಹ–ಭಾಷಣಗಳ ಮೂಲಕ ನಾಡಿಗೆ ಪರಿಚಯಿಸಿದ್ದೀರಿ. ಕೆಲವರನ್ನು ಕುರಿತ ಒಂದಷ್ಟು ಬರಹಗಳನ್ನು ನಮ್ಮ ಸಿಂಚನ ಕನ್ನಡ ವೇದಿಕೆಯಿಂದ ಪ್ರಕಟಿಸೋಣ" ಎಂದಾಗ ನಾನು ರಚಿಸಿದ ವ್ಯಕ್ತಿಚಿತ್ರಗಳಲ್ಲಿ ಆಯ್ದ ಕೆಲವು ಬರಹಗಳನ್ನು ಇಲ್ಲಿ ನೀಡಿದ್ದೇನೆ.

ಇಲ್ಲಿ ನಮ್ಮ ನಾಡಿನ ಎಲ್ಲ ಗಣ್ಯಸಾಹಿತಿಗಳನ್ನು ಕುರಿತ ಬರಹಗಳಿಲ್ಲ. ಸಮಕಾಲೀನರ ಬಗ್ಗೆ ಬರೆದ ಬರಹಗಳಿಲ್ಲ, ಆಧುನಿಕ ಕನ್ನಡ ಸಾಹಿತಿಗಳನ್ನು ಕುರಿತ ಬರಹಗಳಿಲ್ಲ, ಕೇವಲ ನವೋದಯ ಕಾಲದ ಸಾಹಿತಿ - ವಿದ್ವಾಂಸರಲ್ಲಿ ಕೆಲವರ ಪರಿಚಯ ಮಾತ್ರವೇ ಇದೆ. ಅನಕೃ, ಕುವೆಂಪು, ಬೇಂದ್ರೆ, ಆಲೂರು, ಬಿ.ಎಂ.ಶ್ರೀ. ಮೊದಲಾದ ಕನ್ನಡವನ್ನು ಬೆಳಗಿದವರನ್ನು ಕುರಿತ ಬರಹಗಳು ಇಲ್ಲಿಲ್ಲ. ಅವೆಲ್ಲವೂ ಬೇರೊಂದು ಸಂಪುಟದಲ್ಲಿ ಬರಲಿದೆ. ನಾನು ಕಂಡ ಮತ್ತು ಬಾನುಲಿ ಪ್ರಸಾರಕ್ಕಾಗಿ ಸಿದ್ಧಪಡಿಸಿದ ೧೯ನೇ ಶತಮಾನದಲ್ಲಿ ಜನಿಸಿ ಅಪೂರ್ವ ಕನ್ನಡ ಸೇವೆ ಮಾಡಿದ ಇವರೆಲ್ಲ ಹೊಸಗನ್ನಡದ ಉದಯಕಾಲದ ಪುಣ್ಯಪುರುಷರು. ಅಂಥ ಕೆಲವರ ವ್ಯಕ್ತಿಚಿತ್ರಗಳಷ್ಟೇ ಇಲ್ಲಿವೆ.

ಈ ಸಂದರ್ಭದಲ್ಲಿ ಇಬ್ಬರನ್ನು ಕೃತಜ್ಞತಾಪೂರ್ವಕವಾಗಿ ನೆನೆಯಲೇಬೇಕಾಗಿದೆ. ಒಬ್ಬರು ಶ್ರೀಮತಿ ನಿರ್ಮಲಾದೇವಿ ಅವರು, ಇನ್ನೊಬ್ಬರು ಶ್ರೀಮತಿ ಸುಧಾ ಅವರು. ಇವರಿಬ್ಬರು ಬಾನುಲಿಯಲ್ಲಿ ಕನ್ನಡ ಸಾಹಿತ್ಯ ಕಣ್ಮಣಿಗಳ ವ್ಯಕ್ತಿಪರಿಚಯ ಮಾಲೆಯೊಂದನ್ನು ನಡೆಸಿಕೊಡಲು ಕೇಳಿದ್ದರಿಂದ ಈ ಲೇಖನಗಳು ರೂಪುಗೊಂಡಿವೆ. ಅವರ ಉಪಕಾರವನ್ನು ನಾನು ಎಂದೂ ಮರೆಯಲಾರೆ.

ಜ್ಞಾನವಾಣಿ ಪ್ರಸಾರದಲ್ಲಿ ಈ ಉಪನ್ಯಾಸಗಳನ್ನು ಕೇಳಿದ ಎಷ್ಟೋ ಜನರು ಎದುರಿಗೆ ಸಿಕ್ಕಾಗ, ಫೋನಿನಲ್ಲಿ, ಪತ್ರದ ಮೂಲಕ ಈ ವ್ಯಕ್ತಿಚಿತ್ರಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ನನ್ನಲ್ಲಿ ಸಾರ್ಥಕ ಭಾವನೆ ಮೂಡಿಸಿದ್ದಾರೆ. ಆ ಸಹೃದಯರಿಗೆಲ್ಲ ನಾನು ಚಿರಋಣಿ. ನಾನಿಲ್ಲಿ ಈ ವ್ಯಕ್ತಿಚಿತ್ರಗಳಲ್ಲಿ ಲೇಖಕರ - ವಿದ್ವಾಂಸರ ಜೀವನವನ್ನಾಗಲೀ ಕೃತಿಗಳನ್ನಾಗಲೀ ಪೂರ್ಣವಾಗಿ ಆಳವಾಗಿ ಪರಿಚಯಿಸಲು ಹೊರಟಿಲ್ಲ. ಸುಮಾರು ಅರ್ಧಗಂಟೆ ಅವಧಿಯಲ್ಲಿ ಶ್ರೋತೃಗಳ ಕಣ್ಮುಂದೆ ಆ ವ್ಯಕ್ತಿಗಳ ವ್ಯಕ್ತಿತ್ವ ಮೂಡಿಸುವ ರೇಖಾಚಿತ್ರದಂತೆ ಕೆಲವು ವಿಶಿಷ್ಟ ಮುಖಗಳ ಕಿರುಪರಿಚಯ ನೀಡಿದ್ದೇನೆ ಅಷ್ಟೇ. ಎಷ್ಟಾದರೂ ಇದು ಜೀವನ ಚರಿತ್ರೆ ಅಲ್ಲ, ವ್ಯಕ್ತಿಚಿತ್ರ ಅಷ್ಟೇ; ಅದೂ ಪುಟ್ಟ ವ್ಯಕ್ತಿಚಿತ್ರ.

ನಾಡಿನ ಜನರು ಈ ಕೃತಿಯನ್ನು ಸ್ವಾಗತಿಸಿ ಓದಿ ಆನಂದಿಸಿ ಪ್ರೋತ್ಸಾಹಿಸಿದರೆ ಉಳಿದವರ ಬಗ್ಗೆ ಮುಂದಿನ ಸಂಪುಟಗಳು ಹೊರಬೀಳಬಹುದು. ಇದು ಸಹೃದಯರನ್ನು ಅವಲಂಬಿಸಿದೆ. ಇಲ್ಲಿ ಚಿತ್ರಿತರಾದ ವ್ಯಕ್ತಿಗಳನ್ನು ನೆನೆದಾಗ ಅವರನ್ನು ಕುರಿತು ಬರೆದಾಗ ಮಾತನಾಡಿದಾಗ ನನ್ನ ಮನಸ್ಸಿಗೆ ತುಂಬಾ ಸಂತೋಷ ತಂದಿದೆ. ಏಕೆಂದರೆ ಈ ಮಹನೀಯರೆಲ್ಲ ಪುಣ್ಯಸ್ಮರಣೀಯರು. ಸ್ಫೂರ್ತಿ ಚೈತನ್ಯದಾಯಿಗಳು

ಮಾನಸ ಸರೋವರದ ಹಂಸಗಳ ಹಾರಾಟದಂತೆ ಇವರ ನೆನಪುಗಳು. ಇದೇ ಆನಂದ ಓದುವಾಗ ನಿಮಗೂ ಆಗುತ್ತದೆ ಎಂದು ಭಾವಿಸಿದ್ದೇನೆ.

ಇದನ್ನು ಪ್ರಕಾಶನ ಮಾಡಿದ ಸಿಂಚನ ಕನ್ನಡ ವೇದಿಕೆಯ ಸಮಸ್ತರಿಗೂ ಪ್ರಧಾನ ಸಂಪಾದಕರಾದ ಡಾ॥ ಟಿ.ವಿ.ರಾಜು ಅವರಿಗೂ ಆಡಳಿತಮಂಡಳಿ ಅವರಿಗೂ ಕರಡು ತಿದ್ದುವಲ್ಲಿ ಸಹಕರಿಸಿದ ಮಿತ್ರರಾದ ಶ್ರೀ ಎಸ್. ಬಿಳಿಗಿರಿವಾಸನ್ ಅವರಿಗೂ ಮತ್ತು ಸಹಧರ್ಮಿಣಿ ಪ್ರೊ॥ ಎಂ.ಆರ್. ಲಕ್ಷ್ಮೀದೇವಿ ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಬೆಂಗಳೂರು
೧೦-೦೧-೨೦೧೪

ಜಿ. ಅಶ್ವತ್ಥ ನಾರಾಯಣ
ದೂ.: ೦೮೦-೨೬೬೩೭೭೮೩

ಪ್ರಕಾಶಕರ ನುಡಿ

ಬೆಂಗಳೂರು ಭಾರತದ ಆಧುನಿಕ ನಗರಗಳಲ್ಲಿ ಒಂದಾಗಿದೆ. ಸಾಂಸ್ಕೃತಿಕವಾಗಿ ಕರ್ನಾಟಕ ಇತಿಹಾಸದಲ್ಲಿ ಪ್ರಸಿದ್ಧವಾಗಿರುವ ಬೆಂಗಳೂರು ನಗರವು ೨೦ನೇ ಶತಮಾನದಲ್ಲಿ ಆಧುನಿಕ ಶಿಕ್ಷಣನಗರಿಯಾಗಿ ಹೆಸರುಗಳಿಸಿತು. ಕರ್ನಾಟಕದ ರಾಜಧಾನಿ ಯೆನಿಸಿದ ಬೆಂಗಳೂರಿನಲ್ಲಿ ಅನೇಕ ಶಿಕ್ಷಣಸುಧಾರಕರು ಪ್ರಾಥಮಿಕ ಶಾಲೆಯಿಂದ ಮೊದಲುಗೊಂಡು ಕಾಲೇಜುಶಿಕ್ಷಣ, ಸ್ನಾತಕೋತ್ತರ ಕೇಂದ್ರಗಳವರೆಗೆ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಇವರ ಪೈಕಿ ಶ್ರೀ ಎಂ.ಸಿ. ಶಿವಾನಂದ ಶರ್ಮರು ಅಗ್ರಗಣ್ಯರಾದವರು. ಇವರು ೧೯೪೦ರಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಸ್ಥಾಪಿಸಿದರು.

ಶ್ರೀ ಎಂ.ಸಿ. ಶಿವಾನಂದ ಶರ್ಮರು ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನವತಿಯಿಂದ ಶಿಕ್ಷಣ ಕ್ಷೇತ್ರದ ಎಲ್ಲಾ ರಂಗಗಳಲ್ಲೂ ನಾನಾ ವಿಷಯಗಳ ಅಧ್ಯಯನದ ಶಾಖೆಗಳನ್ನು ತೆರೆಯುವುದರ ಮೂಲಕ ಹತ್ತಾರು ಶಾಲಾ, ಕಾಲೇಜು, ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಿದರು. ಈ ಕೇಂದ್ರಗಳು ನಾಡಿನ ಶಿಕ್ಷಣಕ್ಷೇತ್ರಕ್ಕೆ ಅನುಪಮಸೇವೆ ಸಲ್ಲಿಸಿದ್ದು, ಈ ಶಿಕ್ಷಣ ಸಂಸ್ಥೆಗಳಿಂದ ಹೊರಬಿದ್ದ ವಿದ್ಯಾರ್ಥಿಗಳೂ ವಿದ್ಯಾವಂತರಾಗಿ ವಿವಿಧ ವಿಷಯಗಳಲ್ಲಿ ತಜ್ಞರಾಗಿ, ಸಂಶೋಧಕರಾಗಿ, ದೇಶವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ, ಜಗತ್ಪ್ರಸಿದ್ಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ ಆಗಿದೆ.

ಇಂಥ ವಿದ್ಯಾಸಂಸ್ಥೆಗೆ ಅಡಿಪಾಯ ಹಾಕಿ ಅಸ್ತಿತ್ವಕ್ಕೆ ತಂದವರು ಶಿವಾನಂದ ಶರ್ಮ ಅವರಾದರೆ, ಅದರ ಬುನಾದಿ ಮೇಲೆ ಸಂಸ್ಥೆಯನ್ನು ಬೆಳೆಸಿ ನಮ್ಮ ನಾಡಿನ ಅತ್ಯಂತ ಗಣ್ಯ ವಿದ್ಯಾಸಂಸ್ಥೆಯನ್ನಾಗಿ ಮಾಡಿದವರು ಡಿ.ಎ. ಪಾಂಡು ಅವರು. ಇವರಿಬ್ಬರ ಸ್ಮರಣಾರ್ಥ ಡಿ.ಎ. ಪಾಂಡುಸ್ಮೃತಿ ಗ್ರಂಥಮಾಲೆಯನ್ನು ಪ್ರಾರಂಭಿಸಿ ಆರ್.ವಿ.ಐ.ಎಂ. ವಿದ್ಯಾಸಂಸ್ಥೆ ವರ್ಷಕ್ಕೆ ಎರಡು ಕನ್ನಡ ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸುತ್ತಿದೆ.

ಈವರೆಗೆ ಪ್ರಕಟವಾದ ೨೨ ಗ್ರಂಥಗಳು ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಕಟಿಸಿದ್ದರೂ ಕನ್ನಡ ಸಾಹಿತ್ಯಪ್ರಿಯರೆಲ್ಲರ ಮೆಚ್ಚುಗೆಯನ್ನು ಗಳಿಸಿದೆ. ಈ ಗ್ರಂಥ ಪ್ರಕಟಣೆಗಳ ಮೂಲಕ ಸಿಂಚನ ಕನ್ನಡ ವೇದಿಕೆ ಅಪೂರ್ವ ಸೇವೆಯನ್ನು ಕನ್ನಡಕ್ಕೆ ಸಲ್ಲಿಸುತ್ತಿದೆ. ನಮ್ಮ ನಾಡಿನ ಕಾಲೇಜುಗಳಲ್ಲಿರುವ ಅನೇಕ ಕನ್ನಡ ಸಂಘಗಳು ವರ್ಷಕ್ಕೊಮ್ಮೆ ವಾರ್ಷಿಕ ಸಂಚಿಕೆಯನ್ನು ತಂದು ಅದರ ಸಾಹಿತ್ಯಸೇವೆಯ ಋಣವನ್ನು ಮುಗಿಸುತ್ತವೆ. ಆದರೆ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಹಾಗೆ, ಬೆಂಗಳೂರು ಕ್ರೈಸ್ತ ಕಾಲೇಜಿನ ಕನ್ನಡ ಸಂಘದ ಹಾಗೆ ವಿಶಿಷ್ಟ ಕನ್ನಡ ಪುಸ್ತಕಗಳನ್ನು ನಿರಂತರವಾಗಿ ಪ್ರಕಟಿಸಿ ಕನ್ನಡ ಸೇವೆಯನ್ನು ಗೈಯುತ್ತಿರುವ ಕಾಲೇಜುಗಳು ಕೈಬೆರಳಲ್ಲಿ ಎಣಿಸುವಷ್ಟು ಎಂದರೆ ತಪ್ಪಲ್ಲ. ಅಂಥ ಕೆಲವೇ ಕೆಲವು ಸಾಹಿತ್ಯಸೇವೆ ಮಾಡುವ ಕಾಲೇಜುಗಳ ಪೈಕಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ಗೆ ಸೇರಿದ ಆರ್.ವಿ.ಐ.ಎಮ್. (ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್) ಸಿಂಚನ ಕನ್ನಡ ವೇದಿಕೆ ಅಗ್ರಗಣ್ಯ ಕನ್ನಡ ಸಂಘವಾಗಿದೆ.

ಸಿಂಚನ ಕನ್ನಡ ವೇದಿಕೆಯ ಪ್ರಕಟಣೆಗಳು: (೨೦೦೫ ರಿಂದ ೨೦೧೩ರ ವರೆಗೆ)

೧. ಮೊದಲು ಮಾನವನಾಗು (ಪ್ರಬಂಧಗಳು) – ೨೦೦೫ – ಸಂ.ಎಲ್. ಪುಷ್ಪಲತ (ವಿವಿಧ ಲೇಖಕರು)

೨. ಸಾಂಸ್ಕೃತಿಕ ಅನುಸಂಧಾನ (ಅನುವಾದ) – ೨೦೦೬, ಸಂ.ಎಲ್. ಪುಷ್ಪಲತ.

ಮೂಲ: ಕೆ.ರಾಮಪ್ಪ, ಅನು: ಭಾರತೀದೇವಿ ಮೂರು ಮಾರ್ನಾಡು.

೩. ಸಂತೃಪ್ತ ಬಾಳಿನ ಮಾರ್ಗದರ್ಶಿ (ಪ್ರಬಂಧಗಳು) – ೨೦೦೬, ಲೇ. ಸಂ. ಪ್ರೊ. ಎಸ್.ಎಸ್. ಕಟಗಿಹಳ್ಳಿ.

೪. ಸಿರಿಗನ್ನಡ ಸರಳ ಭಗವದ್ಗೀತೆ (ಧರ್ಮ) –' ೨೦೦೭, ಅನು: ಎಸ್. ಬಿಳಿಗಿರಿವಾಸನ್.

೫. ೨೫ ಏಕಾಂಕಗಳು (ನಾಟಕಗಳು) – ೨೦೦೭, ಸಂ. ಕ.ವೆಂ. ರಾಜಗೋಪಾಲ್.

೬. ಸೌಜನ್ಯ ಮತ್ತು ಸಂಸ್ಕೃತಿ (ಪ್ರಬಂಧಗಳು) – ೨೦೦೯, ವಿವಿಧ ಲೇಖಕರು.

೭. ಮಕ್ಕಳು ಬೆಳೆಯುತ್ತಿದ್ದಾರೆ ಎಚ್ಚರಿಕೆ (ಶಿಕ್ಷಣ) – ೨೦೦೯, ಲೇ. ಆರ್. ನಾಗೇಶ್.

೮. ಶಿಷ್ಯರು ಕಂಡಂತೆ ಗುರುಗಳು (ಆತ್ಮಕಥನ) – ೨೦೦೯, ವಿವಿಧ ಲೇಖಕರು.

೯. ಜೀವನಾಮೃತ (ಸುಭಾಷಿತ ಬರಹ) – ೨೦೧೦, ಲೇ. ಡಾ. ಇಂದ್ರಾಣಿ ನಂದಕುಮಾರ್.

೧೦. ಭರತಖಂಡದ ಜೀವಜ್ಯೋತಿಗಳು (ಜೀವನಚರಿತ್ರೆ), ೨೦೧೦, ಲೇ. ಹೊಸಕೆರೆ ಚಿದಂಬರಯ್ಯ.

೧೧. ಭಾವೋದ್ವೇಗ ನಿವಾರಣೆ (ಪ್ರಬಂಧ) – ೨೦೧೦, ಲೇ. ಡಾ.ಸಿ.ಆರ್. ಚಂದ್ರಶೇಖರ್ (ವ್ಯಕ್ತಿತ್ವ ವಿಕಸನ ಮಾಲೆ–೧)

೧೨. ನಿರ್ಧಾರಗಳನ್ನು ಕೈಗೊಳ್ಳುವುದು ಹೇಗೆ? (ಪ್ರಬಂಧ) – ೨೦೧೦, ಲೇ. ಎಚ್.ಜಿ. ಸೋಮಶೇಖರರಾವ್, (ವ್ಯಕ್ತಿತ್ವ ವಿಕಸನ ಮಾಲೆ – ೨)

೧೩. ವಿಮರ್ಶಾತ್ಮಕ ಚಿಂತನೆ (ಪ್ರಬಂಧ) – ೨೦೧೦, ಲೇ. ಸುರೇಶ್ ಮೂನ (ವ್ಯಕ್ತಿತ್ವ ವಿಕಸನ ಮಾಲೆ–೩)

೧೪. ಇನ್ನೊಬ್ಬರನ್ನು ಅರಿಯುವ ಬಗೆ (ಪ್ರಬಂಧ) – ೨೦೧೧, ಲೇ. ಎಚ್.ಜಿ. ಸೋಮಶೇಖರರಾವ್ (ವ್ಯಕ್ತಿತ್ವ ವಿಕಸನ ಮಾಲೆ–೪)

೧೫. ಒತ್ತಡ ನಿರ್ವಹಣೆ ಹೇಗೆ? (ಪ್ರಬಂಧ) – ೨೦೧೧, ಲೇ. ಡಾ.ಸಿ.ಆರ್. ಚಂದ್ರಶೇಖರ್ (ವ್ಯಕ್ತಿತ್ವ ವಿಕಸನ ಮಾಲೆ–೫)

೧೬. ಸಮಸ್ಯೆಗಳ ನಿವಾರಣೆ (ಪ್ರಬಂಧ) – ೨೦೧೧, ಲೇ. ಬೆ.ಗೋ. ರಮೇಶ್ (ವ್ಯಕ್ತಿತ್ವ ವಿಕಸನ ಮಾಲೆ–೬)

೧೭. ಸಾರ್ಥಕ ಬದುಕಿಗೆ ಸಾವಿರ ದಾರಿ (ಪ್ರಬಂಧ) ೨೦೧೨, ಲೇ. ಸಾಯಿಬಿಂದು (ವ್ಯಕ್ತಿತ್ವ ವಿಕಸನ ಮಾಲೆ–೭)

೧೮. ನಾನು ಎಂದರೆ ಯಾರು (ಪ್ರಬಂಧ) ೨೦೧೨, ಲೇ. ಡಾ.ಎಸ್. ರಂಗನಾಥ್ (ವ್ಯಕ್ತಿತ್ವ ವಿಕಸನ ಮಾಲೆ–೮)

೧೯. ನೇರ–ದೂರ ಸಂವಹನ ಕಲೆ (ಪ್ರಬಂಧ) ೨೦೧೩, ಲೇ. ನಾ. ಸೋಮೇಶ್ವರ (ವ್ಯಕ್ತಿತ್ವ ವಿಕಸನ ಮಾಲೆ – ೯)

೨೦. 'ಸ್ವಯಂ ಜಾಗೃತಿ – ಬಾಳಿನ ಉನ್ನತಿ' ೨೦೧೩, ಲೇ. ಡಾ. ಪಿ.ಎಸ್. ಗೀತಾ (ವ್ಯಕ್ತಿತ್ವ ವಿಕಸನ ಮಾಲೆ–೧೦)

೨೧. 'ಆನು–ನೀನು'; ವ್ಯಕ್ತಿ ಸಂಬಂಧಗಳು ೨೦೧೩, ಲೇ. ರಘು ವಿ, (ವ್ಯಕ್ತಿತ್ವ ವಿಕಸನ ಮಾಲೆ – ೧೧)

೨೨. 'ಸೃಜನಶೀಲ ಚಿಂತನೆ', ೨೦೧೩, ಲೇ. ಪ್ರೊ॥ ಎಂ.ಆರ್. ನಾಗರಾಜ್ (ವ್ಯಕ್ತಿತ್ವ ವಿಕಸನ ಮಾಲೆ – ೧೨)

ಇದೀಗ ೨೩ನೆಯ ಪ್ರಕಟಣೆಯಾಗಿ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರ "ಕನ್ನಡ ಸಾಹಿತ್ಯ ದಿಗ್ಗಜರು" ವ್ಯಕ್ತಿಚಿತ್ರಗಳು ಎಂಬ ಕೃತಿ ಪ್ರಕಟವಾಗುತ್ತಿದೆ.

ಈ ಎಲ್ಲ ಪ್ರಕಟಣೆಗಳನ್ನು ಸಿದ್ಧಪಡಿಸಿ ಪ್ರಕಟಿಸುವಲ್ಲಿ ಸಂಪಾದಕ ಮಂಡಳಿಯ ಪರಿಶ್ರಮ ಮತ್ತು ಸಲಹಾ ಮಂಡಳಿಯ ಸಹಕಾರವನ್ನು ಸ್ಮರಿಸಲೇಬೇಕು.

ಸಿಂಚನ ಕನ್ನಡ ವೇದಿಕೆಯ ಪ್ರಕಟಣ ಮಾಲೆಯನ್ನು ಪ್ರಾರಂಭಿಸಿದಾಗ ಮೊದಲಿಗೆ ಚಿ. ಶ್ರೀನಿವಾಸರಾಜು ಅವರ ಮಾರ್ಗದರ್ಶನದಲ್ಲಿ ಕೆಳಕಂಡ ಸಂಪಾದಕ ಮಂಡಳಿ ಕಾರ್ಯನಿರ್ವಹಿಸಿದೆ. ೧ ರಿಂದ ೫ನೇ ಪ್ರಕಟಣೆಗಳನ್ನು ಈ ಸಂಪಾದಕ ಮಂಡಳಿ (೨೦೦೫–೨೦೦೮) ಹೊರತಂದಿದೆ.

೧. ಡಾ॥ ಟಿ.ವಿ. ರಾಜು (ಪ್ರಧಾನ ಸಂಪಾದಕರು)

೨. ಚಿ. ಶ್ರೀನಿವಾಸರಾಜು

ಸಂಪಾದಕ ಮಂಡಳಿಗೆ ಸಲಹಾ ಮಂಡಳಿಯೊಂದು ರೂಪುಗೊಂಡು ಸಲಹಾ ಮಂಡಳಿ ಸದಸ್ಯರಾಗಿ (೨೦೦೫–೨೦೦೮)

೧. ಎಂ.ಕೆ. ಪಾಂಡುರಂಗಶೆಟ್ಟಿ
೨. ಸಿ.ವಿ. ಹಯಗ್ರೀವ್
೩. ಕೆ.ಎಂ. ನಂಜಪ್ಪ
೪. ಜಿ.ಕೆ. ಶ್ರೀನಿವಾಸಯ್ಯ
೫. ಎ.ವಿ.ಎಸ್. ಮೂರ್ತಿ
೬. ಡಿ.ಪಿ. ನಾಗರಾಜ್
೭. ಕೆ.ಜಿ. ಸುಬ್ಬರಾಮಶೆಟ್ಟಿ

ಇವರುಗಳು ಕಾರ್ಯನಿರ್ವಹಿಸಿದರು. ಚಿ. ಶ್ರೀನಿವಾಸರಾಜು ಅವರ ನಿಧನಾನಂತರ ಸಂಪಾದಕ ಮಂಡಳಿಯನ್ನು ಪುನಾರಚಿಸಲಾಯಿತು.

ಸಂಪಾದಕ ಮಂಡಳಿ (೨೦೦೯ ರಿಂದ)

೧. ಡಾ. ಟಿ.ವಿ. ರಾಜು (ಪ್ರಧಾನ ಸಂಪಾದಕರು)
೨. ಪ್ರೊ. ಜಿ. ಅಶ್ವತ್ಥನಾರಾಯಣ (ಸಂಪಾದಕರು)
೩. ಎಸ್. ಬಿಳಿಗಿರಿವಾಸನ್ (ಸಂಪಾದಕರು)
೪. ಶಾಂತರಾಜು (ಸಂಪಾದಕರು)

ಸಲಹಾ ಮಂಡಳಿ ಸದಸ್ಯರು (೨೦೦೯ರಿಂದ ೨೦೧೧ರ ವರೆಗೆ)

೧. ಶ್ರೀ ಎಂ.ಕೆ. ಪಾಂಡುರಂಗಶೆಟ್ಟಿ
೨. ಶ್ರೀ ಸಿ.ವಿ. ಹಯಗ್ರೀವ
೩. ಶ್ರೀ ಎನ್.ಆರ್. ಪಂಡಿತಾರಾಧ್ಯ

೪. ಶ್ರೀ ಎ.ವಿ.ಎಸ್. ಮೂರ್ತಿ
೫. ಶ್ರೀ ಕೆ.ಜಿ. ಸುಬ್ಬರಾಮಶೆಟ್ಟಿ
೬. ಶ್ರೀ ಡಿ.ಪಿ. ನಾಗರಾಜ್
೭. ಶ್ರೀ ಎಂ.ಕೆ. ದತ್ತರಾಜ್

(೨೦೧೧ ರಿಂದ) ಸಲಹಾ ಮಂಡಳಿ

೧. ಶ್ರೀ ಎಂ.ಕೆ. ಪಾಂಡುರಂಗಶೆಟ್ಟಿ
೨. ಶ್ರೀ ಸಿ.ವಿ. ಹಯಗ್ರೀವ್
೩. ಶ್ರೀ ಎನ್.ಆರ್. ಪಂಡಿತಾರಾಧ್ಯ
೪. ಶ್ರೀ ಎ.ವಿ.ಎಸ್. ಮೂರ್ತಿ
೫. ಶ್ರೀ ಕೆ.ಜಿ. ಸುಬ್ಬರಾಮಶೆಟ್ಟಿ
೬. ಶ್ರೀ ಡಿ.ಪಿ. ನಾಗರಾಜ್
೭. ಶ್ರೀ ಎ.ಸಿ. ಚಂದ್ರಶೇಖರರಾಜು

ಸಿಂಚನ ಕನ್ನಡ ವೇದಿಕೆಯ ಡಿ.ಎ. ಪಾಂಡು ಸ್ಮೃತಿಗ್ರಂಥಮಾಲೆಯಲ್ಲಿ ಪ್ರಬಂಧ, ನಾಟಕ, ಜೀವನಚರಿತ್ರೆ, ಸುಭಾಷಿತ, ಆತ್ಮಕಥೆ, ಅಂಕಣಬರಹ, ಗೀತೆ, ಶಿಕ್ಷಣ, ಅನುವಾದ, ವ್ಯಕ್ತಿತ್ವವಿಕಸನ ಕೃತಿಗಳನ್ನು ಪ್ರಕಟಿಸಲಾಗಿದೆ. ಇದೀಗ ೨೩ನೇ ಪ್ರಕಟನೆಯಾಗಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರ 'ಕನ್ನಡ ಸಾಹಿತ್ಯ ದಿಗ್ಗಜರು' ಎಂಬ ವ್ಯಕ್ತಿಚಿತ್ರಗಳ ಕೃತಿಯನ್ನು ಪ್ರಕಟಿಸುತ್ತಿದ್ದೇವೆ. ಈ ಕೃತಿಯನ್ನು ನಮ್ಮ ಕೋರಿಕೆ ಮೇರೆಗೆ ರಚಿಸಿಕೊಟ್ಟಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ವಂದನೆಗಳು.

ಎಂದಿನಂತೆ ಈ ಕೃತಿಯ ಹಸ್ತಪ್ರತಿಯನ್ನು ಪರಿಶೀಲಿಸಿ ಪರಿಷ್ಕರಿಸಿ ಅಚ್ಚಿನ ಕರಡುಗಳನ್ನು ತಿದ್ದಿ ಪ್ರಕಟಣೆಯ ಇತರ ಕಾರ್ಯಗಳಲ್ಲಿ ಸಂಪಾದಕ ಮಂಡಳಿಯವರು ವಿಶೇಷವಾಗಿ ಶ್ರಮಿಸಿದ್ದಾರೆ. ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು.

ಬೆಂಗಳೂರಿನ 'ಇಳಾ ಮುದ್ರಣ'ದ ಮಾಲೀಕರಾದ ಶ್ರೀ ಬಿ. ಗುರುಮೂರ್ತಿ ಅವರು ಅಂದವಾಗಿ ಸಕಾಲದಲ್ಲಿ ಮುದ್ರಿಸಿದ್ದಾರೆ. ಅವರಿಗೆ ನಮ್ಮ ವಂದನೆಗಳು. ಸಿಂಚನ ಕನ್ನಡ ವೇದಿಕೆಯ ಹಿಂದಿನ ಕೃತಿಗಳನ್ನು ಕೊಂಡು ಓದಿ ಮೆಚ್ಚುಗೆ ಸೂಚಿಸಿದ ಓದುಗರು ಈ ಕೃತಿಯನ್ನು ಕೊಂಡು ಓದಿ ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

ತಾ: ೧೦-೧೨-೨೦೧೩
ಬೆಂಗಳೂರು

ಡಾ. ಟಿ.ವಿ.ರಾಜು
ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು
ಸಿಂಚನ ಕನ್ನಡ ವೇದಿಕೆ

ಪರಿವಿಡಿ



೧. ಮಹಾಕವಿಯ ಗುರು

ಟಿ.ಎಸ್. ವೆಂಕಣ್ಣಯ್ಯ

ಕನ್ನಡಸಾಹಿತಿಗಳ ಪ್ರಪಂಚದಲ್ಲಿ ಆದರ್ಶದ ಭಲೇಜೋಡಿ ಎಂದರೆ ಕನ್ನಡ ಪ್ರಾಧ್ಯಾಪಕರಾದ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್.ಕೃ ಅವರು. ಅವರನ್ನು ಮಾಸ್ತಿ 'ಕನ್ನಡದ ಅಶ್ವಿನೀದೇವತೆ'ಗಳೆಂದೇ ಕರೆದಿದ್ದಾರೆ. ಅವರಿಬ್ಬರೂ ಎರಡು ದೇಹ, ಒಂದೇ ಆತ್ಮ ಎಂಬಂತಿದ್ದವರು. ಈ ಮಾತಿಗೆ ನಿದರ್ಶನವೆಂದರೆ ಎಸ್.ವಿ. ರಂಗಣ್ಣನವರ ಬದುಕಿನ ಒಂದು ಅನುಭವ.

ಒಮ್ಮೆ ಎಸ್.ವಿ. ರಂಗಣ್ಣನವರು ತಾವು ಬರೆದ ರಂಗಯ್ಯನ ವಚನಗಳೆಂಬ ಆಧುನಿಕ ವಚನಗಳ ಹಸ್ತಪ್ರತಿಯನ್ನು ತಮ್ಮ ಗುರುಗಳಾದ ಕೃಷ್ಣಶಾಸ್ತ್ರಿಗಳಿಗೆ ಕೊಟ್ಟರು. 'ದಯವಿಟ್ಟು ಓದಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ ವಿಷಯ ಗುಟ್ಟಾಗಿರಲಿ ಯಾರಿಗೂ ಹೇಳಬೇಡಿ" ಎಂದು ಪ್ರಾರ್ಥಿಸಿದರು. ಒಂದೆರಡು ವಾರಗಳನಂತರ ವೆಂಕಣ್ಣಯ್ಯನವರು, "ರಂಗಣ್ಣನವರೇ ನಿಮ್ಮ ಕೆಲವು ರಂಗಯ್ಯನ ವಚನಗಳನ್ನು, ಕಳಿಸಿಕೊಡಿ. ಪ್ರಬುದ್ಧಕರ್ನಾಟಕದಲ್ಲಿ ಪ್ರಕಟಿಸೋಣ" ಎಂದರು. ಹೂಂ ಆಗಲಿ ಎಂದರು. ಅನಂತರ ರಂಗಣ್ಣನವರು ಕೂಡಲೇ ಕೃಷ್ಣಶಾಸ್ತ್ರಿಗಳ ಬಳಿಗೆ ಬಂದರು. ಸ್ವಲ್ಪ ಸಿಟ್ಟಿನಿಂದಲೇ ಕೇಳಿದರು. "ಏನ್‌ಸಾರ್ ಹೀಗೆ ಮಾಡಿದಿರಿ, ಯಾರಿಗೂ ತಿಳಿಸಬೇಡಿ ಎಂದಿರಲಿಲ್ಲವೇ? ವೆಂಕಣ್ಣಯ್ಯನವರು ಪ್ರಬುದ್ಧಕರ್ನಾಟಕದಲ್ಲಿ ಪ್ರಕಟಿಸುತ್ತೇವೆ. ನಿಮ್ಮ ವಚನಗಳನ್ನು ಕೊಡಿ ಎಂದರು. ಅವರಿಗೆ ತಿಳಿಸಿದ್ದು ಸರಿಯೇ?" ಎಂದರು. ಆಗ ಕೃಷ್ಣಶಾಸ್ತ್ರಿಗಳು ರಂಗಣ್ಣನವರಿಗೆ "ವೆಂಕಣ್ಣಯ್ಯನಿಗೆ ತಿಳಿಸಿದ್ದರಲ್ಲಿ ತಪ್ಪೇನಿಲ್ಲ. ಏತಕ್ಕೆಂದರೆ ನಾನು ಬೇರೆಯಲ್ಲ ವೆಂಕಣ್ಣಯ್ಯ ಬೇರೆಯಲ್ಲ ತಿಳಿಯಿತೇ?" ಎಂದರು. ಇವರಿಬ್ಬರ ಆತ್ಮೀಯ ಸ್ನೇಹಕ್ಕೆ ಇನ್ನೊಂದು ನಿದರ್ಶನವೆಂದರೆ, ಬೆಂಗಳೂರಿನ ಸ್ಯೆಂಟ್ ಜೋಸೆಫ್ ಕಾಲೇಜಿನಲ್ಲಿ ವೆಂಕಣ್ಣಯ್ಯನವರು ಅಧ್ಯಾಪಕರಾಗಿದ್ದಾಗ ಕಂಟೋನ್ಮೆಂಟಿನ ಭಾಗದಲ್ಲಿ ದೊಡ್ಡದೊಂದು ಬಂಗಲೆ ವಾಸಕ್ಕೆ ಬಾಡಿಗೆಗೆ ಸಿಕ್ಕಿತು. ಆಗ "ಮನೆ ದೊಡ್ಡದಾಗಿದೆ ಬನ್ರಯ್ಯಾ ಎಲ್ಲರೂ ಒಟ್ಟಿಗಿರೋಣ" ಅಂತ

ಹೇಳಿ ಎ.ಆರ್. ಕೃ ಮತ್ತು ಎ.ಎನ್. ನರಸಿಂಹಯ್ಯನವರ ಸಂಸಾರಗಳನ್ನು ಕರೆಸಿ ಕೊಂಡು ಒಟ್ಟಿಗೆ ವಾಸಮಾಡತೊಡಗಿದರು. ಎ.ಆರ್.ಕೃ.ಜತೆ ಅವಿನಾಭಾವದ ಸ್ನೇಹ ಅಷ್ಟರಮಟ್ಟಿಗಿತ್ತು. ಇಂದು ಎಷ್ಟೋ ಮಂದಿ ಬಂಗಲೆಗಳಲ್ಲಿ ವಾಸ ಮಾಡುತ್ತಿರುವವರು ಮನೆ ದೊಡ್ಡದಾಯಿತು ಎಂದಾಗ ಬಾಡಿಗೆಗೆ ಬೇರೆಯವರಿಗೆ ಕೊಡುತ್ತಾರೆ, ಇಲ್ಲವೇ ಭಾಗಶಃ ಮಾರುತ್ತಾರೆ. ಗೆಳೆಯರಿಗೆ ಒಟ್ಟಿಗಿರೋಣ ಅಂತ ಕರೆದ ಉದಾಹರಣೆ ಮತ್ತೆಲ್ಲೂ ಇಲ್ಲ. ವೆಂಕಣ್ಣಯ್ಯನವರೊಬ್ಬರೇ ಏಕೈಕ ನಿದರ್ಶನ.

ಇಬ್ಬರೂ ಜತೆಯಲ್ಲಿರುವಾಗ ಒಮ್ಮೆ ಎ.ಆರ್.ಕೃ ಅವರಿಗೆ ದಾರುಣ ಕಾಯಿಲೆ ಬಂದು ವೈದ್ಯರು ತಮ್ಮ ಕೈಮಿಂಚುತ್ತಿದೆ ಎಂದಾಗ, ಎಂದೂ ಯಾತಕ್ಕೂ ದೇವರನ್ನು ಏನೂ ಕೇಳಿಕೊಳ್ಳದ ಟಿ.ಎಸ್. ವೆಂಕಣ್ಣಯ್ಯನವರು "ಭಗವಂತ ನನ್ನ ಕೃಷ್ಣನನ್ನು ಉಳಿಸಿಕೊಡು" ಎಂದು ದೇವರಿಗೆ ಮೊರೆಯಿಟ್ಟರಂತೆ. ಎ.ಆರ್. ಕೃ ಅವರು ಗುಣಮುಖರಾದರು. ವೆಂಕಣ್ಣಯ್ಯ ನವರ ಪ್ರಾರ್ಥನೆ ಫಲಿಸಿತ್ತು. ಎ.ಆರ್.ಕೃ. ಅವರು ಈ ಬಗ್ಗೆ ಸದಾ ಹೇಳುತ್ತಿದ್ದರು. "ಅವರ ಪ್ರಾರ್ಥನೆಯನ್ನು ದೇವರು ಆಲಿಸಿದ. ಕೋರಿಕೆಯನ್ನು ಸಲ್ಲಿಸಿದ. ಅದರಿಂದ ನಾನು ಖ್ಯಾತಿ ಹೊಂದಿದೆ. ಎಂದೇ ಇಂದಿಗೂ ನಾನು ನಂಬಿದ್ದೇನೆ" ಇಂತಹ ಅಂತರಂಗದ ಆತ್ಮೀಯ ಜೋಡಿ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್.ಕೃ. ಅವರದು.

ವೆಂಕಣ್ಣಯ್ಯನವರನ್ನು ಕುರಿತು ಮಾತನಾಡುವಾಗಲೆಲ್ಲ ತಪ್ಪದೇ ನೆನಪಾಗುವುದು ಇನ್ನೊಂದು ಗುರು-ಶಿಷ್ಯ ಸಂಬಂಧದ ಜೋಡಿ ಕಥೆ, ಎಂದರೆ ಕುವೆಂಪು-ವೆಂಕಣ್ಣಯ್ಯನವರ ಅಮೃತಬಾಂಧವ್ಯ. ಒಬ್ಬ ಗುರು ಒಬ್ಬ ವಿದ್ಯಾರ್ಥಿ ಆದವನು ಪ್ರತಿಭಾವಂತನಾಗಿದ್ದಾಗ, ವಜ್ರವಾಗಿದ್ದಾಗ ಸಾಣೆ ಹಿಡಿಯ ಬೇಕಾಗುತ್ತದೆ. ಆ ಕೆಲಸ ಸುಲಭವಲ್ಲ. ಅಂಥ ಕಾರ್ಯಕೈಗೊಂಡವರು. ಶಿಷ್ಯನನ್ನು ಲೋಕೋತ್ತರ ವ್ಯಕ್ತಿಯನ್ನಾಗಿ ಮಹಾಕವಿಯನ್ನಾಗಿ ರೂಪಿಸಿದವರು ವೆಂಕಣ್ಣಯ್ಯನವರು. ಲೋಕದಲ್ಲಿ ವೆಂಕಣ್ಣಯ್ಯನವರ ಶಿಷ್ಯಪ್ರೇಮ ಕುವೆಂಪು ಅವರ ಗುರುಭಕ್ತಿ 'ನ ಭೂತೋ ನ ಭವಿಷ್ಯತಿ' ಎಂದರೆ ತಪ್ಪಿಲ್ಲ. ಇಂಥ ಮಹಾಗುರು ವೆಂಕಣ್ಣಯ್ಯನವರ ಪರಮಶಿಷ್ಯರು ಕುವೆಂಪು ಅವರು, ತಮ್ಮ ಗುರುವಿನ ಬಗ್ಗೆ ಹೇಳಿದ ಮಾತುಗಳನ್ನು ಗಮನಿಸಿದರೆ ಟಿ.ಎಸ್. ವೆಂಕಣ್ಣಯ್ಯ ನವರ ಅಪೂರ್ವ ವ್ಯಕ್ತಿತ್ವದ ಅರಿವಾಗುತ್ತದೆ;

ಕುವೆಂಪು ಅವರು ಒಮ್ಮೆ ಹೇಳಿದರು.

"ನನ್ನ ಬಾಳಿನಲ್ಲಿ ಇತರ ಯಾವ ಪ್ರಾಧ್ಯಾಪಕರೂ ವೆಂಕಣ್ಣಯ್ಯನವರಂತೆ ನನ್ನಲ್ಲಿ ಆತ್ಮೀಯ ಭಾವವನ್ನುಂಟುಮಾಡಲಿಲ್ಲ. ನನ್ನ ಪ್ರಶಂಸೆಗೂ, ಗೌರವಕ್ಕೂ ಪಾತ್ರರಾಗಿದ್ದ ಪ್ರಾಧ್ಯಾಪಕರಲ್ಲಿಯೂ ನಾನು ವೆಂಕಣ್ಣಯ್ಯನವರಲ್ಲಿ ಅನುಭವಿಸಿದಂತೆ ಆತ್ಮೀಯತೆಯನ್ನು ಅನುಭವಿಸಲು ಸಮರ್ಥನಾಗಲಿಲ್ಲ."

ತಮ್ಮ ಪ್ರೀತಿಗೆ ಪಾತ್ರನಾದ ಶಿಷ್ಯನ ಬರಹಗಳನ್ನು ಮೆಚ್ಚಿಕೊಂಡಿದ್ದ ವೆಂಕಣ್ಣಯ್ಯನವರು ಎಂದೂ ಅಂಧಾಭಿಮಾನದಿಂದ ಶಿಷ್ಯನ ಕವಿತೆ-ಕಾವ್ಯಗಳನ್ನು ಹೊಗಳುತ್ತಿರಲಿಲ್ಲ. ಕುವೆಂಪು ಅವರ ಕೃತಿಗಳ ಟೊಳ್ಳು-ಗಟ್ಟಿಗಳನ್ನು ಚೆನ್ನಾಗಿ ಗುರುತಿಸುತ್ತಿದ್ದರು. ನಿರ್ಭಯವಾಗಿ ನಿರ್ದಾಕ್ಷಿಣ್ಯವಾಗಿ ಆದರೆ ನಯವಾಗಿ ಹೇಳುತ್ತಿದ್ದರು. ಈ ಮಧುರವಿಧಾನದ ಸತ್ಯಸಂಧತೆ ಕುವೆಂಪು ಅವರಿಗೆ ಪ್ರಿಯವಾಗಿತ್ತು. ಕನ್ನಡದ ವಿಮರ್ಶಕರಿಗೆ ವೆಂಕಣ್ಣಯ್ಯನವರ ರೀತಿ ಮಾದರಿ ಆಗಿತ್ತು. ಇದಕ್ಕೆ ಒಂದೆರಡು ನಿದರ್ಶನಗಳನ್ನು ಹೇಳಿದರೆ ಈ ಮಾತುಗಳ ಅರ್ಥ ಸ್ಪಷ್ಟವಾಗುತ್ತದೆ.

೧೯೨೪ರಲ್ಲಿ ಕುವೆಂಪು ಅವರು ಗೋವಿನಕಥೆಯ ಮಟ್ಟಿನಲ್ಲಿ 'ಅಮಲನ ಕಥೆ'ಯನ್ನು ಬರೆದಿದ್ದರು. ವೆಂಕಣ್ಣಯ್ಯನವರು ಅದನ್ನು ಆಮೂಲಾಗ್ರವಾಗಿ ಓದಿದಾಗ ವಸುದೇವ ಭೂಪಾಲಂ ಅವರು, ಅಮಲನ ಕಥೆ ಓದಿದಿರಾ ಸಾರ್ ಎಂದು ಕೇಳಿದಾಗ ಹೇಳಿದರು: "ಅಯ್ಯೋ ಬಿಡಿ ಅಪ್ಪಾ ಎಲ್ಲಾರೂ ಪದ್ಯ ಬರೆಯುವವರೇ!"

ಆದರೆ ಅದೇ ಕುವೆಂಪು 'ಫಾಲ್ಗುಣ ಸೂರ್ಯೋದಯ' ಕವಿತೆ ಬರೆದ ವೆಂಕಣ್ಣಯ್ಯನವರ ಬಳಿ ಭಾವಪೂರ್ಣವಾಗಿ ವಾಚಿಸಿದರು. ಅವರು ವಾಚಿಸಿದಾಗ ಕೇಳುತ್ತಿದ್ದ ವೆಂಕಣ್ಣಯ್ಯನವರು ದಿಢೀರನೆ ಕುಳಿತಿದ್ದ ಕುರ್ಚಿಯಿಂದ ನೆಗೆದೆದ್ದು ಮೂಗಿಗೆ ನಶ್ಯ ಏರಿಸುತ್ತಾ ಕುವೆಂಪು ಅವರೇ ಎದುರಾಳಿ ಎಂಬಂತೆ. "ಹೇಳ್ರೀ, ಹೇಳ್ರೀ ಎಲ್ಲಿದೆ ಇಂಥ ಕಾವ್ಯ. ಹಿಂದಿನವರಲ್ಲಾಗಲೀ ಇಂದಿನವರಲ್ಲಾಗಲೀ?" ಎಂದಿದ್ದರು. ಹೀಗೆ ಯಾರದೇ ಕಾವ್ಯ-ಕವಿತೆ-ಬರಹವನ್ನು ಬರೆದವರ ಮನ ನೋಯದಂತೆ ಆದರೆ ಸತ್ಯಕ್ಕೆ ಅಪಚಾರವಾಗದಂತೆ ವಿಮರ್ಶಿಸುತ್ತಿದ್ದವರು ವೆಂಕಣ್ಣಯ್ಯನವರು.

ವೆಂಕಣ್ಣಯ್ಯನವರಿಗೆ ಕುವೆಂಪು ಅವರಲ್ಲಿ ಒಂದು ರೀತಿಯಲ್ಲಿ ಶಿಷ್ಯ ಭಾವಕ್ಕಿಂತ ಪುತ್ರವಾತ್ಸಲ್ಯವಿತ್ತು ಎಂದರೆ ತಪ್ಪಾಗದು. ಕುವೆಂಪು ಅವರು ಶ್ರೀರಂಗಪಟ್ಟಣದಲ್ಲಿ "ಯುವಕರು ನಿರಂಕುಶಮತಿಗಳಾಗಬೇಕು" ಎಂಬ ವಿಷಯವಾಗಿ ಭಾಷಣ ಮಾಡಿದರು. ಆ ಬಗ್ಗೆ ಅವರ ಕಾಲದ ಪ್ರಸಿದ್ಧ, ಸಾಹಿತಿ, ವಿದ್ವಾಂಸರಿಂದ ಉಗ್ರ ಟೀಕೆಗಳು ಆ ಭಾಷಣದ ಬಗ್ಗೆ ಬಂದು ವಿಶ್ವವಿದ್ಯಾನಿಲಯಕ್ಕೆ ಆ ಬಗ್ಗೆ ದೂರು ಹೋಯಿತು. ಆ ಬಗ್ಗೆ ವಿಶ್ವವಿದ್ಯಾನಿಲಯ, ವಿಚಾರಣೆ ಮಾಡಿ ವರದಿ ನೀಡಲು ವೆಂಕಣ್ಣಯ್ಯನವರಿಗೆ ತಿಳಿಸಿತು. ವೆಂಕಣ್ಣಯ್ಯ ನವರು ಭಾಷಣ ತರಿಸಿಕೊಂಡು ಓದಿದರು, ವಿಶ್ವವಿದ್ಯಾನಿಲಯಕ್ಕೆ ಅವರು ತಿಳಿಸಿದ ಮಾತಿದು: "ನನ್ನ ಮಗನಿಗೆ ನಾನು ಬುದ್ಧಿಹೇಳಬೇಕಾದರೆ ಇದಕ್ಕಿಂತಲೂ ಉತ್ತಮವಾಗಿ ಮತ್ತು ಸಮರ್ಥವಾಗಿ ನಾನು ಏನನ್ನೂ ಹೇಳಲಾರೆ" ಹಾಗಿದೆ ಈ ಭಾಷಣ. ಇದು ವೆಂಕಣ್ಣನವರಿಗೆ ಇದ್ದ ಶಿಷ್ಯಪ್ರೇಮ ವಾದರೆ ಕುವೆಂಪು ಅವರಿಗೆ ವೆಂಕಣ್ಣಯ್ಯನವರ ಬಗ್ಗೆ ಇದ್ದ ಗುರುಭಕ್ತಿ ಇನ್ನೂ ಅಸದೃಶವಾದುದು. ಕುವೆಂಪು ಅವರು ತಮ್ಮ ಕಥೆ, ಕಾವ್ಯ, ನಾಟಕ, ಕಾದಂಬರಿ ಏನೇ ಬರೆದರೂ, ಮೊದಲು ಅದನ್ನು ವೆಂಕಣ್ಣಯ್ಯ ನವರಿಗೆ ಓದಿ ತೋರಿಸುತ್ತಿದ್ದರು. ಅವರ ಮೆಚ್ಚುಗೆ ಟೀಕೆಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ ತಮ್ಮ ರಚನೆಗಳಲ್ಲಿ ತಿದ್ದುಪಡಿ ಮಾಡುತ್ತಿದ್ದರು. ರಾಮಾಯಣ ದರ್ಶನವನ್ನು ಕೇಳಲು ಬರುತ್ತೇನೆ ಎಂದು ಹೋದವರು ಅನಾರೋಗ್ಯದಿಂದ ಹಾಸಿಗೆ ಹಿಡಿದು ಕೇಳಲು ಬರಲಾಗಲಿಲ್ಲ. ರಾಮಾಯಣ ಕೇಳದೆಯೆ, ವೆಂಕಣ್ಣಯ್ಯನವರು ದೇಹತ್ಯಾಗ ಮಾಡಿದಾಗ, ಶ್ರೀರಾಮಾಯಣ ದರ್ಶನ ಇನ್ನೂ ಕಾಲುಪಾಲೂ ಮುಗಿದಿರಲಿಲ್ಲ. ಆದರೂ ಅದನ್ನು ಪೂರ್ಣ ಕೃತಿಯಾಗಿ ಮುಗಿಸಿದಾಗ ವೆಂಕಣ್ಣಯ್ಯನವರಿಗೆ ಅರ್ಪಿಸುವ ರೀತಿಯಲ್ಲಿ ಆ ಪೂರ್ಣಕೃತಿಯನ್ನು 'ಶ್ರೀವೆಂಕಣ್ಣಯ್ಯನವರಿಗೆ' ಎಂಬ ಶೀರ್ಷಿಕೆಯಲ್ಲಿ ಭಕ್ತಿ ಪುರಸ್ಕರವಾಗಿ ಅರ್ಪಿಸಿದ್ದಾರೆ.

"ಇದೊ ಮುಗಿಸಿ ತಂದಿಹೆನ್, ಈ ಬೃಹದ್‌ಗಾನಮಂ ನಿಮ್ಮ ಸಿರಿಯಡಿ ಗೊಪ್ಪಿಸಲ್ಕೆ, ಓ ಪ್ರಿಯ ಗುರುವೆ, ಪಿಂತೆ ವಾಲ್ಮೀಕಿಯುಲಿದ ಕಥೆಯಾದೊಡಂ, ಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈ ಆಂತಂತೆ ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್, ನಿಮ್ಮ ಕೃಪೆಯಿಂದೆ." ಗುರುವಿನ ಪರಮಾನುಗ್ರಹವಾಯಿತು ಎಂಬಂತೆ ಶ್ರೀ ರಾಮಾಯಣ

ದರ್ಶನಂ ಲೋಕೋತ್ತರ ಮಹಾಕಾವ್ಯವಾಯಿತು; ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದಿತು. ಮೂವತ್ತಕ್ಕೂ ಹೆಚ್ಚಿನ ಮಹಾಕಾವ್ಯಗಳು ಕನ್ನಡದಲ್ಲಿ ೨೦ನೇ ಶತಮಾನದಲ್ಲಿ ಬರಲು ಈ ಕಾವ್ಯ ನಾಂದಿಯಾಯಿತು.

ನನ್ನಂತಹ ಅನೇಕ ಸಾಹಿತಿಗಳನ್ನು ಸೃಷ್ಟಿ ಮಾಡಿ ಹೋಗಿದ್ದಾರೆ ಎಂಬ ಕುವೆಂಪು ಮಾತಿಗೆ ಸಾಕ್ಷಿಯೆಂಬಂತೆ. ವೆಂಕಣ್ಣಯ್ಯನವರೇ ಒಮ್ಮೆ ಹೇಳಿದರು. "ಕನ್ನಡ ಸಾಹಿತ್ಯ ನಂದನವನದಲ್ಲಿ ಕವಿಗಳನ್ನು ಬೆಳೆಸುವ (ಅರ್ಥಾತ್ ಕವಿ ವಿದ್ವಾಂಸರ ಸೃಷ್ಟಿಗೆ ಕಾರಣಕರ್ತರಾದ) ಕನ್ನಡ ತೋಟದಮಾಲಿ ನಾನು ಅಷ್ಟೆ. ನಾನೇ ಮಹಾವೃಕ್ಷ ಅಲ್ಲ."

ಹೀಗೆ ಅಪೂರ್ವಸ್ನೇಹಿ ಅಪೂರ್ವಗುರು ಆದ ಕನ್ನಡಕಣ್ಮಣಿ ವೆಂಕಣ್ಣಯ್ಯನವರು ಜನಿಸಿದ್ದು ೧೮೮೫ರ ಅಕ್ಟೋಬರ್ ಒಂದರಂದು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳುಕು ಗ್ರಾಮದಲ್ಲಿ, ತಂದೆ ಸುಬ್ಬಣ್ಣನವರು ಆಶುಕವಿಗಳೂ ನಾಟಕಕಾರರೂ ವಿದ್ವಾಂಸರೂ ಆಗಿದ್ದರು. ತಾಯಿ ಲಕ್ಷ್ಮೀದೇವಮ್ಮ ಕಾವ್ಯಾರ್ಥ ಮಾಡಬಲ್ಲಂಥ ವಿದ್ಯಾವಂತೆಯಾಗಿದ್ದರು. ಇಂಥವರ ಮನೆಗೆ ಹಿರಿಯ ಮಗನಾಗಿ ಹುಟ್ಟಿದರು ವೆಂಕಣ್ಣಯ್ಯನವರು.

ವೆಂಕಣ್ಣಯ್ಯನವರು ಹುಟ್ಟಿದಾಗ ಜೋಯಿಸರು ಜಾತಕ ಗುಣಿಸುತ್ತಾ "ಈತನ ಜಾತಕದಲ್ಲಿ ೪ ಗ್ರಹಗಳು ಉಚ್ಚವಾಗಿವೆ. ಈತ ತುಂಬ ವಿದ್ಯಾವಂತನಾಗಿ ಬುದ್ಧಿವಂತನಾಗಿ ದೊಡ್ಡ ಹುದ್ದೆಗೇರಿ ಕೀರ್ತಿಶಾಲಿಯಾಗುತ್ತಾನೆ" ಎಂದರಂತೆ. ಊರಿನ ಹಿರಿಯ ಮುತ್ತೈದೆಯೊಬ್ಬಳು "ಮಗುವಿನ ನಾಮಕರಣದ ದಿನ ಆಶೀರ್ವದಿಸಲು ಬಂದವರು ಮೊರದಲ್ಲಿ ಮಲಗಿದ್ದ ಮುದ್ದು ಮಗುವನ್ನು ಕೈಗೆತ್ತಿಕೊಂಡು, ವೆಂಕಣ್ಣಯ್ಯನವರ ತಾಯಿಗೆ ಹೇಳಿದಳು. "ಲಕ್ಷ್ಮೀದೇವಮ್ಮ ನಿನ್ನಂಥ ಪುಣ್ಯಶಾಲಿ ಯಾರಿದ್ದಾರಮ್ಮ, ಸಾಕ್ಷಾತ್ ವೆಂಕಟರಮಣಸ್ವಾಮಿಯೇ ನಿನ್ನ ಮಗನಾಗಿ ಹುಟ್ಟಿದ್ದಾನೆ. ಈ ನಿನ್ನ ಮಗ ಮನೆಯ ಮುದ್ದಿನ ಮಗನಷ್ಟೇ ಅಲ್ಲಮ್ಮ, ಊರಿನ ಮುದ್ದಿನ ಮಗ, ನಾಡಿನ ಮುದ್ದಿನ ಮಗ, ಜನರ ಮುದ್ದಿನ ಮಗ ಎಂದು ಹೇಳಿ ಲೊಚ ಲೊಚ ಲೊಚ ಅಂತ ಮುದ್ದಿಟ್ಟು ಹರಸಿದಳಂತೆ, ವೆಂಕಣ್ಣಯ್ಯನವರಿಗೆ ಇಟ್ಟ ಹೆಸರು ಅವರ ತಾತನ ಹೆಸರಾದರೂ ಅವರಜ್ಜಿ ಕರೆಯುತ್ತಿದ್ದುದು, ಪುಟ್ಟನೆಂದೇ. ಏಕೆಂದರೆ ಅಜ್ಜಿಯ ಗಂಡನ ಹೆಸರನ್ನು ಮೊಮ್ಮಗನಿಗೆ ಇಟ್ಟಿತ್ತಲ್ಲಾ ಅದಕ್ಕೆ ಗಂಡನ ಹೆಸರನ್ನು ಹಿಡಿದು ಕರೆಯುವ ಕಾಲ ಆ ಕಾಲ ಆಗಿರಲಿಲ್ಲ. ಈ ಕಾಲ... ಬಿಡಿ ಆ ವಿಚಾರ.

ಬಾಲ್ಯದಿಂದಲೂ ವಿಶಿಷ್ಟ ವ್ಯಕ್ತಿಗಳಾಗಿಯೇ ಬೆಳೆದವರು ವೆಂಕಣ್ಣಯ್ಯನವರು. ಅವರು ವಿದ್ಯಾರ್ಥಿ ಆಗಿದ್ದಾಗ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಚಳ್ಳಕೆರೆಯಿಂದ ಚಿತ್ರದುರ್ಗಕ್ಕೆ ಪರೀಕ್ಷಾ ಕೇಂದ್ರಕ್ಕೆ ಹೋಗಬೇಕಿತ್ತು. ಅವರ ಉಪಾಧ್ಯಾಯರು ಶಾಲೆಯಲ್ಲಿ ವಿದ್ಯಾರ್ಥಿಗಳನ್ನೆಲ್ಲ ಪರೀಕ್ಷೆಗೆ ಕರೆದೊಯ್ಯುವಾಗ ದಾರಿಯಲ್ಲಿದ್ದ ಹನುಮಂತರಾಯನ ಗುಡಿಯಲ್ಲಿ ಹಣ್ಣುಕಾಯಿ ಅರ್ಪಿಸಿ ವಿದ್ಯಾರ್ಥಿಗಳು 'ಸ್ವಾಮಿ ನನಗೆ ಪರೀಕ್ಷೆಯಲ್ಲಿ ಪಾಸು ಮಾಡಿಸು' ಎಂದು ಕೇಳಿ ಕೊಂಡರು. ಆದರೆ ವೆಂಕಣ್ಣಯ್ಯನವರು ಹಾಗೆ ಮಾಡಲಿಲ್ಲ. ಹತ್ತಿರದ ಕೆರೆಯ ಕಾಲುವೆ ದಂಡೆಯಲ್ಲಿ ಕುಳಿತಿದ್ದರು. ಆಂಜನೇಯನಿಗೆ ಒಡಿಸಬೇಕಾದ ತೆಂಗಿನ ಕಾಯಿಯನ್ನು ಒಡೆದುಕೊಂಡು ತಿನ್ನುತ್ತಾ ಕುಳಿತಿದ್ದರು.

ಉಪಾಧ್ಯಾಯರು ಅದನ್ನು ಕಂಡು 'ಇದೇನು ನಿನ್ನ ಅವತಾರ' ಎಂದರು. ಆಗ ವೆಂಕಣ್ಣಯ್ಯ ಹೇಳಿದರು "ಕ್ಷಮಿಸಿ ಸಾರ್! ಫಲಾಪೇಕ್ಷೆಯಿಂದ ದೇವರ ಪೂಜೆ ಮಾಡಬಾರದೆಂದು ನನ್ನ ತಂದೆ ಪದೇ ಪದೇ ಹೇಳುತ್ತಿರುತ್ತಾರೆ. ಹೀಗಿರುವಾಗ ನಾನು ದೇವರ ಬಳಿ ಹೋಗಿ ಸ್ವಾಮಿ ನಾನು ನಿನಗೊಂದು ತೆಂಗಿನಕಾಯಿ ಕೊಡುತ್ತೇನೆ. ನೀನು ನನಗೆ ಪಾಸು ಮಾಡಿಸು ಎಂದು ಹೇಗೆ ಕೇಳಲಿ? ಅದಕ್ಕಾಗಿ ನಾನು ತೆಂಗಿನಕಾಯಿನ್ನು ಒಡೆದುಕೊಂಡು ತಿಂದೆ" ಎಂದರು. "ನೀನೊಬ್ಬ ಪಿತೃವಾಕ್ಯ ಪರಿಪಾಲನಾ ಧುರಂಧರ" ಎಂದು ಅಣಕವಾಡಿ ಸುಮ್ಮನಾದರು ಉಪಾಧ್ಯಾಯರು.

ಹಿಂದೆ ರಾಜನೊಬ್ಬನ ಆಸ್ಥಾನದಲ್ಲಿ ಏಕದಂಡಿ ದ್ವಿದಂಡಿ ತ್ರಿದಂಡಿ ಎಂಬ ವಿದ್ವಾಂಸರಿದ್ದರಂತೆ. ಅವರಲ್ಲಿ ಕ್ರಮವಾಗಿ ಒಂದು ಸಲ ಕೇಳಿ ಬಿಟ್ಟರೆ ಎಲ್ಲವನ್ನೂ ಗ್ರಹಿಸುತ್ತಿದ್ದವನು ಏಕದಂಡಿ, ಎರಡು ಸಲ ಕೇಳಿದರೆ ಪಾರಂಗತನಾಗುತ್ತಿದ್ದವನು ದ್ವಿದಂಡಿ, ಮೂರು ಸಲ ಕೇಳಿಸಿಕೊಂಡರೆ ಗ್ರಹಿಸುತ್ತಿದ್ದ ವ್ಯಕ್ತಿ! ತ್ರಿದಂಡಿಯಂತೆ ವೆಂಕಣ್ಣಯ್ಯನವರು ವಿದ್ಯಾಭ್ಯಾಸ ಕಾಲದಲ್ಲಿ ಏಕದಂಡಿಗಳಾಗಿದ್ದರು. ಒಮ್ಮೆ ಕೇಳಿದರೆ ಸಾಕು ನೆನಪಿಟ್ಟುಕೊಳ್ಳುತ್ತಿದ್ದ ಪಟು ಅವರು. ಶಾಲಾವ್ಯಾಸಂಗ ಕಾಲದಲ್ಲಿ ಕಥೆ ಕಾದಂಬರಿ ಹಾಳುಮೂಳು ಓದಿಕೊಂಡು ಕಾಲಹರಣ ಮಾಡುತ್ತಾನೆ. ಶಾಲಾ ಪಾಠಗಳಿಗೆ ಗಮನಕೊಡುವುದಿಲ್ಲವೆಂದು ತಿಳಿದು ಮನೆಯವರು ಅವರನ್ನು ಭಾವನ ಮನೆಯಲ್ಲಿ ಭಾವನ ಜತೆ ಓದಿಕೊಳ್ಳಲು ಬಿಟ್ಟರು. ಭಾವನಿಗೆ ವೆಂಕಣ್ಣಯ್ಯ ಹೇಳಿದರು. "ಭಾವ, ಗಟ್ಟಿಯಾಗಿ ಓದುತ್ತಾ ಹೋಗು ನಾನು ಕೇಳುತ್ತಾ ಹೋಗುತ್ತೇನೆ. ನಾನು ಓದುವುದಕ್ಕಿಂತ ನೀನು ಓದುವುದನ್ನು

ಕೇಳಿದರೆ ನನ್ನ ತಲೆಗೆ ಚೆನ್ನಾಗಿ ಹಿಡಿಸುತ್ತದೆ" ಎಂದಾಗ ಮೈದುನ ಹೇಳಿದಂತೆ ಅವನು ಓದುತ್ತಿದ್ದ. ಅವನು ಚೆನ್ನಾಗಿ ಓದುವ ಹುಡುಗ ಎಂದೇ ವೆಂಕಣ್ಣಯ್ಯನನ್ನು ತಂದು ಅವನೊಟ್ಟಿಗೆ ಹಾಕಿದ್ದರು. ಪಬ್ಲಿಕ್ ಪರೀಕ್ಷೆ ಬಂದಾಗ, ಓದಿ ಓದಿ ಕೂಚುಭಟ್ಟನಾಗಿದ್ದ ಭಾವ ಫೇಲಾಗಿದ್ದ. ಶ್ರವಣ ಕಥನವೀರ ವೆಂಕಣ್ಣಯ್ಯನವರು ಪಾಸಾಗಿದ್ದರು.

ವೆಂಕಣ್ಣಯ್ಯ ಶಾಲಾವಿದ್ಯಾಭ್ಯಾಸಾನಂತರ ಮೈಸೂರಿನ ಕಾಲೇಜಿನಲ್ಲಿ ಬಿ.ಎ.ಗೆ ಸೇರಿದರು. ಅಲ್ಲಿಯೂ ಅವರ ಸ್ಮೃತಿಶಕ್ತಿ ಪ್ರಸಿದ್ಧಿ ಪಡೆದಿತ್ತು. ಕಾಲೇಜಿನಲ್ಲಿ ಗುರು ಥಾಮಸ್ ಡೇನ್ ಹ್ಯಾಂ ಒತ್ತಾಯದ ಮೇರೆಗೆ ವಿವಿಧ ವಸ್ತುಗಳ ಪರೀಕ್ಷಾ ಸ್ಪರ್ಧೆಯಲ್ಲಿ ಭಾಗವಹಿಸಿದರು. ಕೆಲವೇ ನಿಮಿಷಗಳಲ್ಲಿ ಅಲ್ಲಿರುವ ನೂರಾರು ವಸ್ತುಗಳನ್ನು ವೀಕ್ಷಿಸಿ ಅವುಗಳ ಹೆಸರುಗಳನ್ನು ತಿಳಿಸಬೇಕು. ಆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದವರು ವೆಂಕಣ್ಣಯ್ಯ ನವರು. ವೆಂಕಣ್ಣಯ್ಯ ಬಿ.ಎ. ಮಾಡಿದಾಗ ಇಡೀ ಮೈಸೂರು ಸಂಸ್ಥಾನದಲ್ಲಿ ೧೯೦೮ರಲ್ಲಿ ಇದ್ದವರು ಕೈಬೆರಳಲ್ಲಿ ಎಣಿಸುವಷ್ಟು ಜನ ಎಂಬುದನ್ನು ಇಲ್ಲಿ ನೆನೆಯಬೇಕು. ೧೯೧೪ರಲ್ಲಿ ಎಂ.ಎ. ಮುಗಿಸಿದ ಮೇಲೆ ಅವರು ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜ್, ದೊಡ್ಡಬಳ್ಳಾಪುರದ ಕನ್ನಡ ಹೈಸ್ಕೂಲ್ ಮೊದಲಾದ ಕಡೆ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ೧೯೨೭ರಲ್ಲಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ವೆಂಕಣ್ಣಯ್ಯನವರ ಮುಖ್ಯ ಕಾರ್ಯಕ್ಷೇತ್ರ ಬೆಂಗಳೂರು, ಮೈಸೂರು, ಸೆಂಟ್ರಲ್ ಕಾಲೇಜು ಮತ್ತು ಮಹಾರಾಜ ಕಾಲೇಜು ಎಂದರೆ ತಪ್ಪಿಲ್ಲ. ಕರ್ನಾಟಕ ಸಂಘ, ಪ್ರಬುದ್ಧ ಕರ್ನಾಟಕ ಇವುಗಳ ಎರಡು ಕಣ್ಣುಗಳು ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿಗಳು. ವೆಂಕಣ್ಣಯ್ಯನವರು ಕೇವಲ ಗಿಳಿ ಪಾಠ ಹೇಳುವ, ಸಂಬಳಕ್ಕಾಗಿ ತರಗತಿ ತೆಗೆದುಕೊಳ್ಳುವ ಕಾಲೇಜ್ ಮೇಷ್ಟ್ರು ಆಗಿರಲಿಲ್ಲ. ನಿಜವಾದ ಆದರ್ಶ ಅಧ್ಯಾಪಕರಾಗಿದ್ದರು. ನಡೆ ನುಡಿ ಎರಡರಲ್ಲೂ ಶಿಷ್ಯರಿಗೆ ಮಾದರಿ ಆಗಿದ್ದರು. ಸ್ಫೂರ್ತಿ ಆಗಿದ್ದರು. ಅವರ ವಿದ್ಯಾರ್ಥಿಪ್ರೇಮ ಹೇಗಿತ್ತು ಎಂದರೆ, ಅವರ ವಿದ್ಯಾರ್ಥಿ ಎಸ್.ವಿ. ಪರಮೇಶ್ವರ ಭಟ್ಟರ ಮಾತುಗಳಲ್ಲಿ ಕಾಣಬಹುದು.

"ಪ್ರೊ. ವೆಂಕಣ್ಣಯ್ಯನವರು ತರಗತಿಗೆ ಬಂದೊಡನೆಯೇ ವಿದ್ಯಾರ್ಥಿಯ ಯೋಗಕ್ಷೇಮ ವಿಚಾರಿಸುವರು. ಕಾಫಿ ತಿಂಡಿ ತರಿಸಿಕೊಟ್ಟು ವಿದ್ಯಾರ್ಥಿಯ ಜೀವವನ್ನು ತಂಪು ಮಾಡಿದ ಮೇಲೆಯೇ ಪಾಠದ ಮಾತು. ಮೊಳಕೆಗಳನ್ನು

ಹಿಸುಕಿ ಹಾಕುವ ಪ್ರವೃತ್ತಿ ಅವರಿಂದ ಸಾವಿರ ಮೈಲಿ ಆಚೆ. ಅವರೇನಿದ್ದರೂ ಕಾಲ ಕಾಲಕ್ಕೆ ನೀರು, ಗೊಬ್ಬರ ಕಾಣಿಸಿ ತೋಟಗಾರನಂತೆ ಕೆಲಸ ಮಾಡುವವರು. ಮೊಳಕೆಯನ್ನು ಬೆಳೆಯಿಸಿ ಅದು ಗಿಡವಾಗಿ ಬಳ್ಳಿಯಾಗಿ ಬೆಳೆದು ಹೂ, ಹಣ್ಣು ನೆರಳು ಕೊಟ್ಟು ತಾನೂ ಸುಖವಾಗಿ ಅಂದವಾಗಿ ಚಂದವಾಗಿ ಬಾಳಿ ತನ್ನನ್ನು ಆಶ್ರಯಿಸಿದವರಿಗೂ ಸುಖ, ಅಂದ, ಚಂದಗಳನ್ನು ಈಯುವಂತಾಗಲಿ ಎಂಬುದೇ ಅವರ ಪ್ರವೃತ್ತಿ." ಗುರುವಿನ ಈ ಪ್ರವೃತ್ತಿ ಶಿಷ್ಯ ಪರಮೇಶ್ವರ ಭಟ್ಟರಿಗೂ ಅಂಟಿಕೊಂಡಿತ್ತು.

ವಿದ್ಯಾರ್ಥಿಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ವ್ಯಕ್ತಿತ್ವ ವೆಂಕಣ್ಣಯ್ಯ ನವರದು. ಪ್ರಬುದ್ಧ ಕರ್ನಾಟಕದ ಸಂಚಿಕೆಯನ್ನು ಅಂಚೆಗೆ ಹಾಕಲು ಮತ್ತು ಖುದ್ದಾಗಿ ಮನೆಗಳಿಗೆ ಕೊಡಲು ಸಿದ್ಧಪಡಿಸುತ್ತಿದ್ದ ದೃಶ್ಯವೊಂದನ್ನು ಕೃಷ್ಣಶಾಸ್ತ್ರಿಗಳು ಹೀಗೆ ಬಣ್ಣಿಸಿದ್ದಾರೆ. "ಒಮ್ಮೆ ಮೈಸೂರಿನಿಂದ ಬೆಂಗಳೂರಿಗೆ ವೆಂಕಣ್ಣಯ್ಯ ನವರನ್ನು ನೋಡಲು ಅವರ ಮನೆಗೆ ಹೋದೆ. ಆಗ ವೆಂಕಣ್ಣಯ್ಯನವರ ಮನೆ ಪ್ರಬುದ್ಧ ಕರ್ನಾಟಕದ ಕಚೇರಿ ಆಗಿತ್ತು. ಸಂಚಿಕೆಯನ್ನು ಕಾಗದದಲ್ಲಿ ಸುತ್ತುವವರು ಎಷ್ಟು ಜನ, ಸ್ಟಾಂಪು ಅಂಟಿಸುವವರು ಎಷ್ಟು ಜನ, ಬರೆದು ಕೊಳ್ಳುವವರು ಎಷ್ಟು ಜನ, ಜೋಡಿಸುವವರು ಎಷ್ಟು ಜನ, ಅಷ್ಟು ಜನ ಅವಶ್ಯಕವೋ ಅಲ್ಲವೋ ಅಂತು ಆ ಮನೆ ಒಂದು ಇರುವೆಗೂಡಿನಂತಿತ್ತು. ಹೀಗೆ ವಿದ್ಯಾರ್ಥಿಗಳು ಮುಕ್ಕುರಿ ಗೊಂಡಿದ್ದರು. ಆ ವಿದ್ಯಾರ್ಥಿಗಳಲ್ಲಿ ನಿಟ್ಟೂರು ಶ್ರೀನಿವಾಸರಾವ್, ನಿಜಲಿಂಗಪ್ಪ, ಭೀಮಪ್ಪನಾಯಕ ಮೊದಲಾದವರು ಇದ್ದರು. ಕೇವಲ ವಿದ್ಯಾರ್ಥಿ ಜನಪ್ರಿಯ ನಾಯಕರಷ್ಟೇ ವೆಂಕಣ್ಣಯ್ಯನವರಾಗಿರಲಿಲ್ಲ. ಅಧ್ಯಾಪಕರ ವಶೀಕರಣ ಯಂತ್ರ ವಾಗಿದ್ದರು. ಮಹಾರಾಜ ಕಾಲೇಜಿನಲ್ಲಿ ವೆಂಕಣ್ಣಯ್ಯನವರು ಕೇವಲ ಕನ್ನಡ ಅಧ್ಯಾಪಕರ ಮೇಲಷ್ಟೇ ಅಲ್ಲ ಇತರ ಅಧ್ಯಾಪಕರ ಮೇಲೂ ಎಂಥ ಪ್ರಭಾವ ಬೀರಿದ್ದರು ಎಂದರೆ ಅವರನ್ನೆಲ್ಲ ಕನ್ನಡ ಪುತ್ರರನ್ನಾಗಿ ಮಾಡಿದ ಪರಿಯನ್ನು ಎ.ಎನ್. ಮೂರ್ತಿರಾಯರು ಚೆನ್ನಾಗಿ ಹೇಳಿದ್ದಾರೆ. "ಮಹಾರಾಜ ಕಾಲೇಜಿನ ಕಾಮನ್‌ರೂಮಿನಲ್ಲಿ ಅವರು ಬೀರಿದ ಪ್ರಭಾವ ಹೇಗಿತ್ತು ಎಂದರೆ ನಾವೆಲ್ಲರೂ (ಇತರ ಭಾಷಾ ಅಧ್ಯಾಪಕರು) ಕನ್ನಡದಲ್ಲಿ ಭಾಷಣ ಮಾಡಲು ಆರಂಭಿಸಿದೆವು. ಕನ್ನಡದಲ್ಲಿ ಲೇಖನ ಬರೆದೆವು; ಕನ್ನಡದ ಸ್ಥಾನಮಾನ ಹೆಚ್ಚಿಸಲು ಸಭೆಗಳನ್ನು ಏರ್ಪಡಿಸಿದೆವು. ಜೊತೆಗೆ ಕನ್ನಡದ ಜೊತೆಗೆ ಇಂಗ್ಲಿಷ್ ಪದಗಳನ್ನು ಬೆರೆಸಿದ್ದಕ್ಕಾಗಿ ನಮಗೆ ನಾವೇ ಜುಲ್ಮಾನೆ ಹಾಕಿಕೊಂಡೆವು". ಸಂಜೆ ವಾಕಿಂಗ್‌ನಲ್ಲಿ

ತರುಣರ ತಂಡ, ಮನೆಯಲ್ಲಿ ವಿದ್ವತ್‌ಗೋಷ್ಠಿ, ಕಾಲೇಜಿನಲ್ಲಿ ಅಧ್ಯಾಪಕರ ಆತ್ಮೀಯ ಕೂಟದ ಕೇಂದ್ರ ಬಿಂದು ವೆಂಕಣ್ಣಯ್ಯ ಆಗಿದ್ದರು.

ವೆಂಕಣ್ಣಯ್ಯನವರು ವಿದ್ಯಾರ್ಥಿಗಳನ್ನು ಅಧ್ಯಾಪಕರನ್ನಷ್ಟೆ ಕನ್ನಡ ಸೇವೆಗೆ ಸಿದ್ಧಗೊಳಿಸಲಿಲ್ಲ. ಕನ್ನಡ ಜನತೆಯನ್ನು ಕನ್ನಡ ಪ್ರೇಮಿಗಳನ್ನಾಗಿ ನಿಜ ಕನ್ನಡಿಗರನ್ನಾಗಿ ಮಾಡಿದರು. ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್ ಸ್ಥಾಪಿಸಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಆ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ತಂದು ನಾಡಿಗೆ ಮಾದರಿ ಆದರು. ಪಾಶ್ಚಾತ್ಯ ದೇಶದಲ್ಲೂ ಮೈಸೂರು ದೇಶದ ಆದರ್ಶ ಪ್ರಯೋಗವೆಂಬ ಈ ಕಾರ್ಯಕ್ರಮ ಮಾಲೆ ಪ್ರಸಿದ್ಧಿ ಪಡೆಯಿತು. ಇಂದು ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಜ್ಞಾನ ಜನಸಾಮಾನ್ಯರ ಮನೆಬಾಗಿಲಿಗೆ ತಲುಪಬೇಕು. ಅವರ ಹೃದಯದಂಗಳದಲ್ಲಿ ಗ್ರಾಮಾಂತರ ನಿವಾಸಗಳಲ್ಲಿ ತಳವೂರಬೇಕು ಎಂದು ಪ್ರಚಾರ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿವೆ. ಅದಕ್ಕೆ ಆಚಾರ್ಯಪುರುಷರಾಗಿ ಮಾರ್ಗ ನಿರ್ಮಿಸಿದವರು ಟಿ.ಎಸ್. ವೆಂಕಣ್ಣಯ್ಯನವರು.

ವೆಂಕಣ್ಣಯ್ಯನವರು ಸಾಹಿತ್ಯ ನಿರ್ಮಾಣಕ್ಕಿಂತ ಸಾಹಿತಿಗಳ ನಿರ್ಮಾಣ ಮಾಡಿದ್ದೇ ಹೆಚ್ಚು. ಅವರು ಬರೆದದ್ದು ಕಡಿಮೆ ಆದರೂ ಗಾತ್ರದಲ್ಲಿ ಗುಣದಲ್ಲಿ ಸತ್ತ್ವದಲ್ಲಿ ಹಿರಿದು, ಸ್ಫೂರ್ತಿದಾಯಕವಾದದ್ದು, ಕನ್ನಡದಲ್ಲಿ ಮೊದಲ ಬಾರಿಗೆ ಶ್ರೀರಾಮ ಕೃಷ್ಣ ಲೀಲಾಪ್ರಸಂಗವನ್ನು ಎ.ಆರ್.ಕೃ. ಜತೆಗೂಡಿ ಬಂಗಾಳಿಯಿಂದ ಕನ್ನಡಕ್ಕೆ ತಂದರು. ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ ರಚಿಸಿದರು. ರವೀಂದ್ರನಾಥ ಠಾಕೂರರ ಪ್ರಬಂಧಗಳನ್ನು ಪ್ರಾಚೀನ ಸಾಹಿತ್ಯ ಎಂಬ ಗ್ರಂಥದಲ್ಲಿ ಅನುವಾದಿಸಿ ಪ್ರಕಟಿಸಿದರು. ರವೀಂದ್ರರ ಕಾವ್ಯಶೈಲಿಯ ಗದ್ಯವನ್ನು ಕನ್ನಡದಲ್ಲಿ ತರುವುದು ಸಾಮಾನ್ಯ ಸಂಗತಿ ಆಗಿರಲಿಲ್ಲ. ಆದರೆ ಆ ಪ್ರಯತ್ನವನ್ನು ಯಶಸ್ವಿಯಾಗಿಸಿದವರು ವೆಂಕಣ್ಣಯ್ಯನವರು. ವಿಷಯ ನಿರೂಪಣೆ ಮತ್ತು ಶೈಲಿಯಲ್ಲಿ ವಿನೂತನತೆಯನ್ನು ಅನುವಾದದಲ್ಲಿ ವೆಂಕಣ್ಣಯ್ಯ ತಂದಿದ್ದಾರೆ. 'ಕಾವ್ಯದ ಅನಾದರ' ಎಂಬ ಪ್ರಬಂಧದಲ್ಲಿ ಊರ್ಮಿಳೆಯನ್ನು ಕುರಿತ ಈ ಭಾಗ ಗಮನಿಸಿ.

"ಲಕ್ಷ್ಮಣನು ರಾಮಚಂದ್ರನಿಗಾಗಿ ಸರ್ವವಿಧಗಳಲ್ಲಿಯೂ ಸ್ವಾರ್ಥತ್ಯಾಗ ಮಾಡಿದನು. ಆ ಕೀರ್ತಿಯು ಈಗಲೂ ಭರತಖಂಡದಲ್ಲಿ ಮನೆ ಮನೆಯಲ್ಲೂ ಕೇಳಿ ಬರುತ್ತದೆ. ಆದರೆ ಸೀತಾದೇವಿಗಾಗಿ ಊರ್ಮಿಳಾದೇವಿಯು ಮಾಡಿದ

ಸ್ವಾರ್ಥತ್ಯಾಗವು ಜಗತ್ತಿನಲ್ಲಿ ಮಾತ್ರವೇ ಅಲ್ಲ, ಕಾವ್ಯದಲ್ಲಿಯೂ ಕೂಡ ಕಂಡು ಬರುವುದಿಲ್ಲ. ಲಕ್ಷ್ಮಣನು ದೇವತಾಸ್ವರೂಪರಾದ ಸೀತಾರಾಮರಿಗಾಗಿ ಸ್ವಾರ್ಥವನ್ನು ತ್ಯಾಗ ಮಾಡಿದನು. ಊರ್ಮಿಳಾದೇವಿಯಾದರೋ ಸ್ವಾರ್ಥ ಕ್ಕಿಂತಲೂ ಹೆಚ್ಚಾದ ತನ್ನ ಸ್ವಾಮಿಯನ್ನೇ ದಾನಮಾಡಿದಳು ಕಾವ್ಯವು ಆ ಮಾತನ್ನೇ ಎತ್ತುವುದಿಲ್ಲ. ಸೀತಾದೇವಿಯ ಕಣ್ಣೀರಿನಲ್ಲಿ ಊರ್ಮಿಳಾದೇವಿಯು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋದಳು" ವೆಂಕಣ್ಣಯ್ಯನವರ ಈ ಲೇಖನ ದಿಂದ ಕನ್ನಡದಲ್ಲಿ ಕುವೆಂಪು ಅವರ ರಾಮಾಯಣದರ್ಶನಂ, ತಿರುಮಲೆ ರಾಜಮ್ಮನವರ ತಪಸ್ವಿನಿ ನಾಟಕ, ಕುರ್ತುಕೋಟಿ ಅವರ ಊರ್ಮಿಳೆ ನೀಳ್ಗವನ, ಹೀಗೆ ಊರ್ಮಿಳಾ ಸಾಹಿತ್ಯವೇ ನಿರ್ಮಾಣವಾಗಿದೆ.

ಈ ಸಂದರ್ಭದಲ್ಲಿ ರಾಮಾಯಣದ ನಿರ್ಲಕ್ಷಿತ ಪಾತ್ರಗಳನ್ನು ಕುರಿತ ಬೇಂದ್ರೆ ಅವರ ಸಾಲುಗಳು ನೆನಪಾಗುತ್ತದೆ.

"ರಾಮನ ಸೀತಾ ವಿಲಾಪದಿಂದ ತುಂಬಿದೆ ರಾಮಾಯಣಾ
ಉಳಿದ ಬಂಧುಗಳು ಹೆಂಡಿರ ಗತಿಯೇನೆಂದು, ಕೇಳಿತೇಜನಾ
ಊರ್ಮಿಳೆ ಹೆಸರನ್ನೆತ್ತಿ ಅತ್ತಿಹುದು ಇತ್ತೀಚಿನ ಕವಿಗಣಾ
ಮಾಂಡವಿ ಶ್ರುತಕೀರ್ತಿಯು ಹೋ, ಇದ್ದರು ಅವರಾ ಆರ್ತಸ್ವನಾ
ಕೇಳುವವರೆ ಇಲ್ಲಾದರು, ಭೋರ್ಗರೆಯುತ್ತಿದೆ ರಾಮಾಯಣಾ"

ಅನುವಾದಗಳಂತೆ ವೆಂಕಣ್ಣಯ್ಯನವರ ಲೇಖನಗಳು ಗ್ರಂಥ ಸಂಪಾದನೆಗಳು ಅವರ ವಿದ್ವತ್ತಿಗೆ ಹಿಡಿದ ಕನ್ನಡಿಗಳಾಗಿವೆ.

ವೆಂಕಣ್ಣಯ್ಯನವರ ವಿಶಿಷ್ಟ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಅನೇಕ ಸಂಗತಿಗಳು ಬೆಳಕಿಗೇ ಬಂದಿಲ್ಲ ಎಂದರೂ ತಪ್ಪಾಗದು ಏಕೆಂದರೆ ವೆಂಕಣ್ಣಯ್ಯ ನವರು ಗುಪ್ತದಾನಿಗಳಾಗಿದ್ದರು. ಕೀರ್ತಿ ಕಾಮನೆ ಇರಲಿಲ್ಲ. ಅವರ ಶಿಷ್ಯರು ಮಿತ್ರರು ಹೇಳಿದ ಸಂಗತಿಗಳನ್ನು ಕೇಳಿದರೇ ಆಶ್ಚರ್ಯವಾಗುತ್ತದೆ. ಅದ್ಭುತ ವೆನಿಸುತ್ತದೆ. ಈ ಕಲಿಕಾಲದಲ್ಲೂ ಇಂಥಾ ದೇವತಾಮನುಷ್ಯನೊಬ್ಬ ಇದ್ದನೇ ಎನ್ನಿಸುತ್ತದೆ. ಪಾಂಡಿತ್ಯದಲ್ಲಿ ಶಿಕ್ಷಕವೃತ್ತಿಯಲ್ಲಿ ವಿದ್ಯಾರ್ಥಿಜನಪ್ರಿಯತೆಯಲ್ಲಿ ವೆಂಕಣ್ಣಯ್ಯನವರನ್ನು ಸರಿಗಟ್ಟುವವರು ಸಿಗಬಹುದು ಆದರೆ ಕನ್ನಡ ಸಾಹಿತಿಗಳನ್ನು ಬೆಳೆಸುವಲ್ಲಿ, ಮಾನವೀಯ ಗುಣಗಳನ್ನು ಮೆರೆಸುವಲ್ಲಿ ಅವರಂತೆ ಯಾರೂ ಇಲ್ಲ. ವೆಂಕಣ್ಣಯ್ಯನವರು ವಿಶೇಷ ವಾಗ್ಮಿಗಳಾಗಿದ್ದರು. ಅವರು ಮಾತಾಡಿದರೆ, ಮಾತಿನ ಶೈಲಿ ಮನಮೋಹಕ; ಆಕರ್ಷಣೀಯ;

ಪ್ರಶಾಂತ ನದಿ ಹರಿದಂತೆ. ಬೆಳದಿಂಗಳು ಪ್ರಸರಿಸಿದಂತೆ. ಮಲ್ಲಿಗೆ ತೋಟದಲ್ಲಿ ಬೀಸಿದ ತಂಗಾಳಿಯಂತೆ. ತಾಯಿ ಮಗುವನ್ನು ಮುದ್ದಿಸಿದಂತೆ, ಆಹ್ಲಾದಕರ. ಕಾವ್ಯದ ಬಗ್ಗೆ ಮಾತಾಡುತ್ತಿದ್ದರೆ ಕವಿ ಕಾವ್ಯದಲ್ಲಿ ಬರೆದ ರೀತಿ, ಬಳಸಿದ ಪದ, ಛಂದೋವೈವಿಧ್ಯ ಕಿವಿಗೆ ಹೇಗೆ ಸೊಗಸು, ಉಚ್ಚಾರಣೆಗೆ ಹೇಗೆ ಚಂದ, ವ್ಯಂಗ್ಯಾರ್ಥ ಪ್ರತೀತಿಗೆ ಹೇಗೆ ಚೆಲ್ವು, ವಾಚ್ಯಾರ್ಥಕ್ಕೆ ಎಷ್ಟು ಸುಂದರ ಎಂದೆಲ್ಲಾ ವಿವರಿಸುತ್ತಿದ್ದರು. ಪಂಪಭಾರತ ಸಂಪಾದನೆ ಸಮಯದಲ್ಲಿ ಅದರ ಕೆಲಸ ತುಂಬಾ ತಡವಾಯಿತೆಂದು ಬೆಳ್ಳಾವೆ ವೆಂಕಟನಾರಾಯಣಪ್ಪನವರು ಒಂದು ಬೆಲ್ ಇಟ್ಟುಕೊಂಡು ನೋಡಿ ಈ ಪದದ ಬಗ್ಗೆ ೫ ನಿಮಿಷ ಚರ್ಚಿಸಿ ಮುಂದಕ್ಕೆ ಹೋಗಿ ಮುಂದಿನ ಪದ್ಯ ತೆಗೆದುಕೊಳ್ಳಿ ಎಂದೆಲ್ಲಾ ಕಟ್ಟುನಿಟ್ಟಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದರು. ಪಂಪಭಾರತದ ಪಾಠನಿರ್ಣಯ, ಛಂದೋರೂಪನಿರ್ಣಯ ಪದದ ಅರ್ಥ. ನಿಷ್ಕರ್ಷೆ ಇತ್ಯಾದಿಗಳಿಂದ ಕಾರ್ಯ ತುಂಬ ವಿಳಂಬವಾಗಿದೆ ಎಂದು ಈ ಬೆಲ್ ಕಾರ್ಯವನ್ನು ಕೈಗೊಂಡರಂತೆ. ಆದರೆ ವೆಂಕಣ್ಣಯ್ಯನವರು ಕಾವ್ಯದ ಬಗ್ಗೆ ಮಾತಾಡುತ್ತಿದ್ದರೆ ಅದನ್ನು ಕೇಳಿ ಮೈಮರೆತು ತಮ್ಮ ಬೆಲ್ ನಿಯಮವನ್ನು ಮರೆಯುತ್ತಿದ್ದರಂತೆ. ಅವರ ಮಾತಿನ ಮೋಡಿಯಲ್ಲಿ ಇವರ ಬೆಲ್ ಬಾರಿಸುವ ಕಾಯಕ ಮರತೇಹೋಗುತ್ತಿತ್ತು. ಡಿವಿಜಿ ಹೇಳಿದಂತೆ ಬೆಳಗಾವಿಯಲ್ಲಿ ಡಿವಿಜಿ, ಕೃಷ್ಣಶಾಸ್ತ್ರಿ, ವೆಂಕಣ್ಣಯ್ಯ ಇವರು ಮಾತುಕಥೆ ಆಡುತ್ತಾ ಕುಳಿತಿದ್ದಾಗ ದಾರಿಯಲ್ಲಿ ಹೋಗುತ್ತಿದ್ದವರೆಲ್ಲ ಗುಂಪು ಕಟ್ಟಿ ನಿಂತು ಕೇಳ ತೊಡಗಿದರಂತೆ. ಇವರು ಮಾತು ನಿಲ್ಲಿಸಿದಾಗ, "ಯಾಕ್ರಪ್ಪ ನಿಲ್ಲಿಸಿಬಿಟ್ಟರಿ, ಇನ್ನೂ ಮಾತಾಡ್ರಲ್ಲ ಕೇಳಾನಿ" ಅಂದರಂತೆ ವೆಂಕಣ್ಣಯ್ಯನವರಿಗೆ.

ಒಮ್ಮೆ ಕೈಲಾಸಂ ಮೈಸೂರಿನಲ್ಲಿ ವೆಂಕಣ್ಣಯ್ಯನವರನ್ನು ರಸ್ತೆಯಲ್ಲಿ ಭೇಟಿಯಾದಾಗ ವಾಮನ ಕೈಲಾಸಂ ತ್ರಿವಿಕ್ರಮ ವೆಂಕಣ್ಣಯ್ಯನವರನ್ನು ಕುರಿತು, "ಸ್ವರ್ಗದಲ್ಲಿ ನಮ್ಮ ತಾಯಿ ತಂದೆ ಏನು ಮಾಡುತ್ತಿದ್ದಾರೆ ಸಾರ್ ಅಂತ ಕೇಳಿದರಂತೆ, ಅವರ ಎತ್ತರವನ್ನು ಕುರಿತು ವ್ಯಂಗ್ಯ ಮಾಡಿದ ಮಾತದು. ಅದು ಅರ್ಥವಾದರೂ ತೋರಿಸಿಕೊಳ್ಳದ ಸಹಜವಾದ ರೀತಿಯಲ್ಲಿ ವೆಂಕಣ್ಣಯ್ಯನವರು ಹೇಳಿದರಂತೆ. "ನಮ್ಮಗ ಮೈಸೂರಿನಲ್ಲಿ ಏನ್ ಮಾಡ್ತಾ ಇದ್ದಾನೆ ಅಂತ ನಿಮ್ಮಪ್ಪ ಅಮ್ಮ ಕೇಳಿದರಪ್ಪಾ" ಎಂದು ಆಕಾಶದ ಕಡೆ ತಲೆಯೆತ್ತಿ ಸ್ವಲ್ಪ ಹೊತ್ತು ನೋಡಿದ ಮೇಲೆ ಕೈಲಾಸಂ ಕಡೆ ತಿರುಗಿ ಹೇಳಿದರಂತೆ.

ಹೀಗೆ ಮಧುರವಾಗಿ ಮಾರ್ಮಿಕವಾಗಿ ಮೃದುವಾಗಿ ಸ್ವಾರಸ್ಯಕರವಾಗಿ ಮಾತಾಡುತ್ತಿದ್ದವರು ವೆಂಕಣ್ಣಯ್ಯನವರು.

ವೆಂಕಣ್ಣಯ್ಯನವರ ಕನ್ನಡ ಪ್ರೇಮ ಗಾಢ ಪ್ರೇಮ ಮತ್ತು ಅಂತರಂಗನಿಷ್ಠ ಪ್ರೇಮ. ವೆಂಕಣ್ಣಯ್ಯನವರನ್ನು ಚೆನ್ನಾಗಿ ಬಲ್ಲ ಆತ್ಮೀಯರೊಬ್ಬರು ಹೇಳಿದ ಸಂಗತಿಯಿದು. ವೆಂಕಣ್ಣಯ್ಯನವರ ಕನ್ನಡ ಪ್ರೇಮ ಎಷ್ಟಿತ್ತು ಎಂದರೆ ಅವರು ರಾಮಾಯಣ ಪಾರಾಯಣ ಮಾಡುತ್ತಿದ್ದರು. ದೈವಭಕ್ತರಾಗಿದ್ದರು. ಅಗಡಿ ಸ್ವಾಮಿಗಳ ಆರಾಧಕರಾಗಿದ್ದರು. ದೇವರ ಮನೆಯಲ್ಲಿ ದೇವರ ಪೂಜೆ ಮಾಡುತ್ತಿದ್ದರು. ಅವರ ಮನೆಗೆ ಬಂದು ಹೋಗುವವರ, ಅವರ ಸನ್ನಿಧಿಯಲ್ಲಿ ಧನ್ಯರಾಗುವ, ಅವರಿಂದ ಉಪಕೃತರಾದವರ ಸಂಖ್ಯೆಗೆ ಗೊತ್ತು ಗುರಿ ಇರಲಿಲ್ಲ. ಅವರಿಗೆ ಅಧ್ಯಯನಕ್ಕೆ ಉತ್ತರಪತ್ರಿಕೆಗಳ ಮೌಲ್ಯಮಾಪನಕ್ಕೆ ಲೇಖನಗಳ ಪರಿಶೀಲನೆಗೆ ವೇಳೆಯೇ ಸಿಗದೆ ಸಕಾಲದಲ್ಲಿ ಅವುಗಳನ್ನು ಪೂರೈಸುವ ಸನ್ನಿವೇಶ ಬರುತ್ತಿತ್ತು. ಅವರು ದೇವರ ಮನೆಯಲ್ಲಿದ್ದಾಗ ಯಾರೂ ಅವರನ್ನು ತೊಂದರೆ ಮಾಡುತ್ತಿರಲಿಲ್ಲ. ದೇವರ ಮನೆ ಬಾಗಿಲು ಹಾಕಿಕೊಂಡು ಧ್ಯಾನಸ್ಥ ರಾಗಿದ್ದು, ಹೊರಗೆ ಬರುತ್ತಿದ್ದರು. ಆದರೆ ಅವರು ದೇವರ ಕೋಣೆಯಲ್ಲಿ ಪಾರಾಯಣ ಪೂಜೆ, ಧ್ಯಾನ ಮಾಡುತ್ತಿದ್ದಾರೆ? ಹೌದು ಮಾಡುತ್ತಿದ್ದರು. ಅದರ ಜತೆಗೂ ಇನ್ನೊಂದು ಕೆಲಸ ಕನ್ನಡದ ಕೆಲಸ, ಉತ್ತರಪತ್ರಿಕೆ ಮೌಲ್ಯಮಾಪನ, ಗ್ರಂಥ ಅಧ್ಯಯನ ಮಾಡುತ್ತಿದ್ದರಂತೆ. ಇದು ಅತ್ಯಂತ ಆಪ್ತರಿಗೆ ಬಿಟ್ಟು ಇತರರಾರಿಗೂ ತಿಳಿದಿರಲಿಲ್ಲವಂತೆ. ಆತ್ಮೀಯರು ಕೇಳಿದರಂತೆ, ದೇವರ ಕೋಣೆಯಲ್ಲಿ ದೇವರ ಕೆಲಸಕ್ಕೆ ಹೋಗಿ ಕನ್ನಡದ ಕೆಲಸ ಮಾಡಬಹುದೇ? ಎಂದು. ಆಗ ವೆಂಕಣ್ಣಯ್ಯ ಹೇಳಿದಂತೆ, ದೇವರು ಎಂದರೆ ಯಾರು? ಕನ್ನಡವೇ ದೇವರು. ಕನ್ನಡದ ಕೆಲಸವೇ ದೇವರ ಕೆಲಸ ಎಂದ ಮೇಲೆ ದೇವರ ಮನೆಯಲ್ಲಿ ಕನ್ನಡದ ಕೆಲಸ ಮಾಡಿದರೆ ಅದು ದೇವರ ಸೇವೆ ಅಲ್ಲವೇ? ಎಂದರಂತೆ ನನಗೆ ಕನ್ನಡ ಬೇರೆ ಅಲ್ಲ, ದೇವರು ಬೇರೆ ಅಲ್ಲ ಎಂದರಂತೆ. ವೆಂಕಣ್ಣಯ್ಯನವರ ಕನ್ನಡ ಪ್ರೀತಿ ಹೇಗಿತ್ತು ಎಂಬುದನ್ನು ಈ ಆತ್ಮೀಯ ಮಾತು ಹೇಳುತ್ತದೆ.

ಯಾವುದೇ ವಿಚಾರದಲ್ಲಿ ವೆಂಕಣ್ಣಯ್ಯನವರ ಪ್ರತಿಕ್ರಿಯೆ ಕಂಡಾಗ ನಾವು ಆಶ್ಚರ್ಯಚಕಿತರಾಗುತ್ತೇವೆ. ಅವರ ಮಾನವೀಯ ಅನುಕಂಪೆ ಕಂಡಾಗ, ಹಾ! ಹಾ! ಅನ್ನುತ್ತೇವೆ. ನಮ್ಮಿಂದ ಭಿನ್ನರಾಗಿ ಮೇಲಿನವರಾಗಿ ಕಾಣುವುದು ಅವರ ಮಾನವೀಯ ವರ್ತನೆಗಳಿಂದ. ಪ್ರೊಫೆಸರ್ ಮರಿಯಪ್ಪಭಟ್ಟರು ಮದ್ರಾಸ್

ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದವರು. ವೆಂಕಣ್ಣಯ್ಯನವರಿಗೆ ಬೇಕಾದವರು. ಒಮ್ಮೆ ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಕಾರ್ಯಾರ್ಥವಾಗಿ ಬಂದವರು ವೆಂಕಣ್ಣಯ್ಯನವರ ಮನೆಗೆ ಬಂದರು. "ಹೇಗಿತ್ತು ಪ್ರಯಾಣ ಎಂದು ವೆಂಕಣ್ಣಯ್ಯನವರು ಸಹಜವಾಗಿ ಕೇಳಿದರು" ಪ್ರಯಾಣ ಚೆನ್ನಾಗಿಯೇ ಇತ್ತು ಆದರೆ ಕೊಂಚ ಮೈ ಕೈ ನೋವು ಉಳಿದಿದೆ ಅಷ್ಟೇ ಎಂದರು ಭಟ್ಟರು. ಹಾಗಾದರೆ ಸ್ವಲ್ಪ ವಿಶ್ರಮಿಸಿಕೊಳ್ಳಿ ಎನ್ನಲಿಲ್ಲ ವೆಂಕಣ್ಣಯ್ಯವರು, ತಕ್ಷಣವೇ ಎದ್ದು ಮನೆಯೊಳಗೆ ಹೋಗಿ ಒಂದು ಡಬ್ಬಿ ಹಿಡಿದುಕೊಂಡು ಬಂದರು. ಅಂಜನದ ಡಬ್ಬಿ ಮುಚ್ಚಳ ತೆಗೆದು, "ಎಲ್ಲಿ ಸ್ವಲ್ಪ ನಿಮ್ಮ ತೋಳಿನ ಬಟ್ಟೆ ಸರಿಸಿ ತೋಳನ್ನು ಸರಿಮಾಡಿಕೊಳ್ಳಿ" ಎಂದರು. ಇದೆಲ್ಲ ಏನು ನಾಳೆಗೆ ಸರಿ ಹೋಗುತ್ತದೆ ಬಿಡಿ ಏನೂ ಅಗತ್ಯವಿಲ್ಲ ಎಂದರು ಮರಿಯಪ್ಪ ಭಟ್ಟರು. ಎಲ್ಲಾದರೂ ಉಂಟೇ ಎಂದು ಹೇಳಿ, ಅವರ ಕೈ ಮೈಗಳಿಗೆ ಬಿಡದೆ ಮೃದುವಾಗಿ ಅಂಜನ ಹಚ್ಚಿದರು. ಕೊಂಚ ಹೊತ್ತು ಮಲಗಿ ಸುಧಾರಿಸಿಕೊಳ್ಳಿ ಎಂದರು. ಇದು ವೆಂಕಣ್ಣಯ್ಯ!

ವೆಂಕಣ್ಣಯ್ಯನವರ ತೀಕ್ಷ್ಣಬುದ್ಧಿ, ಸಮಯ ಸ್ಫೂರ್ತಿ ಜಾಣತನ ಮತ್ತು ಮೌಲ್ಯಮಾಪನ ಚಾತುರ್ಯವನ್ನು ಗೊರೂರು ತಮ್ಮ ಅನುಭವವೊಂದರಲ್ಲಿ ನಿರೂಪಿಸಿದ ಬಗೆ ಹೀಗೆ:

ಸಾಹಿತಿ ದೇಶಪ್ರೇಮಿ ಗೊರೂರು ಅವರು ಬದನವಾಳು ಕೇಂದ್ರದ ಖಾದಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಜರಿ ರುಮಾಲು ಧರಿಸುತ್ತಿದ್ದ ವೆಂಕಣ್ಣಯ್ಯನವರು ರುಮಾಲು ಬೇಕೆಂದು, ಖಾದಿ ಅಂಗಡಿಗೆ ಬಂದರು. ಹತ್ತು ಮೊಳದ ಉದ್ದಕ್ಕೂ ಅರ್ಧ ಅಂಗುಲ ಜರಿ ಇದ್ದ ರುಮಾಲಿಗೆ ೧೦ ರೂಪಾಯಿ ಆಗುತ್ತಿತ್ತು. ಆ ಕಾಲಕ್ಕೆ ಅದು ಸಾಮಾನ್ಯರಿಗೆ ಮಧ್ಯಮವರ್ಗದವರಿಗೆ ಅತಿ ದುಬಾರಿ ಬೆಲೆ ಆಗಿತ್ತು. ೧೦ ಮೊಳಕ್ಕೂ ಜರಿ ಹಾಕುತ್ತಿದ್ದುದರಿಂದ ಅಷ್ಟು ಬೆಲೆ ಆಗುತ್ತಿತ್ತು. ಆಗ ರುಮಾಲನ್ನು ಉದ್ದಕ್ಕೂ ನೋಡಿ ವೆಂಕಣ್ಣಯ್ಯ ಹೇಳಿದರು. ನೋಡಿ ರುಮಾಲು ಸುತ್ತಿಕೊಂಡಾಗ ಹೊರಗೆ ಕಾಣುವುದು ಎರಡು ಮೊಳದಷ್ಟು ಮಾತ್ರ ಅಂಚು. ಆದ್ದರಿಂದ ಹೊರಸುತ್ತಿಗೆ ಬರುವ ಭಾಗಕ್ಕೆ ೨ ಮೊಳಕ್ಕೆ ಜರಿ ಹಾಕಿ ಉಳಿದ ೮ ಮೊಳಕ್ಕೇಕೆ ಜರಿ. ಅದರಿಂದ ರುಮಾಲಿನ ಬೆಲೆ ಅರ್ಧಕ್ಕರ್ಧ ಕಡಿಮೆ ಆಗುತ್ತದೆ ಎಂದರು. "ಖಾದಿ ಉದ್ಯೋಗದಲ್ಲೇ ಇದ್ದು ನೂರಾರು ರುಮಾಲು ಮಾರಿದ್ದೇನೆ ನಮಗೆ ಇದು ಹೊಳೆಯಿಲೇ ಇಲ್ಲವಲ್ಲ" ಎಂದರು ಗೊರೂರು. ಆಗ ವೆಂಕಣ್ಣಯ್ಯ ಹೇಳಿದರು. "ನೀವು ನೂರಾರು ರುಮಾಲು

ಮಾರಿದ್ದೀರಿ ನಿಜ ನಿಮಗೆ ಹೊಳೆಯಲಿಲ್ಲ ನನ್ನ ಹಾಗೆ ನೀವು ಕೊಂಡು ಕೊಳ್ಳುವವರಾಗಿದ್ದರೆ ಹೊಳೆಯುತ್ತಿತ್ತು. ಕೊಳ್ಳುವವರು ಯಾವಾಗಲೂ ಖರ್ಚು ಕಡಿಮೆ ಆಗುವುದನ್ನು ಯೋಚಿಸುತ್ತಾರೆ" ಎಂದರು. ಆಮೇಲೆ ಕಾಲುಭಾಗ ಜರಿ ಹಾಕಿ ರುಮಾಲು ಬೆಲೆ ಇಳಿಸಿದ್ದು. ಆ ರುಮಾಲುಗಳಿಗೆ ವೆಂಕಣ್ಣಯ್ಯ ರುಮಾಲು ಎಂದು ಹೆಸರಿಟ್ಟರಂತೆ. ಒಂದೇ ಸಮನೆ ರುಮಾಲುಗಳು ಖರ್ಚಾಗತೊಡಗಿದವು ಎನ್ನುತ್ತಾರೆ ಗೊರೂರು. ಸರಳ ಜೀವಿಗಳಿಗೆ ತಾನೇ ಸರಳೋಪಾಯಗಳು ಹೊಳೆಯುವುದು!

ಒಮ್ಮೆ ವೆಂಕಣ್ಣಯ್ಯನವರ ಮನೇಲಿ ಕಳ್ಳತನವಾಯಿತು. ಮಿತ್ರರು ಅಯ್ಯೋ ಪಾಪ ಕಳ್ಳತನವಾಗಿ ನಿಮಗೆ ನಷ್ಟ ಕಷ್ಟವಾಗಿದೆ ಎಂದು ಸಹಾನುಭೂತಿ ತೋರಿಸಿದರು. ಆಗ ವೆಂಕಣ್ಣಯ್ಯನವರು ಹೇಳಿದರು. "ನೀವು ಸಹಾನುಭೂತಿ ಹೇಳಬೇಕಾದ್ದು ನನಗಲ್ಲ ಕಳ್ಳನಿಗೆ. ಪಾಪ ಕನ್ನಡಮೇಷ್ಟರ ಮನೆ ಎಂದು ತಿಳಿಯದೆ ಕಷ್ಟಪಟ್ಟು ನುಗ್ಗಿ ಏನೂ ಹೆಚ್ಚಿಗೆ ಸಿಗದೆ ಹೋಗಿದ್ದಾನೆ" ಎಂದರು. ಕಾರುಣ್ಯಭಾವ ಅದರಲ್ಲಿ ಹೀಗೆ ವಿಶಿಷ್ಟವಾಗಿ ಚಿಮ್ಮುತ್ತಿತ್ತು. ನಮಗೆ ಹಾಗನ್ನಿಸೀತೇ ಎಂದಾದರೂ?

ವೆಂಕಣ್ಣಯ್ಯನವರು ಹಳೆಯ ಮೈಸೂರಿನವರಾದರೂ ಅಖಿಲ ಕರ್ನಾಟಕ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸಿದವರು ಎಂದರೆ ತಪ್ಪಾಗದು. ಹೈದರಾಬಾದಿನಿಂದ ಓದಲು ಬಂದ ಡಿ.ಕೆ. ಭೀಮಸೇನರಾವ್, ಮಾನ್ವಿನರಸಿಂಗರಾವ್, ಪಿ. ರಾಮ ಚಂದ್ರರಾವ್ ಬಿ.ರಾಮಸ್ವಾಮಿ ಮೊದಲಾದ ಕನ್ನಡ ವಿದ್ವಾಂಸರು ವೆಂಕಣ್ಣಯ್ಯ ನವರ ಶಿಷ್ಯರಾಗಿದ್ದು ಅವರಿಂದ ಪ್ರಭಾವಿತರಾಗಿ ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಉಳಿಸಿ ಬೆಳಸಲು ಕಾರಣರಾದರು. ಹೈದ್ರಾಬಾದ್ ಕರ್ನಾಟಕಕ್ಕೆ ನ್ಯಾಯ ಒದಗಿಸಿದ್ದು ಆ ಕಾಲದಲ್ಲೇ. ವೆಂಕಣ್ಣಯ್ಯನವರು ಸ್ವಂತ ಜೀವನದಲ್ಲಿ ಮೌಲ್ಯಗಳನ್ನು ಆದರ್ಶಗಳನ್ನು ಕಾಪಾಡಿಕೊಳ್ಳುವುದು ಸಾಮಾನ್ಯ ಸಂಗತಿ ಅಲ್ಲಿ ನಮ್ಮಲ್ಲಿ ಅನೇಕ ಅಧ್ಯಾಪಕ ವರ್ಗದವರು ಅದ್ಭುತವಾಗಿ ಅತಿಶಯವಾಗಿ ಮೌಲ್ಯಾಧಾರಿತ ಜೀವನವನ್ನು ಕುರಿತು ಆದರ್ಶತತ್ವಗಳನ್ನು ಪುಂಖಾನು ಪುಂಖವಾಗಿ ರಂಜನೀಯ ಶೈಲಿಯಲ್ಲಿ ಭಾಷಣ ಬಿಗಿಯಬಲ್ಲರು. ಬರಹ ಬರೆಯಬಲ್ಲರು. ಆದರೆ ತಮ್ಮ ಸ್ವಂತ ಜೀವನದಲ್ಲಿ ಅದನ್ನು ಅಳವಡಿಸಿ ಕೊಂಡಿರುವುದಿಲ್ಲ. ಇದು ಲೋಕರೂಢಿ. ಆದರೆ ವೆಂಕಣ್ಣಯ್ಯನವರು ಇದಕ್ಕೆ ಅಪವಾದವಾಗಿದ್ದರು. ಇದಕ್ಕೆ ಅನೇಕ ನಿದರ್ಶನಗಳನ್ನು ಉಲ್ಲೇಖಿಸಬಹುದು.

ಈ ಪೈಕಿ ಒಂದು ನಿದರ್ಶನವೆಂದರೆ, ವೆಂಕಣ್ಣಯ್ಯನವರ ತಮ್ಮ ಶಾಮರಾಯರಿಗೆ ಬಿ.ಎ. ಆನರ್ಸ್‌ನಲ್ಲಿ ಹೆಚ್ಚು ಅಂಕಗಳಿಸಿದ್ದಕ್ಕೆ ವಿಶೇಷ ವಿದ್ಯಾರ್ಥಿ ವೇತನ ಸಿಕ್ಕಿತ್ತು. ಅವರ ಸ್ವಸಾಮರ್ಥ್ಯದ ಅಧ್ಯಯನದಿಂದ ದೊರಕಿತ್ತು. ಅವರಿಗೆ ಬಂದುದನ್ನು ತಿಳಿದ ವೆಂಕಣ್ಣಯ್ಯನವರು ಅದನ್ನು ಅವರಿಂದ ಕಿತ್ತು ಬಡತನದಲ್ಲಿದ್ದು, ಆ ವರ್ಷದ ವಿದ್ಯಾಭ್ಯಾಸ ಮುಂದುವರೆಸಲಾಗದೆ ಊರಿಗೆ ಮರಳುತ್ತಿದ್ದ ವಿದ್ಯಾರ್ಥಿಗೆ ನೀಡಿದರು. ಆಗ ವ್ಯಥೆಗೊಂಡ ಅವರ ತಮ್ಮ ಶಾಮರಾಯರು ಅಣ್ಣ ವೆಂಕಣ್ಣನಿಗೆ ಹೇಳಿದರು. ನನ್ನ ಸಾಮರ್ಥ್ಯದಿಂದ ಪಡೆದುದನ್ನು ಬೇರೆಯವರಿಗೆ ನನ್ನಿಂದ ಕಿತ್ತುಕೊಟ್ಟಿದ್ದು ಅನ್ಯಾಯ. ಹೀಗೆ ಮಾಡಬಹುದೇ? ಎಂದರು. ಆಗ ವೆಂಕಣ್ಣಯ್ಯ ಹೇಳಿದರು. “ಅಯ್ಯಾ ನಿನಗೆ ಬೇಜಾರಾಗಿದೆ ನಿಜ ಆದರೆ ನಾನು ನಿನ್ನ ಸ್ಕಾಲರ್‌ಷಿಪ್ಪನ್ನು ಯಾರಿಗೆ ಕೊಟ್ಟಿದ್ದೇನೆ ಅದನ್ನು ನೋಡು. ಆತ ದೊಡ್ಡ ಸಂಸಾರಿ, ದೂರದ ಊರಿನಿಂದ ಬಂದಿದ್ದಾನೆ. ಬಾಡಿಗೆ ಮನೆಯಲ್ಲಿ ವಾಸ. ಸಂಸಾರ ನಡೆಸುವುದು ಕಷ್ಟ. ನಿನಗಿಂತ ಹೆಚ್ಚು ಅಗತ್ಯ ಅವನಿಗೆ, ಅವನಿಗೆ ಇನ್ನಾರೂ ದಾತರಿಲ್ಲ. ಅಷ್ಟೇ ಅಲ್ಲ ಈ ವಿದ್ಯಾರ್ಥಿವೇತನ ಇಲ್ಲದಿದ್ದರೆ ಅವನ ಓದೇ ಮುಗಿಯುತ್ತದೆ. ನಿನಗಾದರೋ ನಾನಿದ್ದೇನೆ. ಅವನಿಗಾರಿದ್ದಾರೆ? ಎಂದರು. ಅಣ್ಣ ನೀನು ಮಾಡಿದ್ದು ಸರಿ ಎಂದನಂತೆ ತಮ್ಮ. ವೆಂಕಣ್ಣಯ್ಯನವರ ದೃಷ್ಟಿಕೋನ ಎಂದರೆ ಹೀಗೆ ಇರುತ್ತಿತ್ತು. ಇಂಥ ಪ್ರಸಂಗಗಳು ಹತ್ತಾರು ಇದೊಂದೇ ಅಲ್ಲ.

ವೆಂಕಣ್ಣಯ್ಯನವರ ವ್ಯಕ್ತಿತ್ವದ ವಿಶೇಷಗಳಲ್ಲಿ ಒಂದೆಂದರೆ ದುಃಖದಲ್ಲಿರುವವರಿಗೆ, ಬಾಳಿನಲ್ಲಿ ನಿರಾಶರಾಗಿ ದಿಕ್ಕೆಟ್ಟವರಿಗೆ ಸಾಂತ್ವನ ಸಮಾಧಾನ ಹೇಳುತ್ತಿದ್ದ ರೀತಿ, ಅವರಿಗೆ ನೆಮ್ಮದಿ ತರುತ್ತಿದ್ದ ರೀತಿ. ಆದಕಾರಣ ಅವರೂ ಕೇವಲ ಕಾಲೇಜ್ ಗುರು ಆಗಿರಲಿಲ್ಲ ಜೀವನ ಗುರು ಆಗಿದ್ದರು. ಇದಕ್ಕೊಂದು ನಿದರ್ಶನವೆಂದರೆ ಎ.ಎನ್. ಮೂರ್ತಿರಾಯರ ಪ್ರಸಂಗ.

ಒಮ್ಮೆ ಎ.ಎನ್. ಮೂರ್ತಿರಾಯರು ಗೃಹಕೃತ್ಯದ ಯಾವುದೋ ಒಂದು ಘಟನೆಯಿಂದ ರೋಸಿ ಹೋಗಿ ವಿಷಣ್ಣವದನರಾಗಿ ಮನಸ್ಸು ಬಹಳ ಪ್ರಕ್ಷುಬ್ಧಗೊಂಡು ಕುಕ್ಕನಹಳ್ಳಿ ಕೆರೆದಂಡೆಯ ಮೇಲಿನ ಕಲ್ಲುಬೆಂಚೊಂದರಲ್ಲಿ ಕುಳಿತು, ಚಿಂತಾಕ್ರಾಂತರಾಗಿದ್ದರು. ಅತ್ತಕಡೆ ಗಾಳಿಸವಾರಿ ಬಂದ ವೆಂಕಣ್ಣಯ್ಯನವರು ಮೂರ್ತಿರಾಯರ ವಿಷಣ್ಣವದನ ಕಂಡು ಹೆಗಲಮೇಲೆ ಕೈಹಾಕಿ ಆತ್ಮೀಯತೆಯಿಂದ ಅದೇನು ಹೇಳಿ ಎಂದು ಕೇಳಿದರು. ಏನೂ ಇಲ್ಲವಲ್ಲ ಎಂದರು

ಮೂರ್ತಿಯವರು. ಆಗ ವೆಂಕಣ್ಣಯ್ಯ ಹೇಳಿದರು: ಹಾಗಲ್ಲಪ್ಪಾ ಸಂಕೋಚ ಬೇಡಿ, ನಿಮ್ಮ ಮುಖದಲ್ಲಿ ಉದ್ವೇಗ ತೇಲುತ್ತಾ ಇದೆ. ಆತ್ಮೀಯರಲ್ಲಿ ದುಃಖ ಹೇಳಿಕೊಂಡರೆ ಮನಸ್ಸು ಹಗುರವಾಗುತ್ತೆ ಎಂದರು. ಅವರ ಸರಳತೆ, ಸಹಜ ವಿಶ್ವಾಸ ಕಂಡು ತಮ್ಮ ದುಗುಡವನ್ನೆಲ್ಲಾ ಹೇಳಿಕೊಂಡರು. ಆಗ ವೆಂಕಣ್ಣಯ್ಯ ತಮ್ಮ ಜೀವನದ ಕಹಿ. ಅನುಭವಗಳನ್ನು ಉದಾಹರಣೆ ಹೇಳುತ್ತಾ ಸಮಾಧಾನ ಹೇಳಿ ಕೊನೆಗೊಂದು ಮಾತು ಹೇಳಿದರು. "ಮೂರ್ತಿರಾವ್ ನಿಮ್ಮನ್ನು ಸದಾ ಸುಖವಾಗಿಟ್ಟಿರುತ್ತೇನೆ ಅಂತ ದೇವರೇನಾದರೂ ಬಾಂಡ್ ಬರೆದು ಕೊಟ್ಟಿದ್ದಾನೇನು! ಭ್ರಾಂತಿ-ಭ್ರಾಂತಿ! ಏಳಿ, ನಡೀರಿ ಹೋಗೋಣ" ಎಂದರು. ಆ ವೇಳೆಗೆ ಅವರ ಮಾತುಗಳಿಂದ ಮೂರ್ತಿರಾಯರ ಮನಸ್ಸು ಪ್ರಶಾಂತ ಗೊಂಡಿತ್ತು.

ವೆಂಕಣ್ಣಯ್ಯನವರು ವೈಯಕ್ತಿಕವಾಗಿ ವ್ಯಕ್ತಿಗಳ ಬಾಳಿನಲ್ಲಷ್ಟೆ ಕದಡಿದ ಮನಗಳಿಗೆ ನೆಮ್ಮದಿ ತರುತ್ತಿದ್ದರು ಎಂದಲ್ಲ. ಜನ ಸಮೂಹವನ್ನು ಹತೋಟಿಗೆ ತರುವ ಶಕ್ತಿ ಅವರ ವ್ಯಕ್ತಿತ್ವಕ್ಕೆ ಇತ್ತು. ಅವರ ಮಾತು, ಕಣ್ಣೋಟ, ರೀತಿ ನೀತಿ, ಮೃದುತ್ವ, ಆತ್ಮೀಯತೆ ನಿಲವು, ಎತ್ತರ ಬಾಗು ವಿನಯ ಅಂತರಂಗ ಶುದ್ಧಿ, ಆದರ್ಶದ ಗುರಿ ಎಲ್ಲವೂ ಕಂಡವರ ಮೇಲೆ ಆಗಾಧ ಪರಿಣಾಮ ಉಂಟು ಮಾಡುತ್ತಿತ್ತು. ಒಂದು ರೀತಿಯಲ್ಲಿ ಗಾಂಧೀ ಪ್ರಭಾವದ ರೀತಿ ಎನ್ನಬಹುದು. ಹಿಂಸೆಯನ್ನು ಅಹಿಂಸೆಯಿಂದ ತಡೆಯುವ ವಿಧಾನವದು. ಒಮ್ಮೆ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಆಗ ಸತ್ಯಾಗ್ರಹದ ಕಾಲ, ತರಗತಿಗಳನ್ನು ಬಹಿಷ್ಕರಿಸಿ ವಿದ್ಯಾರ್ಥಿಗಳು ಘೋಷಣೆ ಹಾಕುತ್ತಿದ್ದರು. ಪ್ರಿನ್ಸಿಪಾಲರಾದ ಮೆಟ್ಕಾಫ್‌ರಿಗೆ ಏನೂ ತೋಚಲಿಲ್ಲ. ಅವರನ್ನು ಸುಧಾರಿಸಲು ತಮ್ಮಿಂದಾಗದು ಅನ್ನಿಸಿತು ಅವರಿಗೆ. ಆಗ ಅವರು ವೆಂಕಣ್ಣಯ್ಯನವರ ಬಳಿ ಬಂದರು. ಹುಡುಗರಿಗೆ ನಾಲ್ಕು ಬುದ್ಧಿಮಾತು ಹೇಳಿ ತರಗತಿಗಳಿಗೆ ಹೋಗುವಂತೆ ಮಾಡುತ್ತೀರಾ ಎಂದು ಕೇಳಿಕೊಂಡರು. ನೀವು ಒಬ್ಬರೇ ಈ ಕೆಲಸಮಾಡಲು ಸಮರ್ಥರು ಎಂದರು. ವೆಂಕಣ್ಣಯ್ಯನವರು ಹೋಗಿ ವಿದ್ಯಾರ್ಥಿಗಳ ಜತೆ ಮಾತಾಡಿದರು. ಏನು ಹೇಳಿದರೋ ಆಡಿದರೋ ತಿಳಿಯದು. ಆದರೆ ಅವರಾಡಿದ ಮಾತು ರೀತಿ, ನಯ ವಿನಯಗಳು ಎಷ್ಟು ಮೋಡಿ ಮಾಡಿತು ಅಂದರೆ ಕೆಲವೇ ನಿಮಿಷಗಳಲ್ಲಿ ಸದ್ದಿಲ್ಲದೆ ಎಲ್ಲಾ ವಿದ್ಯಾರ್ಥಿಗಳು ತರಗತಿಗಳಿಗೆ ಹಿಂದಿರುಗಿದ್ದರು. ಕನ್ನಡ ಪ್ರೊಫೆಸರ್ ಕೇವಲ

ಕನ್ನಡ ಪ್ರೊಫೆಸರ್ ಆಗಿರಲಿಲ್ಲ ಕಾಲೇಜ್ ಪ್ರೊಫೆಸರ್ ಆಗಿದ್ದರು. ವಿದ್ಯಾರ್ಥಿಗಳ ಪಾಲಿಗೆ ಆತ್ಮೀಯ ಮಾರ್ಗದರ್ಶಿ ಆಗಿದ್ದರು.

ವೆಂಕಣ್ಣಯ್ಯನವರ ಒಳನೋಟ ಹೊರನೋಟಗಳ ಪ್ರಭಾವವನ್ನು ಡಿವಿಜಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ವೆಂಕಣ್ಣಯ್ಯನವರ ಆಕಾರ ವ್ಯಕ್ತಿತ್ವ ಪ್ರಭಾವ ಕಾರಿಯಾದುದು. ಆಳು ಆರಡಿಗೂ ಮೀರಿದ ಎತ್ತರ. ಮೈ ತೆಳುವು, ಕೈ ಬೆರಳುಗಳು ತುಂಬ ಉದ್ದ. ನನ್ನ ಕೈಯ ಒಂದು ಗೇಣು ಅವರ ಕೈಗೆ ಒಂದು ಚೋಟು, ಮುಖವೂ ಆಕರ್ಷಣೀಯ, ತೇಜಸ್ವಿಯಾದ ಕಣ್ಣುಗಳು, ಮಾತು ಅವಸರವಿಲ್ಲದೆ ಸಾವಧಾನವಾಗಿ ಹರಿದು ಬರುವುದು. ಕಂಠಧ್ವನಿ ತುಂಬ ಗಟ್ಟಿ ಅಲ್ಲದೆ, ತುಂಬ ಮೆಲ್ಲಗೆ ಅಲ್ಲದೆ ಮಧ್ಯಮಸ್ಥಾಯಿಯಲ್ಲಿ ಬರುವುದು. ಸಂಗೀತಕ್ಕೆ ಒಪ್ಪುವ ಕಂಠ. ಉಡುಗೆ ತೊಡುಗೆಗಳಲ್ಲಿ ಅಚ್ಚುಕಟ್ಟು. ತಲೆಯ ಮೇಲೆ ಇರುತ್ತಿದ್ದುದು ರುಮಾಲು; ಸಣ್ಣ ಸರಿಗೆಯಂಚಿನ ರುಮಾಲು ಸೊಗಸಾಗಿ ಸುತ್ತಿದ್ದು, ಇದು ಡಿವಿಜಿ ಕಂಡ ವೆಂಕಣ್ಣಯ್ಯನವರ ಹೊರ ನೋಟ.

ಇನ್ನು ಅವರ ಒಳನೋಟದ ಪ್ರಭಾವವನ್ನು ಅವರು ಚಿತ್ರಿಸಿದ್ದು ಹೀಗೆ "ಮನುಷ್ಯ ಜೀವನದಲ್ಲಿ ಎಷ್ಟೋ ಸ್ನೇಹಗಳು ಷರಟು ಕೋಟುಗಳಂತೆ ಹೊರವಸ್ತುಗಳಾಗಿ ನಮ್ಮ ಮೈಗೆ ಅಂಟಿಕೊಂಡಿರುತ್ತವೆ. ಆದರೆ ಒಂದೋ ಎರಡೋ ಸ್ನೇಹಗಳು ಮಾತ್ರ ಮೈಯ ಚರ್ಮವಾಗಿ ಮಾಂಸ ಮೂಳೆಗಳಾಗಿ ಜೀವನದ ಆಶ್ರಯ ವಸ್ತುಗಳಾಗುತ್ತವೆ. ವೆಂಕಣ್ಣಯ್ಯ ಹಾಗೆ ನನ್ನ ಜೀವದ ಅಂತರ್‌ದ್ರವವಾದವರು. ಹೊರಗಣ ಪದಾರ್ಥವಲ್ಲ."

ವೆಂಕಣ್ಣಯ್ಯನವರು ಎಷ್ಟರ ಮಟ್ಟಿಗೆ ಎಂಥೆಂಥವರಿಗೂ ಅಂತರ್‌ದ್ರವ ರಾಗಿದ್ದರು. ಎಂಬುದಕ್ಕೆ ಅವರ ಶಿಷ್ಯರಲ್ಲೊಬ್ಬರಾದ ಎಚ್.ಎಂ. ಶಂಕರ ನಾರಾಯಣರಾಯರು ತಿಳಿಸಿದ ಸಂಗತಿ ಸಾಕ್ಷಿ ಆಗಿದೆ. ೨೪-೨-೧೯೩೧ರಲ್ಲಿ ವೆಂಕಣ್ಣಯ್ಯನವರು ನಿಧನರಾದರು. ಅವರನ್ನು ಶಂಕರನಾರಾಯಣರಾಯರು ಸ್ಮಶಾನಕ್ಕೆ ಹೋಗಿ ಅಂತ್ಯದರ್ಶನ ಪಡೆದರು ತಂದೆಯವರಿಗೆ ವೆಂಕಣ್ಣಯ್ಯ ನವರು ನಿಧನರಾದ ಸುದ್ದಿಯನ್ನು ಸ್ಮಶಾನದಲ್ಲಿ ಅಂತ್ಯದರ್ಶನ ಪಡೆದ ಸಂಗತಿ ಅವರು ಹೇಳಿದರು. ಆಗ ಅವರ ತಾಯಿ "ಅಪ್ಪ ಅಮ್ಮ ಇದ್ದವರು ಸ್ಮಶಾನಕ್ಕೆ ಹೋಗುವುದುಂಟೋ ಅಷ್ಟೂ ತಿಳಿಯಲಿಲ್ಲವೇ?" ಅಂತ ಆಕ್ಷೇಪಿಸಿದರು. ಆಗ ಶುದ್ಧ ವೈದಿಕರಾದ ಶಂಕರನಾರಾಯಣರಾಯರ ತಂದೆ ಹೇಳಿದರು. ಹುಚ್ಚಾ

ಎಂಥ ಕೆಲಸ ಮಾಡಿದೆ. ವೆಂಕಣ್ಣಯ್ಯನವರು ನಿನಗೆ ಅನ್ನವಿಟ್ಟು ವಿದ್ಯೆ ಹೇಳಿಕೊಟ್ಟ ತಂದೆ; ಗುರು, ನೀನು ಒಂದು ಹೆಗಲು ಕೊಡದೆ ತಪ್ಪು ಮಾಡಿದೆ ಎಂದು ಛೀಮಾರಿ ಹಾಕಿದರು. ತಾಯಿ ಅವರ ಆಕ್ಷೇಪವನ್ನು ಖಂಡಿಸಿದರು. ಅವರ ಕಣ್ಣಲ್ಲಿ ಶೋಕಧಾರೆ ಹರಿಯುತ್ತಿತ್ತು.

ವೆಂಕಣ್ಣಯ್ಯನವರನ್ನು ಅವರ ಜೀವನ ಸಾಧನೆ ವ್ಯಕ್ತಿತ್ವಗಳನ್ನು ನೆನೆದಾಗಲೆಲ್ಲ ಅವರೇ ಹೇಳಿದ ಮಾತು ನೆನಪಾಗುತ್ತೇ ಹೆಸರಿನ ಶಾಶ್ವತತೆಗಿಂತಲೂ ಹಿರಿದಾದುದು. ಇದೆಯಯ್ಯಾ ಬದುಕು ಸಾಧಿಸುವುದಕ್ಕೆ "ಅದನ್ನು ಸಾಧಿಸಿದ ಸಾಧಕರು ವೆಂಕಣ್ಣಯ್ಯನವರು. ವಿ.ಸೀ. ಹೇಳಿದಂತೆ: ಅವರದು ಒಂದು ಮನುಷ್ಯ ದೇಹವಲ್ಲ. ಒಂದು ಉಸಿರು ಒಂದು ಜೀವಗುಣ, ಒಂದು ಬೆಳಕು, ಒಂದು ಪರಿಮಳ, ದೇವತಾ ಮನುಷ್ಯರು.

ಚಿತ್ತದಲಿ ಕನ್ನಡದ ಜ್ಯೋತಿಗಳ ಹತ್ತಿಸುತ್ತ
ಒಲವಿನವನು ಎನಿಸಿದ್ದಾ ಕನ್ನಡದ ಹಕ್ಕಿ

ವೆಂಕಣ್ಣಯ್ಯನವರು ನಮ್ಮ ನಾಡಿಗೆ ಸದಾ ಮಾರ್ಗದರ್ಶಿ ನಂದಾದೀಪ ಅವರ ಸ್ಮರಣೆ ಪುಣ್ಯಸ್ಮರಣೆ, ಧನ್ಯಸ್ಮರಣೆ.

❐



೨. ಕನ್ನಡ ದ್ರೋಣಾಚಾರ್ಯ

ಎ.ಆರ್. ಕೃಷ್ಣಶಾಸ್ತ್ರಿ

ಎ.ಆರ್.ಕೃಷ್ಣಶಾಸ್ತ್ರಿಗಳನ್ನು ಕುರಿತು ಹೇಳುವ ಮುಂಚೆ ನಾನು ಅವರನ್ನು ಕಂಡ ಒಂದೆರಡು ಪ್ರಸಂಗಗಳನ್ನು ಹೇಳಬೇಕೆನ್ನಿಸಿದೆ. ನಾನು ಶಾಲಾವಿದ್ಯಾರ್ಥಿ ಆಗಿದ್ದಾಗ ಸಾಹಿತ್ಯ ಪರಿಷತ್ತಿನಲ್ಲಿ ಹಲವಾರು ಬಾರಿ ದೂರದಿಂದ ನೋಡುತ್ತಿದ್ದೆ. ಸಾಹಿತ್ಯ ಪರಿಷತ್ತಿನಲ್ಲಿ ಅವರದೊಂದು ದತ್ತಿನಿಧಿ ಇದೆ. ಅದು ಮಹಿಳಾ ಕಾರ್ಯಕ್ರಮಕ್ಕೆ ಮೀಸಲು ಆಗಿತ್ತು. ಕನ್ನಡ ದೇವರನಾಮ ಸ್ಪರ್ಧೆ ಆ ದತ್ತಿ ನಿಧಿಯಿಂದ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಡುತ್ತಿದ್ದರು. ಕೋಸಂಬರಿ, ಕಡಲೆಹಿಟ್ಟು, ಗುಗ್ಗುರಿ ಹೀಗೆ ಏನಾದರೊಂದು ಚರಪು ನೀಡುತ್ತಿದ್ದರು. ಅದನ್ನು ಆಮೇಲೆ ನಿಲ್ಲಿಸಿಬಿಟ್ಟರು. ವ್ಯವಸ್ಥಾಪಕರನ್ನು ಚರಪು ನೀಡುವುದನ್ನು ಏಕೆ ನಿಲ್ಲಿಸಿದಿರಿ ಎಂದಾಗ ಅದನ್ನು ಕೊಡಲು ದತ್ತಿನಿಧಿಯಿಂದ ಬರುವ ಹಣ ಸಾಲದು ಎಂದರು. 'ಇದು ಅನ್ಯಾಯ, ನೀವು ಚರಪು ನಿಲ್ಲಿಸಬಾರದು' ಎಂದು ನಾನು ನನ್ನ ಮಿತ್ರ ವಾದಿಸಿದೆವು. ನಾವು ವಿದ್ಯಾರ್ಥಿಗಳಾದ್ದರಿಂದ ರುಚಿಕರವಾದ ಚರಪಿನ ಸವಿ ಅನಭವಿಸಿದವರು; ಜತೆಗೆ ಸಹಜವಾಗಿ ತಿಂಡಿ ಆಸೆಯ ವಯಸ್ಸು ನಮ್ಮದು. ನಾವು ವಾದ ಮಾಡಿದಾಗ "ನೀವು ದತ್ತಿ ಇಟ್ಟವರನ್ನು ದತ್ತಿ ಹಣ ಹೆಚ್ಚಿಸಲು ಹೇಳಿ ಆಗ ಚರಪು ಕೊಡುತ್ತೇವೆ" ಎಂದರು. ನಮಗೆ ಕೃಷ್ಣಶಾಸ್ತ್ರಿಗಳ ಮನೆ ಗೊತ್ತಿತ್ತು. ಮನೆಗೆ ಹೋದೆವು. "ಶಾಸ್ತ್ರಿಗಳು ಏನು ಬಂದಿರಿ? ಅಂದರು. ವಿಷಯ ಹೇಳಿದೆವು." ದತ್ತಿನಿಧಿ ವಿಷಯ ನಿಮಗೆ ಬೇಡ ನೀವು ಹುಡುಗರು ಈ ವಿಷಯಗಳಿಗೆಲ್ಲ ಬರಬಾರದು ಹೋಗಿ ಎಂದು ಗದರಿಸಿದ ದನಿಯಲ್ಲಿ ಹೇಳಿದರು ನಾವು ಪೆಚ್ಚಾಗಿ ಹಿಂತಿರುಗಲು ಸಿದ್ಧರಾದೆವು. "ನಿಲ್ಲಿ" ಎಂದು ಹೇಳಿ ಡ್ರಾಯರಿಂದ ಪೆಪ್ಪರ್ ಮೆಂಟ್‌ಗಳನ್ನು ಕೈತುಂಬ ತೆಗೆದುಕೊಟ್ಟರು. ಬೈದರೂ ಎಷ್ಟು ಒಳ್ಳೆಯವರು ಕೈತುಂಬ ಪೆಪ್ಪರ್‌ಮೆಂಟ್ ಕೊಟ್ಟಿದ್ದಾರೋ ಎಂದು ನಾನು ನನ್ನ ಮಿತ್ರ ಮಾತಾಡಿಕೊಂಡೆವು.

ಇನ್ನೊಂದು ಪ್ರಸಂಗ. ಬಸವನಗುಡಿ ಸೊಸೈಟಿಯಲ್ಲಿ ನಮ್ಮನೆ ರೇಷನ್ ಕಾರ್ಡ್ ಇತ್ತು. ನಾನು ಕ್ಯೂನಲ್ಲಿ ನಿಂತು ರೇಷನ್ ತರುತ್ತಿದ್ದೆ. ಶಾಸ್ತ್ರಿಗಳೂ ಕ್ಯೂನಲ್ಲಿ ನಿಂತು ತರುತ್ತಿದ್ದರು. ನಾನು ಕ್ಯೂನಲ್ಲಿ ಮುಂದೆ ಇದ್ದೆ; ಶಾಸ್ತ್ರಿಗಳು ಸಾಕಷ್ಟು ಹಿಂದೆ ನಿಂತಿದ್ದರು. ಚರಪಿನ ಪ್ರಸಂಗದಿಂದ ಶಾಸ್ತ್ರಿಗಳ ಪರಿಚಯ ಆಗಿತ್ತಲ್ಲ ಆ ವೇಳೆಗೆ ಅವರ ವಚನ ಭಾರತ, ಬಂಕಿಮಚಂದ್ರ, ಕಥಾಮೃತ ಓದಿದ್ದೆ. ಶಾಸ್ತ್ರಿಗಳೇ ನೀವು ಮುಂದೆ ನಿಲ್ಲಿ ನಾನು ನಿಮ್ಮ ಜಾಗದಲ್ಲಿ ನಿಲ್ಲುತ್ತೇನೆ" ಎಂದೆ ಆಗ ಅವರು ಹೇಳಿದ ಮಾತು ಈಗಲೂ, ನೆನಪಿದೆ "ಮಗೂ ಹಾಗೆಲ್ಲ ಕ್ಯೂ ತಪ್ಪಿಸಬಾರದು; ನಿಯಮ ಪಾಲಿಸಿದರೆ ಚಿಕ್ಕವರೂ ದೊಡ್ಡವರಾಗುತ್ತಾರೆ. ನಿಯಮಭಂಗ ಮಾಡಿದರೆ ದೊಡ್ಡವರೂ ಚಿಕ್ಕವರಾಗುತ್ತಾರೆ. ಹೋಗಿ ನೀನಿರುವ ಕಡೆ ನಿಂತುಕೋ" ಎಂದರು. ಮಾತಾಡದೇ ನಾನಿದ್ದ ಜಾಗಕ್ಕೆ ಬಂದೆ.

ಮತ್ತೊಮ್ಮೆ, ಸೊಸೈಟಿ ಬಳಿ ಅವರನ್ನು ಭೇಟಿ ಮಾಡಿದವರೊಬ್ಬರು ಶಾಸ್ತ್ರಿಗಳೇ ನಿಮಗೆ ಕನ್ನಡ ಚೆನ್ನಾಗಿ ಬರುತ್ತೆ ಅಂತ ನನ್ನ ಸ್ನೇಹಿತರು ಹೇಳಿದರು. "ನೀವು ನಮ್ಮ ಮಗಳಿಗೆ ಕನ್ನಡ ಪಾಠ ಹೇಳಬೇಕು. ಅವಳು ಒಂದನೇ ಕ್ಲಾಸಿನಲ್ಲಿ ಓದುತ್ತಿದ್ದಾಳೆ. ಸರಿಯಾಗಿ ಕನ್ನಡ ಕಲೀತಿಲ್ಲ ನಾನು ೩ ರೂ ತಿಂಗಳಿಗೆ ಫೀಸು ಕೊಡ್ತಿದ್ದೆ. ನೀವು ದೊಡ್ಡ ಮೇಷ್ಟ್ರು ತುಂಬಾ ಚೆನ್ನಾಗಿ ಪಾಠ ಹೇಳ್ತೀರಿ ಅಂತ ನನ್ನ ಸ್ನೇಹಿತರು ಹೇಳಿದರು. ನಿಮಗೆ ೫ ರೂ ಕೊಡ್ತೇನೆ ತಿಂಗಳಿಗೆ ಎಂದರು. ಶಾಸ್ತ್ರಿಗಳು ನಕ್ಕು ಬಹಳ ಸಂತೋಷ ನಿಮ್ಮ ಮಗು ಕನ್ನಡ ಚೆನ್ನಾಗಿ ಕಲಿಯಬೇಕು ಅದಕ್ಕೆ ಪಾಠ ಹೇಳಿಸಬೇಕು ಎಂಬುದನ್ನು ಮೆಚ್ಚಿದೆ. ಫೀಸೇನೂ ಬೇಡ ನಿಮ್ಮ ಮಗು ಕನ್ನಡ ಕಲಿತರೆ ಅದೇ ನನ್ನ ಫೀಸು" ಎಂದರು. ಅವರು ಬೆರಗಾದರು.

ಮತ್ತೊಂದು ಅವಿಸ್ಮರಣೀಯ ಸಂಗತಿ ಎಂದರೆ ಕುವೆಂಪು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಬೆಂಗಳೂರಿನಲ್ಲಿ ಸನ್ಮಾನ ಸಮಾರಂಭ ಏರ್ಪಟ್ಟಿತ್ತು. ಸಮಾರಂಭದಲ್ಲಿ ತಮ್ಮ ಗುರುಗಳಾದ ಎ.ಆರ್.ಕೃ ಅವರನ್ನು ಕುವೆಂಪು ಕಂಡು ಅವರ ಬಳಿ ಬಂದು "ಗುರುಗಳೇ ಇದೆಲ್ಲಾ ನಿಮ್ಮ ಅನುಗ್ರಹ" ಎಂದರು. ಆಗ ಕೃಷ್ಣಶಾಸ್ತ್ರಿಗಳು "ನನ್ನ ಅನುಗ್ರಹ ಅಲ್ಲವಯ್ಯಾ ನಿನ್ನ ಪ್ರತಿಭೆ ಪಾಂಡಿತ್ಯಕ್ಕೆ ದೊರೆತ ಪ್ರತಿಫಲ ನಂಗೆ ತುಂಬಾ ಸಂತೋಷವಾಗಿದೆ ನಿನಗೆ ಪ್ರಶಸ್ತಿ ಬಂದದ್ದು" ಎಂದರು. ಯಾರೋ ಅದರಂತೆ, ನಿಮಗೆ ಗಂಡು ಮಕ್ಕಳು ಇಲ್ಲವಲ್ಲಾ ಶಾಸ್ತ್ರಿಗಳೇ ಅಂತ. ಅದಕ್ಕೆ ಶಾಸ್ತ್ರಿಗಳು ಹೇಳಿದರಂತೆ. "ನನ್ನ ವಚನಭಾರತ, ನನ್ನ ಶಿಷ್ಯ ಪುಟ್ಟಪ್ಪ ನನ್ನ ಗಂಡು ಮಕ್ಕಳು ಕಣಯ್ಯ" ಅಂದರಂತೆ

ವಿನೋದವಾಗಿ, ಅಂಥ ಶಿಷ್ಯಪ್ರೇಮ ಶಾಸ್ತ್ರಿಗಳದು. ಗುರುಗಳು ಅಂದ್ರೆ ಹೀಗಿರಬೇಕು. ಇವರ್‍ೇ ನಿಜವಾದ ಕನ್ನಡ ದ್ರೋಣರು ಅಂತ ನನಗನ್ನಿಸಿದೆ.

ನಮ್ಮಲ್ಲಿ ಅಧಿಕಾರದಲ್ಲಿದ್ದಾಗ ಹೊಗಳಿಸಿಕೊಳ್ಳುವವರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ನಿವೃತ್ತರಾದ ಮೇಲೆ ಪ್ರಸಿದ್ಧರಿಂದ ಹೊಗಳಿಸಿ ಕೊಳ್ಳುವುದು ಸುಲಭವಲ್ಲ. ಏಕೆಂದರೆ ಅಧಿಕಾರ ಇರುವುದಿಲ್ಲ. ಇನ್ನು ತಾರುಣ್ಯದಲ್ಲಿ ಮಾಡಿದ ಸಾಹಸಗಳನ್ನು ಮಾಡಲು ಉತ್ಸಾಹ ಶಕ್ತಿ ಇರುವುದಿಲ್ಲ. ಆದರೆ ಆ ಮಾತು ಕೃಷ್ಣಶಾಸ್ತ್ರಿಗಳಿಗೆ ಅನ್ವಯಿಸುವುದಿಲ್ಲ. ಕುವೆಂಪು ಕೃಷ್ಣಶಾಸ್ತ್ರಿಗಳ ಬಗ್ಗೆ ಹೇಳಿದ ಈ ಮಾತುಗಳು ಸಾಕ್ಷಿ ಆಗಿವೆ.

"ಶ್ರೀ ಕೃಷ್ಣಶಾಸ್ತ್ರಿಗಳು ನಿವೃತ್ತ ಕನ್ನಡ ಪ್ರಾಧ್ಯಾಪಕರು. ನೌಕರಿಯಿಂದ ನಿವೃತ್ತರಾಗುವುದೆಂದರೆ ಹಲವರ ಪಾಲಿಗೆ ಅದೊಂದು ವಿಷಾದದ ಘಟನೆ. ಸಂಬಳ ಕಡಿಮೆ ಆಗುತ್ತದೆ, ಅಧಿಕಾರ ನಿಂತುಹೋಗುತ್ತದೆ; ಮನ್ನಣೆ ಮೊಟಕಾ ಗುತ್ತದೆ. ಆದ್ದರಿಂದಲೆ ಅನೇಕರು ನಿವೃತ್ತರಾದ ಮೇಲೆ ಹೊಸ ನೌಕರಿಯನ್ನು ಹುಡುಕುತ್ತಾ ಹೋಗುತ್ತಾರೆ. ಕೆಲವು ಜನ ರಾಜಕೀಯಕ್ಕೂ ಇಳಿಯುತ್ತಾರೆ. ಶ್ರೀ ಕೃಷ್ಣಶಾಸ್ತ್ರಿಗಳು ಈ ಜಾತಿಯವರಲ್ಲ. ಅವರು ಹೆಸರಿಗೆ ಮಾತ್ರ ನಿವೃತ್ತರು. ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಘಂಟೆಗಳಲ್ಲಿ ಪಾಠ ಹೇಳುವುದನ್ನು ಬಿಟ್ಟರೆ ಉಳಿದಂತೆ ಅವರ ಕಾರ್ಯಕ್ರಮ ಯಥಾ ಪ್ರಕಾರವಾಗಿದೆ. ಸರ್ಕಾರಿ ನೌಕರಿಯಿಂದ ನಿವೃತ್ತರಾದ ಮೇಲೆ ಮೀಸಲು ಕಟ್ಟಿಕೊಂಡಿದ್ದವರಂತೆ ಕೃತಿರಚನಾಕಾರ್ಯದಲ್ಲಿ ತೊಡಗಿದ್ದಾರೆ. ವಚನಭಾರತ, ಕಥಾಮೃತ, ಬಂಕಿಮಚಂದ್ರ, ನಿಬಂಧಮಾಲಾ– ಒಂದೊಂದೂ ಬೃಹತ್ತಾದ ಗ್ರಂಥಗಳು ಹೊರ ಬಂದಿವೆ. ಹೀಗೆ ನಿವೃತ್ತಿಯ ತರುವಾಯ ಬಾಳನ್ನು ಇಷ್ಟು ಸಾರ್ಥಕವಾಗಿ ಬಳಸಿಕೊಂಡವರು ಬಹಳ ಅಪೂರ್ವ."

೧೯೬೧ರಲ್ಲಿ ನಿವೃತ್ತರಾದ ೧೫ ವರ್ಷಗಳ ಅನಂತರ ರವೀಂದ್ರನಾಥ ಠಾಕೂರರ ಪ್ರಬಂಧ ಸಂಕಲನ ಪ್ರಕಟವಾಯಿತು. ೭೦ನೇ ವಯಸ್ಸಿನಲ್ಲಿ ಇದನ್ನು ಅನುವಾದಿಸಲು ತೆಗೆದುಕೊಂಡಾಗ ದೈಹಿಕವಾಗಿ ಮಾನಸಿಕವಾಗಿ ಬಳಲಿದ್ದರೂ, "ಬಂಗಾಳಿಭಾಷೆ ಬಲ್ಲ ಕನ್ನಡಿಗನಾಗಿ ತಾನು ಮಾಡಬೇಕಾದ ಕರ್ತವ್ಯವೆಂದು" ಭಾವಿಸಿ ಕೃತಿ ಅನುವಾದಕ್ಕೆ ತೊಡಗಿದರು. ಇಂಥ ಜೀವನೋತ್ಸಾಹವನ್ನು ಶಾಸ್ತ್ರಿಗಳಂಥವರಲ್ಲಿ ಮಾತ್ರ ಕಾಣಲು ಶಕ್ಯ.

ದೃಢ ದೇಹ – ಸ್ಥಿರಚಿತ್ತ (Sound mind in a Sound Body) ಎಂಬ ಮಾತಿಗೆ ಎ.ಆರ್.ಕೃ. ಒಳ್ಳೆಯ ಉದಾಹರಣೆ ಆಗಿದ್ದಾರೆ. ಕೃಷ್ಣಶಾಸ್ತ್ರಿಗಳು ಬುದ್ಧಿ ಚುರುಕಾಗಿರುವಷ್ಟೇ ದೇಹ ದೃಢವಾಗಿರಬೇಕು ಎಂದು ನಂಬಿದ್ದರು. ಅವರು ಬೆಳಿಗ್ಗೆ ೪೧/೨ ಗಂಟೆಗೆ ಎದ್ದು ಸಾಮು ಮತ್ತು ಗದೆ ತಿರುಗಿಸುವುದು. ಚಾಮುಂಡಿ ಬೆಟ್ಟದ ಮೆಟ್ಟಿಲುಗಳನ್ನು ಹತ್ತಿ ಇಳಿಯುವುದು, ವ್ಯಾಯಾಮ ಮುಂತಾದವನ್ನು ಮಾಡುತ್ತಿದ್ದರು. ಒಂದು ಗಂಟೆ ಬಿರುಸಾಗಿ ನಡೆದು ಮನೆಗೆ ಬರುತ್ತಿದ್ದರು.

ವಿವಿಧ ಬಗೆಯ ಬಣ್ಣಬಣ್ಣದ ಹೂಗಳಿಂದ ದೇವರನ್ನು ಅಲಂಕರಿಸುವುದು ಅವರಿಗೆ ಪ್ರಿಯವಾದ ಕೆಲಸವಾಗಿತ್ತು. ಸಹಸ್ರನಾಮದಿಂದ ದೇವತಾರ್ಚನೆ ಮಾಡುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಬಾವಿಯಿಂದ ನೀರು ಸೇದಿ ಗಿಡಗಳಿಗೆ ಹಾಕುತ್ತಿದ್ದರು.

ಹಿಂದಿನ ಕಾಲದವರಿಗೆ ಬೆಳ್ಳಿತಟ್ಟೆಯಲ್ಲಿ ಊಟ ಮಾಡುವುದು ಬೆಳ್ಳಿ ತಂಬಿಗೆಯಲ್ಲಿ ನೀರು ಕುಡಿಯುವುದು ಪದ್ಧತಿ. ಸುಬೋಧ ರಾಮರಾಯರು ಹಾಗೇ ಮಾಡುತ್ತಿದ್ದರು. ತಮ್ಮ ತಟ್ಟೆಯನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ಹಣೆಯಲ್ಲಿ ಅಕ್ಷತೆ ಧರಿಸುತ್ತಿದ್ದರು. ಕಾಲೇಜಿಗೆ ಹೋಗುವಾಗ ಅಂಚಿನ ರೇಷ್ಮೆ ಪಂಚೆ, ಟ್ವೀಡ್ಕೋಟ್ ಮತ್ತು ದೊಡ್ಡಂಚಿನ ಜರತಾರಿ ಮೈಸೂರು ರುಮಾಲು ಧರಿಸುತ್ತಿದ್ದರು. ಸೈಕಲ್ಲಿನಲ್ಲಿ ಸಂಚರಿಸುತ್ತಿದ್ದರು. ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ಲಾಲ್‌ಬಾಗಿಗೆ ಹೋಗಿಬರುತ್ತಿದ್ದರು. ೧೧ರ ಹೊತ್ತಿಗೆ ಗಾಂಧಿ ಬಜಾರಿಗೆ ಭೇಟಿ ನೀಡಿ ಹಾಗೆ ಮಗಳ ಮನೆಗೆ ಬಂದು ಮೊಮ್ಮಗಳನ್ನು ಕರೆದು ಕೊಂಡು ಹೋಗುತ್ತಿದ್ದರು. ವಚನಭಾರತ, ಬಂಕಿಮಚಂದ್ರ ಬರೆಯವಾಗ ವಿದ್ಯಾರ್ಥಿಗಿಂತ ಹೆಚ್ಚಾಗಿ ಹಗಲು ೧೨ರಿಂದ ಸಂಜೆ ೫ ಗಂಟೆವರೆಗೆ ಬರೆಯುತ್ತಿದ್ದರು. ವ್ಯಾಕರಣದಪಟು ಭಾಷೆಯಲ್ಲಿ, ಕುಸ್ತಿಪಟು ದೇಹದಲ್ಲಿ, ಅವರಾಗಿದ್ದರು. ರುಚಿರುಚಿಯಾದ ತಿಂಡಿಗಳನ್ನು ತಿನ್ನುವುದು ಇತರರಿಗೆ ಕೊಡಿಸುವುದು ಹವ್ಯಾಸವಾಗಿತ್ತು.

ಎಂ.ವಿ. ಸೀತಾರಾಮಯ್ಯನವರು ಡಾ.ಎ.ಆರ್. ಕೃಷ್ಣಶಾಸ್ತ್ರಿಗಳ ಪರಮ ಶಿಷ್ಯರಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಂ.ವಿ.ಸೀ. ಸಹಾಯಕರಾಗಿ ಎ.ಆರ್.ಕೃ ಅವರ ಬಳಿ ಕಾರ್ಯ ನಿರ್ವಹಿಸುತ್ತಿದ್ದರು. ತಾವು ಬರೆದ ಒಂದು ಕಥಾ ಸಂಕಲನ ಕೃತಿಯನ್ನು ಎ.ಆರ್.ಕೃ. ಅವರಿಗೆ ಅಭಿಪ್ರಾಯ ನೀಡಲು ಕೊಟ್ಟರು. ಆಗ ಅದನ್ನು ಕಂಡು ಶಾಸ್ತ್ರಿಗಳು ಶಿಷ್ಯನಿಗೆ ಹೇಳಿದ ಮಾತಿದು.

"ಕನ್ನಡ ಎಂ.ಎ. ಮಾಡಿಕೊಂಡು ನೀನು ಕಥೆ ಬರೆಯುತ್ತಾ ಕುಳಿತು ಕೊಳ್ಳುವುದು ಮಹಾಸಂಗೀತ ವಿದ್ವಾಂಸ ಹರಿಕಥೆ ಮಾಡಲು ಹೊರಟ ಹಾಗೆ. ನಿನಗೆ ಶಕ್ತಿ ಇದೆ- ಯಾವುದಾದರೂ ಹಳಗನ್ನಡ ಗ್ರಂಥವನ್ನು ಸಂಪಾದನೆ ಮಾಡು. ಪಾಂಡಿತ್ಯಪೂರ್ಣ ಲೇಖನಗಳನ್ನು ಇನ್ನೂ ಹೆಚ್ಚಾಗಿ ಬರಿ" ಎಂದು ನಿಜವಾದ ವಾತ್ಸಲ್ಯದಿಂದ ಬುದ್ಧಿ ಹೇಳಿದರು. ಆಗ ಎಂವಿಸೀ ಅವರು ಚಿತ್ರಗಾರ ನಾಗಲು ಸಾಧ್ಯವಿಲ್ಲದೆ ಎಂ.ಎ.ಗೆ ಸೇರಿದ ಸಂಗತಿ ನೆನಪಿಸಿದಾಗ ಎ.ಆರ್.ಕೃ ಹೇಳಿದರು. "ಹೌದು ಹೌದು ನೀನು ಚಿತ್ರಗಾರನಾಗಬೇಕೆಂದು ಟಿ.ಎಸ್. ವೆಂಕಣ್ಣಯ್ಯನವರಿಗೆ ಆಸೆ ಇತ್ತು ನನಗೂ ಅದೇ ಆಸೆ ಇತ್ತು. ಆದರೆ ಬ್ರಷ್ ನಿನ್ನ ಕೈಗೆ ಸಿಗಲಿಲ್ಲ. ಲೇಖನಿ ಹಿಡಿದೆ; ಹೋಗಲಿ ಬಿಡು ಎಂದಾಗ ಎಂವಿಸೀ ಹೇಳಿದರು ಅಷ್ಟೇ ಅಲ್ಲ ಸಾರ್, ಕಥೆ ಕಾದಂಬರಿ ಬರೆದರೆ ನಾಲ್ಕು ಕಾಸು ಬರುತ್ತೆ. ನಮ್ಮ ಸೀಮೆಯಲ್ಲಿ ಪಾಂಡಿತ್ಯಕ್ಕೆ ಏನು ಬೆಲೆ ಇದೆ? ಪ್ರಮೋಷನ್ ಕೊಡುವಾಗ ಕೂಡಾ ಅದು ಲೆಕ್ಕಕ್ಕೆ ಬರುವುದಿಲ್ಲ ಎಂದು ಸ್ನೇಹಿತರೊಬ್ಬರ ಪಾಡನ್ನು ನೆನೆದು ಎಂವಿಸೀ ಹೇಳಿದರು. ಎ.ಆರ್.ಕೃ ಅವರಿಗೆ ಆ ಮಾತಿನರ್ಥ ಆಯಿತು. ಅದಕ್ಕೆ ಅವರು "ಅದೂ ದಿಟ ಅಂತ ಇಟ್ಟುಕೋ, ಆದರೂ ಪಾಂಡಿತ್ಯದ ಕೆಲಸವನ್ನು ಕರ್ತವ್ಯ ಎಂದು ಮಾಡಬೇಕು" ಎಂದರು. ಆ ಮಾತು ಎಂ.ವಿ.ಸೀ. ಅವರ ಮನಸ್ಸಿಗೆ ನಾಟಿತು ಏಕೆಂದರೆ ಗುರುಗಳು ತಮ್ಮ ಬದುಕನ್ನೇ ಪಾಂಡಿತ್ಯಕ್ಕೆ ಮೀಸಲಾಗಿಟ್ಟಿದ್ದಾಗ ಅವರು ಪಾಂಡಿತ್ಯದ ಕೆಲಸವನ್ನು ಕರ್ತವ್ಯ ಕರ್ಮವಾಗಿ ನಡೆಸಿ ಕೊಂಡು ಬಂದಿದ್ದರು. ಪೂಜ್ಯ ಶಾಸ್ತ್ರಿಗಳು ತೀರಿಕೊಳ್ಳುವ ಮುನ್ನ ಅಪಘಾತ ವೊಂದಕ್ಕೆ ಸಿಕ್ಕಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅವರನ್ನು ನೋಡಿಕೊಂಡು ಬರಲು ಹೋದ ಎಂ.ವಿ.ಸೀ. ಅವರು ವಿದ್ವತ್ಪೂರ್ಣವಾಗಿ ಕವಿರಾಜಮಾರ್ಗವನ್ನು ಸಿದ್ಧಮಾಡುತ್ತಿರುವುದನ್ನು ತಿಳಿಸಿದಾಗ, ಎ.ಆರ್.ಕೃ ಮಂದಹಾಸದಿಂದ ಸಂತೋಷ ವ್ಯಕ್ತಪಡಿಸಿದರು. ಗುರುವಿನ ಪ್ರಭಾವಕ್ಕೆ ಇದೊಂದು ನಿದರ್ಶನ.

ಸಾಮಾನ್ಯರಿಗೆ ಬೇಕಾದ ಸಾಹಿತ್ಯವು ಸುಲಭವಾಗಿರಬೇಕೆಂಬ ತತ್ತ್ವವನ್ನು ನಾನೂ ಒಪ್ಪುತ್ತೇನೆ. ತಿಳಿಯದವರನ್ನು ಪಾಂಡಿತ್ಯದಿಂದ ಬೆರಗು ಮಾಡಿದರೆ ಇಬ್ಬರಿಗೂ ಕಷ್ಟ ಯಾರಿಗೂ ಲಾಭವಿಲ್ಲ. ಆದರೆ ಸಾಹಿತ್ಯವನ್ನು ಕೆಳಗೆ ಇಳಿಸುವುದಕ್ಕಿಂತ ಹೆಚ್ಚಾಗಿ ಸಾಮಾನ್ಯರನ್ನು ಮೇಲಕ್ಕೆ ಎತ್ತುವುದು ಸಾಹಿತಿಯ ಉದ್ದೇಶವಾಗಿರಬೇಕು.

ನಿಜ, ಆದರೆ ಮಕ್ಕಳನ್ನು ಎಷ್ಟು ವರ್ಷ ಆದರೂ ಹಾಲಿನ ಮೇಲೆಯೇ ಬೆಳಸುವುದಕ್ಕಾದೀತೇ? ಕ್ರಮೇಣ ಆಹಾರ ನೀಡಿ ಬೆಳೆಸಬೇಕು ಮಕ್ಕಳಿಗೆ ಕಥೆ ಹೇಳುವಾಗ ಮಾತು ಚಿಕ್ಕದಾಗಿದ್ದರೆ ಅರ್ಥ ಸುಲಭವಿರುವುದಿಲ್ಲ.

ಒಮ್ಮೆ ಕೃಷ್ಣಶಾಸ್ತ್ರಿಗಳು ಮೊಮ್ಮಗಳಿಗೆ ಕಥೆ ಹೇಳಲು ಮೊದಲು ಮಾಡಿದರು. "ಒಂದು ಕಾಡಿನಲ್ಲಿ ಒಬ್ಬ ಋಷಿಯಿದ್ದನಂತೆ. ಅದಕ್ಕೆ ಆ ಮಗು 'ಕಾಡು' ಎಂದರೆ ಏನು? ಎಂದು ಕೇಳಿ ಬಿಟ್ಟಿತು. ನನಗೆ ನಾಲಗೆ ಕಟ್ಟಿತು. ಅದಾದ ಒಂದು ತಿಂಗಳ ಮೇಲೆ ಬಾಬಾಬುಡನ್ ಬೆಟ್ಟವನ್ನು ನೋಡುವುದಕ್ಕೆ ಹೋಗಿದ್ದಾಗ ಅಲ್ಲಿದ್ದ ಕಾಡನ್ನು ತೋರಿಸಿ ಅದರ ಅರ್ಥ ಹೇಳಿದೆ. ಆದರೆ ಋಷಿಯನ್ನು ತೋರಿಸುವುದಕ್ಕಾಗಲಿ ಹೇಳುವುದಕ್ಕಾಗಲಿ ಇನ್ನೂ ಆಗಿಲ್ಲ." ಎಂಬುದಾಗಿ ಮಿತ್ರರಿಗೆ ಹೇಳಿದರು.

೧೯೬೦ರಲ್ಲಿ ೭೫ನೇ ವಯಸ್ಸಿನಲ್ಲಿ ವಚನಭಾರತ ಬರೆದಾಗ ಮೊಮ್ಮಕ್ಕಳು ನಿರ್ಮಲ-ಭಾರತೀ ತಮಗೆ ಓದುವುದು ಕಷ್ಟ ಎಂದಾಗ ಅದೇ ವಯಸ್ಸಿನ ಎಲ್ಲ ಮಕ್ಕಳು ಓದುವುದಕ್ಕಾಗಿ ಸರಳ ಶೈಲಿಯಲ್ಲಿ ಮಕ್ಕಳಿಗಾಗಿ ಬರೆದರು. ಎಡಗಡೆ ಪುಟದಲ್ಲಿ ಚಿತ್ರ ಬಲಗಡೆ ದಪ್ಪಕ್ಷರಗಳಲ್ಲಿ ಪುಟ್ಟಪುಟ್ಟ ವಾಕ್ಯ, ಸರಳ ಪದಗಳಿಂದ ಕಥೆಗಳ ಮೂಲಕ ಮಹಾಭಾರತವನ್ನು ಪರಿಚಯಿಸಿದ್ದಾರೆ. ಭಾರತದ ಕಥೆ ಜತೆಗೆ ನಳನಕಥೆ, ನಾಯಿ ಕಥೆ, ಮೂರು ಮುನಿಗಳ ಕಥೆ, ಇಲಿಯ ಕಥೆ, ಗೌತಮಿ ಕಥೆ, ಮುಂಗುಸಿ ಮೈ ಚಿನ್ನವಾದ ಕಥೆ ಮೊದಲಾದವನ್ನು ಹೇಳಿದ್ದಾರೆ. "ಮಕ್ಕಳಿಗೆ ಈ ಕಥೆಗಳನ್ನು ಹೇಳಿದ ಪುಣ್ಯ ಲಭಿಸಿದ್ದರಿಂದ ಭಗವಂತನಿಗೆ ಪ್ರೀತಿ ಯಾಗುತ್ತದೆ. ಮಕ್ಕಳ ಸಾಹಿತ್ಯ ಸೇವೆ ಭಗವಂತನ ಸೇವೆ ಎಂದು ತಿಳಿದಿದ್ದರು.

ಪ್ರಬುದ್ಧ ಕರ್ನಾಟಕದಂಥ ಪ್ರೌಢಪತ್ರಿಕೆ ನಡೆಸಿ ಕನ್ನಡಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾದುದು. ಅಮೂಲ್ಯವಾದುದು, ಹೊಸ ಹತ್ತಾರು ಲೇಖಕರನ್ನು ಬೆಳಕಿಗೆ ತಂದರು. ಹೊಸಗನ್ನಡ ಸಾಹಿತ್ಯದ ಹುಲುಸಾದ ಬೆಳೆ ಬರಲು ಕಾರಣ ಕರ್ತರಾದರು. ಕರ್ನಾಟಕ ಸಂಘ, ಪ್ರಬುದ್ಧ ಕರ್ನಾಟಕ ಪತ್ರಿಕೆ ಈ ಎರಡೂ ಶಾಸ್ತ್ರಿಗಳು ಕನ್ನಡ ಸಾಹಿತಿಗಳನ್ನು ಕನ್ನಡ ಸಾಹಿತ್ಯವನ್ನು ಹೇಗೆ ಬೆಳೆಸಬೇಕು ಎಂಬುದನ್ನು ತೋರಿಸಿದ್ದಕ್ಕೆ ಸಾಕ್ಷಿ ಆಗಿವೆ. ಉಳಿದವರಿಗೆ ಮಾದರಿ ಆಗಿದೆ.

ಪ್ರಬುದ್ಧ ಕರ್ನಾಟಕದ ಕೊಡುಗೆಯನ್ನು, ಕೃಷ್ಣಶಾಸ್ತ್ರಿಗಳ ಬದುಕು ಬರಹ ಎಂಬ ಮಹಾ ಪ್ರಬಂಧವನ್ನು ಬರೆದು ಅವರ ಸಮಗ್ರ ಕೃತಿಗಳ ಸಮೀಕ್ಷೆಯನ್ನು ಸಂಕ್ಷಿಪ್ತವಾಗಿ ಸೊಗಸಾಗಿ ಮಾಡಿರುವ ಶ್ರೀಮತಿ ರುಕ್ಮಿಣಿ ರಘುರಾಮ ಅವರು

ಈ ರೀತಿ ಗುರುತಿಸಿದ್ದಾರೆ. "ಶಾಸ್ತ್ರಿಗಳು ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಕಾಲದಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ೨೫೦ ವಿದ್ವಾಂಸರ ಲೇಖಕರ ಬರಹಗಳು ಪ್ರಕಟವಾಗಿವೆ. ೨೦೦ ನವೀನ-ಪ್ರಾಚೀನ ಕವಿತೆಗಳು ೧೪೫ ಸಂಶೋಧನ ಲೇಖನಗಳು ೧೨೫ ಸಣ್ಣ ಕತೆ, ಪ್ರಬಂಧ, ಗದ್ಯ ಇತ್ಯಾದಿಗಳು, ೨೨ ನಾಟಕಗಳು, ೨೦ ಐತಿಹಾಸಿಕ ಕಾದಂಬರಿಗಳು, ೪೦೦ ಗ್ರಂಥ ವಿಮರ್ಶೆಗಳು ಪ್ರಕಟವಾಗಿವೆ."

ಈ ಸಾಧನೆ ಸುಲಭವಾಗಿ ಆಗಿಲ್ಲ, ಶಾಸ್ತ್ರಿಗಳು ತಾವೇ ಬೈಸಿಕಲ್ ಮೇಲೆ ಮುದ್ರಣಾಲಯಕ್ಕೆ ಹೋಗಿ, ಮುದ್ರಣ ಮಾಡಿಸಿ ವಿದ್ಯಾರ್ಥಿಗಳ ನೆರವಿಂದ ಅಂಚೆಗೆ ಸಿದ್ಧಪಡಿಸಿ, ಮನೆ ಮನೆಗೆ ತಾವೇ ಹೋಗಿ ಸಂಚಿಕೆಗಳನ್ನು ಹಂಚಿ ಚಂದಾ ಕೇಳಿದಾಗ ಆಗ ಬಾ ಈಗ ಹೋಗಿ ಬಾ ಎಂದಾಗಲೂ ಬೇಜಾರಿಲ್ಲದೆ ಹತ್ತಾರು ಸಲ ಹೋಗಿ ಚಂದಾ ವಸೂಲು ಮಾಡುತ್ತಿದ್ದರು. ಜಾಹೀರಾತು ಇಲ್ಲದೆ ಪತ್ರಿಕೆ ನಡೆಸಿದರು. ಪ್ರಬುದ್ಧ ಕರ್ನಾಟಕದಲ್ಲಿ ಲೇಖನ ಕತೆ, ಕವಿತೆ ಪ್ರಕಟವಾದರೆ ಅವನು ಗಣ್ಯ ಲೇಖಕ ಎಂಬ ಮಟ್ಟಕ್ಕೆ ಪ್ರಬುದ್ಧ ಕರ್ನಾಟಕವನ್ನು ತಂದರು. ಲೇಖನ ಆಯ್ಕೆಯಲ್ಲಿ ನಿಷ್ಠುರರಾಗಿ ವರ್ತಿಸಿ ಪ್ರಬುದ್ಧ ಕರ್ನಾಟಕದ ಉನ್ನತ ಮಟ್ಟವನ್ನು ಕಾಪಾಡಿದ್ದಾರೆ. ಇದು ಆ ಕಾಲದಲ್ಲಿ ಬೇರೆ ಯಾರಿಗೂ ಸಾಧ್ಯವಾಗಿಲ್ಲ.

ಎ.ಆರ್.ಕೃ. ರಚಿಸಿದ ಕೊನೆಯ ಗ್ರಂಥ ನಿಬಂಧಮಾಲಾ ಭಾಗ-೨ ೧೯೬೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಯಿತು. ರವೀಂದ್ರನಾಥ ಠಾಕೂರರ ಪ್ರಬಂಧಗಳ ಈ ಸಂಗ್ರಹವನ್ನು ಬಂಗಾಳಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದ ಅನುವಾದಕರಲ್ಲಿ ಎರಡು ವರ್ಗದವರು ಇದ್ದಾರೆ. ಮೂಲ ಭಾಷಾ ಅನುವಾದಕರು ಎಂದರೆ ನೇರವಾಗಿ ಇನ್ನೊಂದು ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದವರು. ಇಂಥ ಅನುವಾದಗಳು ಹೆಚ್ಚು ಪ್ರಾಮಾಣಿಕವಾದವು. ಮೂಲ ಮೂಲವೇ ಎಂದರೂ ಸಹಾ ಮೂಲದ ಸ್ವರೂಪವನ್ನು ಅನುವಾದಕ ನೇರವಾಗಿ ಗ್ರಹಿಸುತ್ತಾನೆ. ವ್ಯಾಪಾರದಲ್ಲಿ ಗ್ರಾಹಕ ನೇರವಾಗಿ ಉತ್ಪಾದಕನಿಂದ ವಸ್ತುಕೊಂಡಹಾಗೆ. ಇನ್ನೊಂದು ಬಗೆಯ ಅನುವಾದಕರಿದ್ದಾರೆ. ಅನ್ಯಭಾಷಾವಲಂಬಿ ಅನುವಾದಕರು ಎಂದರೆ ಒಂದು ಮೂಲಕೃತಿಯ ಭಾಷೆ ತಿಳಿಯದಾಗ ಅದರ ಇನ್ನೊಂದು ಭಾಷೆಯ ಕೃತಿಯನ್ನು ಆಧರಿಸಿ ಅನುವಾದಿಸುವುದು. ಕನ್ನಡದಲ್ಲಿ ಎರಡೂ ಬಗೆಯ ಅನುವಾದಕರಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿಗಳು ಮೊದಲ ವರ್ಗದವರು.

ಬಂಗಾಳಿಯಿಂದಲೇ ನೇರವಾಗಿ ಕನ್ನಡಕ್ಕೆ ಅನುವಾದ ಮಾಡಿದ ಮಹಾಶಯರು. ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆ, ನಿಬಂಧಮಾಲಾ ಮೊದಲಾದವನ್ನು ಅನುವಾದಿಸಿದ್ದಾರೆ. ಪ್ರಭುಶಂಕರ ಮೊದಲಾದವರು ವಿವೇಕಾ ನಂದರ ಕೃತಿಗಳನ್ನು ಇಂಗ್ಲಿಷಿನಿಂದ ಅನುವಾದಿಸಿದ್ದಾರೆ. ಸೋಫೋಕ್ಲಿಸನ ನಾಟಕಗಳನ್ನು ಕ.ವೆಂ. ರಾಘವಾಚಾರ್ ಗ್ರೀಕ್‌ನಿಂದ ಕನ್ನಡಕ್ಕೆ ತಂದರೆ, ಲಂಕೇಶ್ ಮೊದಲಾದವರು ಇಂಗ್ಲಿಷಿನಿಂದ ಕನ್ನಡಕ್ಕೆ ತಂದಿದ್ದಾರೆ. ಮೂಲಕ್ಕೆ ಹತ್ತಿರವಿರುವುದು ಮೂಲ ಭಾಷೆಯಿಂದ ನೇರವಾಗಿ ಕನ್ನಡಕ್ಕೆ ತಂದ ಕೃತಿಗಳೇ ಎಂದರೆ ತಪ್ಪಿಲ್ಲ. ಈ ದೃಷ್ಟಿಯಿಂದ ಸಂಸ್ಕೃತದಿಂದ, ಬಂಗಾಳಿಯಿಂದ ಎ.ಆರ್. ಕೃಷ್ಣಶಾಸ್ತ್ರಿಗಳು ಮಾಡಿದ ಅನುವಾದಿತ ಗ್ರಂಥಗಳು ಆದರ್ಶಪ್ರಾಯವಾದುದು.

ಹಲವಾರು ವರ್ಷ ಬಂಗಾಳಿ ಸಾಹಿತ್ಯ ಅಭ್ಯಾಸ ಮಾಡಿದ್ದಷ್ಟೇ ಅಲ್ಲದೆ ಸಾಕಷ್ಟು ಪರಿಣಿತಿ ಪಡೆದವರು. ಅನುವಾದಕ್ಕೆ ಒಂದು ಭಾಷೆಯ ಪರಿಚಯ ಇದ್ದರೆ ಸಾಲದು ವಿಶಾಲ ಓದು, ಭಾಷಾ ಪರಿಣಿತಿ ಎರಡೂ ಭಾಷೆಗಳಲ್ಲಿ ಇರಬೇಕು. ಎಷ್ಟೋ ಜನ ಲೇಖಕರಿಗೆ ಕನ್ನಡದಲ್ಲಿ ಇರುವ ಪರಿಣಿತಿ ಅನ್ಯಭಾಷೆಯಲ್ಲಿ ಇಲ್ಲದಾಗ ಆ ಭಾಷೆಗೆ ಕನ್ನಡ ಕೃತಿ ಅನುವಾದಿಸಿದಾಗ ಅದು ಪೇಲವವಾಗುತ್ತದೆ. ಮಂಕುತಿಮ್ಮನ ಕಗ್ಗದ ಇಂಗ್ಲಿಷ್ ಅನುವಾದಗಳು, ಉಮರ್ ಖಯ್ಯಾಮನ ಕನ್ನಡಾನುವಾದಗಳು ಉದಾಹರಣೆ ಆಗಬಲ್ಲವು.

ಅನುವಾದ ಮಾಡುವಾಗ ಗದ್ಯ ಕೃತಿಗಳ ಅನುವಾದದ ಕಷ್ಟ ಬೇರೆ ಪದ್ಯ ಕೃತಿಗಳ ಅನುವಾದದ ಕಷ್ಟ ಬೇರೆ. ಪದ್ಯ ಗದ್ಯ ಎರಡೂ ಕೂಡಿರುವ ಕೃತಿ ಅನುವಾದ ಮಾಡುವವರು ಕವಿಗಳೂ ಗದ್ಯ ವಿಚಕ್ಷಕರೂ ಆಗಿರಬೇಕು. ಕೃಷ್ಣಶಾಸ್ತ್ರಿಗಳು ಬಂಗಾಳಿ ಕೃತಿಗಳ ಅನುವಾದದಲ್ಲಿ ಈ ಸಮಸ್ಯೆಯನ್ನು ಎದುರಿಸಿದ್ದಾರೆ. ಸರಳ ಪದ್ಯಾನುವಾದಗಳಿಂದ ಕವಿ ಪ್ರತಿಭೆ ತೋರಿದ್ದಾರೆ. ನಿಬಂಧಮಾಲಾ–೨ ರಲ್ಲಿ ಹಲವಾರು ಪದ್ಯಗಳ ಅನುವಾದ ಇದಕ್ಕೆ ನಿದರ್ಶನವಾಗಿದೆ.

ಉದಾಹರಣೆಗೆ ರವೀಂದ್ರರ ಬಾಲ್ಯದ ಜೀವನೋತ್ಸಾಹ ಪ್ರತಿಬಿಂಬಿಸುವ ಈ ಸಾಲುಗಳನ್ನು ಗಮನಿಸಬಹುದು.

ನುಡಿಯುತಲಿದ್ದೆನು ಧಾರಾಕಾರದಿ
ನನ್ನಯ ಮಾತನನ್ಯರಿಗೆ

ಹೇಳುತಲಿದ್ದೆನು ಮನೆ ಬಾಗಿಲೊಳು
ಎನಿತೊ ಮನೆ ಮಾತುಗಳ
ನಾನಾ ಮಾತನು ಉರಿಯೊಳು ದಹಿಸಿ
ಮುಳುಗಿಸಿ ತೇಲಿಸಿ ಕಣ್ಣೀರೊಳಗೆ
ಹೊಸ ಪ್ರತಿಮೆಯ ಹೊಸ ಕುಶಲದೆ
ರಚಿಸಿದೆ ನಿನ್ನಯ ಮನ ಮತದೆ *(ನಿಬಂಧಮಾಲಾ ಪು. ೨೭)*

ಈ ಸಂದರ್ಭದಲ್ಲಿ ಪ್ರಸಂಗವೊಂದನ್ನು ಬಿಜಿಎಲ್ ಸ್ವಾಮಿ ಹೇಳಿದ್ದು ನೆನಪಾಗುತ್ತದೆ.

ಕೃಷ್ಣಶಾಸ್ತ್ರಿಗಳು ನಿಬಂಧಮಾಲಾ ಅನುವಾದ ಕಾರ್ಯ ಕೈಗೊಂಡಾಗ ರವೀಂದ್ರರ ಮೂಲಕೃತಿಯ ಪದಗಳು, ಆಶಯ ಬಂಗಾಳಿ ಭಾಷೆಯಲ್ಲಿ ಯಾವ ರೀತಿ ಇದೆ ಎಂದು ತಿಳಿಯುವುದಕ್ಕಾಗಿ ಚರ್ಚಿಸಲು ಬೆಂಗಳೂರು ಬಸವನ ಗುಡಿಯ ರಾಮಕೃಷ್ಣಮಠದ ಸ್ವಾಮಿ ಯತೀಶ್ವರಾನಂದರ ಮತ್ತು ಸ್ವಾಮಿ ಸಂಜ್ಞಾನಂದರ ಸಹಾಯ ಪಡೆಯುತ್ತಿದ್ದರು.

ಸ್ವಾಮಿಗಳನ್ನು ಭೇಟಿಯಾದಾಗ ಮೊದಲಿಗೆ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಶಾಸ್ತ್ರಿಗಳು ಮಾಡುತ್ತಿದ್ದರು. ಸ್ವಾಮಿಗಳು "ನೀವು ಹಿರಿಯರು ವಿದ್ವಾಂಸರು ನಾವು ಕಿರಿಯರು ನಿಮಗೆ ನೀವು ನಮಿಸಬೇಡಿ" ಎನ್ನುತ್ತ ಅವರು ಪ್ರತಿ ನಮಸ್ಕಾರ ಮಾಡುತ್ತಿದ್ದರಂತೆ. ಆಗ ಶಾಸ್ತ್ರಿಗಳು ವರ್ಣಮಾತ್ರಂ ಕಲಸಿದಾತಂ ಗುರು. ಕಲಿಸುವವರು ಯಾರೇ ಆಗಲಿ ಗುರು, ಕಲಿಯುವರು ಯಾರೇ ಆಗಿರಲಿ ಶಿಷ್ಯ. ನಾನೀಗ ಕಲಿಯಲು ಬಂದವನು ಎಂದು ಮತ್ತೆ ನಮಿಸುತ್ತಿದ್ದರು.

ವಿದ್ಯಾದದಾತಿ ವಿನಯಂ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನಬೇಕೇ?

ಕೃಷ್ಣಶಾಸ್ತ್ರಿಗಳ ಸ್ವತಂತ್ರ ಕೃತಿಗಳು ೧೦ ಸಂಪಾದಿತ ಕೃತಿಗಳು ೪.

೧. ಕೆಳದಿ ನೃಪ ವಿಜಯ (೧೯೨೧), ೨. ಧರ್ಮಾಮೃತ (೧೯೨೪), ೩. ಹರಿಶ್ಚಂದ್ರ ಕಾವ್ಯಸಂಗ್ರಹ (ಟಿ.ಎಸ್.ವಿ. ಜತೆ) ೧೯೩೧, ೪. ಕವಿ ಜಿಹ್ವಾ ಬಂಧನ (೧೯೫೨). ವಿದ್ವತ್ಪೂರ್ಣ ಸಂಪಾದಿತ ಕೃತಿಗಳು, ಸ್ವತಂತ್ರ ಕೃತಿಗಳಲ್ಲಿ ವಚನಭಾರತ, ಕಥಾಮೃತ, ನಿರ್ಮಲ ಭಾರತಿ. ಭಾಸ ಕವಿ ಸಂಸ್ಕೃತ ನಾಟಕ ಸಂಸ್ಕೃತ ಕಾವ್ಯ ಸಾಹಿತ್ಯ ಕುರಿತವು. ಸರ್ವಜ್ಞ ಕವಿ – ಶ್ರೀಪತಿಯ ಕಥೆಗಳು,

ಭಾಷಣಗಳು ಲೇಖನಗಳು, ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ (ಟಿ.ಎಸ್.ವಿ. ಜತೆ) ಕನ್ನಡ ಕೃತಿಗಳು. ಬಂಕಿಂಚಂದ್ರ ಬಂಗಾಳಿ ಸಾಹಿತ್ಯ ಆಧಾರಿತ ಸ್ವತಂತ್ರ ಕೃತಿಗಳು ಇವುಗಳಲ್ಲಿ ವಚನಭಾರತ ಅದ್ವಿತೀಯ ಜನಪ್ರಿಯ ಕೃತಿ ಆಗಿದೆ. ವಚನ ಭಾರತ ಕೃತಿಯಲ್ಲಿ ಮೂಲಸಂಸ್ಕೃತ ಭಾರತವನ್ನು ಕನ್ನಡಕ್ಕೆ ಇಳಿಸಿರುವ ರೀತಿಯನ್ನು ಅವರೇ ಹೀಗೆ ಹೇಳಿದ್ದಾರೆ.

"ಕನ್ನಡಿಯಲ್ಲಿ ದಿಗ್ಗಜವನ್ನು ತೋರಿಸಿದ ಹಾಗೆ ಮಹಾಭಾರತವನ್ನು ಕಿರಿದಾಗಿ ಆದರೆ ಎಲ್ಲಾ ಭಾಗಗಳೂ ಇರುವಂತೆ ಸಂಗ್ರಹಿಸಿದ್ದೇನೆ ಎಂದು ಕ್ಷೇಮೇಂದ್ರ ಕವಿ ಹೇಳಿದ್ದಾನೆ. ಈ ಕವಿಯ ಸಾಮರ್ಥ್ಯ ನನ್ನಲ್ಲಿಲ್ಲ. ನನ್ನ ಉದ್ದೇಶವೂ ಸರ್ವಾವಯವ ಸಂಗ್ರಹವಲ್ಲ.

"ಕಬ್ಬಿನ ಜಲ್ಲೆಯಲ್ಲಿ ಬೇರು ಗರಿ ಗಿಣ್ಣುಗಳನ್ನು ಕಿತ್ತು ಹಾಕಿ ಸಿಪ್ಪೆ ಹೆರೆದು ಸಿಗುರು ಕಳೆದು ಹೋಳು ಮಾಡಿ ಅದನ್ನು ಬಟ್ಟಲಲ್ಲಿ ತಂದುಕೊಡುವಂಥದ್ದು. ಕಿತ್ತಲೆ ಹಣ್ಣಿನ ಸಿಪ್ಪೆ ಸುಲಿದು ತೊಳೆ ಬಿಡಿಸಿ ನಾರು ಬೀಜಗಳನ್ನು ತೆಗೆದು ಹಾಕಿ ಕುಸುಮವನ್ನು ಒಂದು ಅಡಕವಾದ ಬೆಳ್ಳಿಯ ತಟ್ಟೆಯಲ್ಲಿ ಜೋಡಿಸುವಂಥದ್ದು. ಆದರೆ ಮೂಲದಲ್ಲಿ ಸ್ವಾರಸ್ಯವಿದ್ದ ಕಡೆ ಒಂದು ವಾಕ್ಯವನ್ನು ಬಿಟ್ಟಿಲ್ಲ ಒಂದು ಉಪಮಾನವನ್ನು ಬಿಟ್ಟಿಲ್ಲ. ಇನ್ನು ಕೆಲವು ಕಡೆ ಸಂಗ್ರಹಿಸಿದ್ದೇನೆ. ದೊಡ್ಡ ದೊಡ್ಡ ಪ್ರಕರಣಗಳನ್ನು ಬಿಟ್ಟಿದ್ದೇನೆ. ಒಂದು ಕಡೆಯೂ ಪುನರುಕ್ತಿಯಿಲ್ಲ" ಎಂದಿದ್ದಾರೆ.

ವಚನಭಾರತ ಬರೆದಾಗ ಶಾಸ್ತ್ರಿಗಳು ಮಹಾಭಾರತದ ಬಗ್ಗೆ ಅಪಾರ ಚಿಂತನೆ, ವಿಮರ್ಶೆ ಮಾಡಿದ್ದಾರೆ. ಉದಾಹರಣೆಗೆ ಪೀಠಿಕೆ ಪುಟ ೬೪ದಲ್ಲಿ (ಮೊದಲ ಮುದ್ರಣ) ೧೯೫೦ರಲ್ಲಿ ಒಂದು ಮಾತು ಬರೆದಿದ್ದರು. "ಮಹಾಭಾರತ ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣಿ ಮಡಿಯಿತಲ್ಲ ಅವರೆಲ್ಲರೂ ಒಂದೇ ವಿಧವಾದ ಕರ್ಮವನ್ನು ಆ ೧೮ ದಿನಗಳಲ್ಲಿಯೇ ಫಲ ಕೊಡುವಂಥ ಕರ್ಮವನ್ನು ಮಾಡಿದ್ದರೇ? ಹೌದು ಎನ್ನಲೇಬೇಕು" ಎಂದಿದ್ದರು. ಎರಡನೇ ಮುದ್ರಣದಲ್ಲಿ ಈ ಬಗ್ಗೆ ಟಿಪ್ಪಣಿ ಹೀಗೆ ಬರೆದಿದ್ದಾರೆ.

"ಈ ಮಾತುಗಳನ್ನು ಬರೆದಾಗ ನನ್ನ ಮನಸ್ಸಿನಲ್ಲಿ ದೃಢವಾದ ನಿಶ್ಚಯವೇನೂ ಇರಲಿಲ್ಲ.... ಭೂಕಂಪ ಅಗ್ನಿಪರ್ವತದ ಪ್ರಕೋಪ, ಸಮುದ್ರದ ಹೊರಳಿಕೆ ಮುಂತಾದ ವಿಪತ್ತುಗಳಿಂದ ಅಲ್ಪಕಾಲದಲ್ಲಿ ಬಹು ಪ್ರಾಣಿ ನಾಶವಾಗುವುದೆಂದು ಗೊತ್ತಿತ್ತು. ಇಂದಿಗೂ ಯುದ್ಧದಲ್ಲಿ ಲಕ್ಷಾಂತರ ಜನರು ಸಾಯುತ್ತಾರೆಂದು

ಗೊತ್ತಿತ್ತು ನಾಗಸಾಕಿಯಲ್ಲಿ ಅಣುಬಾಂಬಿನಿಂದ ಕ್ಷಣ ಮಾತ್ರದಲ್ಲಿ ಊರಿಗೆ ಊರೇ ನಾಶವಾಯ್ತಿತು ಎಂಬುದೂ ಗೊತ್ತಿತ್ತು. ಆದರೆ ಇದು ಕರ್ಮ ಪರಿಪಾಕವಾದ ಫಲವಾಗುವುದು ಸಂಭವವೇ? ದೈವಸಂಕಲ್ಪವಾದೀತೇ? ಪ್ರಕೃತಿ ನಿಯಮಕ್ಕೆ ಅನುಸಾರಿಯಾಗಿದ್ದೀತೇ? ಎಂದು ಸಂದೇಹ ಬಾಧಿಸುತ್ತಲೇ ಇತ್ತು. ಆದರೂ ಬರೆದುದನ್ನು ಅಚ್ಚಿಗೆಕೊಟ್ಟೆ. ಪುಸ್ತಕ ಅಚ್ಚಾದ ಒಂದು ತಿಂಗಳ ಮೇಲೆ ಚಳಿಗಾಲ ಬಂತು. ಆಗ ನಮ್ಮ ಮನೆಯ ಮುಂದೆ ಇದ್ದ ಒಂದು ದೊಡ್ಡ ಅರಳಿಯ ಮರದ ಎಲೆಗಳು ಹಣ್ಣಾಗಲು ಮೊದಲಾಗಿ ೧೫ ದಿನಗಳೊಳಗೆ ಎಲ್ಲಾ ಉದುರಿ ಹೋದುವು. ಲಕ್ಷಾಂತರ ಎಲೆಗಳು ಉದುರಿ ಮರವು ಬರಿಯ ಬರಲಾಗಿ ಉಳಿಯಿತು. ಅದನ್ನು ನೋಡಿ ಈ ಎಲೆಗಳಿಗೆ ಅನ್ವಯಿಸುವುದು ಮನುಷ್ಯನಿಗೆ ಅನ್ವಯಿಸಲಾರದೇ ಅನ್ನಿಸಿತು. ಮನುಷ್ಯನು ತನ್ನ ಮಟ್ಟಿಗೆ ತಾನು ದೊಡ್ಡವನು ಎಂದುಕೊಂಡಿರಬಹುದು. ಆದರೆ ಈ ಸನಾತನವಾದ ಅಶ್ವತ್ಥದಲ್ಲಿ ಮನುಷ್ಯರು ಎಲೆಗಿಂತ ಹೆಚ್ಚಿನವರೇನಲ್ಲ. ಜಗತ್ತಿನ ಅಗಾಧವಾದ ಪರಿಣಾಮವನ್ನು ಮನಸ್ಸಿಗೆ ತಂದುಕೊಂಡರೆ ಎಲೆ ಇರಲಿ ಅಣುವಿಗಿಂತ ಅಣೀಯ. ವಸಂತ ಮಾಸ ಬರಲು ವಾರವಲ್ಲ ೧೫ ದಿನಗಳಲ್ಲಿ ಉಗುರು ಊರುವುದಕ್ಕೆ ಅವಕಾಶ ವಿಲ್ಲದಂತೆ ಕೆಂಪು ಚಿಗುರುಗಳಿಂದ ತುಂಬಿ ಹೋಯಿತು. ಆ ವಾರದಲ್ಲಿ ಅಷ್ಟು ಚೈತನ್ಯ ಜನಕಶಕ್ತಿ ಎಲ್ಲಿ ಅಡಗಿತ್ತೋ ಎನ್ನಿಸಿತು.

ವಚನ ಭಾರತ ರಚನೆ ಆದ ರೀತಿ ಸ್ವಾರಸ್ಯಕರವಾದುದು. ಮೂಲವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಅದೇ ತಿಂಗಳಲ್ಲಿ ವಚನಭಾರತವನ್ನು ತಪಸ್ಸಿನಂತೆ ಶ್ರದ್ಧೆಯಿಂದ ಭಕ್ತಿಯಿಂದ ರಚಿಸಿದರು. ದಿನಕ್ಕೆ ೧೬ ಪುಟಗಳ ಷ್ಟಾದರೂ ಬರೆಯುತ್ತಿದ್ದರು. ಒಂದೊಂದು ಪರ್ವ ಮುಗಿದ ನಂತರವೂ ಹಸ್ತ ಪ್ರತಿ ಮೇಲೆ ಸರಸ್ವತಿ ವಿಗ್ರಹವನ್ನಿಟ್ಟು ಬಗೆ ಬಗೆಯ ಹೂಗಳಿಂದ ಪೂಜಿಸಿ ಸಿಹಿ ಪ್ರಸಾದ ಕೊಡುತ್ತಿದ್ದರು. ಅಚ್ಚಿಗೆ ಮಲ್ಯರವರ ಪ್ರೆಸ್ಸಿಗೆ ರಾಜರತ್ನಂ ತಂದು ಕೊಡುತ್ತಿದ್ದರು. ಅಲ್ಲಿ ಕೆಲಸಗಾರರು ಬೀಡಿ ಸೇದದೆ, ಕೈ ಕಾಲು ತೊಳೆದು ಕೊಂಡು ಕೃತಿಗೆ ನಮಸ್ಕರಿಸಿ ಮೊಳೆ ಜೋಡಿಸುತ್ತಿದ್ದರಂತೆ. ಹೀಗೆ ಪುಸ್ತಕ ಒಂದು ಪೂಜೆ ಎಂಬಂತೆ ಮಡಿ ಮಡಿಯಾಗಿ ರಚಿತವಾದ ಕೃತಿ ಇದು.

ಕೃಷ್ಣಶಾಸ್ತ್ರಿಗಳು ತಮ್ಮ ೬೦ನೇ ವರ್ಷದ ಹುಟ್ಟುಹಬ್ಬದ ದಿನ ೧೯೬೦ರಲ್ಲಿ ಬಂಧು ಮಿತ್ರರನ್ನೆಲ್ಲಾ ಭೋಜನಕ್ಕೆ ಆಹ್ವಾನಿಸಿ ಅಂದೇ ಬಂದಿದ್ದ ವಚನ ಭಾರತವನ್ನು ಎಲ್ಲರಿಗೂ ಉಡುಗೊರೆಯಾಗಿ ಕೊಟ್ಟು ಆನಂದಿಸಿದರು.

ವಚನಭಾರತವನ್ನು ಓದುತ್ತಿದ್ದಾಗ ಮೊಮ್ಮಕ್ಕಳು ಅರ್ಥವಾಗದು ಎಂದಾಗ ಅವರಿಗಾಗಿ ರಚಿಸಿದ್ದು **ನಿರ್ಮಲಭಾರತಿ** ಮಕ್ಕಳ ಭಾರತಕಥೆಯ ಪುಸ್ತಕ. ಮಕ್ಕಳಿಂದ ದೊಡ್ಡವರವರೆಗೆ ಎಲ್ಲರಿಗೂ ಉಪಯುಕ್ತ ಗ್ರಂಥ ಇದು. ಅವರೊಮ್ಮೆ ಹೇಳಿದರು; ಮನೆ ಮಂದಿಯೆಲ್ಲ ಕುಳಿತು ಓದುವ ಗ್ರಂಥವೇ ಶ್ರೇಷ್ಠ ಗ್ರಂಥ; ವಚನಭಾರತ ಆ ಸಾಲಿನ ಪುಸ್ತಕವಾಗಿದೆ.

ಕಥಾಮೃತ ಇನ್ನೊಂದು ಕಥಾಗ್ರಂಥ. ಚಂದಮಾಮ ಬಾಲಮಿತ್ರ ಓದಿ ಆನಂದಿಸಿದ ಮಕ್ಕಳಿಂದ ಹಿಡಿದು ಹಿರಿಯರಿಗೆ ನೀತಿಪಾಠ ಹೇಳಿದ ಕಥೆಗಳ ವರೆಗೆ ನಾನಾ ಕಥೆಗಳಿವೆ. ಕಥಾಮೃತ, ವಚನಭಾರತಗಳಿಗೆ ಬರೆದ ವಿದ್ವತ್ಪೂರ್ಣ ವಿಸ್ತಾರವಾದ ಪೀಠಿಕೆಗಳು ಪದೇ ಪದೇ ಓದಿ ಮನನ ಮಾಡುವಂಥ ಪೀಠಿಕೆಗಳಾಗಿವೆ.

ಬಂಕಿಮಚಂದ್ರ ಗ್ರಂಥ ರಚನೆ ಬಗ್ಗೆ ಶಾಸ್ತ್ರಿಗಳು ಹೇಳಿದ ಮಾತನ್ನು ಗಮನಿಸಬೇಕು ಬಂಕಿಮರ ಕೃತಿ ಅವರಿಗೆ ಪರಿಚಯವಾದ ಸಂದರ್ಭವೇ ಕುತೂಹಲಕಾರಿಯಾಗಿದೆ. ಕೃಷ್ಣಶಾಸ್ತ್ರಿಗಳ ಪುಸ್ತಕಪ್ರೇಮವೂ ಇದರಲ್ಲಿ ಅಡಗಿದೆ.

ಕೃಷ್ಣಶಾಸ್ತ್ರಿಗಳು ಬಂಕಿಮಚಂದ್ರ ಗ್ರಂಥದಲ್ಲಿ ಬರೆದ ಗ್ರಂಥಕರ್ತನ ಬಿನ್ನಹದಲ್ಲಿ ಹೇಳಿದ ಮಾತುಗಳಿವು:

"ಈಗ್ಗೆ ಸುಮಾರು ೬೦ ವರ್ಷಗಳ ಕೆಳಗೆ ನಾನು ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಒಂದು ದಿನ ನನಗೆ ಎರಡು ತಿಂಗಳ ವಿದ್ಯಾರ್ಥಿ ವೇತನವಾಗಿ ಎಂಟು ರೂಪಾಯಿ ಬಂತು. ಆಗ ಇನ್ನೂ ಒಂದು ರೂಪಾಯಿಗೆ ನೋಟಾಗಲಿ ನಿಕ್ಕಲ್ ಆಗಲಿ ಬಂದಿರಲಿಲ್ಲ. ಆದ್ದರಿಂದ ಬೆಳ್ಳಿಯ ಎರಡು ಗಟ್ಟಿ ರೂಪಾಯಿಗಳು ನನ್ನ ಕೈ ತುಂಬ ಇದ್ದವು. ಬಡತನದಲ್ಲಿ ಬೆಳೆದಿದ್ದ ನಾನು ಅಷ್ಟೊಂದು ಹಣವನ್ನು ನನ್ನದಾಗಿ ಅಲ್ಲಿಯವರೆಗೆ ನೋಡಿರಲಿಲ್ಲ. ಆದ್ದರಿಂದ ಅದನ್ನೇನು ಮಾಡಬೇಕೆಂದು ಗಹನವಾದ ಸಮಸ್ಯೆಯಾಯಿತು. [ಈವತ್ತು ಎರಡು ರೂಪಾಯಿ ಇದ್ದರೆ ಇದನ್ನು ಯಾತಕ್ಕೂ ಬಳಸಲಾಗದಲ್ಲಾ ಎಂಬ ಸಮಸ್ಯೆ ನಮಗೆ]

ದುರ್ವ್ಯಯ ಮಾಡಬಾರದೆಂಬುದೇನೋ ಸಂಪ್ರದಾಯ ಸಂಸ್ಕಾರಗಳಿಂದ ಮನಸ್ಸಿನಲ್ಲಿ ರೂಢಮೂಲವಾಗಿತ್ತು. ಆದರೆ ಸದ್ವ್ಯಯ ಮಾಡುವುದು ಹೇಗೆ?

ಅದಕ್ಕೆ ತಿಂಡಿಕೊಂಡು ತಿಂದುಬಿಡಬೇಕೆಂಬ ಯೋಚನೆ ಬರಲಿಲ್ಲ. ಅಷ್ಟೊಂದು ಹಣವನ್ನು ನಿಮಿಷಾರ್ಧದಲ್ಲಿ ವೆಚ್ಚ ಮಾಡಿಬಿಡಬಹುದಾದ ಇಂದ್ರ ಭವನ ಚಂದ್ರಭವನಗಳು ಆಗ ಇನ್ನೂ ಹುಟ್ಟಿರಲಿಲ್ಲ. ಕೊನೆಗೆ ಕಾಸಿಗೆ ಒಂದು ದೋಸೆ, ಕಾಸಿಗೆ ಒಂದು ವಡೆ, ಚಕ್ಕುಲಿ ಮಾರುವಂಥ ಎಲ್ಲೋ ಒಂದೆರಡು ಹೋಟೆಲುಗಳು ಮಾತ್ರ ಇದ್ದುವು. ನಾನು ಆ ಎರಡು ರೂಪಾಯಿ ಹಿಡಿದು ಆ ಕಾಲದಲ್ಲಿ ದೊಡ್ಡ ಷಾಪು ಜಿ.ಟಿ.ಎ.ಗೆ ಹೋದೆ. ಅದರೊಳಕ್ಕೆ ಹೋಗಿ ಸುತ್ತಲೂ ನೋಡಿದೆ. ನನ್ನ ಕಣ್ಣಿಗೆ ಪ್ರಧಾನವಾಗಿ ಕಂಡದ್ದು ಪುಸ್ತಕಗಳು, ಅದರಲ್ಲಿ ಆನಂದ ಮಠ ಕಂಡೆ. ಅದರಿಂದ ಏನೋ ಆನಂದವಾಗುತ್ತದೆ ಎಂಬುದು ನನ್ನ ಭಾವನೆ. ಸುಮಾರು ೧೧/೨ ರೂ ಕೊಟ್ಟು ಕೊಂಡುಕೊಂಡೆ. ಅದೇ ನನ್ನ ಹಣದಿಂದ ನಾನು ಕೊಂಡುಕೊಂಡ ಮೊದಲನೆಯ ಪುಸ್ತಕ. ಏನೋ ಜಯವನ್ನು ಸಾಧಿಸಿದವನಂತೆ ಮನೆಗೆ ಬಂದು ಅಂದೇ ಆದಷ್ಟೂ ಓದಿದೆ.

ಬಂಕಿಮಚಂದ್ರರ ಬಗ್ಗೆ ಬರೆದ ಪುಸ್ತಕದ ಮೊದಲ ಪುಟವನ್ನು ಓದುತ್ತಿದ್ದಂತೆಯೆ ನನಗೆ ಅದರ ಶೈಲಿ ಆಕರ್ಷಕವಾಗಿ ನವೀನವಾಗಿ ಕಂಡಿತು. ಹೀಗೆ ಬರೆದರೆ ನಾವೆಲ್ಲು ಎಂದುಕೊಂಡೆ. ಬಂಕಿಂಚಂದ್ರರ ಸಾಹಿತ್ಯಕ್ಕೆ ನನಗೆ ಪ್ರವೇಶವಾದದ್ದು ಹೀಗೆ.

ನಾನು ಉಪಾಧ್ಯಾಯನಾದಾಗ ವಿಷವೃಕ್ಷ, ದೇವೀ ಚೌಧುರಾಣಿ, ಆನಂದ ಮಠ ಇತ್ಯಾದಿ ಪಾಠ ಹೇಳಬೇಕಾಯಿತು. ಪಾಠ ಹೇಳುವಾಗ ಅವುಗಳ ವಿವರವಾದ ಆಳವಾದ ವ್ಯಾಸಂಗವಾಯಿತು. ಅವುಗಳ ಮೂಲವನ್ನು ನೋಡ ಬೇಕೆಂದು ಬಂಗಾಳಿ ಗ್ರಂಥಗಳನ್ನು ತರಿಸಿ ಓದಬೇಕಾಯಿತು. ಬಂಗಾಳಿ ಸಾಹಿತ್ಯ ಚರಿತ್ರೆಯನ್ನು ಓದಬೇಕಾಯಿತು. ಬಂಕಿಂಚಂದ್ರರ ಅಪ್ರಕಾಶಿತ ಎಂದರೆ ಕನ್ನಡಕ್ಕೆ ಭಾಷಾಂತರವಾಗದ ಗ್ರಂಥಗಳನ್ನು ನೋಡಬೇಕಾಗಿ ಬಂತು. ಇವುಗಳ ವ್ಯಾಸಂಗ ಹೀಗೆ, ಆಗ ಈಗ ಉಪಾಧ್ಯಾಯ ವೃತ್ತಿಯಿಂದ ನಿವೃತ್ತನಾಗುವವರೆಗೆ ನಡೆಯುತ್ತಲೇ ಇತ್ತು.

ಬಂಕಿಮಚಂದ್ರರ ಮೂಲ ಗ್ರಂಥಗಳನ್ನು ಬಂಗಾಳಿಯಲ್ಲೇ ಓದಿ ಚರ್ವಣ ಮಾಡಿ, ಬಂಕಿಮನ ಜೀವನ ಚರಿತ್ರೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನನಗೆ

ಸೂಕ್ತ ಕಂಡ ಅಭಿಪ್ರಾಯಗಳನ್ನು ನನ್ನದೇ ರೀತಿಯಲ್ಲಿ ಬರೆದಿದ್ದೇನೆ. ಇಲ್ಲಿನ ವಿಮರ್ಶಾಭಾಗವು ಬಹುಮಟ್ಟಿಗೆ ನನ್ನದೇ.

ಜಿ.ಪಿ. ರಾಜರತ್ನಂ ಬೌದ್ಧಧರ್ಮವನ್ನು ಚೆನ್ನಾಗಿ ಮೂಲದಲ್ಲಿ ತಿಳಿಯಲು ಜೈನಧರ್ಮವನ್ನು ತಮ್ಮ ವಾದ ಸಮರ್ಥನೆಗೆ ಬಳಸಿಕೊಳ್ಳಲು ಪಾಳಿ–ಪ್ರಾಕೃತ ಭಾಷೆಗಳನ್ನು ಕಲಿತರು. ಹಾಗೆಯೇ ಗ್ರೀಕ್‌ಅನ್ನು ರಾಘವಾಚಾರ್, ಬಿಎಂಶ್ರೀ ಕಲಿತರು. ಬಂಗಾಳಿಯನ್ನು ವಿ.ಸೀ. ವೆಂಕಟಾಚಾರ್, ವೆಂಕಣ್ಣಯ್ಯ, ವ್ಯಾಸರಾವ್ ಮೊದಲಾದವರು ಧನದಾಹಿಗಳಾಗಿ ಅಲ್ಲ ಜ್ಞಾನದಾಹಿಗಳಾಗಿ ಕಲಿತರು. ಒಬ್ಬ ಲೇಖಕನನ್ನು ಅವನ ಕೃತಿಗಳನ್ನು ಮೂಲದ ಭಾಷೆಯಲ್ಲಿ ಓದಲು ಆ ಭಾಷೆಯನ್ನು ಕಲಿಯಬೇಕು ಎಂಬ ಛಲ ಆಸೆ ಆದರ್ಶ ಕೃಷ್ಣಶಾಸ್ತ್ರಿಗಳಿಗಿದ್ದಂತೆ ಈಗಿನ ಅಧ್ಯಾಪಕರಲ್ಲಿ ಯಾರಿಗಿದೆ? ನಮ್ಮ ವಿದ್ಯಾಭ್ಯಾಸ ಮಟ್ಟಕ್ಕೆ ಇದೊಂದು ಅಳತೆಗೋಲು.

ಎ.ಆರ್. ಕೃಷ್ಣಶಾಸ್ತ್ರಿಗಳು ಎಂದೊಡನೆ ನನಗೆ ನೆನಪಾಗುವುದು. ಗುಂಡಿ ನೇಟಿನಂಥ ಕನ್ನಡದ ಸಿಡಿಲುನುಡಿಗಳು, ಸಿಂಹಘರ್ಜನೆ, ರಣಘೋಷ ನಿರ್ಭೀತರಾಗಿ, ಎನ್ನ ನುಡಿ ಟಾಠಡಾಢಣ ಎಂಬ ಭೀಮ ವಾಕ್ಕು, ವೀರಯೋಧನ ವಾಣಿ, ಗಂಡುಗಲಿ ಕನ್ನಡಿಗನ ದಿಟ್ಟಗಟ್ಟಿ ನುಡಿಗಳು. ಒಂದಲ್ಲ ಎರಡಲ್ಲ ನೂರಾರು. ಇದಕ್ಕೆ ನಿದರ್ಶನವಾಗಿ ೧೯೪೧ರಲ್ಲಿ ಹೈದ್ರಾಬಾದಿನಲ್ಲಿ ಸೇರಿದ ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದ ಅಣಿ ಮುತ್ತುಗಳನ್ನು ಗಮನಿಸಬಹುದು.

"ಮೈಸೂರಿನವರು ಧಾರವಾಡದವರು, ಮಂಗಳೂರಿನವರು ಹೈದರಾಬಾದಿ ನವರು ಕೊಡಗಿನವರು ಎನ್ನುವುದಕ್ಕಿಂತ ಕನ್ನಡಿಗರು ಎನ್ನುವುದು ಶ್ರೇಯಸ್ಸು.

ಮರಾಠಿಗರು ತೆಲುಗರು ತಮಿಳರು ಎನ್ನುವುದಕ್ಕಿಂತ ಭಾರತೀಯರು ಎನ್ನುವುದು ಮತ್ತೂ ಶ್ರೇಯಸ್ಸು.

ಭಾರತೀಯರು, ಇಂಗ್ಲಿಷರು, ಅಮೆರಿಕನ್ನರು, ಆಫ್ರಿಕನ್ನರು ಎನ್ನುವುದಕ್ಕಿಂತ ನಾವೆಲ್ಲ ಈ ಭೂಮಿತಾಯ ಮಕ್ಕಳು ಎನ್ನುವುದು ವಿಶ್ವಭಾವನೆ ಸರ್ವೋತ್ತಮ"

ಹೀಗೆಂದು ಪ್ರತಿಯೊಬ್ಬ ವ್ಯಕ್ತಿಯೂ ವಿಶ್ವಪ್ರಜೆಯಾಗಿ ಕೆಲಸ ಮಾಡಲು ಆಗುತ್ತದೆಯೇ?

ಪ್ರಪಂಚವನ್ನು ಉದ್ಧಾರ ಮಾಡುತ್ತೇನೆಂದು ಹೊರಡುವುದಕ್ಕಿಂತ ಹೆಚ್ಚಿನ ಅವಿವೇಕ ಮತ್ತೊಂದಿಲ್ಲ.

ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕು. ಆಮೇಲೆ ತನ್ನವರು ತನ್ನ ನಾಡು, ತನ್ನ ಲೋಕ. ಉದ್ಧಾರಕಾರ್ಯ ದಾನದಂತೆ ತನ್ನಿಂದ ಆರಂಭವಾಗಬೇಕು. ಆದರೆ ಅದು ತನ್ನಲ್ಲಿಯೇ ನಿಲ್ಲಬಾರದು. ತಾನು ವಿದ್ಯಾವಂತನಾದರೆ ಮತ್ತೊಬ್ಬನಿಗೆ ಹೇಳಿಕೊಡಬಹುದು ಹಾಗಲ್ಲದೆ ದೇಶವನ್ನು ಉದ್ಧಾರ ಮಾಡುತ್ತೇನೆ ಎಂದು ಯಾರಾದರೂ ತನ್ನನ್ನೂ ತನ್ನ ತಾಯಿ ತಂದೆಗಳನ್ನೂ ಹೆಂಡತಿ ಮಕ್ಕಳನ್ನು ಅಲಕ್ಷ್ಯ ಮಾಡಿದರೆ ಅದು ದೇಶೋದ್ಧಾರವಲ್ಲ ದೇಶ ದ್ರೋಹ, ಊರಿನ ಅಭಿಮಾನದಿಂದ ಊರನ್ನು ಬೆಳಸಿಕೊಂಡು ಬಂದರೆ ಅದರಿಂದ ಒಟ್ಟು ದೇಶಕ್ಕೆ ಹಾನಿಯಿಲ್ಲ. ಕನ್ನಡಿಗರು ತಮ್ಮ ನಾಡಿನ ಅಭಿಮಾನ ದಿಂದ ಅದನ್ನು ಪುಷ್ಟಿಗೊಳಿಸಬೇಕೆಂದರೆ ಅದು ಸ್ವಾಭಾವಿಕವೂ ನ್ಯಾಯವೂ ಆಗಿರುವುದು ಅಲ್ಲದೆ ಒಟ್ಟು ದೇಶಕ್ಕೂ ಕ್ಷೇಮ.

"ನಮ್ಮ ದೇಶದಲ್ಲಿ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿ ಹೋಗುವುದಾದರೆ ಅದು ಬೌದ್ಧಧರ್ಮದಂತೆ ಹೊರದೇಶಗಳಲ್ಲಿ ಬದುಕಿರುತ್ತದೆ ಬಾಳುತ್ತಿರುತ್ತದೆ. ಆದರೆ ಕನ್ನಡ?

ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣಭಾಗದಲ್ಲಿ ಒಂದು ಅಂಗ್ಯೆ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೀವು ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು.

ಅದು ಹೋದರೆ ಹೋಗಲಿ ಎನ್ನುವುದಾಗಿದ್ದರೆ ಈ ಕಡೆ ಬಂಗಾಳಕೊಲ್ಲಿ ಇದೆ. ಆ ಕಡೆ ಅರಬ್ಬಿ ಸಮುದ್ರ ಇದೆ. ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ."

* * *

"ಮಾತೃಭಾಷೆ ಮೂಲಕ ಕಲಿತಿದ್ದೇ ಮೈ ಹತ್ತುವುದು. ಮಾತೃಭಾಷೆಯಲ್ಲಿ ಬರೆದಿದ್ದೆ ನಿಲ್ಲುವುದು. ಪರಭಾಷೆಯಲ್ಲಿ ಯಾರು ಎಷ್ಟೇ ಪಂಡಿತರಾಗಿ ಏನೇ ಬರೆಯಲಿ ಅದು ಆ ಸಾಹಿತ್ಯಕ್ಕೆ ಸೇರಿ ಗಣ್ಯವಾದ ಸ್ಥಾನ ಪಡೆಯುತ್ತದೆಂಬುದು ಸಂದೇಹದ ಮಾತುಗಳು. ಕೃಷ್ಣಶಾಸ್ತ್ರಿಗಳು ಈ ಮಾತನ್ನು ಹೇಳುವ

ಸಂದರ್ಭದಲ್ಲಿ ನನಗೆ ಶ್ರೀಕಂಠೇಶಗೌಡರು ಷೇಕ್ಸ್‌ಪಿಯರ್‌ನ ಮ್ಯಾಕ್ಬೆತನ್ನು ಕನ್ನಡಕ್ಕೆ ಅನುವಾದಿಸಿದ ಸಂದರ್ಭದಲ್ಲಿ ಹೇಳಿದ ಮಾತು ನೆನಪಾಗುತ್ತದೆ. "ನಾನು ಎಷ್ಟೇ ಚೆನ್ನಾಗಿ ಇಂಗ್ಲಿಷಿನಲ್ಲಿ ಬರೆದರೂ ಷೇಕ್ಸ್‌ಪಿಯರನನ್ನು ಮೀರಿಸಲಾರೆ. ಷೇಕ್ಸ್‌ಪಿಯರ್ ಎಷ್ಟೇ ಚೆನ್ನಾಗಿ ಕನ್ನಡದಲ್ಲಿ ಬರೆದರೂ ನನ್ನನ್ನು ಮೀರಿಸಲಾರ." ಈ ಮಾತು ಮಾತೃಭಾಷೆ ಮಹತ್ವವನ್ನು ಚೆನ್ನಾಗಿ ತಿಳಿಸುತ್ತದೆ.

* * *

ಎ.ಆರ್.ಕೃ. ಹೇಳುತ್ತಾರೆ. ರವೀಂದ್ರನಾಥ ಠಾಕೂರರು ಇಂಗ್ಲಿಷನ್ನು ಇಂಗ್ಲಿಷರಿಗಿಂತ ಚೆನ್ನಾಗಿ ಬರೆಯಬಲ್ಲ ಶಕ್ತಿಯನ್ನು ಗಳಿಸಿದರು. ನೊಬೆಲ್ ಬಹುಮಾನ ಬಂತು. ನಿಜ ಆದರೆ ಅವರ ಕಾವ್ಯಗಳು ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ಸ್ಥಾಯಿಯಾದ ಸ್ಥಾನ ಪಡೆದಿದೆಯೇ ಮತ್ತು ಇಂಥವರು ಭರತ ಖಂಡಕ್ಕೆಲ್ಲಾ ಬೆರಳು ಮಡಿಸುವಷ್ಟು ಜನ ಕೂಡ ಸಿಗಲಾರರು ಆದ್ದರಿಂದ ಎಲ್ಲರೂ ಮೊದಲು ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್ ಆಗಬೇಕು.

ಜಾತಿ ಮತ ವೇಷಭೂಷಣ ಊಟ ತಿಂಡಿ ಸತ್ಕಾರ ಮುಂತಾದವುಗಳೇ ಕನ್ನಡಿಗರು ತಮ್ಮ ಕನ್ನಡವನ್ನೂ ಕನ್ನಡತನವನ್ನೂ ಉಳಿಸಿಕೊಂಡರೆ ಅದೇ ಸಾಕಾಗಿದೆ. ನಾವು ಮೊದಲು ಕನ್ನಡಿಗರು ಅನಂತರ ಭಾರತೀಯರು, ಎಂದರೆ ಅದು ಸ್ವಾಭಾವಿಕ. ಕಾರ್ಯಸಾಧ್ಯ ಕ್ಷೇಮಕರ. ಅವಶ್ಯಕರ್ತವ್ಯ ಆದ್ದರಿಂದ ಮಾತೃ ಭಾಷೆಗೆ ಮೊದಲ ಸ್ಥಾನ; ದೇಶಭಾಷೆಗೆ ಎರಡನೇ ಸ್ಥಾನ, ಮೂರನೆಯದು ಇಂಗ್ಲಿಷ್.

ಎಲ್ಲಿ ಮಾತೃಭಾಷೆಯೇ ದೇಶಭಾಷೆ ಆಗುತ್ತದೋ ಅಲ್ಲಿ ದಾರಿ ಸುಗಮ ವಾಯಿತು. ಸೋದರಳಿಯನೇ ಸ್ವಂತ ಅಳಿಯನಾದಂತೆ ಆಯಿತು ನೆಂಟೂ ಉಳಿಯಿತು ಗಂಟೂ ಉಳಿಯಿತು. ಇಲ್ಲದಿದ್ದರೆ ಹೊರಗಿನಿಂದ ಒಬ್ಬ ಹುಡುಗನನ್ನು ಹಿಡಿದು ತಂದು ವರಪೂಜೆ ಮಾಡಿ ಮಗಳನ್ನು ಕೊಟ್ಟು, ಬಳುವಳಿಕೊಟ್ಟು ಉಪಚಾರಮಾಡಿ ಒಲಿಸಿಕೊಂಡಂತಾಯಿತು. ಮಗನ ಜತೆಗೆ ಅವನೂ ಒಬ್ಬ–ಮಗಳ ಗಂಡ ಮಿಕ್ಕ ಭಾಷೆಗಳು ಮನೆಗೆ ಬರುವ ನೆಂಟರು ಇಷ್ಟರ ಹಾಗೆ ಆದರೆ ಅವರೆಲ್ಲರನ್ನೂ ಮಗನಂತೆ ಅಳಿಯನಂತೆ ಕಾಣಲಾಗುವುದಿಲ್ಲ. ಆದ್ದರಿಂದ ನಮ್ಮದೇ ವಿದ್ಯಾವಂತನೆನ್ನಿಸಿಕೊಳ್ಳಬೇಕಾದವನು

ತನ್ನ ಜನಕ್ಕೆ ತಿಳಿವಳಿಕೆ ಕೊಡಬೇಕಾದರೆ ನೆಲಸಿದ ಕಡೆ ಬದುಕಿ ಬಾಳಬೇಕಾದರೆ ಈ ಎರಡು ಭಾಷೆಗಳನ್ನಾದರೂ ಕಲಿಯಬೇಕು.

ಸಂಸ್ಕೃತದಿಂದ ಸಾರವತ್ತಾದುದನ್ನು ಕೃತಜ್ಞತೆಯಿಂದ ತೆಗೆದುಕೊಳ್ಳೋಣ ಕನ್ನಡಿಸಿಕೊಳ್ಳೋಣ, ಬರಿಯ ಅದರ ಗಾಂಭೀರ್ಯಕ್ಕೆ ಮರುಳಾಗದಿರೋಣ. ಭಾಷೆಗಿಂತಲೂ ಭಾವ ಮುಖ್ಯ.

ಭಾಷೆ ಗಾಡಿಯಿದ್ದ ಹಾಗೆ. ಗೊಬ್ಬರದ ಗಾಡಿಯಲ್ಲಿ. ಚಿನ್ನದ ಗಟ್ಟಿಗಳನ್ನು ಹೇರಿಕೊಂಡು ಬಂದರೆ ಅವಕ್ಕೆ ಬೆಲೆ ಕಡಿಮೆ ಆಗುತ್ತದೆಯೇ? ಗಂಭೀರ ಭಾಷೆ, ಗಂಡು ಭಾಷೆ ಎಂದು ಅನ್ಯಭಾಷೆಗಳಿಗೆ ಸೋತು ಬೀಡೋಣವೇ? ಉಹುಂ ಅದರ ಬದಲು ಭಾಷಾಂತರ ಮಾಡಿಕೊಂಡರೆ ಸಿಪ್ಪೆ, ಬಣ್ಣ, ಸ್ವಲ್ಪ ಹಣ್ಣು ಹೋದರೂ ತಿರುಳು ಸಿಗುತ್ತದೆ.

ಅನ್ಯಭಾಷೆಗಳಿಗೆ ಯಾವ ಸ್ಥಾನಮಾನ ಕೊಡಬೇಕು ಎಷ್ಟರಮಟ್ಟಿಗೆ ಅವುಗಳನ್ನು ಬಳಸಿಕೊಳ್ಳಬೇಕು ಎಂಬುದನ್ನು ಮಾರ್ಮಿಕವಾಗಿ ಕೃಷ್ಣಶಾಸ್ತ್ರಿಗಳು ಹೀಗೆ ಹೇಳಿದ್ದಾರೆ.

"ನಾವು ಮನುಷ್ಯರು ಮನುಷ್ಯತ್ವವನ್ನು ಉಳಿಸಿಕೊಳ್ಳೋಣ. ಉತ್ತಮ ಪಡಿಸಿಕೊಳ್ಳೋಣ ಎಂದರೆ ಮಿಕ್ಕ ಪ್ರಾಣಿಗಳ ಮೇಲೆ ದ್ವೇಷವೆಂದಲ್ಲ ಹಸುಗಳನ್ನು ಸಾಕಿಕೊಳ್ಳೋಣ ಹಾಲು ಕರೆದುಕೊಳ್ಳೋಣ. ಕುರಿಗಳನ್ನು ಸಾಕೋಣ ಕಂಬಳಿಗಳನ್ನು ಮಾಡಿಕೊಳ್ಳೋಣ. ನಮ್ಮ ಕೆಲಸಕ್ಕೆ ಉಪಯೋಗ ವಾಗುವುದಾದರೆ ಬೆಕ್ಕು ಮುಂತಾದ ಪ್ರಾಣಿಗಳನ್ನು ಸಾಕಿಕೊಳ್ಳೋಣ. ಆದರೆ ಅವು ಎಲ್ಲಿರಬೇಕೊ ಅಲ್ಲಿರಲಿ, ಅವನ್ನು ಊಟದ ಮನೆಗೆ ಬಿಟ್ಟರೆ ನಾವು ತಿನ್ನುವ ಅನ್ನವೂ ನಮ್ಮ ಮಕ್ಕಳು ಕುಡಿಯುವ ಹಾಲೂ ಅವುಗಳ ಪಾಲಾಗುತ್ತವೆ."

ಈ ಮಾತಿನ ಪ್ರಸ್ತಾಪ ಬಂದಾಗ ಒಬ್ಬ ಅಧ್ಯಾಪಕರು ಹಸು ಎಂದರೆ ಸಂಸ್ಕೃತಿ, ಕುರಿ ಎಂದರೆ ಇಂಗ್ಲಿಷ್, ಬೆಕ್ಕು ಎಂದರೆ ಇತರ ಪಾಶ್ಚಾತ್ಯ ಭಾಷೆಗಳು ಅಂತ ತಿಳಿಯಬೇಕು ಎಂದಿದ್ದರು.

"ನನ್ನ ಕನ್ನಡದ ಅಭಿಮಾನವನ್ನು ಕನ್ನಡದ ಮೇಲಿನ ಮಮತೆಯನ್ನು ಹಿಂದಿಯ ದ್ವೇಷ ಸಂಸ್ಕೃತದ ವೈರ ಎನ್ನಬಹುದು (ಯಾರಾದರೂ) ನನಗೂ ಅಲ್ಪಸ್ವಲ್ಪ ಹಿಂದಿಯ ಪರಿಚಯವಿದೆ. ಅದರ ವಿಚಾರವಾಗಿ ಬರೆದಿರುವ ಲೇಖನ

ಗ್ರಂಥಗಳ ಪರಿಚಯವಿದೆ. ಅದಕ್ಕಿಂತ ಹೆಚ್ಚಾಗಿ ಸಂಸ್ಕೃತದ ಪರಿಚಯವಿದೆ. ನಾನು ಬರೆದಿರುವ ಲೇಖನಗಳೂ ಗ್ರಂಥಗಳೂ ಕನ್ನಡಕ್ಕಿಂತ ಹೆಚ್ಚಾಗಿ ಸಂಸ್ಕೃತ ವಿಷಯಗಳಿಗೆ ಸಂಬಂಧಪಟ್ಟಿದ್ದಾಗಿದೆ.

ಆದರೂ ಕನ್ನಡಿಗರ ಅಭ್ಯುದಯ ದೃಷ್ಟಿಯಿಂದ ಕನ್ನಡಕ್ಕೆ ಪ್ರಥಮ ಸ್ಥಾನ ಬೇಕೆಂದು ಹೇಳುತ್ತೇನೆ. ಪೋಷಣೆಬೇಕೆಂದು ಹೇಳುತ್ತೇನೆ." ಈ ಮಾತುಗಳನ್ನು ಹೇಳಿದ ಶಾಸ್ತ್ರಿಗಳು ಅಚ್ಚಗನ್ನಡಿಗರೆಂದು ನಾವು ನೆನಪಿಡಬೇಕು.

ಕನ್ನಡ ಓದು ಬರಹ ಮಾತು ಕಲಿತು ಕನ್ನಡಿಗರಾಗಬೇಕು. ಅದು ಮುಖ್ಯ ಎಂಬುದನ್ನು ತುಂಬಾ ಸೊಗಸಾಗಿ ಶಾಸ್ತ್ರಿಗಳು ಹೇಳಿದ್ದಾರೆ. ಕನ್ನಡ ಪ್ರೋತ್ಸಾಹ, ಪ್ರಶಸ್ತಿ ಬಹುಮಾನಗಳಿಂದ ಉದ್ಧಾರವಾಗದು ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಂತ ಪ್ರಶಸ್ತಿ ಪ್ರೋತ್ಸಾಹ, ಬೇಕಿಲ್ಲ ಎಂದಲ್ಲ ಆದರೆ ಅದಕ್ಕಿಂತ ಪ್ರಾಶಸ್ತ್ಯ ಆದ್ಯತೆ ಕೊಡಬೇಕಾದ್ದು ಕನ್ನಡ ಕಲಿಕೆಗೆ ಕನ್ನಡ ವಿದ್ಯಾಭ್ಯಾಸಕ್ಕೆ ಎಂಬುದನ್ನು ಒತ್ತಿ ಒತ್ತಿ ಹೇಳಿದ್ದಾರೆ.

"ಕನ್ನಡಕ್ಕೆ ಕೊಡುವ 'ಪ್ರೋತ್ಸಾಹ' ತುತ್ತು ಭಿಕ್ಷವೆನ್ನುವುದು ಆರೋಗ್ಯ ಸೂಚಕವಲ್ಲ. ಅದು ಅಜೀರ್ಣವಿರುವ ರೋಗಿಗೆ ಉತ್ತೇಜಕವಾದ ಔಷಧಿಯನ್ನು ಕೊಟ್ಟು ಹಸಿವುಂಟು ಮಾಡುವ ಹಾಗೆ. ಅದು ಕೃತಕ ಸ್ಪರ್ಧೆಗಳನ್ನು ಏರ್ಪಡಿಸಿ ಪದಕಗಳನ್ನು ಪಾತ್ರೆಗಳನ್ನೂ ಕೊಡುವುದು. ಹೀಗೆಯೇ ಗಿಡ ಚೆನ್ನಾಗಿರಲೆಂದು ಅದರ ಒಂದೆರಡು ರೆಂಬೆಗೆ ಸುನೇರಿಯನ್ನು ಅಂಟಿಸಿ ದೀಪಗಳನ್ನು ತಗುಲಿ ಹಾಕಿದ ಹಾಗೆ.

ಗಿಡವೇ ಹೂ ಬಿಡಬೇಕು. ಜೀವದಿಂದ ಕಳಕಳಿಸಬೇಕು ಆಗ ಒಂದೊಂದು ಎಲೆಯೂ ಹೂವೂ ಸುನೇರಿಗಿಂತ ದೀಪಗಳಿಗಿಂತ ಸಾವಿರ ಪಾಲು ಸುಂದರ ವಾಗಿರುತ್ತದೆ. ಸಜೀವವಾಗಿರುತ್ತದೆ. ಸ್ವಾಭಾವಿಕವಾದ ಆರೋಗ್ಯ, ದಾರ್ಢ್ಯ, ಸೌಂದರ್ಯ ಬರಬೇಕಾದರೆ ಒಂದೂವರೆ ಕೋಟಿ ಕನ್ನಡಿಗರಲ್ಲಿ (ಆಗ) ಒಂದು ಕೋಟಿ ಜನವಾದರೂ ಅಕ್ಷರಸ್ಥರಾಗಿ ಐವತ್ತು ಲಕ್ಷ ಜನವಾದರೂ ವಿದ್ಯಾವಂತರಾಗಿ ಐದು ಲಕ್ಷ ಜನರಾದರೂ ದುಡ್ಡುಕೊಟ್ಟು ಪುಸ್ತಕ ಪತ್ರಿಕೆಗಳನ್ನು ಕೊಂಡು ಓದುವಂತಾಗಬೇಕು"

ಸಾಮಾನ್ಯವಾಗಿ ನಮ್ಮಲ್ಲಿ ಪದ್ಯ ಬರೆದರೆ ಕವಿ, ಗದ್ಯ ಬರೆದರೆ ಸಾಹಿತಿ ಸಂಶೋಧನೆ ಮಾಡಿದರೆ ವಿದ್ವಾಂಸ, ನಾಟಕ ಬರೆದಾಡಿದರೆ ಕಲಾವಿದ ಎಂದು

ಭಾವಿಸುವವರು ಇದ್ದಾರೆ. ಗದ್ಯ ಬರೆವ ಸಾಹಿತಿಯಲ್ಲಿ ಕವಿ ಇರುತ್ತಾನೆ ಪದ್ಯ ಬರೆಯುವ ಕವಿಯಲ್ಲಿ ಸಾಹಿತಿ, ಸಂಶೋಧಕ ಇರುತ್ತಾನೆ ಎಂಬುದು ತಿಳಿದ ಮಾತು. ವಿ.ಸೀ., ಕುವೆಂಪು, ಬೇಂದ್ರೆ, ಬಿಎಂಶ್ರೀ ಮೊದಲಾದವರು ಕವಿಗಳು ಎಂಬುದೆಷ್ಟು ನಿಜವೋ ಅವರು ವಿದ್ವಾಂಸರು ಸಾಹಿತಿಗಳು ಎಂಬುದು ಅಷ್ಟೇ ನಿಜ. ಹೀಗಾಗಿ ಒಬ್ಬರಲ್ಲಿ ಹಲವು ಬಗೆಯ ಪ್ರತಿಭಾಶಕ್ತಿಗಳು ಅಡಗಿರುವುದನ್ನು ಕಾಣಬಹುದು. ಆದರೆ ಅದು ದೊಡ್ಡ ಪ್ರಮಾಣದಲ್ಲಿ ಹೊರ ಹೊಮ್ಮಿರುವುದಿಲ್ಲ. ಕೃಷ್ಣಶಾಸ್ತ್ರಿಗಳು ವಿದ್ವಾಂಸರಾದರೂ ಕವಿ ಹೃದಯ ಉಳ್ಳವರು, ಕಾವ್ಯ ಬಲ್ಲವರು, ರಸವತ್ತಾದ ಕಾವ್ಯಾಸ್ವಾದನ ಪ್ರವೀಣರು. ಅವರಲ್ಲಿ ಕವಿತಾಶಕ್ತಿ ಇದ್ದರೂ ಅದು ಸಾಕಷ್ಟು ಹೊರಹೊಮ್ಮಲಿಲ್ಲ ಅನ್ನಿಸುತ್ತದೆ. ಅಪರೂಪಕ್ಕೆ ಒಂದೆರಡು ಕಡೆ ಕಾಣಿಸಿರುವ ತುಣುಕುಗಳೇ ಅವರು ಕವಿತೆ ಬರೆಯಬಲ್ಲರು ಎಂಬುದಕ್ಕೆ ಸಾಕ್ಷಿ ಆಗಿದೆ.

೧೯೪೭ನೇ ಜುಲೈನಲ್ಲಿ ಮೈಸೂರು ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸ್ವಾಗತ ಕವನವೊಂದು ಬರೆದಿದ್ದಾರೆ. ಅದರ ಒಂದು ತುಣುಕು ಇಲ್ಲಿದೆ.

ಮೈಸೂರ ಮಕ್ಕಳಿಗೆ ಅರಿವಿನಮೃತವ ಮಾಡಿ
ಸಂಸ್ಥೆ ವಿಶ್ವವಿದ್ಯಾಲಯದ ಸಂತತಂ ಪೋಷಿಸಿದ
ಸಂಸ್ಕೃತದ ಕನ್ನಡದ ಹಿರಿಯಣ್ಣರೇ ಬನ್ನಿ
ಪುಟ್ಟ ಕವಿಗಳೇ ಬನ್ನಿ ದೊಡ್ಡ ಕಾವ್ಯವ ತನ್ನಿ,
ಕನ್ನಡ ಕಂದಗಳೇ ಸಾಹಿತ್ಯ ಕಂದಗಳೇ
ಕವಿತೆಯುಕ್ತಾಂಬಗಳೇ ಕಾವ್ಯ ಮಾಕಂದಗಳೇ
ದಯಮಾಡಿ ತಮಗೆಲ್ಲ ಬಯಸುವೇ ಸ್ವಾಗತವ
ಸುಸ್ವಾಗತವ

ಬಂಕಿಮಚಂದ್ರ ಎಂಬ ಸಮಗ್ರಾವಲೋಕನ ಗ್ರಂಥದಲ್ಲಿ ಬಂಕಿಮರ ಕವಿತೆಗಳನ್ನು ಕುರಿತು ಬರೆಯುವಾಗ ಮೂಲ ಕವಿತೆಗಳನ್ನು ಸರಳ ಪದ್ಯಗಳಾಗಿ ಎ.ಆರ್.ಕೃ ಅನುವಾದಿಸಿದ್ದಾರೆ.

ಮರವನು ಬೆಳಸಿದೆ ಹಣ್ಣಿಗಾಗಿ
ಆದರೆ ದೊರೆಯಿತು ಬರೀ ಮುಳ್ಳೇ
ಮದುವೆ ಮಾಡಿಕೊಂಡೆ ಸುಖಕಾಗಿ
ಆದರೆ ದೊರೆಯಿತು ಪೊರಕೆಯ ಸೇವೆ.

ಮೂಲದಲ್ಲಿ ಕವಿತೆಯಲ್ಲಿರುವ ಶ್ಲೇಷಾರ್ಥವನ್ನು ಕನ್ನಡಕ್ಕೆ ತರಲಾಗಿದೆ ಅದನ್ನು ಹೀಗೆ ವಿವರಿಸಿದ್ದಾರೆ.

ಕೊನೆಯ ಸಾಲುಗಳು
ರಾಜನ ಮೇಲೆ ರಾಜನಾದರೆ
ಲಾಟ್ ಸಾಹೇಬನ ಲಾಟ್.


ಇಲ್ಲಿ ಮೊದಲನೆಯ ಲಾಟ್ ಶಬ್ದಕ್ಕೆ ಆಡಳಿತಾಧಿಕಾರಿ (ಗವರ್ನರ್) ಎಂದೂ ಎರಡನೆಯ ಲಾಟ್ ಶಬ್ದಕ್ಕೆ ಹಣೆಯ ಬರಹವೆಂದೂ ಅರ್ಥ ವಿರಬಹುದು–ಮೀರ್‌ಜಾಫರ ಕಾಲದಂತೆ ಎಂದಿದ್ದಾರೆ.

ಆದರ ಕವಿತೆಯಲ್ಲಿ ಪ್ರಣಯಿ ಪ್ರಾಣಭಿಕ್ಷೆಗೆ ಹೇಳುವ ನಾಲ್ಕು ಪದ್ಯಗಳನ್ನು ವಿವರಿಸುವಾಗ ಕೆಲವು ಭಾಗವನ್ನು ಹೀಗೆ ರಚಿಸಿದ್ದಾರೆ.

ಮರುಭೂಮಿಯೊಳೊಂದೆ ಸುಮ
ಸುಗಂಧವಿಡಿದ ಸುಮ
ಕಾರಿರುಳೊಳೊಂದೆ ತಾರೆ
ಅಂಧಕಾರ ತುಂಬಿರೆ ಗಗನದೊಳು
ಬೇಸಿಗೆ ಬೇಗೆಯೊಳೊಂದೇ ಸರಸಿ
ವಿಶಾಲ ಪ್ರಾಂತದೊಳಗೆಲ್ಲಾ
ಅನಂತ ಸಾಗರದೊಳಗಣ ತರಣಿ
ರತ್ನ ಸುಶೋಭಿತ ತರಣಿ
ನೀನೂ ಸಂಸಾರದೊಳಂತೆನಗೆ ಪ್ರಿಯೇ.

ಬಂಕಿಮರು ಬರೆದ ಕವಿತೆಗಳಲ್ಲಿ ಕಾದಂಬರಿ ನಡುವೆ ಬರೆದ ಪದ್ಯಗಳಲ್ಲಿ ಒಂದಾದ ವಂದೇ ಮಾತರಂ ಬಂಗಾಳದಲ್ಲಿಯೇ ಅಲ್ಲ ಭಾರತದಲ್ಲೇ ರಾಷ್ಟ್ರಗೀತೆ ಯಾಯಿತು. ವಂದೇ ಮಾತರಂ ಎಂಬ ಮಾತು ಪಂಚಾಕ್ಷರಿ ಆಗಿ ಅದರ ಉಚ್ಚಾರಣೆಯಲ್ಲೇ ಲಕ್ಷಾಂತರ ಜನ ತನುಮನಧನಗಳನ್ನು ದೇಶಕ್ಕೆ ಅರ್ಪಿಸಿದರು. ಐತಿಹಾಸಿಕವಾಗಿ ಇಷ್ಟು ಪ್ರಭಾವ ಬೀರಿದ ಕವಿತೆ ಈ ದೇಶದೊಳು ಇನ್ನೊಂದಿಲ್ಲ.

❐



೩. ಕನ್ನಡದ ಮೊದಲ ರಾಷ್ಟ್ರಕವಿ
ಎಂ. ಗೋವಿಂದ ಪೈ

ಈಗ್ಗೆ ಸುಮಾರು ಅರ್ಧಶತಮಾನದ ಹಿಂದೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ವಾಚನಾಲಯಕ್ಕೆ ಅಚ್ಚಾದ ಪತ್ರಿಕೆಗಳು ಬರುತ್ತಿದ್ದಂತೆಯೇ ಹತ್ತಾರು ಕೈ ಬರಹ ಮಾಸಪತ್ರಿಕೆಗಳು ಬರುತ್ತಿದ್ದವು. ಮಹಿಳೆಯರೇ ಬರೆಯುತ್ತಿದ್ದ 'ಜ್ಯೋತಿ' ಕೈ ಬರಹ ಮಾಸ ಪತ್ರಿಕೆಯನ್ನು ಬಸವನಗುಡಿಯ ಕೆಲವು ಸಾಹಿತ್ಯಾಸಕ್ತ ಮಹಿಳೆಯರು ಎಕ್ಸರ್‌ಸೈಜ್ ಹಾಳೆಗಳಲ್ಲಿ ಕಥೆಗಳನ್ನು ಬರೆದು ಆ ಹಾಳೆಗಳನ್ನು ಹೊಲಿದು ತಂದು ಅಲ್ಲಿಡುತ್ತಿದ್ದರು. ಚಾಮರಾಜಪೇಟೆಯ ಗೆಳೆಯರು ಕವಿಗಾನ, ಶ್ರೀ ವಿದ್ಯಾಗಣಪತಿ ಮಾಸಪತ್ರಿಕೆಗಳನ್ನು ಹೊರಡಿಸುತ್ತಿದ್ದರು. ಕಳಾಸಿಪಾಳ್ಯದ ಸಿ.ಕೆ. ರೇಣುಕ ಅವರು ಹಳ್ಳಿಹಾಡು, ಜಾನಪದ ಸಂಗ್ರಹದ ಜಾನಪದ ಸಾಹಿತಿ ರಂಗಸ್ವಾಮಿ ಅವರ ಮಗ ರೇಣುಕ ಪ್ರಕಟಿಸುತ್ತಿದ್ದ "ಅಮರಜ್ಯೋತಿ" ಮಾಸಪತ್ರಿಕೆ ಮುಂತಾದ ಪತ್ರಿಕೆಗಳ ಜತೆಗೆ ಇನ್ನೊಂದು ಮಾಸಪತ್ರಿಕೆ 'ಕರಡಿ' ಎಂಬ ಕೈ ಬರಹ ಪತ್ರಿಕೆ ಅಲ್ಲಿಗೆ ಬರುತ್ತಿತ್ತು. ಅದನ್ನು ಹೊರಡಿಸುತ್ತಿದ್ದ ನನ್ನ ಗೆಳೆಯ ಶಂಕರ್. ಎಂಥ ಪುಸ್ತಕ ಪ್ರೇಮಿ ಎಂದರೆ ಆತ ಮುಂದೆ ಹಳೇ ಪುಸ್ತಕ ವ್ಯಾಪಾರಿಯೇ ಆಗಿಬಿಟ್ಟ, ಆತ ಮಾಧ್ಯಮಿಕ ಶಾಲೆಯಲ್ಲಿ ನನ್ನ ಜತೆ ಓದುತ್ತಿದ್ದ ಕಾಲದಲ್ಲಿ ಜಿ.ಪಿ. ರಾಜರತ್ನಂ ಅವರ ಕವಿತೆಗಳನ್ನು ಓದಿ ಅದರಂತೆಯೇ ಅನುಕರಣ ಪದ್ಯಗಳನ್ನು ಬರೆದು ಅವರಿಗೇ ತೋರಿಸಿ ಭೇಷ್ ಎನಿಸಿಕೊಳ್ಳುತ್ತಿದ್ದ. 'ರಾಯಭಾರಿ', 'ಪ್ರಭಾತ' ಪತ್ರಿಕೆಗಳಿಗೆ ಪದ್ಯ ಕಳಿಸಿ ಬಹುಮಾನ ಗಳಿಸಿದ್ದ. ಇವನು ಹೊರಡಿಸುತ್ತಿದ್ದ ಕರಡಿ ಪತ್ರಿಕೆಗೆ ಸಿದ್ದಿಕಟ್ಟೆಯ ಟಿ.ಚಂದ್ರರಾಜಶೆಟ್ಟಿ ಕವರ್ ಪೇಜ್ ಚಿತ್ರವನ್ನು ಕಪ್ಪು ಶಾಯಿಯಲ್ಲಿ ಬರೆದು ಕಳಿಸುತ್ತಿದ್ದರು. ಈ ಪತ್ರಿಕೆಗೆ ಮೊದಲ ಸಂಚಿಕೆಗೆ ಆಶೀರ್ವಾದ ಕೇಳಿ ಕಾಗದ ಬರೆದಾಗ ಮರು ಟಪಾಲಿಗೇ ಬಂದ ಹರಕೆ ಕಾರ್ಡು ನೇರಿಳೆ ಶಾಯಿಯಲ್ಲಿ ಬರೆದಿದ್ದು ಗೋವಿಂದ ಪೈ ಅವರದು. ನಮಗೆಲ್ಲ ಆಶ್ಚರ್ಯವೋ ಆಶ್ಚರ್ಯ. ಏಕೆಂದರೆ ಭಾರಿ ಪೊದೆ ಮೀಸೆಯ, ಗಂಡು ಮುಖದ, ಹೊಳಪು ಕಣ್ಣುಗಳ, ಕೆದರಿದ

ತಲೆಯ ಸಿಂಹಮುಖದ ಗೋವಿಂದ ಪೈ ಚಿತ್ರ ಕಂಡ ನಮಗೆ ಅವರ ಬಗ್ಗೆ ನಮಗೆ ಭಾರೀ ಕಲ್ಪನೆ ಇತ್ತು. ನೋಡೋಣ ಎಂದು ಕಾಗದ ಬರೆದಿದ್ದೆವು. ಕಾರಂತ, ಬೇಂದ್ರೆ ಮೊದಲಾದವರಿಗೂ ಕಾಗದ ಬರೆದಿದ್ದೆವು ಆದರೆ ಮೊದಲು ಬಂದ ಕಾಗದ ಪೈಗಳದು.

ಆ ವೇಳೆಗೆ ನಮಗೆ ಗೋವಿಂದ ಪೈ ಅವರ ಪರಿಚಯ, ಶಾಲಾ ಪಠ್ಯದಲ್ಲಿದ್ದ

ತಾಯೆ ಬಾರ ಮೊಗವತೋರ, ಕನ್ನಡಿಗರ ಮಾತೆಯೆ
ಹರಸುತಾಯೆ, ಸುತರಕಾಯೆ ನಮ್ಮ ಜನ್ಮದಾತೆಯೆ
ತನು ಕನ್ನಡ ಮನ ಕನ್ನಡ ಧನ ಕನ್ನಡ ಎಮ್ಮವು

ಎಂಬ ನಾಡಗೀತೆ ನಮಗೆಲ್ಲ ಕಂಠ ಪಾಠವಾಗಿತ್ತು. ಕಾಲೇಜಿಗೆ ಬಂದಾಗ ಅವರ ಗೊಲ್ಗೊಥಾ ಪಠ್ಯವಾಗಿದ್ದು ಅದರ ಅನೇಕ ಭಾಗಗಳನ್ನು ನಾವೆಲ್ಲ ಮೆಲುಕು ಹಾಕುತ್ತಿದ್ದೆವು. ಅದರಲ್ಲಿ ಬರುವ ಯೇಸುವಿನ ಕೈ ಕಾಲುಗಳಿಗೆ ಮೊಳೆ ಜಡಿದಾಗ ಆ ದೃಶ್ಯವನ್ನು ಪೈ ಅವರು ವರ್ಣಿಸುವುದು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಹದ್ದು ಬಿಗಿವಿಡಿವ ಲಾವಿಗೆಯಂತೆ
ಪಡುವಣದಿ ಬಿಳಿಯ ಬಿದಿಗೆಯ ತಿಂಗಳಂತೆ
ಬಿಲ್ಲಿಗೆ ತೊಟ್ಟ ಸರಳಂತೆ,
ಮರಣ ವೃಕ್ಷದೊಳು ಅಮೃತಫಲ ತೂಗುವಂತೆ
ಸಾವಿರ ಚೇಳುಗಳು ಒಮ್ಮೆಗೆ ಕಡಿದ ಯಾತನೆಯನ್ನು
ಮಗು, ತಾಯ ಮೊಗನೋಡೆ, ಆಕೆ ಬೆಸಲ
ಅಳಲನು ಓತು ಸೈರಿಸುವಂತೆ
ತನ್ನ ತೊರೆದ ಅರ್ಭಕರ ಹಂಬಲಿಸುವ ಮುಮೂರ್ಷ ತಾಯಂತೆ
ತನ್ನ ಕಡಿದವರಿಗೆ ತಣ್ನೆಳಲ ಈವ ಮರದಂತೆ
ತನ್ನ ಅಳಲನು ಅವರ ಹಂಬಲದಿ ಮರೆತು
ಕ್ಷಮಿಸು ಇವರನು ಎಲೆ ತಂದೆ,
ತಾವು ಏನನು ಎಸಗಿದಪೆವು ಎಂದು ಅರಿಯರು, ಇವರು

ಎನ್ನುತ್ತಾನೆ ಯೇಸು. ಗೊಲ್ಗೊಥಾ ಬರೆದವರು ಗೋವಿಂದ ಪೈ ಅಂದಾಗ, ಪಾದ್ರಿಯೊಬ್ಬರು ನಾನು ನಂಬಲಾರೆ ಎಂದರಂತೆ "ಘನ ಕ್ರೈಸ್ತ ವಿದ್ವಾಂಸರಿಗೆ ಈ ರೀತಿ ಬರೆಯಲು ಸಾಧ್ಯ ಬೇರೆಯವರಿಗಲ್ಲ ಎಂದು ಹೇಳಿದರಂತೆ. ಹೀಗೆ ಶಾಲಾ-ಕಾಲೇಜು ಪಠ್ಯಗಳಿಂದ ಪರಿಚಿತರಾದ ಎಂ. ಗೋವಿಂದಪೈ ಅವರು ಜನಿಸಿದ್ದು ೨೩-೩-೧೮೮೩ರಲ್ಲಿ ನಿಧನರಾದದ್ದು ೬-೯-೧೯೬೩ರಲ್ಲಿ. ಎಂಬತ್ತು

ವರ್ಷಗಳ ಬಾಳ್ವೆ ನಡೆಸಿದ ಅವರು ಕನ್ನಡ ಸಾಹಿತಿಗಳಲ್ಲೇ ವಿಶಿಷ್ಟ ವ್ಯಕ್ತಿತ್ವವುಳ್ಳವರಾಗಿದ್ದರು. ಡಾ. ಶ್ರೀನಿವಾಸಹಾವನೂರ ಹೇಳುವಂತೆ "ನನ್ನ ಜೀವನಾನುಭವದಲ್ಲಿ ಮನ-ಮಾತು-ಕೃತಿಗಳ ಏಕಸೂತ್ರವಿದ್ದ ಬೇರೆ ಯಾವ ಸಾಹಿತಿಗಳನ್ನು ನಾನು ಕಂಡಿದ್ದಿಲ್ಲ."

ಇವರನ್ನು ರಾಷ್ಟ್ರಕವಿ ಎಂದು ಕರೆಯುತ್ತೇವೆ. ಕನ್ನಡದಲ್ಲಿ ಈ ಬಿರುದಿಗೆ ಪಾತ್ರರಾದವರಲ್ಲಿ ಇವರು ಪ್ರಪ್ರಥಮರು; ಕುವೆಂಪು ಅವರು ದ್ವಿತೀಯರು; ಡಾ.ಜಿ.ಎಸ್. ಶಿವರುದ್ರಪ್ಪನವರು ತೃತೀಯರು.

ಗೋವಿಂದ ಪೈ ಅವರಿಗೆ ರಾಷ್ಟ್ರಕವಿ ಪ್ರಶಸ್ತಿ ದೊರೆತ ಸನ್ನಿವೇಶ ಚೇತೋಹಾರಿ ಸಂಗತಿ.

ಗೋವಿಂದ ಪೈ ಅವರು ಸ್ವಸಾಮರ್ಥ್ಯದಿಂದ ಬಹುಭಾಷಾ ಕೋವಿದರಾಗಿದ್ದರು. ಯುರೋಪಿನ ಭಾಷೆಗಳಾದ ಇಂಗ್ಲಿಷ್, ಜರ್ಮನ್, ಫ್ರೆಂಚ್, ಲ್ಯಾಟಿನ್, ಗ್ರೀಕ್ ಮೊದಲಾದ ಭಾಷೆಗಳನ್ನು ಏಷ್ಯಾಖಂಡದ ಅರಬ್ಬೀ ಫಾರ್ಸಿ ಹೀಬ್ರೂ, ಇತ್ಯಾದಿ ಭಾಷೆಗಳನ್ನು, ಹಿಂದೂಸ್ಥಾನದ ಸಂಸ್ಕೃತ, ಉರ್ದು, ಪಾಲಿ, ಬಂಗಾಲಿ ಮರಾಠಿ ಹಿಂದಿ ಮತ್ತು ಮಲೆಯಾಳಂ, ತಮಿಳು, ತೆಲುಗು ಮೊದಲಾದ ದ್ರಾವಿಡ ಭಾಷೆಗಳನ್ನು ಇಪ್ಪತ್ತೆರಡಕ್ಕೂ ಹೆಚ್ಚು ಭಾಷೆಗಳನ್ನು ಅರಿತವರಾಗಿದ್ದರು. ಕೇವಲ ಅರಿತವರಲ್ಲ. ಓದು ಬರಹ ಮಾತು ಬಲ್ಲವರಾಗಿದ್ದರು. ಇವರ ಬಹುಭಾಷಾ ಪಾಂಡಿತ್ಯ ಬೆಳಕಿಗೆ ಬಂದದ್ದು ಮದರಾಸಿನಲ್ಲಿ ಸೇರಿದ್ದ ಅಖಿಲ ಭಾರತೀಯ ನಾನಾ ಭಾಷೆಗಳ ಗೋಷ್ಠಿಯ ಸಮಾರಂಭದಲ್ಲಿ. ರಾಷ್ಟ್ರಕವಿ ಪ್ರಶಸ್ತಿಯನ್ನು ಗೋವಿಂದ ಪೈ ಅವರು ಗಳಿಸಿದ ಸಮಾರಂಭ ಇದು. ಆ ಸಮಾರಂಭದಲ್ಲಿ ಶ್ರೀಮಂತ ಭಾವನಗರದ ಮಹಾರಾಜರು, ಮದರಾಸಿನ ಗೌರ್ನರ್ ಆಗಿದ್ದವರು. ತಾವು ಮಾಡಿದ ಇಂಗ್ಲಿಷ್ ಭಾಷಣವನ್ನು ಅಲ್ಲಿ ಸೇರಿದ ವಿವಿಧ ಭಾಷಾ ಕವಿಪುಂಗವರಿಗೆ ಅವರವರ ಭಾಷೆಗಳಲ್ಲಿ ಪರಿವರ್ತಿಸಿ, ಹೇಳಲು ಯಾರಿದ್ದೀರಿ? ಎಂದು ಕೇಳಿದಾಗ ಪೈಗಳು ಎದ್ದು ನಿಂತು ನಮಿಸಿ ಆ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಅಲ್ಲಿದ್ದ ವಿವಿಧ ಭಾಷಾ ಜನರಿಗೆ ಅವರವರ ಭಾಷೆಗಳಿಗೆ ಗವರ್ನರರ ಭಾಷಣವನ್ನು ಸೊಗಸಾಗಿ ಅನುವಾದಿಸಿ ಹೇಳಿದರು.

ಗೋವಿಂದ ಪೈ ಅವರ ಭಾಷಾ ಪರಿಚಯ ಕೇವಲ ಪರಿಚಯದ ಹಂತವಾಗಿರಲಿಲ್ಲ ಭಾಷೆಯ ಪರಿಣಿತಯತ್ತ ಅವರ ಗುರಿಯಿತ್ತು. ಅವರು

ಒಂದು ರೀತಿಯಲ್ಲಿ ಶಬ್ದಬ್ರಹ್ಮರು. ಕಿಟೆಲ್ ನಿಘಂಟು ಅವರಿಗೆ ಹೃದ್ಗತವಾಗಿತ್ತು. ಅವರ ಪದಪ್ರೇಮ, ಪದಸೃಷ್ಟಿ, ಶ್ರದ್ಧಾ ಪ್ರಯೋಗ ಛಲ ಮೆಚ್ಚುವಂತಹುದು. ಅವರ ಭಾಷಾಶುದ್ಧಿಯ ಕಾಯಕ ಮೆಚ್ಚುವಂತಹುದು. ಅನೇಕ ಶಬ್ದಗಳಿಗೆ ಅವರು ತೋರಿಸಿರುವ ಶಬ್ದರೂಪಗಳು ಬಳಕೆಗೆ ಅಸಾಧ್ಯ. ಏಕೆಂದರೆ ಈಗಾಗಲೇ ಬೇರೆ ಶಬ್ದಗಳು ಜನಮಾನಸದಲ್ಲಿ ತಳವೂರಿಬಿಟ್ಟಿವೆ. ಹಾಗಾಗಿ ಬಳಕೆಗೆ ಬರುವುದು ಸ್ವಲ್ಪ ಕಠಿಣವೇ ಸರಿ. ಉದಾಹರಣೆಗೆ ಮುಕ್ತಾಯ ಸರಿಯಲ್ಲ ಮುಗಿತಾಯ ಆಗಬೇಕು. ಏಕೆಂದರೆ ಮುಗಿತ ಎಂಬರ್ಥದಲ್ಲಿ ಮುಗಿತಾಯವೇ ನೇರರೂಪ, ಸಂದಾಯ, ಉಳಿತಾಯ ಎಂಬಂತೆ, ವಿರಳಾರ್ಥದಲ್ಲಿ ಅಪೂರ್ವ ಎನ್ನಬೇಕಲ್ಲದೆ ಕುರೂಪ ಎಂಬರ್ಥ ಉಳ್ಳ. ಅಪರೂಪ ಅಲ್ಲ. ಇಸು ಪ್ರತ್ಯಯ ಬಳಸಿ ಹೊಸ ಕ್ರಿಯಾಪದ ರೂಪಿಸಬೇಕು. ಸವ್ಯಸಾಚಿಸು, ಚಕಾರಿಸು, ಅಪ್ಪಣಿಸು, ಇತ್ಯಾದಿ ತಾವು ಹೇಳಿದ್ದಕ್ಕೆ ತಾವೇ ಪ್ರಮಾಣ ಎಂಬಂತೆ ತಾವು ಸೂಚಿಸಿದ ರೂಪಗಳನ್ನು ತಮ್ಮ ರಚನೆಗಳಲ್ಲಿ ಗೋವಿಂದ ಪೈ ಬಳಸಿದ್ದಾರೆ. ನುಡಿದಂತೆ ನಡೆ ಎಂಬುದು ಪೈ ಅವರ ಲಕ್ಷಣ ಇಂಗ್ಲಿಷ್ ಪದಗಳಿಗೆ ಸಂಸ್ಕೃತ ಹಾಗೂ ಕನ್ನಡ ಪದಗಳನ್ನು ಟಂಕಿಸಿದ್ದಾರೆ. ಕೋರಸ್=ಗೊಂದಲ ಆಲ್ಫಬೇಟ್=ಕಾಬಳ್ಳಿ, ಲಯನ್ಸ್‌ಷೇರ್=ಸಿಂಹಪಾಲು ಪಿಟಿಷನ್=ಮನವಿ, ಎಲೆಕ್ಟ್ರಿಕ್‌ಲ್ಯಾಂಪ್=ಮಿಂಚುದೀಪ, ದಿ ಲಿಸನರ್=ಕೇಳುಗ ಇತ್ಯಾದಿ. ಅನ್ಯ ದೇಶೀಯ ಅಂಕಿತನಾಮಗಳನ್ನು ಅನುವಾದಿಸಿ ಅಂಥ ಕಡೆ ಕನ್ನಡ ಉಚ್ಚಾರಕ್ಕೆ ತಕ್ಕಂತೆ ರೂಪಿಸಿದ್ದಾರೆ.

ಈಜಿಪ್ಟ್=ಐಗುಪ್ತ, ಇಟಲಿ=ಇತಲಿ, ಡೇವಿಡ್=ದಾವೀದ ಮೇರಿ= ಮರಿಯಾ, ಜಾನ್=ಯೋಹಾನ ಇತ್ಯಾದಿ ಅನೇಕ ಕ್ರೈಸ್ತ ಗ್ರಂಥಗಳಲ್ಲಿ ಬರುವ ಈ ರೂಪಗಳನ್ನು ಬಳಸಿದ್ದಾರೆ. ಗೋವಿಂದ ಪೈ ಅವರು ಬಳಸಿರುವ ಶಬ್ದಗಳ ಮತ್ತು ಅವುಗಳ ಅರ್ಥದ ಶಬ್ದಕೋಶವೊಂದು ನಾವಡ ಅವರಿಂದ ಗೋವಿಂದ ಪೈ ನಿಘಂಟು ಕನ್ನಡದಲ್ಲಿ ಪ್ರಕಟವಾಗಿದೆ.

ಪೈಗಳು ಸಾಹಿತಿಗಳಾಗಿದ್ದು ಹೇಗೆ ಎನ್ನುವುದು ತುಂಬ ಕುತೂಹಲದ ಸಂಗತಿ ಆಗಿದೆ. ಅವರ ತಮ್ಮನ ಮದುವೆ ಸಂದರ್ಭ. ಜೋಳದ ಗದ್ದೆಯಲ್ಲಿ, ಗಿಳಿಗಳ ಕೋಲಾಹಲದಂತೆ, ಚಪ್ಪರವೆಲ್ಲಾ ಗದ್ದಲ. ಆ ಗದ್ದಲದ ನಡುವೆ ಬಹುಶಃ ಅಜ್ಜಿಯೊಂದು ಕುಗ್ಗಿದ ಕೊರಳಲ್ಲಿ ಹಾಡುತ್ತಿದ್ದ ಹಾಡು ಪೈಗಳಿಗೆ ಕೇಳಿಸಿತು.

ಅಡವಿಗೆ ಪೋಪರೇನೆ ಕಂದಯ್ಯಾ ||ಪಲ್ಲವಿ||

ಅಡವಿಯೊಳಗೆ ಬ್ಸಲು । ಕಡು ಖೂಳ ಮೃಗಗಳು
ಬಿಡದೆ ಬಾಧಿಪವೋ ನಿನ್ನ ||ಅನುಪಲ್ಲವಿ||

ಹಾಡಿನ ಪಲ್ಲವಿ ಅನುಪಲ್ಲವಿ ಕೇಳಿದ ತಕ್ಷಣ ಅವರಿಗೆ ಏನು ತೋಚಿತೋ ದೇವರೇ ಬಲ್ಲ. ಚಪ್ಪರದ ಗವುಜಿ ಕೇಳಿಸಲಿಲ್ಲ. ನೆಟ್ಟಗೆ ಹೋಗಿ ಅಭ್ಯಾಸ ಪುಸ್ತಕ ಹಿಡಿದು ಬರೆಯತೊಡಗಿದರು. ಇಳಿ ಹೊತ್ತಿನೊಳಗೆ ಒಂದು ನಾಟಕ ಬರೆದು ಮುಗಿಸಿದರು. ಎರಡು ಮೂರು ದಿನಗಳಲ್ಲಿ ಇನ್ನೊಂದು ನಾಟಕ ಬರೆದರು. "ಹೀಗೆ ಸಾಹಿತ್ಯ ಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ ಮುಚ್ಚು ಕದಕ್ಕೆ ಢಿಕ್ಕಿ ಹೊಡೆದೆ ಅಗಳಿ ಇಲ್ಲದ ಬಾಗಿಲು ಹಾರಿತು. ಒಳಹೊಕ್ಕೆ ನನ್ನ ಜೀವಮಾನದಲ್ಲಿ ಇದೊಂದು ಅಮಗ, ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನವನ್ನು ಎಂದಿಗೂ ಮರೆಯುವಂತಿಲ್ಲ." ಎಂದು ಆ ಸಂದರ್ಭವನ್ನು ವಿವರಿಸಿದ್ದಾರೆ.

ಕಂದಯ್ಯನು ಅಡವಿಗೆ ಹೋಗುವಾಗಿನ ಆ ಕರುಣಾಮಯವಾದ ಕವಿಯ ಬಾಲಹೃದಯದ ತಂತಿಯನ್ನು ಅಲುಗಾಡಿಸಿರಬೇಕು. ಆದಿಕವಿ ವಾಲ್ಮೀಕಿಗೆ ಯಾವ ಶೋಕ ಶ್ಲೋಕವಾಗಲು ಸ್ವಯಂ ಪ್ರೇರಣೆ ಆಯಿತೋ ಅಂಥ ಕರುಣ ಸನ್ನಿವೇಶದ ಸಾಲುಗಳು ಈ ಆಧುನಿಕ ಕವಿ ಕೋಗಿಲೆಗೆ ಪ್ರೇರಕ ಶಕ್ತಿ ಆಯಿತು.

ಅವರು ಬರೆದ ಕವಿತೆ, ಖಂಡ ಕಾವ್ಯಗಳನ್ನು ಗಮನಿಸಿದರೆ, ಜೈನ, ಬೌದ್ಧ ಕ್ರೈಸ್ತ ಹಿಂದೂ ಧರ್ಮಗಳ ಮೂಲ ಗ್ರಂಥಗಳನ್ನು ಓದಿ ಅವುಗಳ ಆಧಾರದ ಮೇಲೆ ಪಾಂಡಿತ್ಯ ಪೂರ್ಣ ಕೃತಿಗಳನ್ನು ರಚಿಸಿದ್ದಾರೆ.

ಹೀಗೆ ಮೂಲಗ್ರಂಥಗಳನ್ನು ಮೂಲಭಾಷೆಯಲ್ಲಿಯೇ ಓದಿ ಅರ್ಥಮಾಡಿ ಕೊಂಡಿರುವುದರಿಂದ ಪೈ ಅವರ ನಿರೂಪಣೆ ಹೃದಯಂಗಮವಾಗಿರುತ್ತದೆ ಮೂಲಕ್ಕೆ ಹತ್ತಿರವಾಗಿರುತ್ತದೆ. ಪ್ರಾಸಾನುಸಾರಿಯಾಗಿರುತ್ತದೆ. ಉದಾಹರಣೆಗೆ, ಗೊಲ್ಗೊಥಾದಲ್ಲಿ ಯೊಹೂದ್ಯರ ಮಧ್ಯದಲ್ಲಿದ್ದ ಯೇಸುವನ್ನು ಚಿತ್ರಿಸುವುದು ಹೀಗೆ.

ಲೋಕದ ಉರು ಪಾಪವಂ ಹೊತ್ತ ಕುರಿಮರಿ
ಗಿಡುಗಗಳ ನಡುವೆ ತೊಡರಿದ ಕಪೋತಕ
ಅವನದು ಹೆಣ್ನಗೆಯ ನಯನ

ಅದರಲ್ಲಿ ಭವಿಷ್ಯವನು ತಿವಿದ ಪುರುಷದೃಷ್ಟಿ
ಎದೆಯಲ್ಲಿ ಹೆಣ್ಣೆದೆಯ ಮಾರ್ದವ
ಗಂಡಿನ ಮನೋದಾರ್ಢ್ಯ
ದಿವ್ಯಜ್ಞಾನದ ಆಡುಂಬೊಲವಾದ ಪೃಥುಲ ಲಲಾಟ
ಮೊಗದಲ್ಲಿ ಪ್ರೇಮಾಂಬುನಿಧಿಯನು ಉಬ್ಬರಿಸುವ
ಅಮೃತಾಂಶು ಕಾಂತಿ
ಜನತ್ ಪ್ರೇಮದ ಈ ಶೋಭೆ, ಶಾಂತಿ, ಮಹಿಮೆ
ಜಿತಾತ್ಮತೆ, ತಪಶ್ಶಕ್ತಿ, ಇವು ಮತ್ತೇನೂ ಅಲ್ಲ
ಮನುಜ ದೇವತನಾದ ಸುಧಾ ಸಿಂಧು.

ಗೊಲ್ಗೊಥಾದ ಹಾಗೆಯೇ ವೈಶಾಖೀ ಕಾವ್ಯದಲ್ಲಿ ಮೂಡಿರುವ ವ್ಯಕ್ತಿತ್ವ ಭಾಷೆ, ನಿರೂಪಣೆಗಳು ನಮ್ಮ ಹೃದಯದಲ್ಲಿ ಚಿರಸ್ಥಾಯಿ ಆಗುತ್ತದೆ. ಭಾವಗಳು, ಕಲ್ಪನೆಗಳು ಉಪಮೆಗಳು ಬಿಟ್ಟ ಬಾಣದಂತೆ, ನೆಟ್ಟ ಗುರಿಯಂತೆ ನಾಟುತ್ತವೆ.

ಉದಾಹರಣೆಗೆ, ಪುಕ್ಕಸನೆಂಬಾತನು "ಉತ್ತಮವಾದ ಮಂಗಳಂ ಪೇಳ ಭಗವಂತ, ಎಂದಾಗ, ಪ್ರಶಾಂತ ಬುದ್ಧನು "ಮಾನವರು ನಡೆನುಡಿ ಆಚಾರ ವಿಚಾರಗಳಲ್ಲಿ ಪರಿಶುದ್ಧವಾಗಿ ಬದುಕುವುದು, ಪ್ರಪಂಚದ ಕಷ್ಟ ಕಾರ್ಪಣ್ಯಗಳಿಗೆ ಕುಗ್ಗದೆ ನಿಂದೆ ಸ್ತೋತ್ರ ಯಶ– ಅಪಯಶ, ಸುಖದುಃಖ, ಲಾಭನಷ್ಟಗಳನ್ನು ಸಮವಾಗಿ ಭಾವಿಸಿ ಬಾಳುವುದೇ ಉತ್ತಮ ಮಂಗಲ"ವೆಂದು ವಿವರಿಸುತ್ತಾನೆ.

ಆಗ ಪುಕ್ಕಸನಿಗೆ ಆನಂದವಾಗಿ ಹೃದಯ ತಣಿದು ಹೇಳುತ್ತಾನೆ.

ಭಗವಂತ ಬರಿಯ ಕಣಜದಿ ಗೋಣಿ ದವಸವ।
ಸುರಿವಂತೆ ಬಿಟ್ಟ ಬರಡಿಗೆ ಎತ್ತುಗಳ ಹೂಡಲು ಎಳೆವಂತೆ
ಬರಿಗೈಯ ಬಣಜಿಗಗೆ ಬಂಡವಳ ಎರೆದಂತೆ
ಪಾಂಥಗೆ ಇರುಳಲಿ ಸತ್ರ ತೋರ್ದಂತೆ
ಕೃತಕೃತ್ಯನಾದೆನು ಉತ್ತಮ ಮಂಗಲಂಗಳ
ಈ ಬೋಧೆಯಿಂದ ಇನ್ನು ಭಗವಂತನಿಗೆ ಶರಣೆಂಬೆ
ಧರ್ಮಂ ಶರಣಂ ಗಚ್ಛಾಮಿ
ಧರ್ಮಕಾಂ ಶರಣೆಂಬೆ, ಸಂಘಕಾಂ ಶರಣೆಂಬೆ

ಎಂದು ತನ್ನ ವೃತ್ತಿ ಭಾಷೆಯಲ್ಲಿ ಧನ್ಯವಾದ ಅರ್ಪಿಸುತ್ತಾನೆ.

ವೈಶಾಖಿಯಲ್ಲಿ ಬರುವ ಸಂಭಾಷಣೆಗಳಲ್ಲಿ ವ್ಯಕ್ತವಾಗುವ ಅಮೃತೋಕ್ತಿಗಳು ಲೋಕಹೃದ್ಯವಾಗಿವೆ.

ಶಿಷ್ಯ ಆನಂದ ಮತ್ತು ಬುದ್ಧರ ನಡುವಣ ಮಾತುಕತೆ ಒಂದು ಕಡೆ ಹೀಗೆ ಬರುತ್ತದೆ. ಆನಂದ ಕ್ಕೇಳುತ್ತಾನೆ.

"ಭಗವಂತ, ಹೆಂಗಸರೊಡನೆ ಎಂತು ವರ್ತಿಸಲಕ್ಕು?"

ಬುದ್ಧ ಉತ್ತರಿಸುತ್ತಾನೆ.

'ಕೇಳಾನಂದ', ನೋಡದಿರಿ

ಆನಂದ ಉವಾಚ :

'ಭಗವಂತ, ನೋಡಬೇಕಾದರೆ ನಾವ್ ಏಂ ಗೈಯಲ್' ಅಕ್ಕುಂ'

ಭಗವಾನ್ ಉವಾಚ:

'ಆನಂದ, ಅವರೊಡನೆ ಮಾತಾಡದಿರಿ'

ಆನಂದನ ಪ್ರಶ್ನೆ

ಅವರೆ ನಮ್ಮೊಡನೆ ಮಾತಾಡೆ ಏಂ ಎಸಗಲು ಭಗವಂತ
'ನಾ ಮಾತಾಡಬಾರದು ಸರಿ ಅವರೇ ಮಾತಾಡಿಸಿದರೆ'

ಬುದ್ಧನ ಉತ್ತರ:

ಆನಂದ, ಅಂತಾಗೆ ಹಿರಿಯರಂ ತಾಯೆಂದು
ಸರಿಯರನು ಅಕ್ಕ ತಂಗಿಯರೆಂದು ಕಿರಿಯರಂ ಕೂಸೆಂದು
ಭಾವಿಸುತ ಕಟ್ಟೆಚ್ಚರ ಇರಿ

ಲೋಕಾನುಭವವನ್ನು ಬುದ್ಧನ ಮಾತಿನಲ್ಲಿ ಪೈ ಸೂಚಿಸುತ್ತಾ ಬುದ್ಧನು ಬ್ರಹ್ಮಚರ್ಯ ಪರಿಪಾಲನಾ ಸೂತ್ರವನ್ನು ಮಾರ್ಮಿಕವಾಗಿ ಸಾರಿದ್ದಾನೆ ಎಂಬುದನ್ನು ತೋರಿದ್ದಾರೆ. ಮಾನವೀಯ ಮೌಲ್ಯಗಳನ್ನು ಬುದ್ಧನ ವಾಣಿಯಲ್ಲಿ ಮೊಳಗಿಸುವ ರೀತಿ ವೈಶಾಖಿಯಲ್ಲಿ ಅಮೋಘವಾಗಿದೆ.

ಕನ್ನಡ ಸಾಹಿತಿಗಳಲ್ಲಿ ಬಡತನದ ಬವಣೆಗಳ ನಡುವೆ ಹುಟ್ಟಿ ಬಡತನದಲ್ಲೇ ಬಾಳನ್ನು ಸವೆಸಿದವರು ಇದ್ದಾರೆ. ಮತ್ತೆ ಕೆಲವರು ಬಡತನದಲ್ಲಿ ಜನಿಸಿದರೂ ತಮ್ಮ ಪರಿಶ್ರಮ ಜಾಣ್ಮೆಗಳಿಂದ ಸಾಹುಕಾರರಾದವರೂ ಇದ್ದಾರೆ. ಮತ್ತೆ ಕೆಲವರು ಬಡತನದ ಬವಣೆಯಿಲ್ಲದೆ ಜನಿಸಿ ಬಾಳಿದರೂ ಬಡತನದ ಅರಿವಿದ್ದು ದಯಾಮಯಿಗಳಾಗಿ ಬಾಳಿದ ಅನುಕೂಲವಂತ ಸಾಹಿತಿಗಳೂ ಇದ್ದಾರೆ. ಈ

ಪೈಕಿ ಸಂಶೋಧಕ, ಸಾಹಿತಿ, ಕಲಾವಿದ ಭಾಷಾ ತಜ್ಞರಾದ ಗೋವಿಂದ ಪೈ ಅವರು ಮಂಗಳೂರಿನ ಸಾಹುಕಾರ ತಿಮ್ಮ ಪೈ ಅವರ ಹಿರಿಯ ಮಗನಾಗಿ ಶ್ರೀಮಂತ ಮನೆತನದಲ್ಲಿ ಜನಿಸಿದರು. ಮಂಗಳೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿದರು. ಅನಂತರ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ ಪದವಿ ಪರೀಕ್ಷೆಗೆ ಕಟ್ಟಿದಾಗ ತಂದೆಯ ಮರಣದ ಕಾರಣ ಬಿ.ಎ ಪದವಿ ಪೂರೈಸ ಲಾಗಲಿಲ್ಲ. ಆದರೂ ಬಿಎ ಇಂಗ್ಲಿಷ್ ವಿಭಾಗದಲ್ಲಿ ಉತ್ತಮ ಶ್ರೇಣಿ ಹೊಂದಿದ್ದ ರಿಂದ ಚಿನ್ನದ ಪದಕ ಗಳಿಸಿದರು. ತಾಯಿಯ ಊರಾದ ಮಂಜೇಶ್ವರದಲ್ಲಿ ಹುಟ್ಟಿದ ಅವರು ತಾಯಿಯ ಆಸ್ತಿಯನ್ನು ನೋಡಿಕೊಂಡು ಅಲ್ಲಿಯೇ ನೆಲಸಿದ್ದರಿಂದ ಮಂಜೇಶ್ವರ ಗೋವಿಂದ ಪೈ ಎಂದೇ ಪ್ರಸಿದ್ಧರಾದರು ಪತ್ನಿ ಕೃಷ್ಣಬಾಯಿ ಅವರು ನಿಧನರಾದ ಮೇಲೆ ಮಕ್ಕಳಿಲ್ಲದ ಗೋವಿಂದ ಪೈ ಅವರು ತಮ್ಮನಾದ ಸುಬ್ರಾಯ ಪೈ ಅವರ ಸಂಸಾರದ ಆಸರೆಯಲ್ಲಿ ಬಾಳನ್ನು ಕಳೆದರು. ಜೀವನದುದ್ದಕ್ಕೂ ಮುಗ್ಧರಾಗಿದ್ದು ಪಾಂಡಿತ್ಯದಿಂದ ಅಹಂಕಾರ ಪಡೆಯದೆ ಸಾಹಿತ್ಯ ಬಾಂಧವರ ನಡುವೆ ಬಂಧು ಬಳಗದವರ ನಡುವೆ 'ಮಗು' ವಿನಂತಹ ಬಾಳನ್ನು ಕಳೆದ ಗೋವಿಂದ ಪೈ ಅವರನ್ನು ಬನ್ನಂಜೆ ಗೋವಿಂದಾಚಾರ್ಯರು 'ಬೆಳ್ಳಿ ಮೀಸೆಯ ಮಗು' ಎಂದು ಕರೆದಿರುವುದು ಉಚಿತವಾಗಿಯೇ ಇದೆ.

ಸಾರಸ್ವತ ಮನೆತನದಲ್ಲಿ ಜನಿಸಿದ ಪೈ ಅವರು ಧನಕನಕ ಸಂಪತ್ತಿನಿಂದ ಮೆರೆಯದೆ ಜ್ಞಾನಾರಾಧನೆಯಲ್ಲಿ ಸಂಶೋಧನೆಯಲ್ಲಿ ಸಾರಸ್ವತ ಸಂಪತ್ತನ್ನು ಹೊಂದಿದ್ದ ಅವರು ಹೆಸರಿನಲ್ಲಿ ಪೈ ಆದರೂ, ಗುಣಸಂಪತ್ತಿನಲ್ಲಿ ಜ್ಞಾನ ಸಂಪತ್ತಿನಲ್ಲಿ ನವಕೋಟಿನಾರಾಯಣರು. ಎಲ್ಲರ್ಥದಲ್ಲೂ ಕುಲದಲ್ಲಿ ಗುಣದಲ್ಲಿ ವಿದ್ವತ್ತಿನಲ್ಲಿ ಸಾರಸ್ವತ ನಿಧಿ ಗೋವಿಂದ ಪೈ.

ಈ ಸಂದರ್ಭದಲ್ಲಿ ಗೋವಿಂದಪೈ ಅವರ ಸಾಹಿತ್ಯ ದೃಷ್ಟಿಯನ್ನು ನಾವು ಗಮನಿಸುವುದು ಅಗತ್ಯ. ಸಾಹಿತ್ಯ ಎಂದರೇನು? ಹೇಗಿರಬೇಕು ಎಂಬುದಕ್ಕೆ ಗೋವಿಂದ ಪೈ ಕೊಟ್ಟ ವಿವರಣೆ ಇದು.

"ಈ ಸಂಸಾರದಲ್ಲಿ ಸಾಹಿತ್ಯವು ಕಪ್ಪಾನೆ ನಿಕಷದಲ್ಲಿ ತೊಳಗುತ್ತಿರುವ ಚಿನ್ನದ ಒರೆಯಂತೆ ಇರಬೇಕು. ದಪ್ಪಾನೆ ಮುಗಿಲಲ್ಲಿ ಬೆಳಗುತ್ತಿರುವ ಮಿಂಚಿನ ಗೆರೆಯಂತೆ ಇರಬೇಕು. ಆ ಸಾಹಿತ್ಯವು ಸತ್ಯಂ-ಶಿವಂ ಸುಂದರಂ ಆಗಿರಬೇಕು. ಇವುಗಳಲ್ಲಿ ಮಧುರವೂ ಲಲಿತವೂ ಶಾಂತವೂ ಶೃಂಗಾರವೂ ಹಾಸ್ಯವೂ

ವೀರವೂ ರುದ್ರವೂ ಮೊದಲಾದ ಗುಣಗಳೆಲ್ಲ ಅಡಗಿದ್ದು ಮಳೆಬಿಲ್ಲಿನ ಏಳು ಬಣ್ಣಗಳ ಬೆರಕೆಯಿಂದ ನೇಸರಿನ ಬೆಳಕಾಗುವಂತೆ ಕೂಡಿದಲ್ಲೆ ಸಾಹಿತ್ಯ" ಈ ಮಾತು ಗೋವಿಂದ ಪೈ ಅವರ ಸಾಹಿತ್ಯಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ.

ಗೋವಿಂದ ಪೈ ಅವರ ಸಾಹಿತ್ಯ ಹೇಗೆ ಆನಂದಕಾರಿಯೋ ಅವರ ವ್ಯಕ್ತಿತ್ವ ಅಷ್ಟೇ ಮಾನವೀಯತೆಯಿಂದ ಕೂಡಿರುತ್ತೆ ಎಂದರೆ ತಪ್ಪಿಲ್ಲ. ಈ ಸಂದರ್ಭದಲ್ಲಿ ಎರಡು ಪ್ರಸಂಗಗಳು ನೆನಪಾಗುತ್ತವೆ.

ಪುತ್ತೂರು ದಸರಾ ಉತ್ಸವದಲ್ಲಿ ಭಾಷಣ ಮಾಡಲು ಕಾರಂತರು ಶ್ರೀರಂಗರನ್ನು ಕರೆಯಿಸಿದ್ದರು. ಪೈ ಅವರು ವೇದಿಕೆ ಮೇಲಿದ್ದರು. ಶ್ರೀರಂಗರ ಭಾಷಣ ಆದಮೇಲೆ ಪೈ ಅವರು ಶ್ರೀರಂಗರನ್ನು ತಬ್ಬಿಕೊಂಡು ಅಭಿನಂದಿಸಿದರು. ತಕ್ಷಣ ಒಂದು ಹೆಜ್ಜೆ ಹಿಂದೆ ಸರಿದು ಶ್ರೀರಂಗರನ್ನು ದಿಟ್ಟಿಸಿ ಹೇಳಿದರು. "ನನಗೆ ಅನುಮಾನ ಬಂದಿತ್ತು. ನಿಮ್ಮ ಮುಖವೂ ಬಾಡಿದೆ. ಮೈಯೆಲ್ಲ ಕೆಂಡ ಆಗಿದೆ. ಜ್ವರ ನಿಮಗೆ" ಎಂದು ಹೇಳಿದವರೇ ತಕ್ಷಣ ಮುಂದಿನ ಕಾರ್ಯಗಳಲ್ಲಿ ಎಲ್ಲ ರೀತಿಯಿಂದಲೂ ಅವಸರ ಮಾಡಿ ಶ್ರೀರಂಗರನ್ನು ತಮ್ಮ ನಿವಾಸಕ್ಕೆ ಕರೆತಂದು ಕಷಾಯ ಕುಡಿಸಿ ಶುಶ್ರೂಷೆ ಮಾಡಿದರು. ಅಂತಃಕರಣದ ಆತಿಥ್ಯ ಅವರದು.

ಇನ್ನೊಂದು ಪ್ರಸಂಗ: ಆ. ನೇ. ಉಪಾಧ್ಯೆ ಗೋವಿಂದ ಪೈ ಅವರ ಹಾಗೆ ಬಹುಭಾಷಾ ವಿದ್ವಾಂಸರು. ಉಪಾಧ್ಯೆ ಮತ್ತು ಪೈಗಳು ಭಂಡಾರಕರ್ ಪ್ರಾಚ್ಯ ವಿದ್ಯಾಶಾಲೆಯಲ್ಲಿ ಮೊದಲ ಬಾರಿಗೆ ಭೇಟಿ ಆದ ಪ್ರಸಂಗ ಈ ಹೊತ್ತಿಗೂ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ಅದನ್ನು ಉಪಾಧ್ಯೆ ಅವರ ಬಾಯಿಂದಲೇ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಗೋವಿಂದ ಪೈ ಸ್ಮಾರಕ ಉಪನ್ಯಾಸದಲ್ಲಿ ಕೇಳಿದ ನೆನಪು ಅನೇಕರಿಗಿದೆ. ಕನ್ನಡ ಸಾಹಿತ್ಯದ ಪ್ರಾಚೀನತೆ ಮತ್ತು ಇತರ ಕೆಲವು ವ್ಯಕ್ತಿಗಳ ಕಾಲಗಳ ಕಾಲ ವಿಚಾರಗಳಲ್ಲಿ ಪೈ ಅವರ ವಾದಗಳನ್ನು ತನ್ನದೇ ಆದ ಆಧಾರಗಳ ಮೇಲೆ ಉಪಾಧ್ಯೆ ಅವರು ಹಲವಾರು ಲೇಖನಗಳಲ್ಲಿ ಖಂಡಿಸಿದ್ದರು. ಇಂಥ ಸಂದರ್ಭದಲ್ಲಿ ಇಬ್ಬರೂ ಆಕಸ್ಮಿಕವಾಗಿ ಭಂಡಾರಕರ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಬೇರೆ ಬೇರೆ ಕೋಣೆಗಳಲ್ಲಿ ವ್ಯಾಸಂಗ ನಿರತ ರಾಗಿದ್ದರು ಇಬ್ಬರು ವಿದ್ವಾಂಸರನ್ನು ಪಿ.ಕೆ. ಗೋಡೆ ಎಂಬ ಮಹಾರಾಷ್ಟ್ರದ ವಿದ್ವಾಂಸರು ಪರಿಚಯಿಸಿದರು. ಉಪಾಧ್ಯೆ ಅವರ ಬಳಿ ಗೋಡೆ ಅವರು

ಹೋಗಿ, 'ನಿಮ್ಮವರೇ ಆದ ಗೋವಿಂದ ಪೈ ಇವರು ಬಂದಿದ್ದಾರೆ ಇಲ್ಲೇ ಪಕ್ಕದ ಕೋಣೆಯಲ್ಲಿದ್ದಾರೆ. ನೀವು ಅವರನ್ನು ಕಂಡಿದ್ದೀರಾ' ಎಂದು ಕೇಳಿದರು. ಕೂಡಲೇ ಉಪಾಧ್ಯೆ ಅವರು. ಅವರನ್ನು ಬಲ್ಲೆ ಆದರೆ ಅವರ ಮುಖ ಪರಿಚಯ ಇಲ್ಲ, ಖಂಡಿತವಾಗಿ ಭೇಟಿ ಮಾಡಿಸಿ, ಎಂದರು. ಉಪಾಧ್ಯೆ ಅವರನ್ನು ಪೈ ಅವರಿಗೆ ಪರಿಚಯ ಹೇಳಿ ಭೇಟಿ ಮಾಡಿಸಿದರು. ಪೈ ಅವರು ಉಪಾಧ್ಯೆ ಎಂದು ತಿಳಿದೊಡನೆ ಆನಂದಾತಿಶಯದಿಂದ 'ಓಹ್ । ನೀವು ನನಗಿಂತ ಎಷ್ಟೋ ಪಾಲು ದೊಡ್ಡವರು ಎಂದು ತಿಳಿದಿದ್ದೆ ನಿಮ್ಮ ಲೇಖನಗಳನ್ನು ಓದಿ. ನೀವಿಷ್ಟು ಕಿರಿಯ ವಯಸ್ಸಿನಲ್ಲಿ ಅದೆಷ್ಟು ಅಗಾಧ ಪಾಂಡಿತ್ಯ ಗಳಿಸಿದ್ದೀರಿ!' ಎಂದು ಗಾಢವಾಗಿ ಉಪಾಧ್ಯೆ ಅವರನ್ನು ಅಪ್ಪಿಕೊಂಡರು. ಆನಂದಬಾಷ್ಪ ಸುರಿಸಿದರು. ಆ ಸಂದರ್ಭವನ್ನು ನೆನೆದು ಉಪಾಧ್ಯೆ ಹೇಳಿದರು. 'ಅವರ ಆತ್ಮೀಯ ಗಾಢಾಲಿಂಗನದ ಅಮೃತಾನುಭವ ಹೇಗಿತ್ತು ಎಂದರೆ ನನ್ನ ಹೆಂಡತಿಯ ಅಪ್ಪುಗೆಯ ಸುಖಕ್ಕಿಂತ ಮಿಗಿಲಾದ ಅನುಭವ ಅದು' ಎಂದಿದ್ದರು. ತಮ್ಮ ವಿರುದ್ಧ ಲೇಖನ ಬರೆದ ವಿದ್ವಾಂಸರನ್ನು ಇಷ್ಟೊಂದು ಆತ್ಮೀಯತೆಯಿಂದ ಮೊದಲ ಬಾರಿಗೆ ಕಂಡಾಗ ಅಪ್ಪಿ ಆನಂದಿಸಿದವರು ಎಷ್ಟು ಜನ ಇದ್ದಾರೆ ನಮ್ಮಲ್ಲಿ?

ಗೋವಿಂದ ಪೈ ಅವರಲ್ಲಿ ಪಾಂಡಿತ್ಯಕ್ಕೆ ತಕ್ಕಂತೆ ವಿನಯಶೀಲತೆ ಇತ್ತು. ಅಂತೆಯೇ ತಾವು ಹೇಳಿದ್ದು, ಬರೆದಿದ್ದು ವಾದಿಸಿದ್ದು ತಪ್ಪಾಗಿ ಕಂಡು ಬಂದಾಗ ನಿರ್ಮತ್ಸರವಾಗಿ ತಪ್ಪೊಪ್ಪಿಗೆ ನೀಡೋದು ಅವರ ವೈಶಿಷ್ಟ್ಯವಾಗಿತ್ತು. ಸತ್ಯ ಶೋಧಕರಾದ ಅವರು ಸದಾ ಸತ್ಯಕ್ಕೆ ತಲೆ ಬಾಗುತ್ತಿದ್ದರು. ನಾನು ಹೇಳಿದ್ದೇ ಸರಿ ಎಂಬ ಹಠಭಾವ ಅವರಲ್ಲಿ ಇರಲಿಲ್ಲ.

ಒಮ್ಮೆ ಕೀರ್ತನಕೇಸರಿ ಭದ್ರಗಿರಿ ಕೇಶವದಾಸರು ಶ್ರೀ ರಾಮಚಂದ್ರ ಶೆಣ್ಯೆ ಎಂಬುವರ ಮನೆಯಲ್ಲಿ ಹರಿಕಥೆ ಮಾಡುತ್ತಿದ್ದರು. ಹರಿಕಥಾ ವಿಷಯ ಸಮರ್ಥ ರಾಮದಾಸರ ಹರಿಕಥೆ. ಆ ಕೀರ್ತನ ಶ್ರವಣದಲ್ಲಿ ಗೋವಿಂದ ಪೈ ಅವರೂ ಭಾಗವಹಿಸಿದ್ದರು. ಕಥೆಯ ನಡುವೆ ಗೋವಿಂದ ಪೈ ತಮ್ಮ ಟಿಪ್ಪಣಿ ಸೇರಿಸುತ್ತಿದ್ದರು. ಮೆಚ್ಚುಗೆಯ ಉದ್ಗಾರಗಳನ್ನು ಎಳೆಯುತ್ತಿದ್ದರು. ಪೈ ಅವರ ನುಡಿಗಳಿಗೆ ಜನ ತಲೆದೂಗುತ್ತಿದ್ದರು. ಕಥೆಯ ಮಧ್ಯೆ ಕೇಶವದಾಸರು "ಕ್ರಿ.ಶ. ೧೬೪೮ನೆಯ ಮಾಘ ಪಂಚಮಿಯಂದು ಸಮರ್ಥ ರಾಮದಾಸರು ಸಜ್ಜನಗಡದಲ್ಲಿ ಶ್ರೀ ರಾಮಲಕ್ಷ್ಮಣಾದಿ ಮೂರ್ತಿಗಳನ್ನು ಪ್ರತಿಷ್ಠೆಗೈದರು ಎಂದು

ಕಥೆಯಲ್ಲಿ ಹೇಳುತ್ತಿದ್ದಾಗಲೇ ಇಸವಿಗಳ ಸಾಗರವಾದ ಪೈ ಅವರು ತಲೆ ತುರಿಸಿಕೊಳ್ಳುತ್ತಾ "ತಾಳು ತಾಳು, ತಾಳು ಏನೆಂದೆ? ೧೬೮೧?" ಎಂದು ಕೇಳಿದರು. ಆಗ ಕೇಶವದಾಸರು ಹಿಂಜರಿಯುತ್ತಲೇ ಹೇಳಿದರು "ನನಗೆ ಹಾಗೆ ಓದಿದ ನೆನಪು ಅವರು ೧೬೦೮ ರಲ್ಲಿ ಚೈತ್ರ ಶುದ್ಧನವಮಿಯಂದು ಹುಟ್ಟಿದುದು. ಕ್ರಿ.ಶ. ೧೬೮೧ ಮಾಘ ನವಮಿಯಂದು ರಾಮಪ್ರತಿಷ್ಠೆಗೈದು ನಾಲ್ಕೇ ದಿನದಲ್ಲಿ ಎಂದರೆ ಮಾಘ ನವಮಿಯಂದು ರಾಮನಲ್ಲಿ ಐಕ್ಯರಾದ ರೆಂದು ಡಾ. ರಾನಡೆ ಅವರು ಮಹಾರಾಷ್ಟ್ರ ಸಂತರ ಪರಮಾರ್ಥ ಪಥದಲ್ಲಿ ಓದಿದ್ದು ನೆನಪು. ತಪ್ಪಿದ್ದರೆ ಕ್ಷಮಿಸಿ" ಎಂದರು.

ಪೈ ಅವರು ತಲೆದೂಗಿಸುತ್ತಾ "ಹೌದು, ಹೌದು, ಅದು ಸರಿ ಇತ್ತೀಚೆಗೆ ವೃದ್ಧಾಪ್ಯದಿಂದ ಸ್ಮರಣಶಕ್ತಿಯೇ ಕಮ್ಮಿ ಆಗಿದೆ. ಕಥೆ ಮುಂದುವರಿಸು" ಎಂದರು. ಆ ದಿನದ ಕಥೆ ಮುಕ್ತಾಯವಾದ ಬಳಿಕ ಪೈ ಅವರು ಪ್ರೇಮದಿಂದ ಕೇಶವದಾಸರ ಬೆನ್ನು ಸವರಿದರು.

ಪೈ ಅವರ ಮಾನವೀಯ ಗುಣಗಳಲ್ಲಿ ಕಾರುಣ್ಯ ಭಾವ ಒಂದು ವಿಶೇಷ ಸಂಗತಿ ದೀನದಲಿತರಿಗೆ ನೆರವು ನೀಡುವುದು ಅವರ ಸಹಜ ಜಾಯಮಾನ ವಾಗಿತ್ತು. ನಮ್ಮಲ್ಲಿ ಅನೇಕರು ಬರಹಗಳಲ್ಲಿ ದೀನದಲಿತರು, ಅನಾಥರು, ಭಿಕ್ಷುಕರು, ದುಃಖಿಗಳ ಬಗ್ಗೆ ಪುಟಗಟ್ಟಲೆ ಬರೆದು ಕಣ್ಣೀರು ಬರಿಸುವ ಹಾಗೆ ವರ್ಣಿಸುವವರಿದ್ದಾರೆ. ಆದರೆ ನಿಜ ಜೀವನದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಬಾಳಿದವರೇ ಎಷ್ಟೋ ಜನ. ಗೋವಿಂದ ಪೈ ಅವರು ಎಂದೂ ಆ ಗುಂಪಿಗೆ ಸೇರಿದವರಲ್ಲ. ಅವರ ಕೃತಿಗಳಲ್ಲಷ್ಟೇ ಕರುಣಾಧಾರೆ ಹರಿದಿರುವುದು ಅಲ್ಲದೆ ಅವರ ನಿತ್ಯ ಜೀವನದಲ್ಲಿ ಕಾರುಣ್ಯ ಉಕ್ಕಿ ಹರಿದಿದೆ. ಪೈಗಳು ಭಿಕ್ಷುಕರು, ಅನಾಥರು, ದುಃಖಿಗಳು ಎಂದರೆ ಆರ್ದ್ರಹೃದಯಿಗಳಾಗುತ್ತಿದ್ದರು. ಅವರ ಮನೆಯಿಂದ ಯಾರೊಬ್ಬರೂ ಬರಿಗೈಯಿಂದ ಹಿಂತೆರಳಿಲ್ಲ. ಮನೆಯಿಂದ ಹೊರಗೆ ಹೊದಾಗ ಚಿಲ್ಲರೆ ನಾಣ್ಯಗಳ ಸಂಗ್ರಹವನ್ನೇ ಹೊತ್ತು ತರುತ್ತಿದ್ದರು. ದಾರಿಯುದ್ದಕ್ಕೂ ಇದ್ದ ಭಿಕ್ಷುಕರಿಗೆಲ್ಲ ಭಿಕ್ಷೆ ನೀಡುತ್ತಿದ್ದರು. ಕೊಡಿಯಾಲಬೈಲಿನ ಚರ್ಚಿನ ಬಳಿ ಅಡ್ಡರಸ್ತೆಯಲ್ಲಿ ಕುಷ್ಟರೋಗಿಯೊಬ್ಬನು ಚಿಕ್ಕಗಾಡಿಯಲ್ಲಿ ಕುಳಿತು ಭಿಕ್ಷೆ ಬೇಡುತ್ತಿದ್ದುದನ್ನು ಆ ಕಾಲದಲ್ಲಿ ಹಲವರು ಬಲ್ಲರು. ಈತನಿಗೆ ಪೈಗಳು ತಪ್ಪದೆ ಪ್ರತಿವರ್ಷವೂ ಒಂದು ಮುಂಡು, ಮತ್ತೊಂದು ಶರ್ಟನ್ನು ಮರೆಯದೆ ಕೊಡುತ್ತಿದ್ದರು. ಅವರು ಅದನ್ನು ಕೊಡಲು ತಂದಾಗ ಆತನಿಲ್ಲದಿದ್ದರೆ ಭಿಕ್ಷೆ

ಬೇಡಲು ಬೇರೆಲ್ಲೋ ಹೋಗಿದ್ದರೆ ತಮ್ಮ ಮಿತ್ರರಾದ ರಾಜಾರಾಮ ಮಲ್ಯರ ಕೈಗೆ ಕೊಟ್ಟು ಮರುದಿನ ಅವನಿಗೆ ಕೊಡುವಂತೆ ಹೇಳುತ್ತಿದ್ದರು. ಆಗ ಆ ಭಿಕ್ಷುಕನು. "ಪೈಗಳು ಹೇಗಿದ್ದಾರೆ? ಅವರು ಬಂದಾಗ ನಾನಿಲ್ಲದೆ ಹೋದೆನಲ್ಲಾ, ದೇವರು ಅವರಿಗೆ ಒಳ್ಳೆಯದು ಮಾಡಲಿ" ಎನ್ನುತ್ತಿದ್ದನಂತೆ.

ಪೈ ಅವರ ಧರ್ಮಕಾರ್ಯಕ್ಕೆ ಧರ್ಮ, ಜಾತಿ, ಮತ, ಕುಲಗೋತ್ರ ಯಾವುದೂ ಅಡ್ಡಿ ಆಗುತ್ತಿರಲಿಲ್ಲ. ಅವರ ಮನಸ್ಸಿನಲ್ಲಿ ಅದು ಬರುತ್ತಿರಲಿಲ್ಲ. ಮಂಜೇಶ್ವರದ ಒಬ್ಬ ಮುಸ್ಲಿಂ ಅಜ್ಜಿಗೆ ಕಾಲುಗಳು ಬಲಹೀನವಾಗಿ ನಡೆಯಲು ಅಸಾಧ್ಯವಾದಾಗ ಪೈ ಅವರು, ಆಕೆಗೆ ಒಂದು ಮರದ ಗಾಡಿಯನ್ನು ಮಾಡಿಸಿಕೊಟ್ಟಿದ್ದರು. ಇಂಥ ಸೇವೆಗಳು ಲೆಕ್ಕವಿಲ್ಲದಷ್ಟಿವೆ. ಅಷ್ಟೇ ಅಲ್ಲದೆ ತಮ್ಮ ಬಂಧುಮಿತ್ರರಲ್ಲಿ ಹಾಸಿಗೆ ಹಿಡಿದವರ ಆರೈಕೆಯನ್ನು ಹಗಲೂ ರಾತ್ರಿ ಬಿಡದೆ ಮಾಡುತ್ತಿದ್ದರು. "ದೇವರ ಪ್ರಸಾದವನ್ನು ರೋಗಿಯ ಹಣೆಗೆ ಹಚ್ಚಿ ನೀನು ಬೇಗನೆ ಗುಣಮುಖವಾಗುವೆ ದೇವರು ಒಳ್ಳೆಯದು ಮಾಡಲಿ" ಎಂದು ಆಶೀರ್ವದಿಸುತ್ತಿದ್ದರು. ನಿಜವಾಗಿ ಗೋವಿಂದ ಪೈ ಕರುಣಾಮಯರೇ ಸೈ.

ಪೈ ಅವರು ಸಂಶೋಧನೆ, ಚಿಂತನೆ, ಕವಿಗಳ ಕಾಲನಿರ್ಣಯಗಳಲ್ಲಿ ನಿಮಗ್ನರಾಗಿದ್ದರೂ, ಚುಟುಕು ಹಾಸ್ಯಗಾರರಾಗಿ ಒಮ್ಮೊಮ್ಮೆ ಹಾಸ್ಯ ಚಟಾಕಿ ಹಾರಿಸುತ್ತಿದ್ದುದು ಉಂಟು.

ಒಮ್ಮೆ ಪ್ರಸಿದ್ಧ ಗಮಕಿಗಳಾಗಿದ್ದ ನಂ. ಅಶ್ವತ್ಥನಾರಾಯಣರಾಯರು ಪೂಜ್ಯ ಗೋವಿಂದ ಪೈ ಅವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ ಎಂದು ಶ್ರೀಮತಿ ರಮಾಬಾಯಿ ಅವರಿಗೆ ಪತ್ರ ಬರೆಯುವಾಗಲೆಲ್ಲ ಬರೆಯುತ್ತಿದ್ದರು. ಅದನ್ನು ಆಕೆ ಗೋವಿಂದ ಪೈಗಳಿಗೆ ಓದಿ ಹೇಳಿದಾಗ, ಅವರು "ಪಾಪ ಪೂಜ್ಯ ಎಂದರೆ ಏನು ಗೊತ್ತುಂಟೊ? ಸೊನ್ನೆ ಎಂದರ್ಥ. ನನಗೇನೂ ತಿಳಿಯದು ಎಂದರ್ಥ. ಸಂಪೂಜ್ಯ ಎಂದರೆ ಪೂರ್ತಿ ಗೊತ್ತಿಲ್ಲ" ಎಂದು ಹೇಳಿ ನಗುತ್ತಿದ್ದರು.

ಇನ್ನೊಮ್ಮೆ ಅವರು ಉಪನ್ಯಾಸ ನೀಡಿದಾಗ ಅದನ್ನು ಕೇಳಿದ ಹಿರಿಯರೊಬ್ಬರು ನಿಮ್ಮ ಉಪನ್ಯಾಸ ತುಂಬಾ ಉದ್ಬೋಧಕವಾಗಿತ್ತು ಒಂದೇ ಸಮನೆ ಬಿಡದೆ ಕೇಳಿದ್ದೇನೆ ಎಂದು ಮೆಚ್ಚುಗೆ ಸೂಚಿಸಿದರು. ಆಗ ಪೈ ಹೇಳಿದರು. "ನನ್ನ ಭಾಷಣ ಕೇಳಬೇಕಾದರೆ ಕೇಳುವವರು ನಿಜವಾಗಿಯೂ ತುಂಬ ತಾಳ್ಮೆಯುಳ್ಳವರಾಗಿರಬೇಕು. ಇಲ್ಲವೇ 'ಅಮೃತಾಂಜನ ಡಬ್ಬಿಯನ್ನು ಜೊತೆಗೆ ತರಬೇಕು" ಎಂದಿದ್ದರು.

ಸನ್ಮಾನ ಪ್ರಶಸ್ತಿಗಳಿಗೆ ಮೈಲಿಗಟ್ಟಲೆ ದೂರವಿದ್ದವರು ಗೋವಿಂದ ಪೈ ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಒಪ್ಪಿಸಬೇಕಾದರೆ ಹರಸಾಹಸ ಮಾಡಬೇಕಾಯಿತು. ಎಂ.ಆರ್. ಶ್ರೀ ಅವರು ಕೊನೆಗೆ ಯಶಸ್ವಿಗಳಾದರು ಅನ್ನಿ. ಇದಕ್ಕೆ ಅವರದೇ ಹಲವಾರು ಕಾರಣಗಳು ಅವರಿಗಿದ್ದವು.

ನಾಡಿನ ಏಕೀಕರಣದ ಬಗ್ಗೆ ಭಾರತದ ಸ್ವಾತಂತ್ರ್ಯದ ಬಗ್ಗೆ ಅವರಿಗೆ ಸ್ವಂತ ಅಭಿಪ್ರಾಯಗಳಿದ್ದವು.

ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ್ದನ್ನು ಅವರು ಸರ್ವಥಾ ಒಪ್ಪಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಅವರ ದೃಷ್ಟಿಯಲ್ಲಿ ನಿಜವಾಗಿ ಬಂದಿರಲಿಲ್ಲ. ಇದಕ್ಕೆ ನಿದರ್ಶನವೆಂದರೆ ಅನಕೃ- ವಿ.ಸೀ. ಅವರು ಪೈ ಅವರೊಂದಿಗೆ ನಡೆಸಿದ ಮಾತುಕತೆ.

೧೯೪೦ರಲ್ಲಿ ಪುತ್ತೂರಿನ ದಸರಾ ಉತ್ಸವಕ್ಕೆ ಕಾರಂತರು ಕರೆದಾಗ ಅನಕೃ ವಿ.ಸೀ. ಮತ್ತಿತರರು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆಗ ಮಂಜೇಶ್ವರಕ್ಕೂ ಭೇಟಿ ಇತ್ತರು. ಆ ಸಮಯದಲ್ಲಿ ಸಾಹಿತ್ಯ ಸಮ್ಮೇಳನದ ಆಧ್ಯಕ್ಷತೆಗೆ ಅವರನ್ನು ಒಪ್ಪಿಸಬೇಕೆಂದು ನಿರ್ಧರಿಸಿ, ವಿ.ಸೀ. ಕೇಳಿದಾಗ ಪೈ ಹೇಳಿದರು. 'ನನಗೆ ಖಂಡಿತ ಅಂಥ ಗೌರವ ಬೇಕಿಲ್ಲ' ಎಂದರು.

'ದೇಶ ನಿಮ್ಮನ್ನು ಬಯಸುತ್ತದೆ' ಎಂದು ವಿಸೀ ಹೇಳಿದರು. 'ದೇಶ ಪರತಂತ್ರವಾಗಿದೆ ಸ್ವತಂತ್ರವಾಗಲಿ ಆಗ ನೋಡೋಣ' ಎಂದರು. ಪೈ 'ನೀವು ಅಧ್ಯಕ್ಷರಾದರೆ ನಮಗೆಲ್ಲ ನಾಡಿನವರಿಗೆಲ್ಲ ಬಹಳ ಸಂತೋಷವಾಗುತ್ತದೆ' ಎಂದು ಅನಕೃ ಹೇಳಿದಾಗ ಆ ವಿಷಯ ಈಗ ಬೇಡಿ ಮಾರಾಯರೇ ಎಂದು ಪೈ ಅವರು ಮಾತು ಮುಗಿಸಿಬಿಟ್ಟರು.

ಮತ್ತೆ ೧೯೪೯ರಲ್ಲಿ ನವೆಂಬರ್‌ನಲ್ಲಿ ಧರ್ಮಸ್ಥಳದ ದೀಪೋತ್ಸವದ ಸಂದರ್ಭದಲ್ಲಿ ಅನಕೃ ಹೋಗಿದ್ದಾಗ, ಆ ಸಮಯದಲ್ಲಿ ಪೈಗಳನ್ನು ಕಂಡು ಹಿಂದಿನ ಮಾತನ್ನು ಜ್ಞಾಪಿಸಿದರು. "ಹಿಂದೆ ಸಮ್ಮೇಳನದ ಅಧ್ಯಕ್ಷತೆಗೆ ನಾನು ವಿ.ಸೀ. ಕರೆದಾಗ ಭಾರತಕ್ಕೆ ಸ್ವಾತಂತ್ರ್ಯ ಬರಲಿ ಆಗ ನೋಡೋಣ ಎಂದಿದ್ದಿರಿ. ಈಗ ಏನು ಅಡ್ಡಿ, ದೇಶ ಸ್ವತಂತ್ರ ಆಗಿದೆಯಲ್ಲಾ? "ಎಂದರು. ಆಗ ಪೈ- ಅನಕೃಗೆ ಕೇಳಿದರು." ದೇಶ ಸ್ವತಂತ್ರವಾಯಿತೇ ನಿಜವಾಗಿಯೂ? ಮಾರ್ಮಿಕವಾಗಿ ಪ್ರಶ್ನೆ ಕೇಳಿದಾಗ ಅನಕೃ ಸುಮ್ಮನಾಗಬೇಕಾಯಿತು.

ಸನ್ಮಾನಗಳಿಗೆ ಪ್ರಶಸ್ತಿಪತ್ರಗಳ ಬಗ್ಗೆ ಅವರಿಗೆ ಒಲವು ಇರಲಿಲ್ಲ. ಇಂದು ನಮ್ಮಲ್ಲಿ ಅದಕ್ಕೆ ಬಾಯಿಬಾಯಿ ಬಿಡುವ ಗಣ್ಯರಿದ್ದಾರೆ ಸಾಹಿತಿಗಳಿದ್ದಾರೆ. ಪೈ ಅವರ ಸ್ವಭಾವ ಇವುಗಳಿಗೆ ದೂರವಾದುದ್ದು ಬೈಕಾಡಿ ವೆಂಕಟಕೃಷ್ಣರಾಯರಿಗೆ ಬರೆದ ಪತ್ರವೊಂದರಲ್ಲಿ ಪೈ ಹೇಳಿರುವ ಮಾತುಗಳು ಗಮನಿಸುವಂಥದ್ದು.

"ಮೈಸೂರು, ಬೆಂಗಳೂರು, ಮಂಗಳೂರು ಮುಂತಾದ ಊರುಗಳಲ್ಲಿ ಕೊಟ್ಟ ಮಾನಪತ್ರಗಳೂ ನಮ್ಮ ಮನೆಯಲ್ಲೆಲ್ಲ ಗೋಡೆ ಗೋಡೆಗಳಲ್ಲೆಲ್ಲ ತೂಗುತ್ತಿವೆ. ಇನ್ನು ತೂಗಿಸುವೆನೆಂದರೆ ಎಡೆ ಇಲ್ಲ... ಮಾನಪತ್ರವೆಂಬ ಹಳೆಯ ಉಪಚಾರವನ್ನು ತೀರ ವಿಸರ್ಜಿಸಿ ಆ ಬಗ್ಗೆ ನನಗೆ ತಾವು ದೃಢವಾದ ನಂಬುಗೆಯನ್ನು ಮುಂದಾಗಿ ಇತ್ತಲ್ಲದೆ ತಮ್ಮ ಕಡೆಗೆ ಹೊರಡುವರೆ ನನ್ನ ಮನಸ್ಸು ಸರ್ವಥಾ ಒಪ್ಪದು. ದಯಮಾಡಿ ನನ್ನ ಇದೊಂದು ವಿನಂತಿಯನ್ನು ಮರೆಯಲಾಗದು..." ಎಂದು ಬೈಕಾಡಿಯವರು ಸಮಾರಂಭಕ್ಕೆ ಕರೆದು ಸನ್ಮಾನ ಮಾಡಿ ಮಾನಪತ್ರ ಒಪ್ಪಿಸುತ್ತೇವೆ ಎಂದು ತಿಳಿಸಿದ್ದಕ್ಕೆ ಬರೆದ ಉತ್ತರವಿದು. ಕೀರ್ತಿ ಕಾಮ ಪ್ರಶಂಸೆ ಪೈ ಅವರಿಗೆ ಒಗ್ಗುತ್ತಿರಲಿಲ್ಲ.

ಪತ್ರ ಎಂದೊಡನೆ ನೆನಪಾಗುವುದು ಗೋವಿಂದ ಪೈಗಳ ಪತ್ರವ್ಯವಹಾರ. ನಾನು ಪತ್ರ ಬರೆದೆ ಉತ್ತರವೇ ಇಲ್ಲ ಎಂಬುದು ಇಂದು ಅನೇಕ ಸಾಹಿತಿಗಳಿಗೆ ಪತ್ರ ಬರೆದವರ ಗೋಳಾಟ ಕೇಳಬಹುದು. ಆದರೆ ಪೈ ಅವರಿಗೆ ಪತ್ರ ಬರೆದಿದ್ದೆ ಉತ್ತರ ಬಂದಿಲ್ಲ ಅನ್ನುವವರು ಒಬ್ಬರೂ ಇಲ್ಲ. ಅಷ್ಟೇಕೆ ಅವರಿಗೆ ಪತ್ರ ಬರೆದರೆ ತಡವಾಗಿ ಉತ್ತರ ಬರುತ್ತಿರಲಿಲ್ಲ. ಪತ್ರವ್ಯವಹಾರಕ್ಕಾಗಿ ಅಂಚೆ ಇಲಾಖೆಯರು ಸಾಹಿತಿಗಳಿಗೆ ಯಾರಿಗಾದರೂ ಪ್ರಶಸ್ತಿ ನೀಡುತ್ತೇವೆ ಎಂದರೆ ಅದು ಎಲ್ಲ ಕಾಲದಲ್ಲೂ ಸಲ್ಲುವುದು ಗೋವಿಂದ ಪೈ ಅವರಿಗೇನೆ. ಈ ಬಗ್ಗೆ ಒಂದು ಪ್ರಸಂಗ ಹೇಳಬೇಕು.

ಒಮ್ಮೆ ಗೋವಿಂದ ಪೈ ಮಿತ್ರರೊಬ್ಬರು ಪೈ ಅವರ ಮನೆಗೆ ಹೊರಟಿದ್ದರು. ಅವರಿಗೆ ಹೇಳಿದರು 'ನಾನು ಬರೆಯಬೇಕಾದ ಪತ್ರಗಳು ಮುಗಿದಿವೆ' ಅದನ್ನು ಅಂಚೆಯ ಪೆಟ್ಟಿಗೆಗೆ ಹಾಕಬೇಕು. ನಿಮ್ಮ ಜತೆಗೆ ಬರುತ್ತೇನೆ ಸ್ವಲ್ಪ ಕುಳಿತುಕೊಳ್ಳಿ ಎಂದರು. ಬಂದವರು ಹೇಳಿದರು "ನಾನು ಆಶ್ರಮಕ್ಕೆ ಹೋಗುತ್ತಿದ್ದೇನೆ ದಾರಿಯಲ್ಲೇ ಅಂಚೆ ಕಚೇರಿ ಇದೆ ನಾನು ನಿಮ್ಮ ಕಾಗದಗಳನ್ನು ಪೋಸ್ಟ್ ಮಾಡುತ್ತೇನೆ. ತಾವು ಏಕೆ ಶ್ರಮ ಪಡಬೇಕು" ಎಂದರು. ತಾವು ವಿಶ್ರಮಿಸಿ

ಕೊಳ್ಳೋಣವಾಗಲಿ' ಎಂದರು. ಆಗ ಪೈ ಹೇಳಿದ ಮಾತುಗಳು ಆದರ್ಶ ಪತ್ರ ಸಂಸ್ಕೃತಿಗೆ ಸಾಕ್ಷಿಯಾಗಿವೆ.

"ನಿಮಗೆ ನನ್ನ ವ್ರತ ತಿಳಿಯದು ನಮಗೆ ಬರೆದವರಿಗೆ ಕೂಡಲೇ ಉತ್ತರಿಸುವುದು. ಬರವಣಿಗೆಗೆ ನೇರಿಲು ಬಣ್ಣದ ಕಾಯಿಯನ್ನೇ ಬಳಸುವುದು. ಅಂತೆಯೇ ನಾನು ಬರೆದ ಕಾಗದಗಳನ್ನು ಸ್ವಲ್ಪವೂ ಪಾಲುಮಾರಿಕೆ ಮಾಡದೆ ನಾನೇ ಅಂಚೆಕಚೇರಿವರೆಗೆ ಹೋಗಿ ಅಂಚೆಯ ಪೆಟ್ಟಿಗೆಗೆ ಹಾಕುವುದು. ಈ ವ್ರತವನ್ನು ನಾನು ಬಹಳ ಕಾಲದಿಂದ ಅನುಸರಿಸುತ್ತಿರುವೆ. ಅದು ಸರಿಯೋ ಅಲ್ಲವೋ ಹೆರವರ ಕೈಗೆ ಕೊಟ್ಟು ಅಂಚೆ ಡಬ್ಬಿಗೆ ಹಾಕೆಂದರೆ ಕುತೂಹಲದಿಂದ ಅವರು ಬರೆದಿರುವ ಸಂಗತಿಯನ್ನು ಓದಬಹುದು; ಅಂಚೆ ಡಬ್ಬಿಗೆ ಹಾಕುವುದನ್ನು ಮರೆಯಬಹುದು; ಇದರಿಂದ ನನ್ನ ಉತ್ತರ ಕಾಯುತ್ತಿದ್ದವರಿಗೆ ವೃಥಾ ತೊಂದರೆ ಆಗಿ ನನ್ನ ವಿಷಯದಲ್ಲಿ ಅಗೌರವ ಮೂಡುತ್ತದೆ; ಸರ್ವಥಾ ಹಾಗಾಗಬಾರದು ಅಲ್ಲವೋ? ಆದುದರಿಂದ ಈ ಕೆಲಸ ಪ್ರಿಯವಾದುದು ನಾನೇ ಮಾಡುತ್ತೇನೆ" ಎಂದು ಹೇಳಿ ಪಾದರಕ್ಷೆಗಳನ್ನು ಹಾಕಿಕೊಂಡು ಛತ್ರಿಯನ್ನು ಬಿಚ್ಚಿ ಹಿಡಿದುಕೊಂಡು ಉರಿ ಬಿಸಿಲಲ್ಲಿ ನಡೆದುಕೊಂಡು ಬಂದವರ ಜತೆ ಹೊರಟರು. ಪೈಗಳು ಪತ್ರರವಾನೆಗೆ ಅಷ್ಟೇ ಅಲ್ಲ. ಅಂಚೆಡಬ್ಬಿಗೆ ಕಾಗದಗಳನ್ನು ಹಾಕುವಾಗಲೂ ವಿಳಾಸವನ್ನು ಒಮ್ಮೆ ಪರಿಶೀಲಿಸಿ ಒಂದೊಂದಾಗಿ ಡಬ್ಬಿಯೊಳಕ್ಕೆ ಇಳಿಯಬಿಡುತ್ತಿದ್ದರು. ಈ ಅಂಚೆ ವ್ರತ ಎಷ್ಟು ಮಂದಿ ಸಾಹಿತಿಗಳಲ್ಲಿ ಕವಿಗಳಲ್ಲಿ ಕಾಣಬಹುದು? ಅಂಥವರು ಇಲ್ಲವಂತಿಲ್ಲ ಆದರೆ ಬಹಳ ಅಪರೂಪ. ಶ್ರೀನಿವಾಸ ಹಾವನೂರು, ಜಿ.ಪಿ. ರಾಜರತ್ನಂ ಮೊದಲಾದವರು ಪ್ರಕಟಿಸಿರುವ ಗೋವಿಂದ ಪೈ ಪತ್ರಗಳನ್ನು ನೋಡಿದಾಗ ಕನ್ನಡದ ಪತ್ರಸಾಹಿತ್ಯದ ಜಗತ್ತಿನಲ್ಲಿ ಪೈ ಅವರನ್ನು ಸರಿಗಟ್ಟುವವರು ಕೆಲವೇ ಮಂದಿ ಎನ್ನಿಸುತ್ತದೆ. ಆ.ನೇ.ಉಪಾಧ್ಯೆ ಪತ್ರವ್ಯವಹಾರದಲ್ಲಿ ವಿಕ್ರಮ ಸಾಧಿಸಿದ್ದವರಲ್ಲಿ ಒಬ್ಬರು. ಅವರ ಪತ್ರ ವ್ಯವಹಾರ ಎಷ್ಟಿತ್ತು ಎಂದರೆ ಪೈ ಅವರಂತೆ ನಿಯತವಾಗಿ ಉತ್ತರಿಸುತ್ತಿದ್ದ ಅವರ ಪತ್ರ ರಾಶಿ ಕಂಡು ಅಂಚೆ ಇಲಾಖೆಯವರು ಅವರ ಮನೆ ಮುಂದೆ ಅವರಿಗಾಗಿ ಅಂಚೆ ಡಬ್ಬಿಯೊಂದನ್ನು ಇಟ್ಟಿದ್ದರಂತೆ. ಹಾವನೂರು "ನನ್ನ ಜೀವನಾನುಭವದಲ್ಲಿ ಮನ–ಮಾತು–ಕೃತಿಗಳ ಏಕಮಾತ್ರವಿದ್ದ ಬೇರೆ ಸಾಹಿತಿಗಳನ್ನು ನಾನು ಕಂಡಿಲ್ಲ ಎನ್ನಲು ಪೈ ಅವರ ಅಂಚೆ ಸಂಸ್ಕೃತಿಯು ಒಂದಾಗಿದೆ ಎನ್ನಿಸುತ್ತದೆ.

ಅಪಾರ ಪತ್ರಗಳನ್ನು, ನಾಡಗೀತೆ, ಧಾರ್ಮಿಕಗೀತೆ, ಭಾವಗೀತೆ, ಖಂಡಕಾವ್ಯ ನಾಟಕ, ಅನುವಾದ ಮುಂತಾದವನ್ನು ಬರೆದ ಅವರು ಮಹಾಕಾವ್ಯ ಏಕೆ ಬರೆದಿಲ್ಲ? ಎಂಬ ಪ್ರಶ್ನೆಗೆ ಉತ್ತರ ಕುವೆಂಪು ಅವರು ಪೈ ಬಗ್ಗೆ ಬರೆದ ಮಾತುಗಳಲ್ಲಿ ಸಿಗುತ್ತದೆ. ಕುವೆಂಪು ನುಡಿಗಳಿವು.

ಅವರೇನು ಬರೆದಿಹರು ಅಂತಹ ಮಹಾಕಾವ್ಯ
ಅವರು ಬರೆದುದು ಮಹತ್ ಕವಿತೆ ಇರದಿರಬಹುದು
ಅವರು ಬದುಕಿದುದೆಲ್ಲ ಮಹತ್ ಕವಿತೆಗಳೇ ಹೌದು
ಅವರೇ ತಾವೊಂದು ಗೊಮ್ಮಟ ಸಮ ಮಹಾಕಾವ್ಯ

'ಪ್ರಾಸವನೀಗಲೇ ತೊರೆದು ಬಿಡುವುದು ನಿಶ್ಚಯಂ, ಎಂಬ ನಿರ್ಧಾರ ದಿಂದ ಮುನ್ನಡೆದ ಕವಿ ಗೋವಿಂದ ಪೈ ಅವರು ತಮ್ಮ ಪ್ರಾಸರಹಿತ ಪದ್ಯ ರಚನೆಗೆ ಬಂದ ಪ್ರತಿಭಟನೆಗೆ ಉತ್ತರಿಸಿದ ರೀತಿ ಮಾರ್ಮಿಕವಾಗಿದೆ.

ಇಂದು ಒಬ್ಬನೇ ನಡೆವ ಮೇಕೆ ದಾರಿಯೇ
ಮುಂದೆ ತೇರು ಎಳೆವ ಹೆದ್ದಾರಿ

ಈ ಮಾತು ನಿಜವಾಯಿತು ಎಂಬುದನ್ನೆ ಆಧುನಿಕ ಕಾಲದ ಕವನಗಳೇ ಸಾಕ್ಷಿ ಯಾಗಿದೆ.

ಪೈ ಅವರು ತಮ್ಮ ಕವಿತೆಗಳು ಅಚ್ಚಾಗುವ ಬಗ್ಗೆ ಅವರದೇ ಆದ ರೀತಿಯಲ್ಲಿ ಅಚ್ಚಾಗಬೇಕೆಂದು ಬಯಸುತ್ತಿದ್ದರು ಕಠಿಣ ಪದಗಳಿಗೆ ತಾವೇ ಅರ್ಥ ನೀಡುತ್ತಿದ್ದರು. ಕರಡುಗಳನ್ನು ತಾವೇ ತಿದ್ದಲು ಬಯಸುತ್ತಿದ್ದರು. ಇದು ಪೈಗಳಲ್ಲಿ ಮಾತ್ರ ಕಂಡು ಬಂದ ವೈಶಿಷ್ಟ್ಯವಾಗಿದೆ.

ಪುಸ್ತಕಗಳ ಬಗ್ಗೆ ವಿಮರ್ಶೆ ಬರೆಯಲು ಮತ್ತು ಮುನ್ನುಡಿ ಬರೆಯಲು ಅವರು ಹಿಂಜರಿಯುತ್ತಿದ್ದರು. ಅದಕ್ಕೆ ಅವರು ಕೊಟ್ಟ ಕಾರಣಗಳು ಇಂದಿಗೂ ವಿಚಾರಣೀಯವಾಗಿವೆ. ಒಂದು ಸಂದರ್ಶನದಲ್ಲಿ ಈ ಬಗ್ಗೆ ಹೀಗೆ ಹೇಳಿದ್ದಾರೆ; "ವಿಮರ್ಶೆ ಅದೊಂದು ನಿಷ್ಠುರದ ಕೆಲಸ. ನನ್ನ ಮನಸ್ಸಿಗೆ ತಪ್ಪೆಂದು ಅದನ್ನು ತೋರಿಸದೆ ಇರಲು ನನ್ನಿಂದಾಗದು ಹಾಗೇ ಗ್ರೈದಲ್ಲಿ ವಿಪರೀತಾರ್ಥ ಮಾಡುತ್ತಾರೆ ಇಲ್ಲವೇ ರೇಗುತ್ತಾರೆ ಇದರ ಅನುಭವವೂ ನನಗಿದೆ. ಇನ್ನು ಮುನ್ನುಡಿ ಬರೆಯುವುದಾದರೆ ಮುನ್ನುಡಿಕಾರನು ಆ ಪುಸ್ತಕದ ತಪ್ಪು ಕೊರತೆಗಳನ್ನು ಎತ್ತಿ ತೋರಿಸಿ ವಿಮರ್ಶಿಸಬೇಕಿಲ್ಲ. ಬದಲು ಲೇಖಕನನ್ನು ಸ್ವಲ್ಪ ಬೆನ್ನುತಟ್ಟಿ

ಪ್ರೋತ್ಸಾಹಿಸಬೇಕು. ನನಗೆ ಇದಾವುದೂ ಬೇಡ. ಇತ್ತ ವಿಮರ್ಶೆ ಮಾಡಿ ಸತ್ಯ ಹೇಳಿ ನಿಂದೆಗೆ ಒಳಗಾಗುವುದೂ ಬೇಡ. ಅತ್ತ ಮುನ್ನುಡಿ ಬರೆಯಲು ಹೋಗಿ ಸತ್ಯ ಹೇಳಲಾರದೆ ಹೊಗಳುವುದು ಬೇಡ" ಎಂಬ ಪೈ ನಿಲುವು ಅನೇಕ ಹಿರಿಯ ಲೇಖಕರದೂ ಆಗಿದೆ.

ನಿಟ್ಟೂರು ಶ್ರೀನಿವಾಸರಾವ್ ಹೇಳುವಂತೆ "ಒಬ್ಬ ವ್ಯಕ್ತಿಯ ಕೃತಿಯಂತೆ ಪ್ರಜ್ಞೆ ಎನ್ನುತ್ತಾರೆ. ಖಂಡ ತುಂಡವಾದ ಅವರ ಮಾತಿನಂತೆಯೇ ಮನಸ್ಸಿನಂತೆಯೇ ಅವರ ಆಕೃತಿ. ಆ ನರೆತ ಬೆಳ್ಳಿ ಮೀಸೆ, ಆ ಸಿಂಹದಂಥ ರೂಪ, ತುಂಡು ತೋಳಿನ ಜುಬ್ಬ ಅಥವಾ ಬನಿಯನ್, ಉದ್ದದ ದಟ್ಟಿ ಕೆಲವು ವೇಳೆ ಛತ್ರಿ ಮಂಗಳೂರು ಚಪ್ಪಲಿ ಇಷ್ಟೆ ಅವರ ಪೋಷಾಕು ಏತಕ್ಕಾದರೂ ಬೆರಳು ಕೊಡವುತ್ತಾ ಮೀಸೆ ಕಡಿಯುತ್ತಾ ಬೀಡಿ ಸೇದುತ್ತಾ ಅವರು ಯಾವುದೋ ವಿಚಾರವನ್ನು ಹೊರಗೆಡಹುತ್ತಾ ಇದ್ದಾಗ ಅವರನ್ನು ನೋಡುವುದು ಒಂದು ಹಬ್ಬವಾಗುತ್ತಿತ್ತು. ಮನಸ್ಸು ಮಾತು, ನಡತೆಗಳಲ್ಲಿ ಅಂತರವಿಲ್ಲದ ಹಿರಿಮೆ ಅವರದು.

ಇಂಥ ಸಂಶೋಧಕ, ಬಹು ಭಾಷಾತಜ್ಞ, ಇತಿಹಾಸಜ್ಞ, ಕವಿ, ನಾಟಕಕಾರ, ಸಜ್ಜನ ಶಿರೋಮಣಿ, ಜೈನ ಬೌದ್ಧ ಸಾಹಿತ್ಯ ವಿಶಾರದ, ಜಪಾನಿ ಪಾಲಿ ಬಂಗಾಲಿ ಕೃತಿಗಳ ಅನುವಾದಕ, ಗೊಲ್ಗೊಥಾ, ವೈಶಾಖಿ, ಹೆಬ್ಬೆರಳು, ಗಿಳಿವಿಂಡು, ನಂದಾದೀಪ ಮುಂತಾದ ಕನ್ನಡದಲ್ಲಿ ಇತಿಹಾಸ ನಿರ್ಮಿಸಿದ ಕೃತಿಗಳ ರಚಕ, ಮಂಜೇಶ್ವರ ಗೋವಿಂದ ಪೈ ಅವರು ನಾಡಿನ ಜನತೆಯ ಹೃದಯಾಂಗಣದಲ್ಲಿ ಸದಾ ಬೆಳಗುತ್ತಿರುವ ನಂದದ ಆನಂದದ ಸಾಹಿತ್ಯದ ನಂದಾದೀಪ.

ಆ ದಿನಗಳಲ್ಲಿ ಪ್ರಾಸ ತ್ಯಜಿಸಿದ ಗೋವಿಂದ ಪೈಗಳನ್ನು ಕೀಳು ಅಭಿರುಚಿಯಲ್ಲಿ ನಿಂದಿಸಿದ "ಪ್ರಾಸನಿಂದಕಂಗೆ ಕಟುವಾಣಿ" ಎಂಬ ಕವಿತೆ (ಗದಾಧರ ಮಧುರವಾಣಿ – ಫೆಬ್ರವರಿ ೧೯೧೯) ಪ್ರಕಟವಾಯಿತು. ಅದರ ಪೂರ್ಣ ಪಾಠ ಹೀಗಿದೆ.

ಕಂದ ||
ಕವಿಯಾಗಲಪೇಕ್ಷಿಸು ಯಾ ।
ಕವಿತಾನಿಯಮಾನುರೋಧದಿಂ ನಡೆಯದ ಮಾ ||
ನವನೊಳ್ ಮೇಣ್ ಸಗ್ಗಕ್ಕೆಳ ।
ಸುವ ಪಾಪಿಷ್ಠನೊಳದಾವದಿರ್ಕುಂ ಭೇದಂ ||೧||


ಪ್ರಾಸಮನಿಡುವೊಡೆ ನಿನಗಾ।
ಯಾಸಮದಪ್ಪೊಡೆ ಬಿಡುವುದು ಪದ್ಯರಚನೆಯಂ॥
ಸಾಸಮಿದಲ್ಲವೆ? ಲೋಕದೊ–
ಳಾಶಿಸುವುದು ಮದುವೆಯಂ ನಪುಂಸಕನುಂ ಪೇಳ್ ॥೨॥

ಚರಿಸಿದ ದಾರಿಯೊಳಂ ತಾ।
ನೆರಚುತೆ ಮಳವಂ ತಿರುಗುವ ಸಿಂಬಳಬುಳುವೊಳ್॥
ಪೆರರ ಬಗೆಯೊಳಂ ನೀನೀ
ದುರಭಿಪ್ರಾಯಮನದೇಕೆ ಪುಟ್ಟಿಸುವಯ್? ಪೇಳ್ ॥೩॥

ಕವಿ ಷೇಕ್ಸ್‌ಪಿಯರ್, ಕವಿ ಕೇ
ಶವಸುತ, ಮಧುಸೂದನಾದಿಗಳವೊಲ್ ನೀನೂ॥
ಕವನಂಗೆಯ್, ಬೊಗಳ್ವುದೆ? ಬೊಗ
ಳುವ ಕರ್ಚ್ಚಲ್ ಶಕ್ತಿಯಿಲ್ಲದಾ ಶ್ವಾನನವೋಲ್ ॥೪॥

ಏಕಿಂತು 'ನಾನೃಷಿಃ ಕುರು
ತೇ ಕಾವ್ಯಂ,' ನುಡಿ ಜನಿಸಿತು? ಲೋಕದ ಮರುಳೇ॥
ಪ್ರಾಕಾರಮನೇರಿದೊಡಂ
ಕಾಕಂ ಗರುಡಂಗೆ ತೊಣೆಯದಕ್ಕುಮೆ? ಪೇಳಯ್॥ ॥೫॥

❐



೪. ಕನ್ನಡ ಸಂರಕ್ಷಕ

ಡೆಪ್ಯುಟಿ ಚೆನ್ನಬಸಪ್ಪ

ನವೆಂಬರ್ ಒಂದು ಕನ್ನಡ ರಾಜ್ಯೋತ್ಸವವನ್ನು ನಾಡಿನೆಲ್ಲೆಡೆ ವಿಜೃಂಭಣೆಯಿಂದ ಆಚರಿಸುತ್ತೇವೆ. ಆ ದಿನ ಭಾಷಣ, ಮೆರವಣಿಗೆ, ನಾಟಕ, ಸಂಗೀತ ನೃತ್ಯಗಳ ಹೊನಲೇ ಎಲ್ಲೆಲ್ಲೂ ಹರಿಯುತ್ತದೆ. ಅಂದು ನಡೆಯುವ ಉಪನ್ಯಾಸಗಳಲ್ಲಿ ನಾಡಿನ ಇತಿಹಾಸವನ್ನು ಕರ್ನಾಟಕದ ಏಕೀಕರಣ ಕಥೆಯನ್ನು ಅದಕ್ಕಾಗಿ ದುಡಿದವರ ದುಡಿದು ಮಡಿದವರ ನೆನಪನ್ನು ಮಾಡಿಕೊಳ್ಳುವುದು ಅಪರೂಪ. ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ, ಕರ್ನಾಟಕದಿಂದ ಪ್ರಾಚೀನ ವಿಚಾರಧಾರೆಯನ್ನು ಬಿಂಬಿಸುವ ಕಲಾಕಾರ್ಯಕ್ರಮಗಳು ಅಪರೂಪ. ಕನ್ನಡನಾಡಿಗಾಗಿ ಕನ್ನಡ ನುಡಿಗಾಗಿ ಜೀವತೇದ ಚೇತನಗಳ ಸ್ಮರಣೆ ಇರುವುದಿಲ್ಲ. ನೆಪಮಾತ್ರಕ್ಕೆ ಹಿಂದೆ ಕನ್ನಡಕ್ಕೆ ದುಡಿದವರ ಹೆಸರು ಹೇಳಿ ಮುಂದೆ ಸಾಗುವವರೇ ಹೆಚ್ಚು. 'ಊರು ಉಪಕಾರ ಅರಿಯದು ಹೆಣ ಶೃಂಗಾರ ಅರಿಯದು' ಎಂಬುದೊಂದು ಗಾದೆಯಿದೆ. ಅಂತೆಯೇ ಒಂದು ಕಾಲದಲ್ಲಿ ಕನ್ನಡ ಶಿಕ್ಷಣಕ್ಕಾಗಿ, ಕನ್ನಡ ಸಾಹಿತ್ಯಕ್ಕೆ, ಕನ್ನಡ ಭಾಷೆಗೆ, ಶುದ್ಧ ಕನ್ನಡ ಆಡಳಿತಕ್ಕೆ ತನುಮನಧನ ಮೀಸಲಿಟ್ಟು ಕನ್ನಡದ ಹುಲಿಯೆನಿಸಿದ ಕನ್ನಡ ಡೆಪ್ಯುಟಿ ಚೆನ್ನಬಸಪ್ಪನವರನ್ನು ಬಲ್ಲವರು ಎಷ್ಟು ಜನ? ಕೌಟುಂಬಿಕ ಬದುಕಿನ ನೆಮ್ಮದಿಯನ್ನೇ ಪಣಕ್ಕಿಟ್ಟು ಧೀರಸಂಕಲ್ಪದಿಂದ ಕನ್ನಡಕ್ಕೆ ಹೋರಾಡಿದ ಧೀಮಂತ ಚೆನ್ನಬಸಪ್ಪನವರು ಹುಟ್ಟಿದ್ದು ೧-೧೧-೧೮೩೩. ಕನ್ನಡ ಇಂದು ಧಾರವಾಡ, ಬೆಳಗಾಂ ಮೊದಲಾದ ಕಡೆ ಹಳೆಯ ಮುಂಬೈ ಕರ್ನಾಟಕದಲ್ಲಿ ಉಳಿದಿದ್ದರೆ ಬೆಳೆದಿದ್ದರೆ ಅದು ಕನ್ನಡದ ಗಂಡುಮೆಟ್ಟಿನ ನಾಡು ಎನಿಸಿದ್ದರೆ ಅದಕ್ಕೆ ಕಾರಣ ಪುರುಷರು ಡೆಪ್ಯುಟಿ ಚೆನ್ನಬಸಪ್ಪನವರು. ಅವರ ಅಧಿಕಾರಿ ರಸೆಲ್ ಮತ್ತು ಇತರ ಸಮಕಾಲೀನ ಕನ್ನಡಾಧಿಕಾರಿಗಳು. ಆ ಕಾಲದ ಕನ್ನಡ ಹೋರಾಟಗಾರರ ಸೇನಾಪತಿ ಕನ್ನಡದ ಹುಲಿ ಡೆಪ್ಯುಟಿ ಚೆನ್ನಬಸಪ್ಪನವರು. ಅವರನ್ನು ನವೆಂಬರ್

ಒಂದರಂದು ಪ್ರತಿಕನ್ನಡಿಗ ಸ್ಮರಿಸಬೇಕಾದ್ದು ಕರ್ತವ್ಯ. ಆದರೆ ಇತರೆಡೆಗಳಲ್ಲಿ ಕನ್ನಡದ ರಾಜಧಾನಿ ಬೆಂಗಳೂರಿನಲ್ಲಿ ಅವರನ್ನು ನೆನೆದವರು ಎಷ್ಟು ಜನ?

ಡೆಪ್ಯುಟಿ ಚೆನ್ನಬಸಪ್ಪನವರು ಕನ್ನಡಸೇವೆಗೆ ಕಾರ್ಯೋನ್ಮುಖರಾದಾಗ ೧೯ನೇ ಶತಮಾನದಲ್ಲಿ ಕನ್ನಡದ ಸ್ಥಿತಿ ಉತ್ತರ ಕರ್ನಾಟಕದಲ್ಲಿ ಹೇಗಿತ್ತು ಎಂಬುದನ್ನು ನೆನೆದಾಗ ಅಂದಿನ ಶೋಚನೀಯ ಕನ್ನಡದ ಸ್ಥಿತಿ ಅರಿವಾಗುತ್ತದೆ. ತೀನಂಶ್ರೀ ಹೇಳುವಂತೆ ಕನ್ನಡಿಗರು "ಸೊಕ್ಕಿನಲ್ಲಿ ತಲೆಯೆತ್ತಿ ಮೆರೆವರಲ್ಲ" ಎನ್ನುವಂಥವರಾಗಿದ್ದರು. ಮದರಾಸ್ ಪ್ರಾಂತದಲ್ಲಿ ತಮಿಳು, ಹೈದ್ರಾಬಾದ್ ಪ್ರಾಂತದಲ್ಲಿ ತೆಲುಗು ಉರ್ದು, ಮುಂಬಯಿ ಪ್ರಾಂತಭಾಗದಲ್ಲಿ, ಮರಾಠಿ ಭಾಷೆ-ಸಂಸ್ಕೃತಿಗಳ ಪ್ರವಾಹದಲ್ಲಿ ಕನ್ನಡ ಜರ್ಝರಿತವಾಗಿತ್ತು. ಮಾತೃಭಾಷೆ, ಪಿತೃಭಾಷೆ ಭಾರ್ಯಾಭಾಷೆ ಮೂರೂ ಕನ್ನಡವಾಗಬೇಕಾಗಿದ್ದ ಜಾಗದಲ್ಲಿ ಮರಾಠಿ ವಿರಾಜಿಸುತ್ತಿತ್ತು. ಕುರಿ ಹಿಂಡಿನ ನಡುವೆ ಸಿಕ್ಕ ಹುಲಿಮರಿ ಆಗಿತ್ತು. ಹೀನಾವಸ್ಥೆಗೆ ಒಂದು ನಿದರ್ಶನವೆಂದರೆ ಧಾರವಾಡದಲ್ಲಿ ಗ್ರಂಥಾಲಯವೊಂದರಲ್ಲಿ ಇದ್ದ ೪೫೧ ಪುಸ್ತಕಗಳಲ್ಲಿ ೪೧೪ ಇಂಗ್ಲಿಷ್ ೩೦ ಮರಾಠಿ ೭ ಪುಸ್ತಕ ಕನ್ನಡದವು ಇದ್ದವು. ಫರ್ಗ್ಯುಸನ್ ಕಾಲೇಜಿನ ದೊಡ್ಡಲಾಯಿಬ್ರರಿಯಲ್ಲಿ ಒಂದೂ ಕನ್ನಡ ಪುಸ್ತಕ ಇರಲಿಲ್ಲ. ಆಗ ರೊದ್ದ ವ್ಯಾಸರಾಯ ಎಂಬ ವಿದ್ಯಾರ್ಥಿ ಕನ್ನಡಾಭಿಮಾನಿ ಹೋರಾಟ ನಡೆಸಿ ಕನ್ನಡ ಪುಸ್ತಕಗಳಿಗೆ ೫೦ರೂ ಮಂಜೂರು ಮಾಡಿಸಿ ಕೊಂಡು ಕನ್ನಡ ಪುಸ್ತಕಗಳನ್ನು ತರಿಸಿದರೆ ಅವು ಹೇಗಿದ್ದವು ಗೊತ್ತೇ? ಅವುಗಳಲ್ಲಿ "ಯಾವ ಪುಸ್ತಕವೂ ಕಿರುಬೆರಳಿಗಿಂತ ದಪ್ಪವಾಗಿರಲಿಲ್ಲ. ಹೊಲಸು ಕಾಗದ, ತಪ್ಪು ಮುದ್ರಣ"

ಇನ್ನು ಅಚ್ಚಗನ್ನಡಿಗರ ಮರಾಠಿ ವ್ಯಾಮೋಹ ಹೇಗಿತ್ತು ಎಂದರೆ "ಪ್ರಸಿದ್ಧ ಲೇಖಕ, ಕನ್ನಡ ಪ್ರಿನ್ಸಿಪಾಲ್ ವೆಂಕಟರಂಗೋ ಕಟ್ಟಿ ಅವರ ಮಗ ಮರಾಠಿ ನಾಟಕದಲ್ಲಿ ಪಾತ್ರ ವಹಿಸಿ ಪ್ರಶಸ್ತಿ ಪಡೆದರೆ ಮರಾಠಿ ಚೆನ್ನಾಗಿ ಬರದಿದ್ದರೂ ಕಂಠ ಪಾಠ ಮಾಡಿ ಮರಾಠಿಯಲ್ಲಿ ಒಥೆಲೋ ಪಾತ್ರವನ್ನು ಡೆಕ್ಕನ್ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿ ಪಾತ್ರ ವಹಿಸಿದನು. ಇಂಥ ಸಂಗತಿಗಳೆಷ್ಟೋ. ಆ ಕಾಲದಲ್ಲಿ ಇಂಥ ಕನ್ನಡದ ದುಃಸ್ಥಿತಿಯಲ್ಲಿ ಕನ್ನಡದ ಪರವಾಗಿ ಧಾರವಾಡಕ್ಕೆ ೧೮೬೫ರ ಹೊತ್ತಿಗೆ ಎಜುಕೇಷನಲ್ ಇನ್ಸ್‌ಪೆಕ್ಟರ್ ಆಗಿ ರಸೆಲ್ ಸಾಹೇಬರು ಬಂದರು. ಕನ್ನಡದಂಥ ಶ್ರೀಮಂತ ಭಾಷೆ ಇನ್ನೊಂದಿಲ್ಲ ಎನ್ನುತ್ತಿದ್ದ ರಸೆಲ್ ತಾನೇ ಕನ್ನಡ ಕಲಿಯಲು ೩೦ ರೂ ತಲಬಿನ ಮೇಲೆ ಕನ್ನಡ ಪಂಡಿತರನ್ನು ನೇಮಿಸಿಕೊಂಡು

ಕನ್ನಡ ಕಲಿತರು. ಕನ್ನಡ ಶಾಲೆಗಳ ಅಧ್ಯಾಪಕರ ಸಂಖ್ಯೆ ಹೆಚ್ಚಿಸಿದರು. ಡೆಪ್ಯುಟಿ ಎಜುಕೇಷನಲ್ ಇನ್ಸ್‌ಪೆಕ್ಟರ್ ಆದ ಚೆನ್ನಬಸಪ್ಪನವರಿಗೆ ಬಲಗೈ ಆದರು.

ಇಂಥ ಸನ್ನಿವೇಶದಲ್ಲಿ ಕನ್ನಡ ಕಾಯಕಕ್ಕೆ ಟೊಂಕ ಕಟ್ಟಿ ನಿಂತವರು. ಡೆಪ್ಯುಟಿ ಚೆನ್ನಬಸಪ್ಪನವರು. ಡೆಪ್ಯುಟಿ ಚೆನ್ನಬಸಪ್ಪನವರ ಪೂರ್ವಜರು ಗೋಕಾಕನಿಂದ ಧಾರವಾಡಕ್ಕೆ ಬಂದು ನೆಲೆ ನಿಂತ ವೀರಶೈವ ವ್ಯಾಪಾರಿ ಮನೆತನದವರು. ಈ ಮನೆತನದಲ್ಲಿ ಬಸವಲಿಂಗಪ್ಪ ತಿಪ್ಪವ್ವ ದಂಪತಿಗಳಿಗೆ ಹುಟ್ಟಿದ ಇಬ್ಬರು ಗಂಡು ಮಕ್ಕಳಿಗೆ ಚೆನ್ನಬಸಪ್ಪ ಎಂಬ ಹೆಸರೇ ಇದ್ದು ಮೊದಲನೇ ಮಗನನ್ನು ದೊಡ್ಡ ಚೆನ್ನಬಸಪ್ಪ ಎರಡನೆಯವನನ್ನು ಸಣ್ಣಚೆನ್ನಬಸಪ್ಪ ಎಂದು ಕರೆಯುತ್ತಿದ್ದರು. ೧೮೩೩ನೇ ಇಸವಿ ನವೆಂಬರ್ ೧ರಂದು ಹುಟ್ಟಿದ ದೊಡ್ಡ ಚೆನ್ನಬಸಪ್ಪನೇ ಡೆಪ್ಯುಟಿ ಚೆನ್ನಬಸಪ್ಪನವರು, ಧಾರವಾಡದಲ್ಲಿ ಸಾಲಿಮಠ ಶಿವರುದ್ರಯ್ಯನವರ ಬಳಿ ಶಾಲಾ ಶಿಕ್ಷಣ ಮುಗಿಸಿದ ಮೇಲೆ ಆಂಗ್ಲರ ಆಡಳಿತದ ಆ ಕಾಲದಲ್ಲಿ ಇಂಗ್ಲಿಷ್ ಕಲಿತವರಿಗೆ ಸಿಗುತ್ತಿದ್ದ ಸ್ಥಾನಮಾನ ಗೌರವ ಪ್ರತಿಷ್ಠೆ ಕಂಡು ಇಂಗ್ಲಿಷ್ ಕಲಿಯಲು ನಿರ್ಧರಿಸಿದರು. ಆದರೆ ಆಗ ಧಾರವಾಡದಲ್ಲಿ ಇಂಗ್ಲಿಷ್ ಶಾಲೆ ಇರಲಿಲ್ಲ. ಧಾರವಾಡದಲ್ಲಿದ್ದ ಬಾಸೆಲ್ ಮಿಷನ್ ಶಾಲೆ ಇಂಗ್ಲಿಷ್ ಕಲಿಸುತ್ತಿದ್ದರೂ ಅದು ಕ್ರೈಸ್ತಶಾಲೆ ಎಂದು ತಮ್ಮ ಮಕ್ಕಳನ್ನು ಸ್ಥಳೀಯರು ಸಾಮಾನ್ಯವಾಗಿ ಕಳಿಸುತ್ತಿರಲಿಲ್ಲ. ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಪುಣೆಗೋ ಮುಂಬಯಿಗೋ ಹೋಗಬೇಕಾಗಿತ್ತು. ತಾಯಿ ಬಳಿ ತನ್ನಾಸೆ ಹೇಳಿದಾಗ ಆಕೆ ಒಪ್ಪಲಿಲ್ಲ. ಏಕೆಂದರೆ ಗುರುತು ಪರಿಚಯ ಇಲ್ಲದ ಕಡೆ ಪ್ರಯಾಣ ಸೌಕರ್ಯ ಇಲ್ಲದಿರುವಾಗ ಭಿನ್ನ ಭಾಷೆ, ಸಂಸ್ಕೃತಿಯ ದೂರದ ೪೨೦ ಕಿಲೋ ಮೀಟರ್ ದೂರದಷ್ಟು ದಾರಿಯನ್ನು ಕಾಲ್ನಡಿಗೆಯಲ್ಲಿ ಸವೆಸುವುದು ಸಾಧ್ಯವೇ? ಎಂದು ತಾಯಿ ಒಪ್ಪಲಿಲ್ಲ. ಆ ದಿನ ಮಧ್ಯರಾತ್ರಿ ಎಲ್ಲರೂ ನಿದ್ರಾಪರವಶರಾಗಿದ್ದಾಗ ತಾಯಿ ಕೋಣೆಯಲ್ಲಿ ಪೆಟ್ಟಿಗೆಯಲ್ಲಿದ್ದ ೩ ರೂ ೧೦ ಆಣೆಯನ್ನೇ ತೆಗೆದುಕೊಂಡು ೧೨ ವರುಷದ ಬಾಲಕ ಚನ್ನಬಸಪ್ಪ ಮನೆ ಬಿಟ್ಟು ಹೊರಟೇಬಿಟ್ಟ. ಗೋಕಾಕಿಗೆ ಬಂದು ತಂದೆಯ ಸ್ನೇಹಿತರೊಬ್ಬರಿಂದ ೫೦ರೂ ಸಹಾಯಧನ ಪಡೆದು ಪುಣೆಯನ್ನು ಕಾಲ್ನಡಿಗೆಯಲ್ಲಿ ಸೇರಿ, ಸ್ವಸಾಮರ್ಥ್ಯ ದಿಂದ ಪುಣೆಯಲ್ಲಿ ಇಂಜನಿಯರಿಂಗ್ ಪದವಿ ಗಳಿಸಿ ತಾವು ಓದಿದ ಕಾಲೇಜಿನಲ್ಲಿ ಅಧ್ಯಾಪಕ ರಾದರು. ದಾದಾಭಾಯಿ ನವರೋಜಿ ಇಂಗ್ಲೆಂಡಿಗೆ ಇವರನ್ನು ಕಳಿಸಲು ಪ್ರಯತ್ನಿಸಿದಾಗ ಅದು ಸಾಧ್ಯವಾಗಲಿಲ್ಲ. ೧೮೫೫ರಲ್ಲಿ ಪೂನಾ ಬಿಟ್ಟು ಹುಟ್ಟೂರಾದ ಧಾರವಾಡಕ್ಕೆ ಬಂದರು.

ಧಾರವಾಡಕ್ಕೆ ಬಂದ ಮೇಲೆ ಪ್ರಧಾನ ಅಂಚೆ ಕಚೇರಿಯಲ್ಲಿ ಸ್ವಲ್ಪ ಕಾಲ ಉದ್ಯೋಗಿಗಳಾದರು. ಆ ವೇಳೆಗೆ ಮುಂಬಯಿ ಸರಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾಥಮಿಕ ಶಾಲಾಶಿಕ್ಷಕರಿಗೆ ತರಬೇತಿ ನೀಡುವ ನಾರ್ಮಲ್ ಸ್ಕೂಲ್‌ಗಳನ್ನು ತೆರೆಯಿತು. ಮರಾಠಿ ಗುಜರಾತ್ ಕನ್ನಡ ಪ್ರಾಂತ್ಯಗಳಲ್ಲಿ ೩ ಶಾಲೆ ಪ್ರಾರಂಭಿಸಲು ನಿರ್ಧರಿಸಿತು. ಕನ್ನಡಪ್ರಾಂತ್ಯದ ಶಾಲೆ ಧಾರವಾಡದಲ್ಲಿ ೧೮೫೭ ರಲ್ಲಿ ಪ್ರಾರಂಭವಾಯಿತು. ೧೮೬೧ರಲ್ಲಿ ನಾರ್ಮಲ್‌ಸ್ಕೂಲಿನ ಪ್ರಿನ್ಸಿಪಾಲರಾಗಿ ನೇಮಕವಾದರು. ಅಂಚೆ ಉದ್ಯೋಗಬಿಟ್ಟರು. ೧೮೬೪ರಲ್ಲಿ ನಾರ್ಮಲ್ ಸ್ಕೂಲ್ ಟ್ರೈನಿಂಗ್ ಕಾಲೇಜ್ ಆಗಿ ಪರಿವರ್ತಿತವಾಯಿತು. ಚೆನ್ನಬಸಪ್ಪನವರು ಪ್ರಥಮ ಪ್ರಿನ್ಸಿಪಾಲರಾದರು. ೧೮೬೬ರಲ್ಲಿ ಡೆಪ್ಯುಟಿ ಎಜುಕೇಷನಲ್ ಇನ್ಸ್‌ಪೆಕ್ಟರ್ ಆದರು. ೪–೧–೧೮೮೧ರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು ನಿಧನರಾದಾಗ ಅವರಿಗೆ ವಯಸ್ಸು ಕೇವಲ ೪೭ ವರ್ಷಗಳು. ೨೪ ವರ್ಷ ಶಿಕ್ಷಣ ಇಲಾಖೆಯಲ್ಲಿ, ಕನ್ನಡ ಸೇವೆಗೆ ೧ ವರ್ಷ ಅಂಚೆ ಇಲಾಖೆಯಲ್ಲಿ ಹೀಗೆ ತಮ್ಮ ಬದುಕನ್ನು ಸವೆಸಿದರು.

ಈ ೨೪ ವರ್ಷಗಳಲ್ಲಿ ಅವರು ಸಾಧಿಸಿದ ಕನ್ನಡ ಪ್ರಗತಿ, ಕೆಲಸ ಕಂಡ ಜನ ಅವರನ್ನು ಕನ್ನಡದ ಪುಣ್ಯಪುರುಷ, ಕನ್ನಡದೀಪ, ನವಕರ್ನಾಟಕದ ನಿರ್ಮಾಪಕ, ಕನ್ನಡ ಕುಲೋತ್ತೇಜಕ ಎಂದೆಲ್ಲಾ ಕರೆದಿದ್ದಾರೆ. ಡೆಪ್ಯುಟಿ ಎಜುಕೇಷನಲ್ ಇನ್ಸ್‌ಪೆಕ್ಟರ್ ಆದ ಅವಧಿಯಲ್ಲಿ ಮಾಡಿದ ಕೆಲಸ ಎಷ್ಟು ಜನಪ್ರಿಯವಾಗಿದೆ ಎಂದರೆ ಜನರಿಗೆ ಅವರ ನಿಜವಾದ ಪೂರ್ಣ ಹೆಸರು ಚೆನ್ನಬಸಪ್ಪ ಬಸವಲಿಂಗಪ್ಪಾ ಧಾರವಾಡ ಮರೆಯಾಗಿ ಡೆಪ್ಯುಟಿ ಚೆನ್ನಬಸಪ್ಪ ಆಗಿಬಿಟ್ಟರು. ಅವರ ಸ್ಮಾರಕವಾಗಿ ಧಾರವಾಡದ ಟ್ರೈನಿಂಗ್ ಕಾಲೇಜಿನ ಎದುರಿಗೆ ಸ್ಥಾಪಿಸಿದ ಕಂಚಿನ ಪ್ರತಿಮೆ ಕೆಳಗಿರುವ ಹೆಸರು ಡೆಪ್ಯುಟಿ ಚೆನ್ನಬಸಪ್ಪ ಅಷ್ಟೆ. ಈ ಸಂದರ್ಭದಲ್ಲಿ ಡೆಪ್ಯುಟಿ ಚೆನ್ನಬಸಪ್ಪ ಅವರನ್ನು ಕುರಿತು ಕನ್ನಡ ಕವಿ ತುಂಗಳ ಅವರು ಬರೆದ ಪದ್ಯ ನೆನಪಾಗುತ್ತಿದೆ. "ಅನ್ಯ ಭಾಷೆಯ ಬಲಿಗೆ, ಸಿಕ್ಕ ಕನ್ನಡವನ್ನು । ತನ್ನ ಜಾಣ್ಮೆಯ ಬಲದಿ ಬದುಕಿಸಿದ ಬಂಟ । ಕನ್ನಡದ ಏಳಿಗೆಗೆ ಕಟ್ಟಿದನು ಸೊಂಟ ॥ ಚತುರ ಹೆಸರು... ಚೆನ್ನಬಸಪ್ಪ ಡೆಪ್ಯುಟಿ । ಇತರರು ಇರಲಿಲ್ಲ ನಿಮ್ಮೊಡನೆ ಪೈಪೋಟಿ । ಮತ್ತೊಮ್ಮೆ ತುಂಬಿ ಈ ಜನರ ಎದೆಮೀಟಿ ಕತ್ತು ಬಗ್ಗಿಸಿ ನಮಿಪೆ । ನಿಮಗಾರು ಸಾಟಿ" ಎಂದಿದ್ದಾರೆ.

ಅವರ ಸೇವಾವಧಿಯಲ್ಲಿ ಆಗಾಗ್ಗೆ ಅನಾರೋಗ್ಯ ಕಾಡಿದರೂ ಕಂಗೆಡದೆ ಕನ್ನಡ ಸೇವೆ ಮಾಡಿದ ಚೆನ್ನಬಸಪ್ಪನವರ ಸಾಧನೆ ಅಪೂರ್ವವಾದುದು.

೧೮೫೫-೫೬ರ ವೇಳೆಗೆ ಅವರು ಡೆಪ್ಯುಟಿ ಆಗುವ ಮುಂಚೆ ಬೆಳಗಾವಿ ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಇದ್ದ ಕನ್ನಡ ಶಾಲೆಗಳೆಷ್ಟು ಗೊತ್ತೆ? ಬೆಳಗಾವಿಯಲ್ಲಿ ೧೩, ಧಾರವಾಡದಲ್ಲಿ ೧೨, ವಿಜಾಪುರದಲ್ಲಿ ೯ ಅವರ ಸೇವಾವಧಿಯಲ್ಲಿ ಈ ಶಾಲೆಗಳ ಸಂಖ್ಯೆ ಎಷ್ಟಾಗಿತ್ತು ಬಲ್ಲಿರಾ! ಬೆಳಗಾವಿಯಲ್ಲಿ ೧೩ರಿಂದ ೧೬೬ಕ್ಕೆ ಏರಿದ್ದರೆ ಧಾರವಾಡದಲ್ಲಿ ೧೨ ಶಾಲೆಗಳಿಂದ ३೪೧ ಶಾಲೆಗಳಿಗೆ ಏರಿತ್ತು. ವಿಜಾಪುರದಲ್ಲಿ ೯ ಕನ್ನಡ ಶಾಲೆಗಳಿಂದ ೧೫೦ಕ್ಕೆ ಏರಿತು.

ಕೇವಲ ಕನ್ನಡ ಶಾಲೆಗಳ ಸಂಖ್ಯೆ ಏರಿದ್ದು ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಏರಿದ್ದಷ್ಟೇ ಅಲ್ಲ. ಶಿಕ್ಷಕರ ಶಿಕ್ಷಣದ ವಿದ್ಯಾರ್ಥಿಗಳ ಗುಣಮಟ್ಟ ವಿದ್ಯಾಮಟ್ಟ ಆಡಳಿತಮಟ್ಟ ಏರಿದ್ದು ಪ್ರಮುಖ ಸಾಧನೆ ಆಗಿದೆ.

ಒಂದು ಶತಮಾನದ ಹಿಂದೆ ಆವತ್ತು ಶಾಲಾ ಶಿಕ್ಷಣದಲ್ಲಿ ಡೆಪ್ಯುಟಿ ಚೆನ್ನ ಬಸಪ್ಪನವರು. ಎದುರಿಸಿದ ಸಮಸ್ಯೆಗಳು ಇವತ್ತೂ ಜೀವಂತವಾಗಿವೆ. ಆ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಕಾನೂನುಗಳು ಇಂದು ರಚಿತವಾಗಿ ಪುಸ್ತಕದ ಬದನೇಕಾಯಿ ಆಗಿದೆ. ಶಿಕ್ಷಣ ಇಲಾಖೆ ಭ್ರಷ್ಟಾಚಾರದ ಆಗರ ಆಗಿದೆ ಎಂದು ಇಂದು ಯಾರಾದರೂ ದೂರಿದರೆ 'ಇಲ್ಲ ನೀವು ಹೇಳುವುದು ಸುಳ್ಳು ಎಂದು ಹೇಳಲು ಧೈರ್ಯ ಯಾರಿಗಿದೆ? ಈ ದೃಷ್ಟಿಯಿಂದ ನೋಡಿದಾಗ ಡೆಪ್ಯುಟಿ ಚೆನ್ನಬಸಪ್ಪನವರು ಅಂದು ಕೈಗೊಂಡ ಕ್ರಮಗಳು ಶತಮಾನದಷ್ಟು ಹಳೆಯದಾದರೂ ಇಂದಿಗೂ ಮಾದರಿ ಪಾಠಗಳಾಗಿವೆ. ಮಠ ಪತ್ರಿಕೆಯಲ್ಲಿ ಅನಂತರ ಆ ಪತ್ರಿಕೆ ಶಾಲಾ ಪತ್ರಿಕೆ ಆದಾಗ ಅದರಲ್ಲಿ ಪ್ರಕಟವಾದ ಸರ್ಕ್ಯುಲರ್‌ಗಳು ಸುತ್ತೋಲೆಗಳು ಅರ್ಥಾತ್ ಪರಿಪತ್ರಗಳಲ್ಲಿ ಕೆಲವನ್ನು ಗಮನಿಸುವುದು ಅಗತ್ಯ ವಾಗಿದೆ. ಈ ಸುತ್ತೋಲೆಗಳಲ್ಲಿ ಕನ್ನಡ ಭಾಷಾ ಸಮಸ್ಯೆ, ಕನ್ನಡ ಅಧ್ಯಾಪಕರ ಅರ್ಹತೆ, ಕರ್ತವ್ಯಲೋಪ, ಕನ್ನಡ ಕಲಿಕೆಯ ದೋಷಗಳು ಪಠ್ಯಗಳ ಅಭಾವ, ಆಡಳಿತ ವೈಖರಿ, ಶಿಕ್ಷಾ ವಿಧಾನ ಇತ್ಯಾದಿ ವಿಚಾರಗಳ ಬಗ್ಗೆ ಡೆಪ್ಯುಟಿ ಚೆನ್ನಬಸಪ್ಪ ನವರು ಕೈಗೊಂಡ ಸೂಕ್ತ ಕ್ರಮಗಳು ಇವೆ. ಇವು ಇಂದಿಗೂ ಅನುಕರಣೀಯವಾಗಿವೆ.

ಕನ್ನಡ ಭಾಷೆ ಬಳಕೆ ಮಾಡಲು ಚೆನ್ನಬಸಪ್ಪನವರು ಹೊರಡಿಸಿದ ಸುತ್ತೋಲೆಗಳು ಮಾದರಿ ಆಗಿವೆ. ಆಡಳಿತ ಕನ್ನಡ ಬಳಕೆಗೆ ಬರಲು ಶಿಕ್ಷಣ ರಂಗದಲ್ಲಿ ಈ ಬಗೆಯ ಹುಕುಂಗಳು ಇಂದೂ ಇವೆ. ಆದರೆ ನೂರು ವರ್ಷಗಳ ಹಿಂದೆ ಹೇಗಿದ್ದವು ನೋಡಿ;

೧೮೬೬ ಫೆಬ್ರವರಿಯಲ್ಲಿ ಮಠ ಪತ್ರಿಕೆಯಲ್ಲಿ ಪ್ರಕಟವಾದ ಪತ್ರ ನೋಟೀಸು ಇದು. ಬೆಳಗಾವಿ ಜಿಲ್ಲೆಯಲ್ಲಿರುವ ಯಾವತ್ತು ಕನ್ನಡ ಸ್ಕೂಲ ಮಾಸ್ತರರಿಗೆ ತಿಳಿಯ ಪಡಿಸುವುದೇನೆಂದರೆ, ನಿಮ್ಮ ಕಡಿಯಿಂದ ನಮ್ಮ ಕಡಿಗೆ ಬರುವ ಪತ್ರಗಳೆಲ್ಲಾ ಕನ್ನಡದಲ್ಲಿ ಬರಿಬೇಕು. ಹೀಗೆ ತಿಳಿಸಿದರೂ ಅದರ ಕಡೆ ಗಮನಕೊಡದಿದ್ದಾಗ ಶಿಕ್ಷಕರಿಗೆ ಮತ್ತೆ ಪರಿಪತ್ರ ಹೊರಡಿಸಿ ತಿಳಿಸಿದ್ದು ಹೀಗೆ:

"ಬೆಳಗಾವಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ್ ಮಾಸ್ತರರಿಗೆ ಈ ನೋಟೀಸಿನಿಂದ ತಿಳಿಸುವುದೇನೆಂದರೆ ನಿಮಗೆ ಸಾಲಿಗಳಲ್ಲಿ ನೀವು ಹುಡುಗರಿಗೆ ಯಾವತ್ತು ವಿಷಯಗಳನ್ನು ಕನ್ನಡದಲ್ಲಿ ಕಲಿಸಬೇಕು ಮತ್ತು ಕನ್ನಡ ಅಂಕಿಗಳಲ್ಲಿ ಲೆಕ್ಕ ಮಾಡಿಸಬೇಕು. ಇದರಂತೆ ಹಿಂದಕ್ಕೆ ನೋಟೀಸು ಕೊಟ್ಟಿದ್ದು ಕೆಲವು ಮಾಸ್ತರರು ಅದರಂತೆ ನಡೆಯುವುದಿಲ್ಲವೆಂತ ಕೇಳಿದ್ದೇವೆ ಅದರಿಂದ ತಿರುಗಿ ಈ ನೋಟೀಸು ಛಾಪಿಸಿದೆ."

(೧೮೬೭ ಆಗಸ್ಟ್)

ಕನ್ನಡದ ಅಂಕಿಗಳನ್ನೇ ಬಳಸಬೇಕು ಎಂದು ಆಗ್ರಹಪಡಿಸಿ ನೋಟೀಸು ಹೊರಡಿಸಿದ ಚೆನ್ನಬಸಪ್ಪನವರು ಮರಾಠಿ ಅಂಕಿಗಳನ್ನು ಬಳಸಬಾರದೆಂದು ಸ್ಪಷ್ಟವಾಗಿ ಸಾರಿದ್ದಾರೆ. ಅಷ್ಟೇ ಅಲ್ಲ ಮರಾಠಿಯಲ್ಲಿ ಎಂದರೆ ಅರೇಭಾಷೆಯಲ್ಲಿ ಕನ್ನಡ ಬಿಟ್ಟು ವ್ಯವಹಾರವನ್ನು ಕನ್ನಡ ಶಾಲಾ ಮಾಸ್ತರರು ಮಾಡಬಾರದೆಂದು ಸ್ಪಷ್ಟವಾಗಿ ಸಾರಿದ್ದಾರೆ. ಈ ಸುತ್ತೋಲೆಗಳನ್ನು ಗಮನಿಸಿ: "ಕನ್ನಡ ಸಾಲಿಗಳಲ್ಲಿ ಯಾವತ್ತೂ-ವಿಷಯಗಳನ್ನು ಕನ್ನಡಿನಲ್ಲಿ ಕಲಿಸುವುದಿಲ್ಲ. ಇದು ಬಂದ್ ಮಾಡಿ ಯಾವತ್ತೂ ವಿಷಯಗಳನ್ನು ಕನ್ನಡದಲ್ಲಿ ಕಲಿಸಬೇಕು. ಲೆಖ್ಖ ಮಾಡುವಾಗ ಕನ್ನಡ ಅಂಕಿಗಳನ್ನು ಹಾಕಬೇಕು ಅರೆ ಅಂಕಿಗಳನ್ನು ಹಾಕಬಾರದು ಅರೆ ಎಂದರೆ ಮರಾಠಿ.

ಧಾರವಾಡದ ಜಿಲ್ಲೆಯೊಳಗಿನ ಯಾವತ್ತೂ ಮಾಸ್ತರರಿಗೆ ಈ ನೋಟೀಸಿ ನಿಂದ ತಿಳಿಯಪಡಿಸುವುದೇನೆಂದರೆ ಸಾಲಿಯ ಹುಡುಗರು ಅಂಕಿಗಳನ್ನು ಕಂಡ ಕಂಡಂತೆ ಬರೆಯುತ್ತವೆ. ಅಂದರೆ ಅವರನ್ನು ಆ ಪ್ರಕಾರ ಬರೆಯಗೊಡದೆ ನೆಟ್ಟಗೆ ಅಂಕಿಗಳನ್ನು ಬರೆಯಲಿಕ್ಕೆ ಕಲಿಸಬೇಕು. (ಶಾಲಾಪತ್ರಿಕೆ ೧೮೬೯ ಡಿಸೆಂಬರ್ ೬.)

ಅಂಕಿಗಳಷ್ಟೇ ಅಲ್ಲ ಪತ್ರಗಳೂ ಮರಾಠಿಯಲ್ಲಿರಬಾರದು ಕನ್ನಡದಲ್ಲೇ ಇರಬೇಕು ಅಂತ ತಿಳಿಸಿದ ಪರಿಪತ್ರ ಇದು. ೧೮೬೭ರ ಪ್ರಕಟನೆ: "ಗೋಕಾವಿ, ಸೌಂದತ್ತಿ ಮತ್ತು ಸಂಪಗಾಂವಿ ತಾಲ್ಲೂಕಿನಲ್ಲಿರುವ ಯಾವತ್ತು ಮಾಸ್ತರರಿಗೆ ತಿಳಿಸುವುದೇನೆಂದರೆ, ನೀವು ನಿಮ್ಮ ದಫ್ತರ್‌ಗಳನ್ನು ಕನ್ನಡದಲ್ಲಿ ಇಡ್ರಿ.

ಯತ್ತ ಕಡಿಯಿಂದಾಗಲಿ ಅಥವಾ ಮತ್ತಾವ ಕಡಿಯಿಂದಾಗಲಿ ನಿಮಗೆ ಅರೇ ಬರದು ಬಂದರೂ (ಎಂದರೆ ಮರಾಠಿಯಲ್ಲಿ ಪತ್ರ ಬಂದರೂ) ನೀವು ಕನ್ನಡಿಯಲ್ಲಿ ಉತ್ತರ ಕೊಡುತ್ತಾ ಬರ್ರಿ. ಯಿನ್ನ ಮೇಲೆ ನಮ್ಮಗೆ ಬರುವ ಕಾಗದಗಳು ಅರೇದಲ್ಲಿ ಬರಬಾರದು"

ಇವತ್ತು ನಾವು ಎಲ್ಲಾ ಕಡೆ ಅಶುದ್ಧ ಭಾಷಾ ಬಳಕೆಯನ್ನು ಕಾಣುತ್ತೇವೆ. ಮುದ್ರಣದೋಷಗಳಂತೂ ಅಸಾಧ್ಯ. ಸಾವಿಲ್ಲದ ಮನೆಯಲ್ಲಿ ಸಾಸಿವೆ ತಾ ಆಗ ನಿನ್ನ ಮಗುವನ್ನು ಬದುಕಿಸುತ್ತೇನೆ ಎಂದು ಬುದ್ಧ ಹೇಳಿದಾಗ ಕಿಸಾಗೋತಮಿಗೆ ಸಾವಿಲ್ಲದ ಮನೆಯೇ ಸಿಗಲಿಲ್ಲವಂತೆ. ಹಾಗೆ ಮುದ್ರಣದೋಷವಿಲ್ಲದ ಬರಹ ಕಾಣುವುದೇ ಕಷ್ಟವಾಗಿದೆ. ಕೈಬರಹದಲ್ಲಿ ಅಂದು ವಿಪರೀತ ದೋಷಗಳನ್ನು ವಿದ್ಯಾರ್ಥಿಗಳಿಗಿಂತ ಅಧ್ಯಾಪಕರೇ ಮಾಡುತ್ತಿದ್ದರು. ಅವುಗಳನ್ನು ತಿದ್ದುವ ಕೆಲಸ ಮಾಡಿದರು ಚೆನ್ನಬಸಪ್ಪನವರು.

ಮಹಾರಾಜ ರಾಜೇಶ್ರೀ ಶೇವಕ ಹೇಡ್ಡ ಮಾಸ್ತರ ಅಕಟಂಬರ (ಅಕ್ಟೋಬರ್) ಎನ್ನಲು, ದೊರಿಯಬೇಕೆಂದು ಮೊದಲಾದ ಅಪಶಬ್ದಗಳನ್ನು ಬಳಸಿ ಪತ್ರ ಬರೆದ ಮಾಸ್ತರನಿಗೆ ಚೆನ್ನಬಸಪ್ಪನವರು ಬರೆದ ಉತ್ತರ ಹೀಗೆ.

ಈ ಪದದೋಷಗಳ ಪತ್ರವನ್ನು ಓದಿದಾಕ್ಷಣವೆ ನಮಗೆ ನಗಿ ಬಂತು. ಮತ್ತು ಪರೀಕ್ಷಕ್ಕೆ (ತನಿಖೆಗೆ) ಹೋದ ಸಮಯದಲ್ಲಿ ಈ ಮಾಸ್ತರರಿಗೆ ನಾವು ಛೀಮಾರಿ ಹಾಕುವವರಿದ್ದೇವೆ.

(೧೮೭೧ ಅಕ್ಟೋಬರ್)

ಇನ್ನೊಂದು ನೋಟೀಸಿನಲ್ಲಿ ಭಾಷಾ ಶುದ್ಧಿ ಬಗ್ಗೆ ಹೀಗೆ ಬರೆದಿದ್ದಾರೆ. ಈ ಮಾತುಗಳು ನೂರು ವರುಷಗಳ ಅನಂತರ ಇಂದಿಗೂ ಅನ್ವಯಿಸುತ್ತಿರುವುದು ವಿಷಾದನೀಯ ಸಂಗತಿ.

ನೋಟೀಸು ಹೀಗಿದೆ:

"ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ್ ಮಾಸ್ತರರು ಅಶಿಷ್ಟರಾದ ಮಾಸ್ತರರು, ಈ ಕೆಳಗೆ ಬರೆದಿರುವುದನ್ನೆಲ್ಲಾ ಮನಸುಗೊಟ್ಟು ಓದಿನೋಡಿ ತಾವು ಇತ್ತ ಕಡಿಗೆ ಕಳುಹಿಸುವ ಕಾಗದ ಪತ್ರಗಳನ್ನು ಎಚ್ಚರದಿಂದ ಬರೆದು ಕಳುಹಿಸುತ್ತಾ ಹೋಗಬೇಕು.

೧. ಓದಲಿಕ್ಕೆ ಬರುವ ಹಾಗೆ ಅಕ್ಷರಗಳನ್ನು ಸ್ಪಷ್ಟವಾಗಿ ಬರೆಯಬೇಕು.

೨. ಅಶುದ್ಧ ಬರೆಯಬಾರದು.

೩. ತಮ್ಮ ಕೈಲಾದ ಮಟ್ಟಿಗೆ ಶ್ರಮಪಟ್ಟು ಛಾಪಿಸಿದ ಅಕ್ಷರಗಳಂತೆ ಅಕ್ಷರಗಳನ್ನು ಬರೆಯಲಿಕ್ಕೆ ಕಲಿಯಬೇಕು.

೪. ಕಚೇರಿ ತರದ ಅಕ್ಷರಗಳನ್ನು ಅಗದಿ ಬರೆಯಬಾರದು.

೫. ಬರದದ್ದೆಲ್ಲಾ ವ್ಯಾಕರಣದ ನೇಮಕ್ಕೆ ತಪ್ಪದ ಹಾಗೆ ಬರೆಯುವುದಕ್ಕೆ ಕಲಿಯಬೇಕು.

ನಮ್ಮ ಕಡಿಗೆ ಕೆಲವು ಕನ್ನಡ ಕಾಗದಗಳು ಬಂದಿದ್ದಾವೆ. ಅವುಗಳನ್ನು ಓದಿ ನೋಡಲಾಗಿ ಅವುಗಳಲ್ಲಿ ಕೆಲವು ತಪ್ಪುಗಳು ನಮ್ಮ ದೃಷ್ಟಿಗೆ ಬಿದ್ದಿದ್ದಾವೆ. ಅವುಗಳನ್ನು ಇಲ್ಲಿ ಬರೆದಿದ್ದೇವೆ; ಎಂದು ತಪ್ಪು ಸರಿ ರೂಪಗಳ ಪಟ್ಟಿಕೊಟ್ಟಿದ್ದಾರೆ. ತಾಲ್ಲೂಕು ಮುಂದಕ್ಕೆ ತಾಲ್ಕು; ಬೇಕು ಎನ್ನಲು ಬೇಕ್ಕು, ತಮ್ಮಾ ಕಡೆ ಎನ್ನಲು ತಮ್ಮ ಕಡೆ; ಸಾಲಿಯ ಎನ್ನಲು ಶಾಲೇದ; ರಾಜಪೂಜಿತ ಎನ್ನುವ ಬದಲು ರಾಜಪೂಜೀತ ಇತ್ಯಾದಿ ತಪ್ಪು ರೂಪುಗಳನ್ನು ಎತ್ತಿ ತೋರಿಸಿದ್ದಾರೆ.

ಶಿಸ್ತಿಗೆ ಹೆಸರಾದವರು ಚೆನ್ನಬಸಪ್ಪನವರು. ಅವರನ್ನು ಕನ್ನಡ ಹುಲಿ ಎಂದು ಕರೆಯುವುದುಂಟು ಶಿಸ್ತಿನ ಪಾಲನೆ ವಿಚಾರದಲ್ಲಿ ಅವರು ಹುಲಿಯೇ ಹೌದು. ಶಿಕ್ಷಕನ ಯಾವುದೇ ಕರ್ತವ್ಯ ಲೋಪವನ್ನು ಅವರು ಸಹಿಸುತ್ತಿರಲಿಲ್ಲ ಇಗೋ ನೋಡಿ ಈ ಪತ್ರ ಅದಕ್ಕೆ ಸಾಕ್ಷಿ.

ಶಾಲಾಪತ್ರಿಕೆಯಲ್ಲಿ ಅಕ್ಟೋಬರ್ ೧೮೭೧ರಲ್ಲಿ ಪ್ರಕಟವಾದ ನೋಟೀಸು ಇದು;

ಧಾರವಾಡ ಜಿಲ್ಲೆಯೊಳಗಿನ ಯಾವತ್ತೊ ಸ್ಕೂಲ ಮಾಸ್ತರರಿಗೆ ಈ ನೋಟೀಸಿನಿಂದ ತಿಳಿಯಪಡಿಸುವುದೇನೆಂದರೆ– ಮಾಸ್ತರಜನರು ತಮ್ಮ ಸಾಲಿಯ

ಹುಡುಗರ ಕಡಿಂದಾ ತಮ್ಮ ಮನಿಯ ಕೆಲಸಗಳನ್ನು ಮಾಡಿಸುತ್ತಿರುತ್ತಾರೆ. ಹುಡುಗರನ್ನು ಪ್ಯಾಟಿಗೆ ಕರಕೊಂಡು ಹೋಗಿ ಅವರ ಮೇಲೆ ಕಾಳು ಕಡ್ಡಿ ಹೊರಸಿಕೊಂಡು ಬರುತ್ತಾರೆ. ಮನಿಯಲ್ಲಿ ನೀರು ತರಿಸುತ್ತಾರೆ. ಹಾಗೂ ಧೋತ್ರ ಮುಂತಾದವುಗಳನ್ನು ವೂಗಿಸುತ್ತಾರೆ. ಇದು ಬಹಳ ಕೆಟ್ಟದ್ದು. ಇಂಥಾ ತಪ್ಪನ್ನು ಯಾವ ಮಾಸ್ತರನು ಮಾಡಿದ್ದು ನಾವು ಕೇಳಿದರೆ ಅವರಿಗೆ ಶಿಕ್ಷೆ ಮಾಡುವೆವು ತಿಳಿಯುವುದು.

ಡೆಪ್ಯುಟಿ ಚೆನ್ನಬಸಪ್ಪನವರು ಹೊರಡಿಸುತ್ತಿದ್ದ ಸುತ್ತೋಲೆಗಳು ಬರಿಯ ಸೂಚನಾ ಪತ್ರಗಳು ಆದೇಶದ ಪತ್ರಗಳು ಆಗಿರುತ್ತಿರಲಿಲ್ಲ. ಅವು ಯಮಶಾಸನ ಗಳೆಂದರೆ ತಪ್ಪಿಲ್ಲ. ಅವರು ರಸೆಲ್ಲರಿಗೆ ಮೇಲಧಿಕಾರಿಗಳಿಗೆ ಯಾರ ಬಗ್ಗೆ ಏನೇ ಬರೆದರೂ ಕೂಡಲೇ ಅವು ಮಂಜೂರಾಗುತ್ತಿದ್ದವು. ಅವರು ಸೂಚಿಸಿದ ಶಿಸ್ತು ಕ್ರಮಗಳು ಅಂಗೀಕಾರವಾದ ನೋಟೀಸೊಂದು ಹೀಗಿದೆ.

೧. ಕರ್ತವ್ಯನಿರ್ವಹಣೆ ನೆಟ್ಟಗೆ ಮಾಡದಿದ್ದಕ್ಕೆ.

ಜೆಕ್ಕಲಿ ಮಾಸ್ತರರಾದ ನೂರಂದಪ್ಪಾ ಶಿವಲಿಂಗಪ್ಪಾ ಇವರು ನೆಟ್ಟಗೆ ಕೆಲಸ ಮಾಡದ ಕಾರಣ ಇವರ ಪಗಾರವನ್ನು ೧೨ ರೂಪಾಯಿನಿಂದ ೮ ರೂಪಾಯಿಗೆ ಮಾಡಿ ಇವರನ್ನು ಗದಗ ಸಾಲಿ ಶಿಕ್ಷಕೀ ಕೆಲಸಕ್ಕೆ ನೇಮಿಸಿದೆವು.

೨. ಹುಬ್ಬಳ್ಳಿ ಮಾಸ್ತರರಾದ ವೆಂಕಾಜಿ ಭಗವಂತ ಇವರು ಒಪ್ಪತ್ತಿನ ಹಾಜರಿ ತೆಗೆದುಕೊಳ್ಳದ ಕಾರಣ ಇವರಿಗೆ ಅರ್ಧ ರೂಪಾಯಿ ದಂಡವಾಯಿತು.

೩. ಇಂಗಳಿಗೆ ಸಾಲಿಯ ಮಾಸ್ತರರಾದ ಪೀರಸಾವಲ್ಲದ ಮೋಹದೀನಸಾ ಇವರು ಅಪ್ಪಣೆ ಇಲ್ಲದೆ ಸಾಲಿಯನ್ನು ಬಿಟ್ಟುಗೊಟ್ಟು ಊರಿಗೆ ಹೋಗಿದ್ದರು. ಆದ ಕಾರಣ ಇವರ ಪಗಾರವನ್ನು ೯ ರೂಪಾಯಿಂದ ೬ ರೂಪಾಯಿ ಮಾಡಿ ಬಂಕಾಪೂರ ಸಾಲಿಯ ಶಿಕ್ಷಕೀ ಕೆಲಸಕ್ಕೆ ನೇಮಿಸಿತು. ಹೀಗೆ ತಪ್ಪಿನ ಶಿಕ್ಷಕರಿಗೆ ದಂಡ ಮತ್ತು ಶಿಕ್ಷಾವರ್ಗಾವಣೆ ಮಾಡುತ್ತಿದ್ದ ಚೆನ್ನಬಸಪ್ಪನವರು ಒಳ್ಳೆಯ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದವರಿಗೆ ಪ್ರೋತ್ಸಾಹ ಬಡ್ತಿ ನೀಡುತ್ತಿದ್ದರು. "ತಿರ್ಲಾಪೂರ ಸಾಲಿಯ ಮಾಸ್ತರರಾದ ಅಡಿವೆಯ್ಯಾ ರುದ್ರಯ್ಯಾ ಇವರು ಉತ್ಕೃಷ್ಟ ಕೆಲಸ ಮಾಡಿದ್ದರಿಂದ ಇವರ ಪಗಾರವನ್ನು ೧೬ ರೂಪಾಯಿಂದ ೨೦ ರೂಪಾಯಿ ಮಾಡಿ ಇವರನ್ನು ಕರ್ಜಗಿ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿತು".

ಹೀಗೆ ತಪ್ಪಿತಸ್ಥರಿಗೆ ಉಗ್ರಕ್ರಮ ನ್ಯಾಯಸ್ಥರಿಗೆ ಪ್ರೋತ್ಸಾಹ ಬಡ್ತಿ ನೀಡುತ್ತಿದ್ದ ನ್ಯಾಯನಿಷ್ಠುರ ಆದ ಚನ್ನಬಸಪ್ಪನವರಿಗೆ ಹೊಗಳಿಕೆ ಸೇರುತ್ತಿರಲಿಲ್ಲ ಅಧಿಕಾರಿಗಳನ್ನು ಓಲೈಸಲು ಇಲ್ಲದ್ದನ್ನೆಲ್ಲಾ ಹೇಳುವುದು 'ನೀನೇ ಇಂದ್ರ ಚಂದ್ರ ಸುಂದ್ರ' ಅನ್ನುವುದು ಎಲ್ಲ ಕಾಲದಲ್ಲೂ ಇದ್ದದ್ದೇ. ಚನ್ನಬಸಪ್ಪನವರು ಒಂದು ಊರಿಗೆ ಶಾಲಾ ತನಿಖೆಗೆ ಹೋದಾಗ ಅಲ್ಲಿ ಒಬ್ಬ ಮಾಸ್ತರರು ಇವರ ಮೇಲೆ ಕವಿತಾ ಕಟ್ಟಿ ಇವರ ಮುಂದೆ ಹಾಡಿದರು. ಆಗ ಚೆನ್ನಬಸಪ್ಪ ಹೇಳಿದ ಮಾತುಗಳಿವು. "ನೀವು ನನ್ನ ಮೂಗನ್ನು ಸಂಪಿಗೆಯ ಹೂವಿಗೆ ಸರಿ ಎಂದು ಹೇಳಿದಿರಿ (ಸಂಸ್ಕೃತದಲ್ಲಿ ಸೊಗಸಾದ ಮೂಗಿಗೆ ಚಂಪಕನಾಸಿಕ ಎನ್ನುತ್ತಾರೆ) ಅದು ತಪ್ಪು ನಿಜವಾಗಿ ನನ್ನ ಮೂಗು ತೊಂಡೆಕಾಯಿಂತೆ ದಪ್ಪವಾಗಿದೆ. ಸುಳ್ಳು ಹೇಳಿ ತಪ್ಪು ಮಾಡುವ ಬದಲು ಮನೆಯಲ್ಲಿ ಒಂದು ಪಾವು ಜೋಳ ಬೀಸಿದ್ದರೆ ನಿಮಗೆ ಸಂತೋಷದಿಂದ ರೊಟ್ಟಿ ಮಾಡಿ ಹಾಕುತ್ತಿದ್ದರು" ಎಂದರು.

ಅವರ ಪ್ರಾಮಾಣಿಕ ಮತ್ತು ಸತ್ಯಸಭ್ಯತೆ ಬಗ್ಗೆ ಆಗಿನ ಸರ್ಕಾರಕ್ಕೆ ಎಷ್ಟು ಗೌರವ ನಂಬಿಕೆ ಇತ್ತು ಎಂದರೆ ಅದಕ್ಕೆ ಈ ಪ್ರಸಂಗವೇ ಸಾಕ್ಷಿಯಾಗಿದೆ.

ಡೆಪ್ಯುಟಿ ಚೆನ್ನಬಸಪ್ಪನವರ ಶಾಲೆಗಳ ಮೇಲ್ವಿಚಾರಣೆ ಕೆಲಸದ ಜತೆಗೆ ಧಾರವಾಡದಲ್ಲಿ ಇದ್ದ ಸರ್ಕಾರಿ ಬುಕ್ ಡಿಪೋ ಜವಾಬ್ದಾರಿಯೂ ಸೇರಿತ್ತು. ಆ ಬುಕ್ ಡಿಪೋನಲ್ಲಿದ್ದ ಕಾರಕೂನನು ಚೆನ್ನಬಸಪ್ಪನವರಿಗೆ ತಿಳಿಯದ ಹಾಗೆ ಲೆಕ್ಕ ಪತ್ರಗಳಲ್ಲಿ ಸುಳ್ಳನ್ನು ಸೃಷ್ಟಿಸಿ ೪-೬ ವರ್ಷಗಳಲ್ಲಿ ೪-೫ ಸಾವಿರ ರೂಪಾಯಿ ಗಳನ್ನು ಅಪರಾ ತಪರಾ ಮಾಡಿದ್ದನು. ಈಗಿನ ಲೆಕ್ಕದಲ್ಲಿ ಆಗಿನ ೪-೫ ಸಾವಿರ ರೂ.ಗಳು ಲಕ್ಷಾಂತರ ರೂಪಾಯಿಗಳಾಗುತ್ತವೆ. ಅವನು ಬರೆದ ಎಲ್ಲ ಲೆಕ್ಕಪತ್ರಗಳಿಗೂ ಜಮಾ ಖರ್ಚಿನ ಪುಸ್ತಕದಲ್ಲಿ ಚೆನ್ನಬಸಪ್ಪನವರ ಒಪ್ಪಿಗೆ ಸಹಿ ನೋಡಿದ್ದಕ್ಕೆ ಇರುತ್ತಿತ್ತು. ಅವನೂ ತನ್ನಂತೆ ಪ್ರಾಮಾಣಿಕ ಎಂದು ಭಾವಿಸಿ ಚೆನ್ನಬಸಪ್ಪನವರು ಸಹಿ ಮಾಡುತ್ತಿದ್ದರು. ಒಮ್ಮೆ ಲೆಕ್ಕ ಪತ್ರಗಳನ್ನು ಪರಿಶೀಲಿಸಿದರು. ಕಾರಕೂನನ ಮೋಸ ತಿಳಿಯಿತು. ಅವನು ಯಾರಿಗೂ ಸಿಗದಂತೆ ನಾಪತ್ತೆ ಆದನು. ಆಗ ಸರ್ಕಾರಕ್ಕೆ ಡೆಪ್ಯುಟಿ ಚೆನ್ನಬಸಪ್ಪನವರು ಬರೆದರು. "ಈ ಡಿಪೋದ ತಪಾಸಣೆಯು ನನ್ನ ಕಡೆ ಇದ್ದು ನಾನು ನನ್ನ ಹೆಡ್‌ಕ್ಲಾರ್ಕನ್ನು ನಂಬಿ ಈ ಜಮಾ ಖರ್ಚಿನ ಪುಸ್ತಕಗಳ ಮೇಲೆ ಸಹಿ ಮಾಡಿದ್ದು ನನ್ನ ತಪ್ಪು. ಈ ಹಣಕ್ಕೆ ನಾನೇ ಜವಾಬುದಾರನಾಗಿದ್ದೇನೆ. ಆದ್ದರಿಂದ ನನಗೆ ಸಲ್ಲತಕ್ಕ ಪಗಾರದಲ್ಲಿ ನನ್ನ ಮನೆತನದ ವೆಚ್ಚಕ್ಕೆ ೬೦ ರೂ ಮಾತ್ರ ಬಿಟ್ಟು ಉಳಿದೆಲ್ಲ ಹಣವನ್ನು ಕಡಿಮೆ ಬಿದ್ದ

ಹಣಕ್ಕೆ ಮುಟ್ಟಿಸಿಕೊಳ್ಳುವುದಕ್ಕೆ ಉಪಯೋಗಿಸಬೇಕು." ಎಂದು ಬರೆದರು. ಆದರೆ ಸರ್ಕಾರ ಅವರ ಸತ್ಯ ನಿಷ್ಠೆ ಪ್ರಾಮಾಣಿಕತನವನ್ನು ತಿಳಿದಿತ್ತಾದ್ದರಿಂದ ಆ ಕಾರಕೂನ ತಿಂದು ಹಾಕಿದ ಹಣವನ್ನು ಚೆನ್ನಬಸಪ್ಪನವರಿಂದ ಪಡೆಯಲಿಲ್ಲ. ಇದು ಅವರ ಸತ್ಯವರ್ತನೆಗೆ ಸಾಕ್ಷಿ.

ಚೆನ್ನಬಸಪ್ಪನವರು ಆಡಳಿತದಲ್ಲಿ ಹೇಗೆ ಶುದ್ಧಿಯಾಗಿದ್ದರೋ ನಿತ್ಯ ಜೀವನದಲ್ಲೂ ಶುದ್ಧರೂ, ವಿಚಾರವಾದಿಗಳೂ ಆಗಿದ್ದರು. ದೇಶ-ವಿದೇಶಗಳ ಘನ ವಿದ್ವಾಂಸರ ಕೃತಿಗಳ ಅಧ್ಯಯನ ಮಾಡಿದ್ದರು. ಅವರ ಬಳಿ ದೊಡ್ಡ ಗ್ರಂಥ ಭಂಡಾರವಿತ್ತು. ಮೂಢ ಸಂಪ್ರದಾಯಗಳನ್ನು ವಿರೋಧಿಸುತ್ತಿದ್ದರು. ಒಮ್ಮೆ ಅವರು ಊಟಕ್ಕೆ ಕುಳಿತಾಗ ಎಡಗೈಯಿಂದ ತಂಬಿಗೆಯನ್ನು ಎತ್ತಿ ನೀರು ಕುಡಿದಾಗ ಜತೆಯಲ್ಲಿ ಊಟಕ್ಕೆ ಕುಳಿತ ಶಾಸ್ತ್ರಿಗಳಲೊಬ್ಬರು "ಅಣ್ಣನವರೇ ಎಡಗೈ ಮಾತ್ರ ಹಚ್ಚಿ ನೀರು ಕುಡಿದರೆ ಅದು ಸೆರೆ (ಹೆಂಡ) ಕುಡಿದ ಹಾಗೆ ಆಗುತ್ತದೆ. ಅದಕ್ಕೆ ಬಲಗೈ ಹಚ್ಚೆ ಅಂದರೆ ಊಟದ ಕೈ ಹಿಂಗೈಯನ್ನು ಮುಟ್ಟಿಸಿಕೊಂಡು ಕುಡಿಯತಕ್ಕದ್ದು!" ಎಂದರು ಆಗ ಚೆನ್ನಬಸಪ್ಪನವರು ಅದು ಹೇಗಾಗುತ್ತದೆ. ಎಡಗೈಯಲ್ಲಿ ನೀರನ್ನು ತಂಬಿಗೆಯಲ್ಲಿ ತುಂಬಿ ಕುಡಿದರೆ ಸೆರೆಯಾಗುವ ಹಾಗಿದ್ದರೆ ಬಲಗೈಯಲ್ಲಿ ಸೆರೆ ತುಂಬಿದ ತಂಬಿಗೆಯಲ್ಲಿ ಕುಡಿದರೆ ಸೆರೆ ನೀರಾಗುತ್ತದೆಯೇ ಎಂದು ಪ್ರಶ್ನಿಸಿದರು.

ನೀರು ನೀರೇ, ಸೆರೆ ಸೆರೆಯೇ, ನೀರು ಸೆರೆ ಆಗದು ಸೆರೆ ನೀರು ಆಗದು. ಎಂದರು. ಶಾಸ್ತ್ರಿಗಳು ಮುಂದಕ್ಕೆ ಮಾತನಾಡಲಿಲ್ಲ.

ಅವರು ಮೂಢ ಸಂಪ್ರದಾಯ ವಿರೋಧಿಸುವುದರ ಜತೆಗೆ ಶಾಸ್ತ್ರಾರ್ಥ ವಿಚಾರಗಳಲ್ಲಿ ಚೆನ್ನಾಗಿ ಅರಿತವರು ನುರಿತವರು ಆಗಿದ್ದರು. ಒಮ್ಮೆ ಧಾರವಾಡದ ಗಣ್ಯರ ಮನೆಯಲ್ಲಿ ಲಗ್ನ ಸಮಾರಂಭಕ್ಕೆ ಮಠದ ಸ್ವಾಮಿಗಳು, ಶಾಸ್ತ್ರಿಗಳು, ಪಂಡಿತರು, ಗಣ್ಯರು ಬಂದಿದ್ದರು. ಅಲ್ಲಿ ಚೆನ್ನಬಸಪ್ಪನವರಿಗೂ ಅವರೆಲ್ಲರ ಜತೆ ಚರ್ಚೆಯಾಯಿತು. 'ದೇವರ ಅಸ್ತಿತ್ವ' ದೇವರ ನಾಸ್ತಿತ್ವ ಮತ್ತು ಇಂದ್ರಿಯಗಳಲ್ಲಿ ಯಥಾರ್ಥ ಜ್ಞಾನವಿಲ್ಲ ಈ ವಿಷಯಗಳ ಬಗ್ಗೆ ಯಾರಾದರೂ ತಮ್ಮೊಡನೆ ವಾದ ಮಾಡಿ ಗೆದ್ದರೆ ಅವರಿಗೆ ೨೦೦ ರೂ ಬಹುಮಾನ ಎಂದು ಘೋಷಿಸಿ ವಾದ ಮಾಡುವರು ನಿಯಮಿತ ವೇಳೆಯಲ್ಲಿ ವಿಠೋಬ ದೇವರ ಗುಡಿಗೆ ಬನ್ನಿ ಎಂದು ಹೇಳಿ ಮೂರನೇ ದಿನ ವಾದಕ್ಕೆ ಚೆನ್ನಬಸಪ್ಪನವರು ಕಾದು ಕುಳಿತರು. ಆದರೆ ಯಾರೂ ಅವರೊಡನೆ ವಾದಕ್ಕೆ ಬರಲಿಲ್ಲ.

ಚೆನ್ನಬಸಪ್ಪನವರು ಕೇವಲ ಪಂಡಿತರು ಶಿಕ್ಷಕರು ಅಷ್ಟೇ ಆಗಿರಲಿಲ್ಲ. ಸಾಮಾಜಿಕ ಸೇವೆಯಲ್ಲಿ ತೊಡಗಿದವರೂ ಆಗಿದ್ದರು.

ಒಳ್ಳೆಯ ವಾಗ್ಮಿಗಳಾಗಿದ್ದರು. ಉಚ್ಚಧ್ವನಿಯ ಎತ್ತರವಾದ ಬಲವಾದ ಮೈಕಟ್ಟಿನ ತೇಜಃಪುಂಜವಾದ ಮುಖ ಮುದ್ರೆಯಿಂದ ಮಾರ್ಮಿಕವಾಗಿ ಮಾತಾಡುತ್ತಿದ್ದ ಕಂಚಿನ ನಾದದ ಅವರ ನುಡಿಗಳು ಜನರನ್ನು ಸ್ತಬ್ಧ ಗೊಳಿಸುತ್ತಿದ್ದವು. ಕೇಳಿದವರು ಮಂತ್ರ ಮುಗ್ಧರಾಗುತ್ತಿದ್ದರು. ಅವರಲ್ಲಿ ಸಮಯಕ್ಕೆ ತಕ್ಕಂತೆ ವರ್ತಿಸುವ ಪ್ರಸಂಗಾವಧಾನತೆ ಇತ್ತು.

ಒಮ್ಮೆ ಅವರು ತಮ್ಮ ಮನೆಯ ಕಟ್ಟೆಯ ಮೇಲೆ ಕುಳಿತಿದ್ದಾಗ ಇಬ್ಬರು ಹೆಣ್ಣಮಕ್ಕಳು ಜಗಳವಾಡ ತೊಡಗಿ ಪರಸ್ಪರ ಕಾದಾಡುವವರ ಹಾಗೆ ವಾಚಾಮಗೋಚರವಾಗಿ ಬೈಗುಳ ಮಳೆ ಸುರಿಸಿ ಕಚ್ಚಾಡತೊಡಗಿದರು. ಆಗ ಚೆನ್ನಬಸಪ್ಪನವರು ಅವರ ಬಳಿ ಹೋಗಿ "ಅವ್ವಾ ನಿನ್ನಲ್ಲಿದ್ದ ಇನ್ನೂ ಅತಿ ಹೆಚ್ಚಿನ ಬೈಗುಳನ್ನು ಬಳಸು ಇಲ್ಲವಾದರೆ ಬೇಡ, ನಿನ್ನ ಘನತೆಗೆ ಇಂಥ ಚಿಕ್ಕ ಬೈಗುಳನ್ನು ಬಳಸಬಾರದು ಇನ್ನೂ ಭಯಂಕರ ಬೈಗುಳಲ್ಲಿ ಜಗಳವಾಡಬೇಕು ಆಡು" ಎಂದಾಗ ಅವರಿಬ್ಬರು ನಾಚಿಕೆಯಿಂದ ತಲೆತಗ್ಗಿಸಿ ಜಗಳ ನಿಲ್ಲಿಸಿದರು. ಹಳ್ಳಿಯ ಜನರನ್ನು ಮಾತಿನಲ್ಲಿ ಆಕರ್ಷಿಸುವ ಕಲೆ ಅವರಿಗಿತ್ತು.

ಅವರ ಬದುಕಿನ ಸಾಧನೆಗಳಲ್ಲಿ ಮುಖ್ಯವಾದವುಗಳಲ್ಲಿ ಐತಿಹಾಸಿಕ ಮಹತ್ವ ಸಂಗತಿ ಎಂದರೆ ಲಿಂಗಾಯತ ಬೋರ್ಡಿಂಗ್ ಸ್ಥಾಪನೆ ಮಾಡಿದ್ದು ಎನ್ನಬಹುದು. ಬಡ ವೀರಶೈವ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ಪ್ರಸಾದನಿಲಯ ಹಾಸ್ಟೆಲ್ಲನ್ನು ಪ್ರಾರಂಭಿಸಬೇಕೆಂಬುದು ಅವರ ಉತ್ಕಟೇಚ್ಛೆ ಆಗಿತ್ತು. ಹೀಗಿದ್ದಾಗ ಹಾಸ್ಟೆಲ್ ಪ್ರಾರಂಭಕ್ಕೆ ಅನುಕೂಲವಾದ ಪ್ರಸಂಗವೊಂದು ನಡೆಯಿತು.

ಚಿತ್ರದುರ್ಗದ ಬೃಹನ್ಮಠ ಪೀಠದ ಶ್ರೀ ಮಹಾಲಿಂಗ ಸ್ವಾಮಿಗಳು ದೇಶ ಸಂಚಾರ ಹೊರಟು ೧೮೬೮ರಲ್ಲಿ ಉಳವಿಗೆ ಬಂದರು. ಆ ಕಾಲದಲ್ಲಿ ಅವರು ಪರಶಿವನ ಅವತಾರ ಎಂದು ಜನ ಭಾವಿಸುತ್ತಿದ್ದರು. ಅವರಿಗೆ ಯಾರೂ ಎದುರಾಡುತ್ತಿರಲಿಲ್ಲ.

ನಾಡಿನ ಸೇವೆ ಸಲ್ಲಿಸಿ ೧೯ನೇ ಶತಮಾನದಲ್ಲಿ ಕನ್ನಡ ಸಂರಕ್ಷಕರಾದ ಡೆಪ್ಯುಟಿ ಚೆನ್ನಬಸಪ್ಪನವರು ಕನ್ನಡವನ್ನು ಉದ್ಧರಿಸಿದ ಪುಣ್ಯಪುರುಷರಲ್ಲಿ ಅಗ್ರ

ಗಣ್ಯರಾಗಿದ್ದಾರೆ. ಪ್ರತಿ ಕನ್ನಡಿಗನೂ ಆರಾಧಿಸಬೇಕಾದ ಆದರ್ಶ ಪುರುಷರಾಗಿದ್ದರು.

ಉಳವಿಯಲ್ಲಿ ಗಣಾರಾಧನೆಯನ್ನು ಸಾವಿರಾರು ರೂ ವೆಚ್ಚದಲ್ಲಿ ಮೃಷ್ಟಾನ್ನ ಭೋಜನ, ಅದ್ದೂರಿ ಮೆರವಣಿಗೆ, ಭಾರಿ ಅಲಂಕಾರ, ಗುಡಾರಗಳ ವ್ಯವಸ್ಥೆ ಯಿಂದ ಇಂದ್ರವೈಭವದಿಂದ ನಡೆಸಿದರು. ಊರಿನ ಎಲ್ಲಾ ಗಣ್ಯರೂ ಅಧಿಕಾರಿಗಳು ಬಂದು ಸ್ವಾಮಿಗಳ ದರ್ಶನ ಪಡೆದರು. ಚೆನ್ನಬಸಪ್ಪನವರು ಈ ಆಡಂಬರ ಕಂಡು ಬೇಸರಗೊಂಡು ಹೋಗಲಿಲ್ಲ. ಆಗಿನ ಲಿಂಗವಂತ ಸಮಾಜದಲ್ಲಿ ಅತಿಗಣ್ಯರಾದ ಚನ್ನಬಸಪ್ಪ ಬಾರದಿದ್ದನ್ನು ಕಂಡು ಹೇಳಿ ಕರೆಯಿಸಿಕೊಂಡರು. ಸ್ವಾಮಿಗಳಿಗೆ ಚನ್ನಬಸಪ್ಪ ಹೇಳಿದರು.

"ಇಷ್ಟು ಅದ್ದೂರಿಯಾಗಿ ವೈಭವಾಡಂಬರದಲ್ಲಿ ಸಹಸ್ರ ರೂ. ಖರ್ಚು ಮಾಡಿ ಗಣಾರಾಧನೆ, ಭೋಜನ ಸಮಾರಂಭ ಏರ್ಪಡಿಸಿ ಏನಾಯಿತು. ಉಳಿವಿ ಪ್ರದೇಶ ಊಟದೆಲೆ ಇತ್ಯಾದಿಗಳಿಂದ ಹೊಲಸಾಯಿತು ಅಷ್ಟೆ. ಇಲ್ಲಿ ಉಂಡವರಿಗೆಲ್ಲರಿಗೂ ಊಟದ ಅಗತ್ಯವಿತ್ತೇ? ಅಗತ್ಯವಿಲ್ಲದವರಿಗೆ ಈ ರೀತಿ ಭೋಜನ ವ್ಯವಸ್ಥೆ ಮಾಡಿದ್ದು ಅಪವ್ಯಯ. ಹೀಗೆ ವೆಚ್ಚ ಮಾಡುವ ಬದಲು ವೀರಶೈವ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿನಿಲಯ ಸ್ಥಾಪನೆಗೆ ವೆಚ್ಚ ಮಾಡಿದರೆ ಒಳ್ಳೆಯದಲ್ಲವೇ ಎಂದು ಹೇಳಿದಾಗ, ಸ್ವಾಮಿಗಳು ಅವರ ಮಾತನ್ನು ಮೆಚ್ಚಿ ಸಂತೋಷಿಸಿದರು. ಪ್ರತಿ ತಿಂಗಳು ವೀರಶೈವ ವಿದ್ಯಾರ್ಥಿ ನಿಲಯಕ್ಕೆ ೩೦೦ ರೂ ಕೊಡಲು ಪ್ರಾರಂಭಿಸಿದರು. ಆ ಸ್ವಾಮಿಗಳು ನಿಧನಾ ನಂತರ ಆ ಹಣ ಬರುವುದು ನಿಂತು ವಿದ್ಯಾರ್ಥಿನಿಲಯ ನಡೆಯುವುದು ಕಷ್ಟವಾದಾಗ ಡೆಪ್ಯುಟಿ ಚೆನ್ನಬಸಪ್ಪನವರು ಆ ವಿದ್ಯಾರ್ಥಿನಿಲಯ ನಡೆಸಲು ಮಾಡಿದ ಸಾಲ ತೀರಿಸಲು ಮನೆ ಮಾರಿದರು. ಮಡದಿಯ ಆಭರಣಗಳನ್ನು ಮಾರಿ ಸಾಲ ತೀರಿಸಿದರು. ಅವರ ಈ ಪ್ರಯತ್ನ ಕರ್ನಾಟಕದಲ್ಲಿ ವೀರಶೈವ ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ ನಾಂದಿ ಆಯಿತು; ಸ್ಫೂರ್ತಿ ಆಯಿತು.

ಚೆನ್ನಬಸಪ್ಪನವರು ಸಾಹಿತಿಗಳನ್ನು ರೂಪುಗೊಳಿಸಿದ್ದಲ್ಲದೆ ತಾವೇ ಸ್ವತಃ ಸಾಹಿತಿ ಆಗಿದ್ದರು. ಕನ್ನಡದಲ್ಲಿ ಷೇಕ್ಸ್‌ಪಿಯರನ್ನು ತಂದ ಮೊದಲಿಗರು ಅವರು. ಕಾಮೆಡಿ ಆಫ್ ಎರರ್ಸ್ ಮತ್ತು ಮ್ಯಾಕ್ಬೆತ್ ನಾಟಕಗಳನ್ನು ಕನ್ನಡಿಸಿದರು. ಮರಾಠಿಯಲ್ಲಿ ಎರಡು ಗಣಿತ ಗ್ರಂಥ ರಚಿಸಿದ್ದಾರೆ ಕನ್ನಡದಲ್ಲೂ


ಅಂಕಗಣಿತವನ್ನು ೨ ಭಾಗಗಳಲ್ಲಿ ರಚಿಸಿದ್ದಾರೆ ಹೀಗೆ ಶಿಕ್ಷಣ ರಂಗದಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ನಾಡಿನ ಸೇವೆ ಸಲ್ಲಿಸಿ ೧೯ನೇ ಶತಮಾನದಲ್ಲಿ ಕನ್ನಡ ಸಂರಕ್ಷಕರಾದ ಡೆಪ್ಯುಟಿ ಚೆನ್ನಬಸಪ್ಪನವರು ಕನ್ನಡವನ್ನು ಉದ್ಧರಿಸಿದ ಪುಣ್ಯಪುರುಷರಲ್ಲಿ ಅಗ್ರಗಣ್ಯರಾಗಿದ್ದಾರೆ. ಪ್ರತಿ ಕನ್ನಡಿಗನೂ ಆರಾಧಿಸಬೇಕಾದ ಆದರ್ಶಪುರುಷರಿದ್ದಾರೆ.

ಚೆನ್ನಬಸಪ್ಪನವರು ತಾವೊಬ್ಬರೇ ಕನ್ನಡದ ಕೆಲಸಕ್ಕೆ ಮುಂದಾಳಾಗಿ ದುಡಿಯಲಿಲ್ಲ ಒಂದು ಪಡೆಯನ್ನೇ ನಿರ್ಮಿಸಿದರು. ತಮ್ಮ ಶಿಷ್ಯರನ್ನು ಕನ್ನಡ ಸೇವೆಗೆ, ಗ್ರಂಥರಚನೆಗೆ ಕನ್ನಡ ಸಂಸ್ಥೆಗಳ ಸ್ಥಾಪನೆಗೆ ಪ್ರೇರೇಪಿಸಿದರು ಸ್ಫೂರ್ತಿ ನೀಡಿದರು. ಮಾರ್ಗದರ್ಶನ ಮಾಡಿದರು. ಇವರು ವೀರಶೈವ ವಿದ್ಯಾರ್ಥಿ ನಿಲಯ ಸ್ಥಾಪಿಸಿದವರಲ್ಲಿ ಮೊದಲಿಗರು ಕರ್ನಾಟಕದಲ್ಲಿ ಇವರಿಂದ ಸ್ಫೂರ್ತಿ ಪಡೆದ ಬೆಳಗಾವಿ ಅರಟಾಳ ರುದ್ರಗೌಡರು ೧೯೧೬ರಲ್ಲಿ ಇತರ ಆರು ಮಂದಿ ಮಿತ್ರರೊಡನೆ ಸೇರಿ ಕೆಎಲ್‌ಇ ಸಂಸ್ಥೆ ಸ್ಥಾಪಿಸಿದರು. ಎ.ವಿ. ಶಾಲೆಯಿಂದ ಪ್ರಾರಂಭವಾದ ಈ ಸಂಸ್ಥೆಯಲ್ಲಿ ಇಂದು ೧೮೦ ಅಂಗಸಂಸ್ಥೆಗಳಲ್ಲಿ ೬೫೦೦೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಸ್ವತಂತ್ರ ವಿಶ್ವವಿದ್ಯಾಲಯವಾಗಿ ಸಂಸ್ಥೆ (ಡೀಮ್ಡ್ ಯೂನಿವರ್ಸಿಟಿ) ಆಗಿ ರೂಪುಗೊಂಡಿದೆ. ಕರ್ನಾಟಕ ವಿಶ್ವವಿದ್ಯಾಲಯದ ಮಾದರಿ ಕುಲಪತಿ ಪಂಜಾಬ್ ರಾಜ್ಯಪಾಲರಾಗಿದ್ದ ಪದ್ಮಶ್ರೀ ಡಿ.ಸಿ. ಪಾವಟೆ ಅವರು ೧೯೦೭ ರಲ್ಲಿ ವಿದ್ಯಾರ್ಥಿ ಆಗಿದ್ದಾಗ ಚನ್ನಬಸಪ್ಪನವರ ಗಣಿತದ ಪುಸ್ತಕ ಪಾರಿತೋಷಕವಾಗಿ ದೊರೆತು, ಗಣಿತದಲ್ಲಿ ಆಸಕ್ತಿ ಉಂಟಾಗಿ ವಿಖ್ಯಾತ ಗಣಿತ ಶಾಸ್ತ್ರಜ್ಞರಾದರು. ಕನ್ನಡದ ವಚನಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿ ಅವರು, ಡೆಪ್ಯುಟಿ ಚೆನ್ನಬಸಪ್ಪನವರ ಸಾಧನೆ ವ್ಯಕ್ತಿತ್ವಕ್ಕೆ ಮಾರು ಹೋದವರು. ಗ್ರಂಥರಚನೆಗೆ ತೊಡಗಿದವರು; ಡೆಪ್ಯುಟಿ ಅವರ ಬಗ್ಗೆ ಕನ್ನಡದಲ್ಲಿ ಮೊದಲ ಜೀವನ ಚರಿತ್ರೆ ಬರೆದಿದ್ದಾರೆ.

ಕನ್ನಡದಲ್ಲಿ ಬಾಣನ ಕಾದಂಬರಿ ಸೊಗಸಾದ ಅನುವಾದ ಮಾಡಿ, ಟೀಕಾಗ್ರಂಥಗಳನ್ನು ಬರೆದು, ಶಬ್ದಮಂಜರಿಯೆಂಬ ೫೮೬ ಪದಗಳ ಹಳಗನ್ನಡ ನಿಘಂಟನ್ನು ೧೮೬೯ರಲ್ಲಿ ರಚಿಸಿದ ಹೊಸಗನ್ನಡ ಗದ್ಯದ ರೂವಾರಿಗಳಲ್ಲಿ ಒಬ್ಬರಾದ ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಡೆಪ್ಯುಟಿ ಚೆನ್ನಬಸಪ್ಪನವರಿಂದ ಪ್ರೋತ್ಸಾಹಿತರಾದವರು. ಅವರೊಂದಿಗೆ ಕನ್ನಡಕ್ಕೆ ದುಡಿದಿದ್ದಾರೆ. ಕಿಟಲ್‌ರಿಗೆ ಕನ್ನಡದ ರುಚಿ ಹತ್ತಿಸಿದ ಶಾಂತವೀರ ರಾಜದೇವ

ಕಿತ್ತೂರ ಪಾದ್ರಿಗಳಿಗೆ ಕನ್ನಡ ಕಲಿಸಿದವರು. ಛಂದಸ್ಸು ನಿಘಂಟು ಗ್ರಂಥ ರಚಿಸಿದ ಕನ್ನಡಪಂಡಿತ ಶ್ರೇಷ್ಠರಾದ ಇವರು ಡೆಪ್ಯುಟಿ ಚೆನ್ನಬಸಪ್ಪ ನವರಿಂದ ಅನೇಕ ವಿಷಯಗಳಿಗೆ ಸಲಹೆ ಪಡೆದುಕೊಳ್ಳುತ್ತಿದ್ದರು. ವೆಂಕಟ ರಂಗೋ ಕಟ್ಟಿ ಅವರು ಪಠ್ಯಗ್ರಂಥಗಳನ್ನು ಬರೆಯುವುದರಲ್ಲಿ ಮುಂಬಯಿ ಕರ್ನಾಟಕದಲ್ಲೇ ಪ್ರಸಿದ್ಧರಾದವರು. ಇವರಿಗೆ ೨೦ ರೂ ಸಂಬಳದಿಂದ ೮೦ ರೂ. ಹೆಚ್ಚುವಂತೆ ಮಾಡಿದವರು ಡೆಪ್ಯುಟಿ ಅವರು. ಹೀಗೆ ಡೆಪ್ಯುಟಿ ಚೆನ್ನಬಸಪ್ಪನವರು ತಮ್ಮ ಸಮಕಾಲೀನ ಕನ್ನಡ ಗಂಡುಗಲಿಗಳ ಜತೆ ಸಂಪರ್ಕ ಮಾಡಿಕೊಂಡು ಅವರನ್ನೆಲ್ಲ ಕನ್ನಡ ಕಾಯಕದಲ್ಲಿ ಕನ್ನಡ ಪಡೆ ನಿರ್ಮಿಸಿದರು. ಸ್ಫೂರ್ತಿಯಿಂದ ಕೆಲಸ ಮಾಡಲು ಹತ್ತಾರು ಬಗೆಯಲ್ಲಿ ನೆರವಾದರು. ಕನ್ನಡದ ಪುಣ್ಯಪುರುಷ, ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ಅಗ್ರಗಣ್ಯ, ಕನ್ನಡ ಶಿಕ್ಷಕರೆಂದರೆ ಡೆಪ್ಯುಟಿ ಚೆನ್ನಬಸಪ್ಪ ಎನ್ನುವುದರಲ್ಲಿ ಎರಡು ಮಾತಿಲ್ಲ.

❐



೫. ಗ್ರೀಕ್ ಪಂಡಿತ

ಕ.ವೆಂ. ರಾಘವಾಚಾರ್

ಹತ್ತಾರು ವರ್ಷಗಳ ಹಿಂದಿನ ಮಾತು. ಮಿತ್ರರೊಬ್ಬರು ಹೇಳಿದ ಸಂಗತಿ. ಮಿತ್ರರ ಹೆಸರು ಮರೆತಿದ್ದೇನೆ. ಹೇಳಿದ ಪ್ರಸಂಗ ನೆನಪಿದೆ.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಒಂದು ಸಮಾರಂಭ. ಸಮಾರಂಭದಲ್ಲಿ ವಿದ್ಯಾರ್ಥಿಗಳೂ ಅಧ್ಯಾಪಕರೂ ಭಾಗವಹಿಸಿದ್ದರು. ಅಧ್ಯಾಪಕರ ಪೈಕಿ ಕುವೆಂಪು, ಡಿಎಲ್ಎನ್, ಕ.ವೆಂ. ರಾಘವಾಚಾರ್ ಮೊದಲಾದವರು ಭಾಗವಹಿಸಿದ್ದರು. ನಿರೂಪಿತರು ಆಹ್ವಾನಿತರಾದ ಅಧ್ಯಾಪಕರು ಮಾತನಾಡುವ ಬಗ್ಗೆ ಹೇಳಿದರು: ಸನ್ಮಾನ್ಯ ಗುರುಗಳಾದ ಮಹಾಕವಿಗಳಾದ ಕುವೆಂಪು ಅವರು ಹಳಗನ್ನಡ ಕಾಲದ ಕನ್ನಡದ ಕಾವ್ಯಭಾಷೆಯಲ್ಲಿ, ಹಳಗನ್ನಡ ವಿದ್ವಾಂಸರಾದ ಡಿ.ಎಲ್. ನರಸಿಂಹಾಚಾರ್ಯರು ವಡ್ಡಾರಾಧನೆ ಕಾಲದ ಹಳಗನ್ನಡದ ಗದ್ಯದಲ್ಲಿ, ಕ.ವೆಂ. ರಾಘವಾಚಾರ್ ಅವರು ಗ್ರೀಕ್ ಭಾಷೆಯ ಕಾಲದ ಕನ್ನಡದಲ್ಲಿ ಮಾತಾಡುತ್ತಾರೆ. ಹೀಗೆ ಹೇಳಿದಾಗ ಸಭೆಯಲ್ಲಿ ಸಂತೋಷವೋ ಸಂತೋಷ. ಏಕೆಂದರೆ ಅಧ್ಯಾಪಕರು ನಿರೂಪಕರು ಹೇಳಿದಂತೆಯೇ ಮಾತನಾಡಿದರು. ಮೂವರು ಕನ್ನಡ ಆಚಾರ್ಯರೇ ಆದರೂ ಒಬ್ಬೊಬ್ಬರ ಪಾಂಡಿತ್ಯ ಒಂದೊಂದರಲ್ಲಿ. ವಿದ್ಯಾರ್ಥಿಗಳು ಅಂದಿನ ಅಪರೂಪದ ಭಾಷಣಗಳನ್ನು ಕೇಳಿ ಖುಷಿಪಟ್ಟರು. ಅಂದು ಆ ಸಭೆಯಲ್ಲಿ ಗ್ರೀಕ್ ಭಾಷೆಯ ಕಾಲದ ಕನ್ನಡದಲ್ಲಿ ಮಾತಾಡಿದವರು ಕ.ವೆಂ. ರಾಘವಾಚಾರ್ ಅವರು.

ಇನ್ನೊಂದು ಪ್ರಸಂಗ

ವಿದ್ಯಾರ್ಥಿಯೊಬ್ಬ ಪಾಠ ಕೇಳಲು ಪೂರ್ವಸಿದ್ಧತೆ ಹೇಗೆ ಮಾಡಿಕೊಳ್ಳಬೇಕು ಎಂಬುದಕ್ಕೆ ನಿದರ್ಶನವಾದ ಸಂಗತಿ. ಬಿ.ಎಂ. ಶ್ರೀಯವರು ಇಂಗ್ಲಿಷ್ ಆಗಲಿ ಕನ್ನಡವಾಗಲಿ ಅದ್ಭುತವಾಗಿ ಪಾಠ ಮಾಡುತ್ತಿದ್ದವರು. ಕನ್ನಡ ಪಾಠ ಮಾಡುವುದರಲ್ಲಿ ಅವರನ್ನು ಮೀರಿಸುವವರೇ ಇಲ್ಲ. ಅವರ ಸಾಮರ್ಥ್ಯ

ಅನುಪಮ. ಅವರ ಪಾಠ ಒಂದು ರಸದೌತಣ, ಹತ್ತಾರು ವರ್ಷಗಳಾದರೂ ಅವರ ಪಾಠಗಳನ್ನು ನೆನಪಿಸಿಕೊಳ್ಳುವವರು ಈಗಲೂ ಇದ್ದಾರೆ. ಶ್ರೀ ಅವರು ಮೈಸೂರು ಮಹಾರಾಜ ಕಾಲೇಜಿನಿಂದ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಂದ ಮೇಲೂ ಮೈಸೂರಿಗೆ ಹೋಗಿ ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳುತ್ತಿದ್ದರು. ಒಮ್ಮೆ ಪಾಠ ಹೇಳುವ ಮೊದಲು ಬಂದ ವಿದ್ಯಾರ್ಥಿಗಳನ್ನು ನಿಮಗೆ ಏನಾದರೂ ಪಾಠದಲ್ಲಿ ಸಂದೇಹಗಳಿದ್ದರೆ ಕೇಳಿ ಎಂದರು. ಆಗ ಒಬ್ಬ ವಿದ್ಯಾರ್ಥಿ ಪಠ್ಯವಾಗಿದ್ದ ಆದಿಪುರಾಣದಲ್ಲಿ ಬೇಕಾದಷ್ಟು ಪದಗಳ ಅರ್ಥದ ಬಗ್ಗೆ ಪ್ರಶ್ನೆಗಳನ್ನು ಹಾಕಿಕೊಂಡು ಬಂದಿದ್ದ. ಒಂದೊಂದು ಪದದ ಬಗ್ಗೆ ಪ್ರಶ್ನೆ ಕೇಳುತ್ತಾ ಬಂದ ಹಾಗೆಲ್ಲ ಶ್ರೀ ಅವರು, ಆಗಾಗ "ನೋಡಬೇಕಪ್ಪ, ಗೊತ್ತಿಲ್ಲ, ಯೋಚನೆ ಮಾಡಬೇಕಪ್ಪಾ" ಎನ್ನುತ್ತಿದ್ದರು. ವಿದ್ಯಾರ್ಥಿ ಕೇಳಿದ ಪ್ರತಿ ಪ್ರಶ್ನೆಗೆ ಉತ್ತರಿಸುತ್ತಾ ಇನ್ನೂ ಇದೆಯೋ ಮುಗೀತಾ ಪ್ರಶ್ನೆಗಳು ಎಂದಾಗ ಆ ವಿದ್ಯಾರ್ಥಿ 'ಇಷ್ಟೇ ಸಾರ್' ಎಂದ. ಆಗ ಶ್ರೀ ಹೇಳಿದರು. 'ನೋಡಿರಪ್ಪಾ, ನನಗೆ ಗೊತ್ತಿರೋದೆಲ್ಲ ನಿಮಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲದಿರುವುದು ನನಗೂ ಗೊತ್ತಿಲ್ಲ ಎಂದ ಮೇಲೆ ನಾನು ಪಾಠ ಮಾಡುವ ಅಗತ್ಯವಿಲ್ಲ ಅಲ್ಲವೇ?' ಎಂದರು. ಆಗ ಜಾಣ ವಿದ್ಯಾರ್ಥಿ ಹೇಳಿದ "ಹಾಗಲ್ಲ ಸಾರ್, ನನಗೆ ಗೊತ್ತಿಲ್ಲದ ವಿಷಯಗಳು ಎಷ್ಟೋ ಇವೆ. ಅವು ಗೊತ್ತಿಲ್ಲ ಎಂದು ಕೂಡಾ ನನಗೆ ಗೊತ್ತಿಲ್ಲ ನಿಮಗಾದರೆ ಗೊತ್ತಿರುವುದು ಯಾವುದು, ಗೊತ್ತಿಲ್ಲದಿರುವುದು ಯಾವುದು ಎಂದು ಖಚಿತವಾಗಿ ಗೊತ್ತು" ಎಂದಾಗ ಆ ಜಾಣ ವಿದ್ಯಾರ್ಥಿ ಮಾತಿಗೆ ತಲೆದೂಗಿದರು. ಆ ವಿದ್ಯಾರ್ಥಿಯೇ ಕ.ವೆಂ. ರಾಘವಾಚಾರ್.

ಇಂಥ ಶ್ರದ್ಧಾವಂತ ಜಾಣವಿದ್ಯಾರ್ಥಿ, ಕ.ವೆಂ.ರಾ. ಮುಂದಕ್ಕೆ ಗ್ರೀಕ್ ಪಂಡಿತರೂ ಹಳಗನ್ನಡ ವಿದ್ವಾಂಸರೂ ಆದರು. ಅಚ್ಚಗನ್ನಡ ಭಾಷಾ ಪಾಂಡಿತ್ಯವನ್ನು ಆಂಡಯ್ಯನಂತೆ ಗಳಿಸಿದರು. ಕನ್ನಡದಲ್ಲಿ ಆಂಡಯ್ಯನೆಂಬ ಕವಿ 'ಕಬ್ಬಿಗರ ಕಾವ' ಎಂಬ ಕಾವ್ಯ ಬರೆದಿದ್ದಾನೆ. ಅದರಲ್ಲಿ ಕನ್ನಡ ಶಬ್ದಗಳನ್ನಷ್ಟೆ ಬಳಸಿದ್ದಾನೆ. ಅವನ ಅನಂತರ ೨೦ನೇ ಶತಮಾನದಲ್ಲಿ ಅವನಂತೆ ಅಚ್ಚಗನ್ನಡದಲ್ಲಿ ಕಾವ್ಯ ರಚನೆ, ಕೋಶರಚನೆ ಮಾಡಿದವರು ಕೊಳಂಬೆ ಪುಟ್ಟಣ್ಣಗೌಡರು. ಅದೇ ರೀತಿ ಅಚ್ಚಗನ್ನಡ ಬರೆಯಬಲ್ಲ ಶಕ್ತಿ ಪಡೆದಿದ್ದವರು ಕ.ವೆಂ. ರಾಘವಾಚಾರ್ಯರು. ಗೋವಿಂದ ಪೈ ಅವರು ರಾಷ್ಟ್ರಕವಿಗಳು.

ಮದರಾಸಿನಲ್ಲಿ ಸನ್ಮಾನಿತರಾಗಿ ಮೈಸೂರಿಗೆ ಬಂದಾಗ ಅವರಿಗೆ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಕ.ವೆಂ. ರಾಘವಾಚಾರ್ಯರು ಪ್ರಶಸ್ತಿಪತ್ರವನ್ನು ಮೆಚ್ಚೋಲೆ ಎಂದು ರಚಿಸಿ ವಾಚಿಸಿದರು. ಆ ಪತ್ರವನ್ನು ಎಷ್ಟರಮಟ್ಟಿಗೆ ಅಚ್ಚಗನ್ನಡದಲ್ಲಿ ಬರೆದಿದ್ದರು ಎಂಬುದಕ್ಕೆ ಈ ಗದ್ಯ ಭಾಗವನ್ನು ಗಮನಿಸಬಹುದು.

"ಮದರಾಸು ಆಡಳಿತದಿಂದ ತಮಗೆ ಸಂದ ಹೊಸಹಿರಿಮೆಯ ಸಡಗರದಲ್ಲಿ ಕನ್ನಡ ನಾಡಿನ ಮೂಲೆಮೂಲೆಗಳಿಂದ ಒಕ್ಕೊರಲಾಗಿ ಕೇಳಿ ಬರುತ್ತಿರುವ ತಮ್ಮ ಕೊಂಡಾಟದ ಕೂಗಿಗೆ ನಮ್ಮ ಕೊರಲನ್ನೂ ಸೇರಿಸಿ ಮರುಕೂಗು ಕೊಡುವುದು ನಮಗೆ ತುಂಬ ಹೆಮ್ಮೆ.

ಎಳವೆಯಿಂದ ಎಡಬಿಡದೆ ದುಡಿದು ಮುಪ್ಪಿನಲ್ಲಿಯೂ ಬಿಡುವುಗೊಳ್ಳದೆ ಕೆಲಸವೇ ಕಣ್ಣಾಗಿ ಬಾಳುತ್ತಿರುವ ತಮ್ಮ ಹುರುಪಲ್ಲಿ ಎಳೆಯರನ್ನೂ ನಾಚಿಸುತ್ತದೆ. ಪಡುಗಡಲು ನಲವೇರಿ/ತೆರೆಯತಾಳಿ ತಂಪೆರದು/ಕಳಿಕಳಿಕೆ ಬೀರುವ ಮಂಜೇಶ್ವರದಲ್ಲಿ ಎರಡು ಕಡಲ ಕೂಟವನ್ನು ಕಾಣುತ್ತೇವೆ ನಾವು. ಮೇರೆಗಾಣದ ನೀರಿನ ಕಡಲೊಂದು: ಆಳ ಕಾಣದ ಅರಿವಿನ ಕಡಲೊಂದು: ಅಡಿಯ ನೆಲನಗಟ್ಟಿ ಸುತ್ತನೀರಿನ ತಿಳಿ, ಮೇಲೆ ಬಾನಿನ ಹರವು ಈ ಮೂರೂ ಮೂಡಿವೆ ತಮ್ಮ ಹೆಬ್ಬಾಳಿನಲ್ಲಿ ಓದಿಗಿಂತ ಬಾಳು ಹಿರಿದು. ಬಾಳಿಗಿಂತ ಆಳು ಹಿರಿದು ಎಂಬ ಹಿರಿಯರಿವನ್ನು ನಮ್ಮ ಬಗೆಯಲ್ಲಿ ತಾವು ಅರಳಿಸುತ್ತಿದ್ದೀರಿ ಕನ್ನಡದ ಕಾಪಾಗಿ ಸೈಪಾಗಿ ನಾಡಬೆಳಕಾಗಿ ಹಲವು ನೇಸರ ಉರುಳುಗಳನ್ನು ತಮ್ಮ ಕಣ್ಣು ಕಾಣಲೆಂದು ಹಾರೈಸುತ್ತೇವೆ."

ಸಂಸ್ಕೃತ, ಇಂಗ್ಲಿಷ್ ಇತರ ಭಾಷೆಯ ಒಂದೂ ಪದ ಇಲ್ಲಿ ಬಳಸಿಲ್ಲ ಎಂಬುದನ್ನು ಗಮನಿಸಬೇಕು.

ಇಂಥ ಶ್ರದ್ಧಾವಂತ ವಿದ್ಯಾರ್ಥಿ ಗ್ರೀಕ್ ಪಂಡಿತ ಘನ ಕನ್ನಡ ವಿದ್ವಾಂಸರಾದ ಕ.ವೆಂ. ರಾಘವಾಚಾರ್ಯರು ೪-೬-೧೯೦೪ರಲ್ಲಿ ವೆಂಕಟಾಚಾರ್ಯ-ತಿರುಮಲಮ್ಮ ದಂಪತಿಗಳಿಗೆ ತಾಯಿಯ ತವರೂರಾದ ಪ್ರಸಿದ್ಧ ಚೆನ್ನಕೇಶವ ದೇವಾಲಯ ವಿರುವ ಬೇಲೂರಿನಲ್ಲಿ ಜನಿಸಿದರು. ಪ್ರಸಿದ್ಧ ವಿದ್ವಾಂಸರ ಮನೆತನಕ್ಕೆ ಸೇರಿದವರು, ಕ.ವೆಂ.ರಾ ಅವರು. ತಂದೆ ವೆಂಕಟಾಚಾರ್ಯರು ವೃತ್ತಿಯಲ್ಲಿ ವಕೀಲರಾದರೂ, ತಾತ ಶ್ರೀನಿವಾಸಭಟ್ಟರು ಆಚಾರನಿಷ್ಠರೂ ಶಾಸ್ತ್ರವೇತ್ತರೂ, ಘನಪಂಡಿತರೂ ಆಗಿದ್ದರು. ತಾತನ ಪಾಂಡಿತ್ಯ ಮೊಮ್ಮಗನಲ್ಲಿ ಕಾಣಿಸಿಕೊಂಡಿತ್ತು.

ಬಾಲ್ಯದಲ್ಲಿಯೇ ತಾಯಿಯನ್ನು ಅಣ್ಣನನ್ನು ಕಳೆದುಕೊಂಡ ಅವರು ಚಿಕ್ಕಪ್ಪ ಶ್ರೀನಿವಾಸಯ್ಯಂಗಾರ್ಯರ ಪೋಷಣೆಯಲ್ಲಿ ಬೆಳೆದರು.

ರಾಘವಾಚಾರ್ ಅವರು ತಮ್ಮ ಶಾಲಾ ಶಿಕ್ಷಣವನ್ನು ತುಮಕೂರಿನ ಎ.ವಿ. ಸ್ಕೂಲಿನಲ್ಲಿ ನಡೆಸುತ್ತಿದ್ದಾಗ ಅಲ್ಲಿ ಆ ಕಾಲಕ್ಕೆ ಪ್ಲೇಗು ಹಬ್ಬಿದ್ದರಿಂದ ಬೆಂಗಳೂರಿಗೆ ಬಂದು ಕೋಟೆ ಪ್ರೌಢಶಾಲೆ (ಫೋರ್ಟ್ ಹೈಸ್ಕೂಲಿನಲ್ಲಿ) ಮತ್ತು ಬೆಂಗಳೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಓದಿದರು. ಪದವಿ ಶಿಕ್ಷಣವನ್ನು ಸೆಂಟ್ರಲ್ ಕಾಲೇಜಿನಲ್ಲಿ ಪೂರೈಸಿದರು. ಆ ಕಾಲದಲ್ಲಿ ಪ್ರತಿಭಾವಂತ ವಿದ್ವಾಂಸರಾದ, ಮೆಟ್ಕಾಫ್, ವೆಂಕಟರಾವ್ ತೆಲಂಗ್, ಬಿ.ವೆಂಕಟೇಶಾಚಾರ್ಯ, ಟಿ.ಎಸ್. ವೆಂಕಣ್ಣಯ್ಯ ಎ.ಆರ್. ಕೃ ಅವರಿಂದ ಪ್ರಭಾವಿತರಾದರು.

ಕ.ವೆಂ.ರಾ ಅವರು ಫೋರ್ಟ್‌ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಕನ್ನಡದಲ್ಲಿ ಮೊದಲು ಪತ್ತೇದಾರಿ ಕಾದಂಬರಿ ಬರೆದು, ಅದಕ್ಕಾಗಿಯೇ ತರಂಗಿಣಿ ಪತ್ರಿಕೆ ಹೊರಡಿಸಿ ಕನ್ನಡ, ಸಂಸ್ಕೃತ, ಬಂಗಾಳಿ ಮೊದಲಾದ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದ ವಿದ್ವಾನ್ ಬಾಲಸರಸ್ವತಿ ಅವರು ಕವೆಂರಾ ಅವರ ಗುರುಗಳಾಗಿದ್ದರು. ಡಿ.ವಿ. ಗುಂಡಪ್ಪನವರೇ ಬಾಲಸರಸ್ವತಿ ಅವರ ಬಳಿ ಸಂಸ್ಕೃತ ಕಲಿಯಲು ಯತ್ನಿಸಿದ್ದರು. ಅಂತಹ ಘನ ಪಂಡಿತರು, ವಾಗ್ಮಿಗಳು ಬಾಲಸರಸ್ವತಿ ಅವರಾಗಿದ್ದರು.

ಬಾಲಸರಸ್ವತಿ ಅವರು ಡ್ರಾಯಿಂಗ್ ಟೀಚರ್ ಆಗಿದ್ದರು. ಅವರ ತರಗತಿಯಲ್ಲಿ ನಡೆದ ಪ್ರಸಂಗವನ್ನು ವಿದ್ಯಾರ್ಥಿ ಆಗಿದ್ದ ಕವೆಂರಾ ತಮ್ಮ ಆತ್ಮ ಕಥನದಲ್ಲಿ ಹೀಗೆ ವರ್ಣಿಸಿದ್ದಾರೆ. "೧೯೧೧ರ ಉತ್ತರಾರ್ಧದಲ್ಲಿ ಹೀಗೊಮ್ಮೆ ಪ್ಲೇಗು ತಲೆದೋರಿದಾಗ ಸಂಸಾರವನ್ನು (ತಂದೆ ವೆಂಕಟಾಚಾರ್) ಅವರು ಬೆಂಗಳೂರಿಗೆ ಸಾಗಿಸಿದರು. ಆಗ ನಾನು ಇಂಗ್ಲಿಷ್ ಒಂದನೆಯ ಕ್ಲಾಸಿನಲ್ಲಿ ಓದುತ್ತಿದ್ದೆ. ಮೊದಲನೆಯ ಟರ್ಮು ಕಳೆದು ಎರಡನೆಯ ಟರ್ಮು ತೊಡಗಿತ್ತು. ಕೋಟೆ ಎ.ವಿ. ಸ್ಕೂಲಿಗೆ (ಈಗಿನ ಹಳೇ ಕೋಟೆ ಪ್ರೌಢಶಾಲೆ) ಸೇರಿಕೊಂಡೆ. ಸೇರಿಕೊಂಡ ಒಂದೆರಡು ದಿನಗಳಲ್ಲಿ ವೇಳಾಪಟ್ಟಿಯಂತೆ ಡ್ರಾಯಿಂಗ್ ಪಿರಿಯಡ್ ಬಂತು. ಆಗ ಡ್ರಾಯಿಂಗ್‌ಗಾಗಿಯೇ ಪ್ರತ್ಯೇಕ ಕೊಠಡಿ ಇದ್ದು ಒಂದು ಗೋಡೆಯ ಉದ್ದಕ್ಕೂ ಬೋರ್ಡು ಹೊಂದಿಸಿದ್ದರು. ಹುಲುಸುಗಡ್ಡ ಬೆಳಸಿ ಕೆಂಪು ಕೋರೆ ರುಮಾಲು ಸುತ್ತಿದ ಗಂಭೀರವ್ಯಕ್ತಿ ಕುರ್ಚಿಯ ಮೇಲೆ

ಮಂಡಿಸಿದ್ದನ್ನು ಕಂಡು ನಾನು ಬೆರಗಾದೆ. ಪತ್ತೇದಾರಿ ಕಥೆಗಳಿಗೆ ಹೆಸರಾಗಿದ್ದ ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದ ವಿದ್ವಾನ್ ಬಾಲಸರಸ್ವತಿಗಳೇ ಆ ವ್ಯಕ್ತಿ.

ಬೋರ್ಡಿನ ಮೇಲೆ ಒಂದು ಹೂಜಿಯ ಚಿತ್ರ ಬರೆದು ಅದನ್ನು ನಮ್ಮ ಡ್ರಾಯಿಂಗ್ ಪುಸ್ತಕದಲ್ಲಿ ಬರೆಯುವಂತೆ ಹೇಳಿದರು. ನಾನು ಬರೆದು ಪೂರೈಸಿ ಸುಮ್ಮನೆ ಕುಳಿತಿದ್ದುದನ್ನು ನೋಡಿ ತುಂಬ ಚೆನ್ನಾಗಿದೆ ಎಂದು ಹೇಳಿ, ಪಕ್ಕದ ಅಲಮಾರಿನ ಬಾಗಿಲು ತೆಗೆಯ ಹೋದರು.

ನಾನು ಏನು ಮಾಡುತ್ತಾರೋ ಎಂದು ಕುತೂಹಲದಿಂದ ನೋಡುತ್ತಿದ್ದ ಹಾಗೆಯೇ ಅದರೊಳಗಿಂದ ಒಂದು ಭಾರಿ ಪೆಟಲುಗೋಳವೆಯನ್ನು ತೆಗೆದು ಕೊಂಡು "ಕೈಹಿಡಿ" ಎಂದು ಗದರಿಸಿ ಗೆಣ್ಣಮೇಲೆ ಬಲವಾಗಿ ಹೊಡೆದರು. ನಾನು ಕಕ್ಕಾಬಿಕ್ಕಿ ಆಗಿ ಅಳತೊಡಗಿದೆ.

ಜತೆ ಹುಡುಗರು "ಸಾರ್! ಅವನು ಹೊಸ ಹುಡುಗ ತುಮಕೂರಿಂದ ಬಂದಿದ್ದಾನೆ" ಎಂದು ವಿವರಣೆ ಕೊಟ್ಟರು. ನಾನು ಬರೆದ ಚಿತ್ರವನ್ನು ನನ್ನ ಮುಖಕ್ಕೆ ಹಿಡಿದು ಏನಿದು ನಿನ್ನ ತಲೆ?" ಎಂದರು. ಹೂಜಿಯ ಹೊಟ್ಟೆಯಲ್ಲಿ ಚಿತ್ರಿಸಿದ್ದ ತಿರುವು ಮೊಳೆಯ ತಲೆಯನ್ನು ತೋರಿಸಿದರು. ನಾನು ಹುಡುಗಾಟಕ್ಕಾಗಿ ಅದನ್ನು ಕೊರೆದಿದ್ದೆನೆಂದು ಅವರ ಭಾವನೆ. ನಾನು ಅಳುತ್ತಲೇ ಅವರ ಕೈಯನ್ನು ಹಿಡಿದುಕೊಂಡು ಬೋರ್ಡಿನ ಹತ್ತಿರ ಹೋಗಿ ಅವರು ಬರೆದಿದ್ದ ಚಿತ್ರದಲ್ಲೂ ಆ ಗುರುತು ಇರುವುದನ್ನು ತೋರಿಸಿದೆ. ಸನ್ನಿವೇಶ ವೈಚಿತ್ರ್ಯ! ಬೋರ್ಡನ್ನು ಗೋಡೆಗೆ ಹೊದ್ದಿಸಿ ಅಲ್ಲಲ್ಲಿ ದೊಡ್ಡ ತಿರುವು ಮೊಳೆಗಳನ್ನು ಮುರುಕಿದ್ದರು. ಅಂಥ ಒಂದು ಮೊಳೆ ಹೂಜಿಯ ಚಿತ್ರದ ನಟ್ಟ ನಡುವೆ ಸಿಕ್ಕಿಕೊಂಡಿತ್ತು. ಸೀಮೆಸುಣ್ಣದ ಪುಡಿ ಹತ್ತಿಕೊಂಡು ಅದೂ ಒಂದು ಚಿತ್ರವಾಗಿ ಕಂಗೊಳಿಸುತ್ತಿತ್ತು. ನನಗೆ ಅದೊಂದೂ ತಿಳಿಯದೆ ಅದೂ ಚಿತ್ರದ ಭಾಗವೆಂದು ತಿಳಿದು ಪ್ರಾಮಾಣಿಕವಾಗಿ ಚಿತ್ರಿಸಿದ್ದೆ. ವಿಷಯವೆಲ್ಲಾ ತಿಳಿದ ಮೇಲೆ ತಾವು ತಿಳಿಯದೆ ಹೊಡೆದದ್ದಕ್ಕೆ ಪಶ್ಚಾತ್ತಾಪಪಟ್ಟು "ಹೋಗಲಿ ಬಿಡು, ಡ್ರಾಯಿಂಗ್ ಚೆನ್ನಾಗಿದೆ" ಎಂದು ಸಮಾಧಾನ ಪಡಿಸಿದರು."

ಶಾಲಾ ಶಿಕ್ಷಣ ನಂತರ ಮೈಸೂರು ಕಾಲೇಜು ಶಿಕ್ಷಣವನ್ನು ತುಮಕೂರು ಬೆಂಗಳೂರಿನಲ್ಲಿ ಮುಂದುವರೆಸಿದರು. ೧೯೨೮ರಲ್ಲಿ ಮೈಸೂರಿನಲ್ಲಿ ಕನ್ನಡ ಎಂಎ ತರಗತಿಗಳಿಗೆ ಸೇರಿದರು. ೧೯೩೧ರಲ್ಲಿ ಎಂಎ ಪದವಿ ಗಳಿಸಿದರು.

ಅವರಿಗೆ ಆ ಕಾಲದಲ್ಲಿ ವಿದ್ವಾಂಸರಾದ ಟಿ.ಎಸ್. ಸುಬ್ಬರಾಯಶಾಸ್ತ್ರಿಗಳು, ಡಿ. ಶ್ರೀನಿವಾಸಾಚಾರ್ಯರು, ಸಿ.ಆರ್. ನರಸಿಂಹ ಶಾಸ್ತ್ರಿಗಳು, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ಬಿಎಂಶ್ರೀ ಮೊದಲಾದವರು ಸ್ಫೂರ್ತಿ ನೀಡಿದರು. ಮಾರ್ಗ ದರ್ಶನ ಮಾಡಿದರು. ಕವೆಂರಾ ಎಂಎ ತರಗತಿಯಲ್ಲಿ ಓದುವಾಗ ತೀನಂಶ್ರೀ, ಜಿ.ಪಿ. ರಾಜರತ್ನಂ ಅವರು ಸಹಪಾಠಿಗಳಾಗಿದ್ದರು. ಆ ಕಾಲದಲ್ಲಿ ಕನ್ನಡ ಎಂ.ಎ ತರಗತಿಗಳಿಗೆ ಬೆರಳಲ್ಲಿ ಎಣಿಸುವಷ್ಟು ಮಂದಿ ಅಷ್ಟೆ ಎಂಬಷ್ಟು ವಿದ್ಯಾರ್ಥಿ ಗಳಾಗಿರುತ್ತಿದ್ದರು. ಈ ತಂಡದಲ್ಲಿ ಈ ಮೂವರೇ ಇದ್ದರು. ಆ ಸಂದರ್ಭದ ಒಂದು ಸಂಗತಿ ರೋಚಕವಾದುದು. ಪರೀಕ್ಷೆ ಮುಗಿದಾಗ ಫಲಿತಾಂಶ ತಿಳಿಯಲು ಜಿ.ಪಿ. ರಾಜರತ್ನಂ ಅವರು ಬಿಎಂಶ್ರೀ ಅವರ ಬಳಿ ಹೋದರು. ಅವರು ತೃತೀಯ ದರ್ಜೆಯಲ್ಲಿ ಕನ್ನಡ ಎಂ.ಎ.ಯಲ್ಲಿ ಉತ್ತೀರ್ಣರಾಗಿದ್ದರು. ಅದನ್ನು ತಿಳಿಸಲು ಬಿಎಂಶ್ರೀ ಅವರಿಗೆ ಸ್ವಲ್ಪ ಸಂಕೋಚವಾಯಿತಂತೆ. ಆಗ ಅವರು ಹೇಳಿದರಂತೆ. "ನೋಡಪ್ಪಾ, ತೀ.ನಂ. ಶ್ರೀಕಂಠಯ್ಯ ಬಲುಜಾಣ ಅವನಿಗೆ ಫಸ್ಟ್‌ಕ್ಲಾಸ್ ಸಿಕ್ಕಿರುತ್ತೆ ಇನ್ನು ರಾಘವಾಚಾರ್, ಸಾಮಾನ್ಯನಲ್ಲ' ಅವನಿಗೊಂದು ಸೆಕೆಂಡ್ ಕ್ಲಾಸ್ ಆದರೂ ಸಿಕ್ಕಿಯೇ ಇರುತ್ತೆ ಎಂದರಂತೆ. ಆಗ ರಾಜರತ್ನಂ ಅವರಿಗೆ ತಾವು ಥರ್ಡ್‌ಕ್ಲಾಸಿನಲ್ಲಿ ಉತ್ತೀರ್ಣರಾಗಿದ್ದು ಅರ್ಥವಾಗಿ 'ಸರಿಸಾರ್' ಎಂದು ಹೇಳಿ ಹೊರಬಂದರಂತೆ. ಜಿ.ಪಿ. ರಾಜರತ್ನಂ ಅವರು ವಿನೋದವಾಗಿ, ನಾನು ಗಾಂಧಿಕ್ಲಾಸಿನವನು ಎನ್ನುತ್ತಿದ್ದರು.

ಹೀಗೆ ಎಂಎ ಪದವಿ ಪಡೆದ ಮೇಲೆ ಕವೆಂರಾ ಅವರು ಅಷ್ಟೆ ಅಲ್ಲ ಉಳಿದವರು ಸಾಕಷ್ಟು ಕಾಲ ಉದ್ಯೋಗ ಸಿಗದೆ ಪರಿತಪಿಸಿದರು. ಆ ಕಾಲವೇ ಹಾಗಿತ್ತು. ಉನ್ನತ ಶಿಕ್ಷಣ ರಂಗದಲ್ಲಿ ಉದ್ಯೋಗಾವಕಾಶಗಳು ತೀರಾ ಕಮ್ಮಿ ಇತ್ತು. ಹೀಗಾಗಿ ನಿರುದ್ಯೋಗಿಗಳಾದ ಕ.ವೆಂ.ರಾ. ಶಿಕ್ಷಣ ಕಾಲೇಜಿಗೆ ಸೇರಿ ಬಿ.ಟಿ. ಪದವಿಯನ್ನು ೧೯೩೭ರಲ್ಲಿ ಪಡೆದರು. ಆಗಲೂ ಕೆಲಸ ಸಿಗದೆ ಆ ಕಾಲದಲ್ಲಿ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿದ್ದ ಎಚ್.ಕೆ. ಮೌಲ್ಟನ್ ಎಂಬ ಗ್ರೀಕ್ ಪಂಡಿತರಲ್ಲಿ ಗ್ರೀಕ್ ಭಾಷೆಯನ್ನು ಕಲಿತರು. ಇದರಿಂದ ಕನ್ನಡಕ್ಕೆ ಗ್ರೀಕ್ ಕೃತಿಗಳ ಕೊಡುಗೆಯನ್ನು ನೇರವಾಗಿ ಇತ್ತರು.

ಕನ್ನಡ ಸಾಹಿತ್ಯದ ಕೆಲವು ವೈಶಿಷ್ಟ್ಯಗಳನ್ನು ನಾವು ಕನ್ನಡದಲ್ಲಿ ಮಾತ್ರ ಕಾಣುತ್ತೇವೆ ಇತರ ಭಾರತೀಯ ಭಾಷೆಗಳಲ್ಲಿ ಕಾಣುವುದಿಲ್ಲ. ಉದಾಹರಣೆಗೆ

ಇಂಗ್ಲಿಷ್ ಮೊದಲಾದ ವಿದೇಶೀ ಭಾಷೆಗಳಿಂದ ಇತರ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಅನೇಕ ಪ್ರಸಿದ್ಧ ಸಾಹಿತಿಗಳ ನಾಟಕ ಕೃತಿಗಳು ಅನುವಾದವಾಗಿವೆ. ರೂಪಾಂತರಗೊಂಡಿವೆ. ಆ ಪೈಕಿ ಗ್ರೀಕ್ ಭಾಷೆಯಲ್ಲಿ ಜಗತ್ ಪ್ರಸಿದ್ಧವಾದ ನಾಟಕಗಳು ಭಾರತೀಯ ಭಾಷೆಗಳಿಗೆ ಅನುವಾದವಾಗಿರುವುದನ್ನು ಕಾಣಬಹುದು. ಆದರೆ ಬಹುತೇಕ ಇಂಗ್ಲಿಷ್ ಭಾಷೆಯಿಂದ ಭಾರತೀಯ ಭಾಷೆಗಳಿಗೆ ಗ್ರೀಕ್ ನಾಟಕಗಳನ್ನು ಅನುವಾದಿಸಿದ್ದಾರೆ. ಕನ್ನಡಕ್ಕೆ ನೇರವಾಗಿ ಗ್ರೀಕ್ ಭಾಷೆಯಿಂದಲೇ ಬಂದಿವೆ. ಇದನ್ನು ಪ್ರಾರಂಭಿಸಿದವರು ಬಿ.ಎಂ.ಶ್ರೀ. ಅವರು ಅನುವಾದಿಸಿದ್ದ ಗ್ರೀಕ್ ನಾಟಕ ಏಜಾಕ್ಸ್ ಆಧಾರಿತ ಅಶ್ವತ್ಥಾಮನ್ ಕನ್ನಡದ ಪ್ರಸಿದ್ಧ ಹಳಗನ್ನಡ ನಾಟಕ ಒಂದು ಶ್ರೇಷ್ಠ ನಿದರ್ಶನವಾಗಿದೆ. ಶ್ರೀ ಅವರ ಶಿಷ್ಯರಾದ ಕ.ವೆಂ. ರಾಘವಾಚಾರ್ ಅವರು ಗುರುಗಳ ದಾರಿಯಲ್ಲೇ ನಡೆದು ಒಂದು ಹರ್ಷನಾಟಕವನ್ನು ಆರು ಗ್ರೀಕ್ ರುದ್ರ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಈಸ್ಕಿಲಸ್ ಕವಿಯ ರುದ್ರನಾಟಕ ಅಗಮೆಮ್ನೋನ್ ಅನ್ನು ಗದ್ಯದಲ್ಲೂ ಅರಿಸ್ಟೊಫನೇಸನ 'ಕಪ್ಪೆಗಳು' ಎಂಬ ಹರ್ಷ ನಾಟಕವನ್ನು ಗದ್ಯ ಪದ್ಯಾತ್ಮಕವಾಗಿ, ಸೊಫೊಕ್ಲೆಸನ ಒಯ್ದಿಪೌಸ್ ದೊರೆ ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ ಅಂತಿಗೊನೆ–ಎಲೆಕ್ಟ್ರ–ಫಿಲೋಕ್ತೇತಸ್ ಎಂಬ ಐದು ನಾಟಕಗಳನ್ನು ಪದ್ಯರೂಪದಲ್ಲೂ ಅನುವಾದಿಸಿದ್ದಾರೆ. ಈ ಎಲ್ಲಾ ನಾಟಕಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ವಿಸ್ತಾರವಾದ ವಿದ್ವತ್ಪೂರ್ಣವಾದ ಮುನ್ನುಡಿಗಳನ್ನು, ಗ್ರೀಕ್ ನಾಟಕಕಾರರ ಬಗ್ಗೆ ಗ್ರೀಕ್ ರಂಗಭೂಮಿ ಬಗ್ಗೆ, ನಾಟಕಗಳ ಬಗ್ಗೆ ವಿಮರ್ಶೆಯನ್ನು ಬರೆದಿದ್ದಾರೆ.

ಬಿಎಂಶ್ರೀ–ಕವೆಂರಾ ನಂತರದಲ್ಲಿ ಟಿ.ವಿ. ವೆಂಕಟಾಚಲಶಾಸ್ತ್ರಿ ಕೆ.ಎಸ್.ನರಸಿಂಹಸ್ವಾಮಿ, ಸುಜನಾ, ಲಂಕೇಶ್ ಮೊದಲಾದವರು ಗ್ರೀಕ್ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಆದರೆ ಅವರೆಲ್ಲ ಇಂಗ್ಲಿಷಿನಲ್ಲಿ ಗ್ರೀಕ್‌ನಿಂದ ಅನುವಾದಿತ ನಾಟಕಗಳನ್ನು ಆಧರಿಸಿ ಅನುವಾದಿಸಿದ್ದಾರೆ ಹೀಗೆ ನೇರವಾಗಿ ಗ್ರೀಕಿನಿಂದಲೇ ಕನ್ನಡಕ್ಕೆ ಅಧಿಕ ನಾಟಕಗಳನ್ನು ಮೊದಲು ಅನುವಾದಿಸಿದವರು ಕನ್ನಡದಲ್ಲಷ್ಟೇ ಅಲ್ಲ ಭಾರತೀಯ ಭಾಷೆಗಳಲ್ಲೇ ಕವೆಂರಾ ಮೊಟ್ಟಮೊದಲಿಗರು ಆಗಿದ್ದಾರೆ. ಈ ಸಾಹಸಕ್ಕೆ ಕಾರಣವಾದುದು. ಅವರ ನಿರುದ್ಯೋಗದ ಪರಿಸ್ಥಿತಿ ಎಂದರೆ ಅನೇಕರಿಗೆ ಅಚ್ಚರಿಯ ಸಂಗತಿ ಆಗಬಹುದು ಆದರೆ ಅದು ವಾಸ್ತವ ಸಂಗತಿ.

ಹೀಗೆ ಎಂ.ಎ. ಪಾಸು ಮಾಡಿದನಂತರ ನಿರುದ್ಯೋಗಿಗಳಾಗಿದ್ದು ಗ್ರೀಕ್ ಭಾಷೆಯನ್ನು, ತಮಿಳು ಭಾಷೆಯನ್ನು ಕಲಿತನಂತರ ೧೯೩೩ರಲ್ಲಿ ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜು ಮತ್ತು ಜಿಲ್ಲಾ ನಾರ್ಮಲ್ ಸ್ಕೂಲಿನಲ್ಲಿ ಸ್ವಲ್ಪಕಾಲ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ೧೯೪೨ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಎಂ.ಆರ್. ಶ್ರೀನಿವಾಸ ಮೂರ್ತಿಗಳ ಕೋರಿಕೆ ಮೇರೆಗೆ ೧೯೪೩ ರಿಂದ ೧೯೪೬ರವರೆಗೆ ಇಂಗ್ಲಿಷ್ ಕನ್ನಡ ನಿಘಂಟಿನ ಕಾರ್ಯಕ್ಕೆ ನಿಯೋಜಿತರಾದರು. ೧೯೪೭ರಲ್ಲಿ ಮತ್ತೆ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಮರಳಿದರು. ೧೯೫೯ರಲ್ಲಿ ಉಪಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ೧೯೫೯ ರಲ್ಲಿ ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ನೇಮಕ ವಾದರು. ದೆಹಲಿ ವಿಶ್ವವಿದ್ಯಾಲಯದಿಂದ ೧೯೬೯ರಲ್ಲಿ ನಿವೃತ್ತರಾದ ಮೇಲೆ ಮತ್ತೆ ನಿಘಂಟು ಸಮಿತಿಯಲ್ಲಿ ಸೇವೆ ಸಲ್ಲಿಸಿ, ೨೭-೮-೧೯೭೭ರಲ್ಲಿ ಮೈಸೂರಿನಲ್ಲಿ ನಿಧನರಾದರು.

ಹೀಗೆ ಕನ್ನಡ ಅಧ್ಯಾಪನ ಮತ್ತು ಕನ್ನಡ-ಇಂಗ್ಲಿಷ್ ಕನ್ನಡ ನಿಘಂಟು ನಿರ್ಮಾಣದಲ್ಲಿ ಸೇವೆ ಸಲ್ಲಿಸಿದವರು ಕವೆಂರಾ ಅವರು.

ಕ.ವೆಂ.ರಾಘವಾಚಾರ್ಯರು ಕೇವಲ ಶಿಕ್ಷಕರೂ ಕೋಶಕಾರರೂ ಅಷ್ಟೇ ಆಗಿರಲಿಲ್ಲ. ಅವರು ಸಾರ್ವಜನಿಕ ಸೇವಾ ಧುರಂಧರರೂ ಆಗಿದ್ದರು. ಸ್ವಾತಂತ್ರ್ಯ ಪ್ರೇಮಿಗಳೂ ಗಾಂಧಿಭಕ್ತರೂ ಆಗಿದ್ದರು. ಬಾಳಿನುದ್ದಕ್ಕೂ ಖಾದಿಯನ್ನೇ ಧರಿಸಿದರು. ಹಿಂದೂಸ್ತಾನಿ ಸೇವಾದಳದ ಬೆಂಗಳೂರು ಶಾಖೆಯ ಸ್ವಯಂ ಸೇವಕತಂಡದ ಸದಸ್ಯರಾಗಿ ೧೯೨೪ರಲ್ಲಿ ಗಾಂಧೀಜಿ ಭಾಗವಹಿಸಿದ್ದ ಬೆಳಗಾವಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸಿದರು. ಮತ್ತೆ ೧೯೨೭ರಲ್ಲಿ ಮದರಾಸಿನ ಕಾಂಗ್ರೆಸ್ ಅಧಿವೇಶನದಲ್ಲೂ, ಬೆಂಗಳೂರಿನ ನಂದಿಬೆಟ್ಟಕ್ಕೆ ಗಾಂಧೀಜಿ ವಿಶ್ರಾಂತಿಗಾಗಿ ಬಂದಿದ್ದಾಗಲೂ ಗಾಂಧಿಗೆ ಸೇವೆ ಸಲ್ಲಿಸಿದವರು ಕ.ವೆಂ. ರಾಘವಾಚಾರ್ಯ ಅವರು. ಹೀಗಾಗಿ ರಾಜಾಜಿ, ಮದನ ಮೋಹನ ಮಾಲವೀಯ, ಮೋತೀಲಾಲ್ ನೆಹರೂ ಮೊದಲಾದವರ ರಾಷ್ಟ್ರನಾಯಕರ ಪರಿಚಯ ಹೊಂದಿ ಪ್ರಭಾವಿತರಾಗಿದ್ದರು.

ಬೆಂಗಳೂರಿನಲ್ಲಿ ಕಾಲೇಜು ವಿದ್ಯಾರ್ಥಿ ಆಗಿದ್ದ ಕಾಲದಲ್ಲಿ ಮೈಸೂರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಹೋಗುವವರೆಗೆ (೧೯೨೦-೧೯೨೮) ಬೆಂಗಳೂರಿನ

ರಾಮಕೃಷ್ಣ ಆಶ್ರಮದ ಹಿಂಭಾಗದಲ್ಲಿ ಇರುವ ಕೊಹಿನೂರು ಆಟದ ಮೈದಾನದಲ್ಲಿ ಸುತ್ತಮುತ್ತಲಿನ ಯುವಕರನ್ನು ಕಟ್ಟಿಕೊಂಡು ಕೊಹಿನೂರು ಸಂಘ ಸ್ಥಾಪಿಸಿದರು. ಕ್ರೀಡೆ, ಡ್ರಿಲ್, ಯೋಗ, ಪ್ರಾರ್ಥನೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದರು. ಅಲ್ಲಿ ಅವರು ನೀಡಿದ ತರಬೇತಿಯಿಂದ ಅನೇಕರು ಶಿಸ್ತಿನ ಸಿಪಾಯಿಗಳಾದರು ಜೀವನದಲ್ಲಿ ಉನ್ನತ ಅಧಿಕಾರ ಗಳಿಸಿ ದಕ್ಷ ಅಧಿಕಾರಿಗಳಾದರು. ಒಮ್ಮೆ ವಿಧಾನಸೌಧದಲ್ಲಿ ಒಬ್ಬ ಉನ್ನತಾಧಿಕಾರಿ ಮಿತ್ರರು ಸಿಕ್ಕಾಗ ಅವರು ನಾನು ಕ.ವೆಂ. ರಾಘವಾಚಾರ್ಯರ ಶಿಷ್ಯ, ಕೊಹಿನೂರು ಸಂಘದವನು ಎಂದು ಹೆಮ್ಮೆಯಿಂದ ಹೇಳಿಕೊಂಡರು. ನಾನು ಇಂದು ದಕ್ಷ ಅಧಿಕಾರಿ ಕಟ್ಟುನಿಟ್ಟಿನ ಅಧಿಕಾರಿ ಎಂದು ಹೆಸರು ಗಳಿಸಿದ್ದರೆ ಅದಕ್ಕೆ ಕಾರಣ ಕ.ವೆಂ. ರಾ ಅವರು. ನಾನಷ್ಟೆ ಅಲ್ಲ ಈ ವಿಧಾನಸೌಧದಲ್ಲೇ ಇನ್ನೂ ಹತ್ತಾರು ಮಂದಿ ನನ್ನಂಥವರು ಇದ್ದಾರೆ ಎಂದು ಹೆಮ್ಮೆಪಟ್ಟರು. ಕ.ವೆಂ.ರಾ ಅವರು ಕೊಹಿನೂರು ಸಂಘದಲ್ಲಿ ಯುವಕರಿಗೆ ಎಂಥಾ ಶಿಸ್ತಿನ ತರಬೇತಿ ನೀಡಿದರು. ಪ್ರಾಮಾಣಿಕ ವ್ಯಕ್ತಿಗಳನ್ನಾಗಿ ರೂಪಿಸಿದರು ಎಂಬುದಕ್ಕೆ ಈ ಮಾತು ಸಾಕ್ಷಿ ಆಗಿದೆ.

ನಿಯಮಭಂಗವನ್ನು ಊಹಿಸಲಾರದಷ್ಟು ಶಿಸ್ತು ಅಲ್ಲಿರುತ್ತಿತ್ತು. ಯಾರಾದರೂ ನಿಯಮ ತಪ್ಪಿದರೆ ಅವರಿಗೆ ದಂಡ ವಿಧಿಸುತ್ತಿದ್ದರಂತೆ, ಇಂದಿಗೂ ಕೊಹಿನೂರು ಮೈದಾನ ಇದೆ. ಆದರೆ ಶಿಸ್ತಿನ ಸಿಪಾಯಿಗಳನ್ನು ದೇಶಭಕ್ತರನ್ನು ಸತ್ಪ್ರಜೆಗಳನ್ನು ನಿರ್ಮಿಸುವ ಕೋಹಿನೂರು ಸಂಘ, ಕ.ವೆಂ.ರಾ. ದಿವ್ಯಸ್ಮೃತಿಗಳಾಗಿವೆ ಅಷ್ಟೆ. ಒಬ್ಬ ಉನ್ನತಾಧಿಕಾರಿ ಮಾತು ನೆನಪಾಗುತ್ತದೆ. ಕ.ವೆಂ.ರಾ. ಅವರಿಗೆ ಹೇಳಿದ ಮಾತಿದು. "ರಾಘವಾಚಾರ್ ನೀವು ಫೀಲ್ಡಿನಲ್ಲಿ ಬೈಯುತ್ತಿದ್ದಿರಿ. ಆಟದಿಂದ ಹೊರಕ್ಕೆ ಕಳಿಸುತ್ತಿದ್ದೀರಿ. ದಂಡ ಹಾಕುತ್ತಿದ್ದಿರಿ ಆಗ ನಮಗೆಲ್ಲಾ ರೇಗುತ್ತಿತ್ತು. ಬೇಸರವಾಗುತ್ತಿತ್ತು. ಈಗ ನೆನಿಸಿಕೊಂಡರೆ ಆಗ ನಿಮ್ಮಿಂದ ದೊರೆತ ಶಿಕ್ಷಣಕ್ಕಾಗಿ ನಿಮಗೆ ನಾವು ಚಿರಋಣಿಗಳಾಗಿರಬೇಕು ಎನ್ನಿಸುತ್ತದೆ. ನೀವು ನಮ್ಮನ್ನು ಸುಶಿಕ್ಷಿತ ಮಾನವರನ್ನಾಗಿ ಮಾಡಿದಿರಿ. ಅದರ ಫಲವಾಗಿ ನಾವು ಸಮಾಜದಲ್ಲಿ ಇಂದು ಗಣ್ಯರಾಗಿದ್ದೇವೆ ಎಂದರಂತೆ. ಇನ್ನೊಬ್ಬ ಅಧಿಕಾರಿ ಹೇಳಿದ ಮಾತಿದು;"

ಸಾವಿರಾರು ರೂಪಾಯಿ ಸಂಬಳ ಪಡೆಯುತ್ತಿದ್ದ ಉನ್ನತಾಧಿಕಾರಿ ಅವರು ಹೆಂಡತಿ ಮಕ್ಕಳ ಎದುರಿಗೆ ಹೇಳಿದ ಮಾತು. "ನಾನು ಮನೆಯಲ್ಲಿ ಅಪ್ಪ ಅಮ್ಮನಿಗೆ ಹೆದರುತ್ತಿರಲಿಲ್ಲ, ಕಾಲೇಜಿನಲ್ಲಿ ಪ್ರೊಫೆಸರರಿಗೆ ಹೆದರುತ್ತಿರಲಿಲ್ಲ. ಆದರೆ ಕೊಹಿನೂರ್ ಸಂಘದಲ್ಲಿ ಇವರಿಗೆ ರಾಘವಾಚಾರರಿಗೆ ಹೆದರಿ ಗಡಗಡ

ನಡುಗುತ್ತಿದ್ದೆವು." ಹೀಗೆ ಶಿಸ್ತಿನಿಂದ ಕಠೋರ ನಿಯಮಗಳಿಂದ ದಕ್ಷ ಪ್ರಾಮಾಣಿಕ ಅಧಿಕಾರಿಗಳನ್ನು ಸತ್ಪ್ರಜೆಗಳನ್ನು ರೂಪಿಸಿದ ಹೆಗ್ಗಳಿಕೆ ಕವೆಂರಾ ಅವರದು.

ಕ.ವೆಂ.ರಾಘವಾಚಾರ್ಯರು ಅನುಪಮ ಸೇವೆ ಸಲ್ಲಿಸಿದ ಇನ್ನೊಂದು ಕ್ಷೇತ್ರ ವೆಂದರೆ ನಿಘಂಟು ಕ್ಷೇತ್ರ. ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಹಾಗೂ ನಾರ್ಮಲ್ ಸ್ಕೂಲಿನಲ್ಲಿ ಬದಲಿ ಕೆಲಸ ಮಾಡುತ್ತಿದ್ದಾಗ ಅವರಿಗೆ ಖಾಯಂ ಕೆಲಸ ಕೊಡಿಸುವ ಉದ್ದೇಶದಿಂದ ಮೈವಿವಿ ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿ ಸಹಾಯಕರಾಗಿ ನೇಮಕಕೊಂಡರು. ಅನಂತರ ಪರಿಷತ್ತಿನ ಕನ್ನಡ ನಿಘಂಟಿನ ಸಮಿತಿ ಸದಸ್ಯರು, ಉಪಾಧ್ಯಕ್ಷರೂ ಆದರು. ವಿದ್ವತ್ತಿನ ವಿಷಯದಲ್ಲಿ ಅವರು ಕೋಶದ ಸಭೆಗಳಲ್ಲಿ ಹಟಗಾರರಾಗಿ ವಾದಿಸುತ್ತಿದ್ದರು. ಬಡಪೆಟ್ಟಿಗೆ ಯಾವ ಶಬ್ದದ ಅರ್ಥವನ್ನು ಒಪ್ಪುತ್ತಿರಲಿಲ್ಲ. ಡಿ.ಎಲ್.ಎನ್. ಮತ್ತು ಕ.ವೆಂ.ರಾ ಅವರ ವಿದ್ವತ್ ಸಂಘರ್ಷವನ್ನು ಕನ್ನಡ ನಿಘಂಟು ಕಚೇರಿಯಲ್ಲಿ ಧಾರಾಳವಾಗಿ ನೋಡಬಹುದಿತ್ತು. ತಮ್ಮ ಮಾತಿನಲ್ಲಿ ಅವರಿಗೆ ಅಷ್ಟು ದೃಢ ವಿಶ್ವಾಸವಿರುತ್ತಿತ್ತು.

ವಾದದಲ್ಲಿ ಗಟ್ಟಿಗರಾಗಿ ನಿರ್ದಯಿಗಳಾಗಿ ಕಾಣಿಸುತ್ತಿದ್ದ ಕ.ವೆಂ.ರಾ ಬಾಳಿನಲ್ಲಿ ಶಿಷ್ಯವಾತ್ಸಲ್ಯದಲ್ಲಿ ಅಂತಃಕರಣದ ಶಿಶುವಾಗಿರುತ್ತಿದ್ದರು. ಅದಕ್ಕೊಂದು ನಿದರ್ಶನವೆಂದರೆ ಅವರ ಮುಖ್ಯ ಶಿಷ್ಯೆ ವಿನೋದಾಬಾಯಿ ಅವರ ಬದುಕಿನ ಇತಿಹಾಸ.

ನಮ್ಮಲ್ಲಿ ಬಡ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆ ವಸತಿ ಫೀಸು ಇತ್ಯಾದಿ ಕೊಟ್ಟು ಅವರ ಬಾಳಿಗೆ ಬೆಳಕಾದವರು, ಟಿ.ಎಸ್. ವೆಂಕಣ್ಣಯ್ಯ ತ.ಸು. ಶಾಮರಾವ್ ಅಂಥ ಹಲವರನ್ನು ನಾವು ಕಾಣಬಹುದು. ಆದರೆ ಒಬ್ಬ ವಿದ್ಯಾರ್ಥಿಗೆ ಜೀವನದುದ್ದಕ್ಕೂ ಆಶ್ರಯಕೊಟ್ಟ ಶಿಕ್ಷಣಕೊಟ್ಟು ಇಡೀ ಬದುಕಿಗೆ ಆಧಾರಸ್ತಂಭ ವಾದವರು ಕ.ವೆಂ.ರಾ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೇವಲ ನಿಘಂಟು ಕಾರ್ಯವನ್ನಷ್ಟೆ ಅವರು ನಿರ್ವಹಿಸಲಿಲ್ಲ. ಇತರ ಸೇವೆಗಳನ್ನು ಅವರು ಮಾಡಿದ್ದಾರೆ ೧೯೪೨-೪೭ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಕನ್ನಡ ನುಡಿಯ ಸಂಪಾದಕರಾಗಿದ್ದರು. ಪರಿಷತ್ತಿನ ಉತ್ಸವ, ಉಪನ್ಯಾಸ ಗ್ರಂಥ ಪ್ರಕಟನೆಗಳಿಗಾಗಿ ಶ್ರಮಿಸಿದರೆ, ಕನ್ನಡದಲ್ಲಿ ವಿಶಿಷ್ಟವಾದ ವೈವಿಧ್ಯ ಪೂರ್ಣ ಕಾವ್ಯಸಂಗ್ರಹ 'ಕನ್ನಡ

ಬಾವುಟ' ಬಿಎಂಶ್ರೀ ಅವರ ಸಂಪಾದಕತ್ವದಲ್ಲಿ ರಚಿತವಾಯಿತು. ಶಾಸನ ಪದ್ಯಗಳಿಂದ, ಜಾನಪದ ಕವಿತೆಗಳಿಂದ ಮೊದಲ್ಗೊಂಡು ಆಧುನಿಕ ಭಾವಗೀತೆಗಳವರೆಗೆ ಪ್ರಾತಿನಿಧಿಕ ಕವನಗಳನ್ನು ಸಂಗ್ರಹಿಸಿದ ಸಂಕಲನ ಇದು. ಇದರ ಸಂಪಾದಕತ್ವ ಕಾರ್ಯದಲ್ಲಿ ಶ್ರೀ ಅವರಿಗೆ ಬಲಗೈಯಾಗಿ ನೆರವಾದವರು ಕವೆಂರಾ.

ಕನ್ನಡದಲ್ಲಿ ವಿಶೇಷ ಸಾಹಿತ್ಯ ಪ್ರಕಾರವೊಂದು ಬೆಳೆದು ಬಂದಿದೆ. ಅದು ಸಂಭಾವನಾಗ್ರಂಥಗಳ, ಗೌರವಗ್ರಂಥಗಳ ಪರಂಪರೆ. ಒಬ್ಬ ವ್ಯಕ್ತಿಯನ್ನು ಗೌರವಿಸಲು ಆತನ ಜೀವನದ ಬಗ್ಗೆ ನಾನಾ ಲೇಖನಗಳನ್ನು ಆತನ ಕೃತಿಗಳೆಲ್ಲದರ ವಿಮರ್ಶೆಯನ್ನು ಅವರಿಗೆ ಪ್ರಿಯವಾದ, ಸಾಧನೆ ಮಾಡಿದ ಕ್ಷೇತ್ರಗಳಲ್ಲಿ ಅಮೂಲ್ಯ ಸೇವೆಯನ್ನು ಮಾಡಿದವರ ಲೇಖನಗಳನ್ನು ಸಂಗ್ರಹಿಸಿ ಗೌರವಿಸುವುದು ಒಂದು ನೂತನ ಸಂಪ್ರದಾಯವಾಗಿತ್ತು. ಕನ್ನಡದಲ್ಲಿ ಆ ಬಗೆಯ ಮೊಟ್ಟ ಮೊದಲನೇ ಗ್ರಂಥ ಶ್ರೀ ಅವರಿಗೆ ಸಮರ್ಪಿಸಿದ. 'ಸಂಭಾವನೆ' ಹೆಸರಿನ ಗ್ರಂಥ. ೧೯೪೧ರಲ್ಲಿ ಪ್ರಕಟವಾಯಿತು. ಇದನ್ನು ಸಂಪಾದಿಸಿದವರು. ಕ.ವೆಂ. ರಾಘವಾಚಾರ್ಯರು. ಇಂದಿಗೂ ಈ ಗ್ರಂಥ ಅಧ್ಯಯನ ಯೋಗ್ಯವಾಗಿದೆ. ಪುನರ್ಮುದ್ರಿತವಾಗಿದೆ.

ಒಮ್ಮೆ ಸ್ನೇಹಿತರ ಮನೆಗೆ ಅವರು ಬಂದಾಗ ಪುಟ್ಟ ಹುಡುಗಿಯೊಬ್ಬಳು ಅಚ್ಚುಕಟ್ಟಾಗಿ ಅತಿಥಿ ಸತ್ಕಾರ ಮಾಡಿದಾಗ ಅದನ್ನು ಮೆಚ್ಚಿ ಆಕೆಯ ಓದಿನ ಬಗ್ಗೆ ವಿಚಾರಿಸಿದರು. ಆಕೆಯ ಕಾಲೇಜಿನ ವಿದ್ಯಾಭ್ಯಾಸಕ್ಕೆ ಅವಕಾಶ–ಅನುಕೂಲ–ಆರ್ಥಿಕ ಸೌಲಭ್ಯ ಇತ್ಯಾದಿ ಇಲ್ಲದ್ದು ತಿಳಿಯಿತು. ಕ.ವೆಂ.ರಾ. ಆ ಹುಡುಗಿಗೆ 'ನೀನು ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಮೈಸೂರಿಗೆ ಬಂದು ಬಿಡು. ತಗೋ ಈ ವಿಳಾಸ ಇಟ್ಕೋ' ಎಂದು ತಮ್ಮ ಮನೆ ವಿಳಾಸ ಕೊಟ್ಟರು. ಆ ಹುಡುಗಿ ಕಾಲೇಜಿಗೆ ಸೇರಲು ಓದಲು ಮೈಸೂರಿಗೆ ಬಂದಳು. ಆಕೆಗೆ ಓದಿಗೆ ಅನುಕೂಲ ಮಾಡಲು ಅವರಿಗೆ ಪ್ರತ್ಯೇಕ ಕೋಣೆ ಮನೆಯಲ್ಲಿರಲಿಲ್ಲ. ಅದಕ್ಕಾಗಿ ಮನೆಯನ್ನೇ ಬದಲಾಯಿಸಿ ಪ್ರತ್ಯೇಕ ಓದಿನ ಕೋಣೆ ಕೊಟ್ಟು ಅನ್ನ ಬಟ್ಟೆ ವಸತಿ ಫೀಸು ಇತ್ಯಾದಿ ಕೊಟ್ಟು ಜೀವನದುದ್ದಕ್ಕೂ ತನ್ನ ಸ್ವಂತ ಮಗಳಂತೆ ಸಾಕಿ ಸಲಹಿ ಪ್ರೋತ್ಸಾಹಿಸಿದವರು. ಕವೆಂರಾ. ಒಬ್ಬ ವಿದ್ಯಾಸಕ್ತಿ ಇದ್ದ ವಿದ್ಯಾರ್ಥಿನಿಯನ್ನು ಇಡೀ ಜೀವನದುದ್ದಕ್ಕೂ ಪೋಷಿಸಿದ ಶಿಷ್ಯ ಪ್ರೀತಿ, ಜ್ಞಾನಾರಾಧನೆಯ ಉದಾಹರಣೆ ಇನ್ನೊಂದು ನಮ್ಮಲ್ಲಿ ಇಲ್ಲ. ಕೇವಲ ಓದು ಬರಹದಲ್ಲಷ್ಟೇ ಅಲ್ಲ. ಬಾಳಿನ ಸುಖದುಃಖಗಳಲ್ಲಿ ನೆರವಾದವರು ಕವೆಂರಾ. ಎಷ್ಟರಮಟ್ಟಿಗೆ ಆ

ವಿದ್ಯಾರ್ಥಿನಿಯನ್ನು ತನ್ನ ಮಗಳಂತೆ ಭಾವಿಸಿದ್ದರು ಎಂದರೆ ಅದಕ್ಕೊಂದು ನಿದರ್ಶನ ನೆನಪಾಗುತ್ತದೆ. ರಾಘವಾಚಾರ್ಯರು ಕಾಶಿಗೆ ಕೆಲವು ಸ್ನೇಹಿತರೊಂದಿಗೆ ಒಮ್ಮೆ ಹೋಗಿದ್ದರು. ಈ ವಿದ್ಯಾರ್ಥಿನಿಯನ್ನು ಅರ್ಥಾತ್ ಸಾಕುಮಗಳನ್ನು ಜತೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಗಂಗಾತಟದಲ್ಲಿ ಪಿತೃಗಳಿಗೆ ಪಿಂಡ ಪ್ರದಾನ ಮಾಡಿಸಲು ಒಬ್ಬ ಪಂಡಾ (ಕಾಶಿಯಲ್ಲಿ ಧಾರ್ಮಿಕ ಕಾರ್ಯವನ್ನು ಪ್ರವಾಸಿಗಳಿಗೆ ಮಾಡಿಸುವ ವೃತ್ತಿಯ ವ್ಯಕ್ತಿ) ಬಂದ. ಅವನ ರೀತಿ ನೀತಿ ವೇಷಭೂಷಣ, ಸಂಪ್ರದಾಯ ಪ್ರಿಯರೂ ಶ್ರದ್ಧಾವಂತರೂ ಆದ ರಾಘವಾಚಾರ್ಯರಿಗೆ ಹಿಡಿಸಲಿಲ್ಲ. ಪಿಂಡಪ್ರದಾನ ಕಾರ್ಯಕ್ಕೆ ಶಿಷ್ಯೆಯ ನೆರವನ್ನೇ ಪಡೆದರು. ಪಿಂಡಪ್ರದಾನಕ್ಕೆ ಅನ್ನವನ್ನು ತಯಾರು ಮಾಡಲು ಏನು ಮಾಡಬೇಕು ಎಂದು ಯೋಚಿಸುತ್ತಿದ್ದ ಶಿಷ್ಯೆಗೆ ಹೇಳಿದರು. "ನಿನ್ನ ಸ್ನಾನ ಆಯಿತಲ್ಲಮ್ಮ ನೀನೇ ಮಾಡು ಪಿಂಡ ಪ್ರದಾನಕ್ಕೆ ಅನ್ನವನ್ನು. ಈ ಗಂಗೆಗೂ ನಿನಗೂ ವ್ಯತ್ಯಾಸವಿಲ್ಲ ಇಬ್ಬರೂ ಅಷ್ಟೇ ಶುದ್ಧರು, ನಿನ್ನಂಥ ಮೊಮ್ಮಗಳಿಂದ ಈ ಕಾರ್ಯ ಮಾಡಿಸಿಕೊಳ್ಳುವ ನಮ್ಮ ತಾಯಿ ತಂದೆಯರೇ ಪುಣ್ಯವಂತರು ಎಂದರು.

ಇಂಥ ಶಿಷ್ಯ ಪ್ರೀತಿ ಕ.ವೆಂ. ರಾಘವಾಚಾರ್ಯರದು. ಇಲ್ಲಿ ಗಮನಿಸಬೇಕಾದ ಸಂಗತಿ ಇನ್ನೊಂದಿದೆ. ಶಿಷ್ಯೆ ಶಿವಭಕ್ತೆ, ಗುರು ವಿಷ್ಣುಭಕ್ತರು ಮನೆತನದ ಪರಂಪರೆಯ ಹಿನ್ನೆಲೆಯಲ್ಲಿ, ಆದರೆ ಕವೆಂರಾ ಅಂತಃಕರಣದಲ್ಲಿ ಸರ್ವಧರ್ಮ ಪುರಸ್ಕಾರ, ಸರ್ವದೇವ ನಮಸ್ಕಾರದ ಸಮನ್ವಯ ಧರ್ಮದವರು. ಜಾತಿ ಮತ ಕುಲ ಕೋಮುಗಳ ಸಂಕುಚಿತ ಭಾವನೆಗಳಿಂದ ಅತಿದೂರರಾಗಿ ಮಾನವೀಯತೆಯನ್ನು ಸ್ನೇಹ, ಪ್ರೀತಿ, ಭಾವಗಳ ರತ್ನಕರಂಡ ಕ.ವೆಂ. ರಾಘವಾಚಾರ್ಯರು.

ರಾಘವಾಚಾರ್ಯರು ಶ್ರೇಷ್ಠ ಅಧ್ಯಾಪಕರು, ಗ್ರೀಕ್ ಪಂಡಿತರು, ಪಾಂಡಿತ್ಯ ಪೂರ್ಣವಾಗ್ಮಿಗಳು, ಕೋಶಕಾರರು, ದೇಶಪ್ರೇಮಿಗಳು, ಗಾಂಧಿವಾದಿಗಳು ಹಳಗನ್ನಡ ವಿದ್ವಾಂಸರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಬಿಎಂಶ್ರೀ ಅವರು ಪ್ರಾರಂಭಿಸಿದ ಪಠ್ಯಪುಸ್ತಕಮಾಲೆಯಲ್ಲಿ ಅನೇಕ ಶ್ರೇಷ್ಠಕಾವ್ಯ ಸಂಗ್ರಹಗಳು ವಿದ್ಯಾರ್ಥಿಗಳಿಗಾಗಿ ಸಿದ್ಧವಾದವು. ಅವುಗಳಲ್ಲಿ ಕೆಲವು ಕಾವ್ಯ ಸಂಗ್ರಹಗಳು ಕನ್ನಡದ ಕಾವ್ಯಸಂಗ್ರಹ ಚರಿತ್ರೆಯಲ್ಲಿ ಅತಿಗಣ್ಯ ಸ್ಥಾನಪಡೆದಿವೆ. ಈ ಕಾವ್ಯಸಂಗ್ರಹ ಓದಿದರೆ ಮೂಲಕಾವ್ಯವನ್ನು ಸಮಗ್ರವಾಗಿ ಓದಿದವನಿಗೆ ಏನು ಅನುಭವವಾಗುತ್ತದೋ, ಪಾಂಡಿತ್ಯ ದರ್ಶನ, ಕವಿಯ ಪ್ರತಿಭಾ ಪರಿಚಯ ಕಾವ್ಯದ ಸೊಗಸು ತಿಳಿಯುತ್ತದೋ ಅದು ಈ ಕಾವ್ಯಸಂಗ್ರಹದಿಂದಲೂ

ಆಗುತ್ತದೆ. ಅಂಥ ಕಾವ್ಯಸಂಗ್ರಹಗಳಲ್ಲಿ ಪಂಪರಾಮಾಯಣ ಸಂಗ್ರಹ ಆದಿಪುರಾಣ ಸಂಗ್ರಹ ಮೊದಲಾದವು ಕೆಲವು ನಿದರ್ಶನಗಳು ಆ ಸಾಲಿಗೆ ಸೇರಿರುವ ಕಾವ್ಯ ಸಂಗ್ರಹ. ಕವೆಂರಾ ಸಂಪಾದಿಸಿದ ಯಶೋಧರ ಚರಿತೆಯ ಕಾವ್ಯ ಸಂಗ್ರಹ, ಜನ್ನಕವಿಯ ಯಶೋಧರ ಚರಿತೆಯನ್ನು ಸಂಗ್ರಹಿಸಿದಾಗ ಪ್ರಾಕೃತ, ಸಂಸ್ಕೃತ, ತಮಿಳು ಗುಜರಾತಿ ಹಿಂದಿ ಭಾಷೆಗಳ ಕೃತಿಗಳನ್ನು ಪರಿಶೀಲಿಸಿದ್ದಾರೆ. ಶಾಸನ ಪಾಠಗಳನ್ನು ಅಧ್ಯಯನ ಮಾಡಿದ್ದಾರೆ. ಸಂಗ್ರಹದಲ್ಲಿ ಬಿಟ್ಟ ಪದ್ಯಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ ಪೂರ್ಣಕಾವ್ಯ ಓದಲು ಬಯಸುವವರಿಗೂ ಈ ಸಂಗ್ರಹ ಈ ಕಾರಣದಿಂದ ಉಪಯುಕ್ತವಾಗಿದೆ. ೭೫ ಪುಟಗಳಷ್ಟು ವಿಸ್ತಾರವಾದ ವಿದ್ವತ್ಪೂರ್ಣ ಪೀಠಿಕೆ ಬರೆದಿದ್ದಾರೆ. ಶುದ್ಧ ಪಾಠಗಳನ್ನು ನಿರ್ಧರಿಸಿದ್ದಾರೆ. ಹಸ್ತಪ್ರತಿಗಳ ಅಧ್ಯಯನದಿಂದ ಈ ಕಾವ್ಯ ಸಂಗ್ರಹಕ್ಕಾಗಿ ವಿದ್ಯಾರ್ಥಿಯಾಗಿ ರಾಳ್ಳಪಳ್ಳಿ ಅವರಲ್ಲಿ ಪ್ರಾಕೃತದ ಯಶೋಧರ ಚರಿತ್ರೆಯ ಪಾಠ ಹೇಳಿಸಿಕೊಂಡಿದ್ದಾರೆ.

ಗೊತ್ತಿಲ್ಲದ ಭಾಷೆಯ ಗ್ರಂಥದ ಅನುವಾದವನ್ನು ಅಥವಾ ಆ ಬಗ್ಗೆ ಬರೆದ ಲೇಖನಗಳ ನೆರವನ್ನು ಪಡೆಯುವುದು ಸಾಮಾನ್ಯವಾದ ಸಂಗತಿ. ಆದರೆ ಅದಕ್ಕಾಗಿ ಮೂಲಭಾಷೆಯನ್ನು ಕಲಿತು ವಿಷಯ ತಿಳಿಯುವ ಜ್ಞಾನದಾಹ ಎಲ್ಲರಿಗೂ ಇರುವುದಿಲ್ಲ. ಅಂಥ ಆಸಕ್ತಿಯ ಕೆಲವೇ ವ್ಯಕ್ತಿಗಳಲ್ಲಿ ಕ.ವೆಂ.ರಾ ಒಬ್ಬರು. ಆದ್ದರಿಂದಲೇ ಜಿ.ಎಸ್. ಸಿದ್ಧಲಿಂಗಯ್ಯನವರು ಹೇಳಿದಂತೆ "ಭಾಷೆಯಲ್ಲಿ ಪೂರ್ವಸಿದ್ಧತೆ ಮಾರ್ಗದರ್ಶನ ಹಾಗೂ ನೆರವುಗಳ ಜೊತೆಗೆ ತಪಸ್ಸಿನ ರೀತಿಯ ಅಧ್ಯಯನ ಹಾಗೂ ವಿದ್ವತ್ತಿನಿಂದ ಯಶೋಧರ ಚರಿತೆಯ ಕಾವ್ಯ ಸಂಗ್ರಹವನ್ನು ಸಿದ್ಧಪಡಿಸಿದ್ದಾರೆ. ಗ್ರಂಥಸಂಪಾದನಾಶಾಸ್ತ್ರಕ್ಕೆ ಶ್ರೇಷ್ಠ ನಿದರ್ಶನ ಕೃತಿ ಈ ಗ್ರಂಥವಾಗಿದೆ. ಗ್ರೀಕ್ ನಾಟಕಗಳು, ಈ ಕಾವ್ಯ ಸಂಗ್ರಹ ಕ.ವೆಂ. ರಾಘವಾಚಾರ್ಯರ ಹಳಗನ್ನಡ ವಿದ್ವತ್ತನ್ನು ಪ್ರದರ್ಶಿಸುವ ಶ್ರೇಷ್ಠ ನಿದರ್ಶನಗಳಾಗಿವೆ."

ಕವೆಂರಾ ಕೇವಲ ಅಧ್ಯಾಪಕರು 'ಸೇವಾ ನಿರತರು' ಶಿಷ್ಯವಾತ್ಸಲ್ಯರು ಅಷ್ಟೇ ಆಗಿರಲಿಲ್ಲ. ರಾಷ್ಟ್ರೀಯ ದೃಷ್ಟಿಯಲ್ಲಿ ಭಾಷೆ-ಸಾಹಿತ್ಯ-ಲಿಪಿಗಳನ್ನು ಕುರಿತು ಚಿಂತಿಸುವ ವಿಚಾರಶೀಲರಾಗಿದ್ದರು. ಅವರ ತೀರ್ಮಾನಗಳು ಇಂದಿಗೂ ಮೌಲ್ಯಯುತವಾದವು, ಆದರ್ಶಪ್ರಾಯವಾದವು. 'ವಿಶ್ವವಿದ್ಯಾನಿಲಯಗಳಲ್ಲಿ ಭಾಷೆ ಸಮಸ್ಯೆ' ಲೇಖನದಲ್ಲಿ ಎರಡಂಶಗಳನ್ನು ಹೇಳುತ್ತಾರೆ. ಪ್ರತಿಪ್ರಾಂತದಲ್ಲಿ

ಅಲ್ಲಿಯ ರಾಜ್ಯಭಾಷೆಗೆ ಆದ್ಯತೆ ಸಿಗಬೇಕು. ಎಲ್ಲಾ ರಾಜ್ಯಗಳಲ್ಲೂ ಪ್ರಾಂತ್ಯಭಾಷೆ, ಇಂಗ್ಲಿಷ್ ಭಾಷೆ, ಸಾಂಸ್ಕೃತಿಕವಾಗಿ ಸಂಸ್ಕೃತ ಪರ್ಷಿಯನ್, ಉರ್ದು, ಗ್ರೀಕ್ ಇತ್ಯಾದಿ ಭಾಷೆಗಳು ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯವಾಗಬೇಕು. ಹೀಗೆ ಭಾಷಾ ಸಂಬಂಧಿತ ವಿಷಯಗಳಲ್ಲಿ ಕವೆಂರಾ ಚಿಂತನೆಗಳು ಅಮೂಲ್ಯವಾಗಿವೆ. ಎಷ್ಟು ಅಮೂಲ್ಯವಾದ ಸಲಹೆಗಳು ಇವು! ರಾಘವಾಚಾರ್ಯರ ಜೀವನಾಸಕ್ತಿ ರಸಿಕತೆ, ಅತಿಥಿ ಸತ್ಕಾರಪ್ರೇಮ ಅನುಪಮವಾದವು. ತೆಂಗಿನಕಾಯಿ ಕರಟ ಒರಟಾದರೂ ಒಳಗಿನ ತಿರುಳು ಮೃದುವಾಗಿ ಎಳನೀರು ಸಿಹಿಯಾಗಿರುವಂತೆ ಅವರ ಮಾತು, ವಾದಗಾರಿಕೆ ಒಮ್ಮೊಮ್ಮೆ ಕರಟದಂತಾದರೂ ಅವರ ಅಂತರಂಗ ಅಂತಃಕರಣ ತೆಂಗಿನ ತಿರುಳು, ಎಳನೀರಂತೆ ಇತ್ತು. ಆದ್ದರಿಂದಲೇ ಅವರು ಅಂತರಂಗದಲ್ಲಿ ಎಲ್ಲರಿಗೂ ಹತ್ತಿರದವರಾಗಿದ್ದರು. ಅವರ ಅತಿಥಿ ಸತ್ಕಾರ ವೈಭವ ಹೇಳತೀರದು. ಒಮ್ಮೆ ಗ್ರೀಕ್ ಗುರುದಂಪತಿಗಳಿಗೆ ಭೋಜನ ಕೂಟ ಏರ್ಪಡಿಸಿದ್ದರು. ದೊಡ್ಡ ಅಗ್ರದ ಬಾಳೆಲೆಯಲ್ಲಿ ಊಟದ ಎಲ್ಲ ಪದಾರ್ಥಗಳ ಜತೆಗೆ ಪ್ರತಿ ಎಲೆಗೂ ೨೫ ದೊನ್ನೆಗಳಲ್ಲಿ ಬಗೆ ಬಗೆಯ ಭಕ್ಷ್ಯಗಳನ್ನು ಇರಿಸಿದ್ದರಂತೆ.

ಈ ಸಂಗತಿ ನೆನೆದಾಗ ಅಮೆರಿಕಾದ ಸಂಗತಿಯೊಂದು ನೆನಪಾಗುತ್ತದೆ. ನನಗೆ ಅಮೆರಿಕಾದಲ್ಲಿ ತೆಲುಗು ವಿದ್ವಾಂಸರೊಬ್ಬರು ಕೇದಾರವ್ರತವನ್ನು ಆಚರಿಸಿದಾಗ ನನ್ನನ್ನು ಆಹ್ವಾನಿಸಿದ್ದರು. ಸುಮಾರು ೨೩ ಭಕ್ಷ್ಯಗಳನ್ನು ರುಚಿರುಚಿಯಾಗಿ ಭೋಜನಕ್ಕೆ ಸಿದ್ಧಪಡಿಸಿದರು. ಎಣಿಸಿದ ನಾನು ಇದೇನು ಇಷ್ಟೊಂದು ಭಕ್ಷ್ಯಗಳನ್ನು ಮಾಡಿರುವ ವಿಶೇಷವೇನು ಎಂದು ಕೇಳಿದೆ. ಅದಕ್ಕವರು ೨೩ನೇ ವರ್ಷ ಅಮೆರಿಕಾದಲ್ಲಿ ಈ ವ್ರತವನ್ನು ಆಚರಿಸುತ್ತಿದ್ದೇನೆ. ಅದರ ದ್ಯೋತಕವಾಗಿ ಈ ಭಕ್ಷ್ಯಗಳು ಎಂದರು. ಅದಕ್ಕೆ ನಾನು ಹೇಳಿದೆ. ಕೇದಾರವ್ರತದ ಸ್ವರ್ಣಮಹೋತ್ಸವಕ್ಕೆ ಖಂಡಿತ ಬರುತ್ತೇನೆ. (೫೦ನೇ ವರ್ಷದ ಹಬ್ಬದ ೫೦ ಭಕ್ಷ್ಯ ಮಾಡಿರಬೇಕಲ್ಲ) ಎಂದಾಗ ನಕ್ಕು ಹೇಳಿದರು ಶತಮಾನೋತ್ಸವಕ್ಕೂ ಬನ್ನಿ ತುಂಬಾ ಸಂತೋಷ ಎಂದರು.

ಹಳಗನ್ನಡದ ವಿದ್ವಾಂಸ ಗ್ರೀಕ್ ಪಂಡಿತ, ಶ್ರೇಷ್ಠ ಪ್ರಾಧ್ಯಾಪಕರಾಗಿ ಅದಕ್ಕಿಂತ ಮಿಗಿಲಾಗಿ ಮಾನವೀಯ ಗುಣಗಳಿಂದ ಆದರ್ಶಪ್ರಾಯರಾದ ವಿದ್ವನ್ಮಣಿ ಕ.ವೆಂ. ರಾಘವಾಚಾರ್ಯರು ೨೭-೮-೧೯೭೭ರಲ್ಲಿ ಮೈಸೂರಿನಲ್ಲಿ ವಿಷ್ಣುಪಾದ ಸೇರಿದರು.

ಪ್ರೊ. ಕ.ವೆಂ. ರಾಘವಾಚಾರ್ ಅವರ ವ್ಯಕ್ತಿತ್ವವನ್ನು ವೆಂಕಟಾಚಲಶಾಸ್ತ್ರಿ ಅವರು ಸರಳವಾಗಿ ಸುಂದರವಾಗಿ ಸಂಕ್ಷಿಪ್ತವಾಗಿ ಹೀಗೆ ಬಣ್ಣಿಸಿದ್ದಾರೆ.

"ಶುದ್ಧಖಾದಿಯ ಒರಟು ಉಡುಗೆ. ಎಲ್ಲರನ್ನು ಮೀರಿಸುವ ಚುರುಕು ನಡಿಗೆ ಎದುರುಗೊಂಡವರನ್ನೂ ಎದುರುಬಿದ್ದವರನ್ನೂ ಸಮಭಾವದಿಂದ ಸ್ವಾಗತಿಸುವ ರೇಗುಚಹರೆ, ತೀಕ್ಷ್ಣನೋಟ, ಕೊಂಚ ಹೊತ್ತಿನಲ್ಲಿ ಕರುಳು ಚುರುಕೆನ್ನುವ ಕೋಮಲಾಂತಃಕರಣ, ಭಾಷಾಶಾಸ್ತ್ರ ತಜ್ಞತೆ, ಹಳಗನ್ನಡ ಪ್ರಯೋಗಪಟುತ್ವ, ಪೂರ್ವಪಶ್ಚಿಮ ಸಾಹಿತ್ಯಪ್ರೇಮ, ಗ್ರೀಕ್‌ಭಾಷಾಸಾಹಿತ್ಯ ಅವಗಾಹಿತ್ವ, ನಿಘಂಟು ನಿರ್ಮಾಣ ಕ್ಷಮತ್ವ– ಹೀಗೆ ಪಾಂಡಿತ್ಯ ಪರಿಷ್ಕಾರಗಳು ಹತ್ತು ಹನ್ನೊಂದು, ಹಬ್ಬ ಹುಣ್ಣಿಮೆಯಂದು ಆಪ್ತೇಷ್ಟರಿಗೆ ಆಮಂತ್ರಣ– ಅಗ್ರದೆಲೆಯ ಭೂರಿಭೋಜನ ಸ್ನೇಹ ಸಜ್ಜನಿಕೆಗಳ ಹಿತಮಿತ ಸಲ್ಲಾಪ–ಸಿಡಿದಲ್ಲಿ ಖಂಡತುಂಡ ವಾಗ್ವಾದ ಭುಜವೊಡ್ಡಿ ಸೈಯೆಂದು ಸಡ್ಡು ಹೊಡೆದರೆ ತಿಕ್ಕಿ ತೀಡುವ ಜಗಳಗಂಟಿತನದ ಜಾಗರ ಇಲ್ಲವೇ ತೆಪ್ಪಗೆ ತನ್ನಲ್ಲೇ ಆತ್ಮಾರಾಮ ವಾಗಿರುವ ಒಂಟಿಗತನದ ಅಜಗರ. ಸ್ನೇಹ–ವ್ಯವಹಾರ ಎರಡರಲ್ಲೂ ನಾರಿಕೇಳಪಾಕ, ಪರಿಸ್ಥಿತಿ ಬಿಗಡಾಯಿಸಿದಾಗ ಅಷ್ಟಿಷ್ಟು ಹೊಂದಿಕೊಳ್ಳೋಣ. ಎಂಬ ಭಾವ ಒಟ್ಟಿನಲ್ಲಿ ಅವರದು "ಸಿಡಿಲನ್ನಂ ಸಿಂಗದನ್ನಂ ವ್ಯಕ್ತಿತ್ವ."

❐



೬. ಕರ್ನಾಟಕ ಕವಿರತ್ನ

ಹೊಸಕೆರೆ ಚಿದಂಬರಯ್ಯನವರು

ಒಮ್ಮೆ ನಮ್ಮ ಮಿತ್ರರು ಒಂದು ಮಾತು ಹೇಳಿದರು. "ನೋಡಿ, ಪರಂಪರೆ ಎಂಬುದು ಸಂಸ್ಕೃತಿ ರಕ್ಷಣೆಗೆ ಮುಖ್ಯಾಧಾರ. ತಲೆಮಾರಿನಿಂದ ತಲೆಮಾರಿಗೆ ಆಚಾರ, ವಿಚಾರ, ಜ್ಞಾನ ಅನುಭವಗಳ ಧಾರೆ ಹರಿದು ಬರಬೇಕು. ನಮ್ಮ ವರ್ಣ ವ್ಯವಸ್ಥೆಯ ಮುಖ್ಯ ಉದ್ದೇಶ ಅದೇ ಆಗಿತ್ತು. ಏಕೆಂದರೆ ಆಯಾ ವೃತ್ತಿಯ ಮಕ್ಕಳು ತಮ್ಮ ಹಿರಿಯರ ವೃತ್ತಿಯನ್ನೇ ಅನುಸರಿಸಬೇಕೆಂದು ಪದ್ಧತಿಯನ್ನು ರೂಢಿಸಿದ್ದು ಪರಂಪರೆಯನ್ನು ಮುಂದುವರೆಸುವುದು ಆ ಮೂಲಕ ತಮ್ಮ ಅನುಭವವನ್ನು ಮುಂದಿನ ತಲೆಮಾರಿಗೆ ತಲುಪಿಸುವುದೇ ಉದ್ದೇಶವಾಗಿತ್ತು. ಅನುಭವವನ್ನು ಮುಂದಿನ ತಲೆಮಾರಿಗೆ ಭಾಷೆಯ ಮೂಲಕ ತನ್ನ ಆಚಾರ ವಿಚಾರಗಳಿಂದ ಮನುಷ್ಯ ಮಾತ್ರ ತಲುಪಿಸಬಲ್ಲ.

ಪ್ರಾಣಿಗಳಿಗೆ ಇದು ಸಾಧ್ಯವಿಲ್ಲ ಆದಕಾರಣ, ಹುಲಿಗಳು ಸಾವಿರಾರು ವರ್ಷಗಳಿಂದ ಅದೇ ರೀತಿ ಬೇಟೆ ಆಡುತ್ತಿವೆ. ಮಾನವ ಆದಿವಾಸಿ ಆದಾಗ ಬೇಟೆ ಆಡುತ್ತಿದ್ದ ರೀತಿ, ಅನುಭವ ಸಂಗ್ರಹದಿಂದ ಅತ್ಯಾಧುನಿಕ ವಿಧಾನಗಳು ಅಳವಟ್ಟಿವೆ. ಸಾಹಿತ್ಯ ಸಂಸ್ಕೃತಿ ಕಲೆಗಳೂ ಅಷ್ಟೇ. ತಲೆಮಾರಿಂದ ತಲೆಮಾರಿಗೆ ಬೋಧಿಸುವ ಕಲಿಸುವ ವ್ಯವಸ್ಥೆ ಅಗತ್ಯ. ಇಂದು ಆ ಪದ್ಧತಿ ನಶಿಸುತ್ತಿದೆ. ಹೀಗಾಗಿ ಇಂದಿನ ತಲೆಮಾರಿನವರಿಗೆ ಹಿಂದಿನ ತಲೆಮಾರಿನವರ ಪ್ರತಿಭೆ ಪಾಂಡಿತ್ಯ ಸಾಧನೆಗಳು ಅರಿವಿಗೆ ಬರುತ್ತಿಲ್ಲ. ಅಂದಿನ ಸಮಾಜದ ಪ್ರಮುಖ ಸಾಹಿತಿ–ಕಲೆಗಾರರ ಕೊಡುಗೆಗಳು ಇಂದಿನವರಿಗೆ ದಕ್ಕುತ್ತಿಲ್ಲ. ನಮ್ಮ ಹಿಂದಿನ ಸಾಹಿತಿಗಳು ವಿದ್ವಾಂಸರ ಸಾಧನೆ ಇಂದಿನವರಿಗೆ ತಿಳಿಯುತ್ತಿಲ್ಲ ಇಲ್ಲವೇ ಮರೆತಿದ್ದಾರೆ."

ಹೀಗೆ ನಮ್ಮ ಜನ ಮರೆತ ವಿದ್ವಾಂಸ ಸಾಹಿತಿಗಳಲ್ಲಿ ಒಬ್ಬರು ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರು ಗಣ್ಯರಾಗಿದ್ದಾರೆ.

ಹೊಸಕೆರೆ ಚಿದಂಬರಯ್ಯನವರು ೧೯ನೇ ಶತಮಾನದಲ್ಲಿ ೧೮೭೦ರಲ್ಲಿ ಜನಿಸಿ ೨೦ನೇ ಶತಮಾನದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ೧೯೩೮ರವರೆಗೆ ಬಾಳಿ ಬದುಕಿ ಕನ್ನಡಸೇವೆ ಮಾಡಿದ ಹೊಸಗನ್ನಡ ಸಾಹಿತ್ಯನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ.

ಕನ್ನಡದಲ್ಲಿ ಶಿವರಾಮ ಕಾರಂತರ ಹಾಗೆ ನಾಟಕ, ಕಥೆ, ಕಾದಂಬರಿ ವೇದಾಂತ ಅನುವಾದ, ಟೀಕೆ, ಜೀವನಚರಿತ್ರೆ, ಕೀರ್ತನೆ, ಹರಿಕಥೆ, ವಿಮರ್ಶೆ, ಕಾವ್ಯ, ಕವನ, ಶಿಕ್ಷಣ ಪ್ರಬಂಧ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ೮೦ಕ್ಕೂ ಹೆಚ್ಚು ಗ್ರಂಥಗಳನ್ನು ನೂರಾರು ಲೇಖನಗಳನ್ನು ರಚಿಸಿ ಪ್ರಕಟಿಸಿದ ಸಾಹಿತ್ಯ ಸವ್ಯ ಸಾಚಿ ಹೊಸಕೆರೆ ಚಿದಂಬರಯ್ಯವರು.

ದ.ಕೃ. ಭಾರದ್ವಾಜರು ಹೇಳಿದಂತೆ "ಶುದ್ಧ ಸರಳ ಗಂಭೀರ ಗದ್ಯ ರಚನೆಯ ಹಳಬರಲ್ಲಿ ಒಬ್ಬರು. ಚ.ವಾಸುದೇವಯ್ಯ, ಇನ್ನೊಬ್ಬರು ಹೊಸಕೆರೆ ಚಿದಂಬರಯ್ಯ ನವರು. ಕನ್ನಡದಲ್ಲಿ ಆಧ್ಯಾತ್ಮಿಕ ಸಾಹಿತ್ಯ ಗ್ರಂಥಗಳನ್ನು ಹೆಚ್ಚಾಗಿ ಬರೆದವರಲ್ಲಿ ಮೊದಲನೆಯವರು."

ಹೊಸಕೆರೆ ಚಿದಂಬರಯ್ಯನವರ ಜೀವನ ವಿವರಗಳು ಹೆಚ್ಚಾಗಿ ತಿಳಿದಿಲ್ಲ. ಏಕೆಂದರೆ ಅವರು ಜನಿಸಿ ಸು. ೧೪೦ ವರ್ಷಗಳಾಗಿವೆ. ನಿಧನರಾಗಿ ೭೨ ವರ್ಷಗಳಾಗಿವೆ ಎಂದರೆ ಈಗಿನ ತಲೆಮಾರಿನವರಲ್ಲಿ ಅವರ ಬಗ್ಗೆ ತಿಳಿದವರು ಇರಲಿ, ಕಂಡವರೇ ಅತ್ಯಲ್ಪ ಮಂದಿ ಆಗಿದ್ದಾರೆ. ಕನ್ನಡದ ಹಿರಿಯರಾದ ರಂಗನಾಥ ಶರ್ಮ, ಶೇಷಾಚಲ ಶರ್ಮ, ಬೆಳಗೆರೆ ಕೃಷ್ಣಶಾಸ್ತ್ರಿ ಅಂಥ ಮಹನೀಯರು ಅವರನ್ನು ಕಂಡವರು ನಮ್ಮ ಮಧ್ಯೆ ಇದ್ದಾರೆ ಆದರೆ ಹೆಚ್ಚಾಗಿ ಅವರ ಬಗ್ಗೆ ತಿಳಿದಿಲ್ಲ. ಇನ್ನು ಅವರ ಕೃತಿಗಳು ಒಂದು ಕಾಲದಲ್ಲಿ ಶಾಲಾ–ಕಾಲೇಜುಗಳಿಗೆ ಪಠ್ಯಗಳಾಗಿದ್ದು ಹಲವಾರು ಮರುಮುದ್ರಣಗಳಾಗಿ ನಾಡಿನಾದ್ಯಂತ ಪ್ರಚಾರದಲ್ಲಿದ್ದರೂ ಇಂದು ಒಂದೆರಡು ಕೃತಿಗಳು ಪುನರ್ಮುದ್ರಣ ಆಗಿರುವುದು ಬಿಟ್ಟರೆ ಉಳಿದ ಗ್ರಂಥಗಳನ್ನು ನೋಡಲೂ ಸಿಗುತ್ತಿಲ್ಲ. ಹೀಗಾಗಿ ಒಂದು ಕಾಲದ ಕಣ್ಮಣಿ ಸಾಹಿತಿ ಕಣ್ಮರೆ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ.

ಹೊಸಕೆರೆ ಚಿದಂಬರಯ್ಯನವರು ೨೦ನೇ ಶತಮಾನದ ಹೊಸಗನ್ನಡದ ನವೋದಯ ಕಾಲದಲ್ಲಿ ಪ್ರಸಿದ್ಧಸಾಹಿತಿಗಳಲ್ಲಿ ಒಬ್ಬರಾಗಿದ್ದರು. ಹಾ.ಮಾ. ನಾಯಕರು ಹೇಳುವ ಮಾತಿದು. "ನಮ್ಮ ತಂದೆ ತಮ್ಮ ಮಧ್ಯ ವಯಸ್ಸಿನಲ್ಲಿ

ದಿನವೂ ಸಂಜೆ ಭಗವದ್ಗೀತೆ ಓದುತ್ತಿದ್ದರು. ಅದರಿಂದ ಮನಸ್ಸಿಗೆ ಶಾಂತಿ ಲಭಿಸುತ್ತಿದೆ ಎಂದು ಹೇಳುತ್ತಿದ್ದರು."

ಅವರು ಬಳಸುತ್ತಿದ್ದ ಪ್ರತಿ ಹೊಸಕೆರೆ ಚಿದಂಬರಯ್ಯನವರು ರಚಿಸಿದ ಗೀತಾರ್ಥಚಂದ್ರಿಕೆ. ಅದನ್ನು ಈಗಲೂ ನಾನು ಬಳಸುತ್ತೇನೆ. ಕನ್ನಡಕ್ಕೆ ಆದಿಶಂಕರಾಚಾರ್ಯರ ಸಮಸ್ತ ಗ್ರಂಥಗಳನ್ನೂ ಪ್ರಸ್ಥಾನತ್ರಯೀ, ಸ್ತೋತ್ರಗಳು ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ಮೂಲ ಅನುವಾದ ವ್ಯಾಖ್ಯಾನದೊಡನೆ ಕೊಟ್ಟ ಅಪ್ರತಿಮ ವಿದ್ವಾಂಸರು ಹೊಳೇನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ಚಿದಂಬರಯ್ಯನವರ ದೀರ್ಘಕಾಲದ ಒಡನಾಡಿಗಳು, ಅವರು ಹೇಳುವ ಮಾತಿದು. "ನನ್ನನ್ನು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿ ಆಗಾಗ್ಗೆ ಉಪಯುಕ್ತವಾದ ಸಲಹೆಗಳನ್ನು ನಡೆನುಡಿಗಳಿಂದ ಕೊಡುತ್ತ ಏಕದೇಹ ನ್ಯಾಯದಿಂದ ದೀರ್ಘಕಾಲದವರೆಗೆ ಇದ್ದುಕೊಂಡಿದ್ದು ನನ್ನ ಬಾಳಿಗೆ ಸುಖದ ಹೊಯ್ನೀರನ್ನು ಎರೆಯುತ್ತಿದ್ದರು"

ಹೊಸಕೆರೆ ಚಿದಂಬರಯ್ಯನವರು ಕೇವಲ ಸಾಹಿತಿ ವಿದ್ವಾಂಸರಷ್ಟೆ ಆಗಿರಲಿಲ್ಲ ದೇಶಾಭಿಮಾನಿಗಳೂ ಕರ್ನಾಟಕ ಏಕೀಕರಣ ವಾದಿಗಳೂಆಗಿದ್ದರು. ಅನಕೃ ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿದಂತೆ, "ಈಗ ಕನ್ನಡ ಸಾಹಿತ್ಯ ಪರಿಷತ್ತು ಇರುವ ಜಾಗ ಖಾಲಿ ಜಾಗವಾಗಿದ್ದು, ಗಾಂಧೀ ಮೈದಾನವಾಗಿತ್ತು. ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳು ಅಲ್ಲಿ ನಡೆಯುತ್ತಿದ್ದವು. ಪಂಡಿತ ತಾರಾನಾಥರೂ ಅಲ್ಲಿ ಗೀತೆ ಬಗ್ಗೆ ಹತ್ತು ಉಪನ್ಯಾಸಗಳನ್ನು ದೇಶಾಭಿಮಾನದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಿದ್ದರು. ಅವರ ಭಾಷಣಗಳನ್ನು ಕೇಳಲು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ವಿದ್ವಾಂಸರು ಬರುತ್ತಿರಲಿಲ್ಲ ಏಕೆಂದರೆ ಸರ್ಕಾರಿ ಸಿಐಡಿಗಳನ್ನು ಹಾಕಿದ್ದರು. ಸಭೆಗೆ ಬಂದವರ ಬಗ್ಗೆ ವರದಿ ಮಾಡಲು ಆಗ ತಪ್ಪದೆ ಸರ್ಕಾರಕ್ಕೆ ಹೆದರದೆ ಸಭೆಗೆ ಬರುತ್ತಿದ್ದವರಲ್ಲಿ ಮೂವರು ಘನವಿದ್ವಾಂಸರಲ್ಲಿ ಒಬ್ಬರು ಹೊಸಕೆರೆ ಚಿದಂಬರಯ್ಯನವರು".

ಶಿವರಾಮಕಾರಂತರು ಹೊಸಕೆರೆ ಚಿದಂಬರಯ್ಯನವರ ಕೃತಿಗಳಿಂದ ಪ್ರಭಾವಿತರಾಗಿದ್ದರು. ಕಾರಂತರೇ ತಮ್ಮ ದೇಹಜ್ಯೋತಿಗಳು ಮತ್ತು ಪ್ರಾಣಿ ಪ್ರಬಂಧಗಳು ಎಂಬ ಗ್ರಂಥದ ಹೆಸರು ಇಡುವಲ್ಲಿ "ಚಿದಂಬರಯ್ಯನವರು ರಚಿಸಿ ಪ್ರಕಟಿಸಿದ ಭರತಖಂಡದ ಜೀವಜ್ಯೋತಿಗಳು ಎಂಬ ಗ್ರಂಥದ

ಶೀರ್ಷಿಕೆಯಿಂದ ಪ್ರಭಾವಿತನಾಗಿದ್ದೇನೆ. ಅವರ ಪುಸ್ತಕದ ಆಖ್ಯೆ ನನಗೆ ಪ್ರೇರಣೆಕೊಟ್ಟಿತು" ಎಂದಿದ್ದಾರೆ.

ಇಂಥ ವಿದ್ವಾಂಸ, ಕವಿ, ಸಾಹಿತಿ ಆದ ಹೊಸಕೆರೆ ಚಿದಂಬರಯ್ಯನವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ೨೮-೧೨-೧೮೭೦ರಲ್ಲಿ ಶೇಷಗಿರಿಯಪ್ಪ-ಪುಟ್ಟನರಸಮ್ಮ ವೈದಿಕ ದಂಪತಿಗಳಿಗೆ ಹಿರಿಯ ಮಗನಾಗಿ ಜನಿಸಿದರು. ಲಕ್ಷ್ಮೀದೇವಮ್ಮ ಎಂಬುವರೊಡನೆ ಮದುವೆ ಆದರು. ಬಾಲ್ಯವನ್ನು ಹಿರಿಯೂರಿನಲ್ಲಿ ಪರಶುರಾಮ ರಾಮಾಯಣ ರಚಿಸಿದ ಬೊಬ್ಬೂರು ರಂಗನ ವಂಶಜರ ಮನೆಯಲ್ಲಿ ಕಳೆದರು. ಮೈಸೂರು ಅಪ್ಪರ್ ಲೋಯರ್ ಪರೀಕ್ಷೆಯನ್ನು ಪಾಸು ಮಾಡಿದ ಇವರು ಕೌಟುಂಬಿಕ ಕಾರಣಗಳಿಂದ ವಿದ್ಯಾಭ್ಯಾಸ ಮುಂದುವರೆಸಲಾಗದೆ ಶಾಲಾ ಉಪಾಧ್ಯಾಯ ರಾದರು. ಕಡೂರು, ದಾವಣಗೆರೆಗಳಲ್ಲಿ ಕೆಲವು ಕಾಲ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲೂ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಿವೃತ್ತರಾದ ಮೇಲೆ ಗಾಂಧೀಜಿ ಅವರ ಸ್ವದೇಶೀ ಚಳುವಳಿ ಪ್ರಭಾವದಿಂದ ಪ್ರಾರಂಭವಾದ ಧಾರವಾಡದ ದೇಶೀಯ ವಿದ್ಯಾಶಾಲೆ (ನ್ಯಾಷನಲ್ ಸ್ಕೂಲಿನಲ್ಲಿ) ನೀತಿಪಾಠ ಧಾರ್ಮಿಕ ಬೋಧೆ ಮಾಡುವ ಅಧ್ಯಾಪಕರಾದರು. ೧೯೨೪ರಲ್ಲಿ ಬೆಳಗಾಂ ಸಮ್ಮೇಳನಕ್ಕೆ ಗಾಂಧೀಜಿ ಅಧ್ಯಕ್ಷರಾಗಿದ್ದಾಗ, ಸ್ವಯಂಸೇವಕರಾಗಿ ವಿದ್ಯಾರ್ಥಿ ಗಳೊಡನೆ ಹೋಗಿದ್ದರು.

೧೯೨೬ರವರೆಗೆ ನಡೆದ ಈ ರಾಷ್ಟ್ರೀಯ ಶಾಲೆಯಲ್ಲಿ ದೇಶಾಭಿಮಾನದ ಪಾಠಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಿದ್ದರ ಫಲವಾಗಿ ಆರ್ಯಧರ್ಮ ಪ್ರದೀಪ ಎಂಬ ಶ್ರೇಷ್ಠ ಗ್ರಂಥವನ್ನು ಪ್ರಕಟಿಸಿದರು. ಈ ರಾಷ್ಟ್ರೀಯ ಶಾಲೆಯಲ್ಲಿ ಎಸ್.ಎಲ್. ಭೈರಪ್ಪನವರ ಕಾದಂಬರಿಗಳನ್ನೆಲ್ಲ ಪ್ರಕಟಿಸಿದ ಸಾಹಿತ್ಯ ಭಂಡಾರದ ಗೋವಿಂದರಾಯರು, ಸಮಾಜ ಪುಸ್ತಕಾಲಯದ ಬಾಲಚಂದ್ರ ಘಾಣೇಕರ ಅವರು, ಕಡಲಬಾಳು ಪ್ರಹ್ಲಾದಾಚಾರ್ಯರು, ಮೇವುಂಡಿಮಲ್ಲಾರಿ ಮೊದಲಾದವರು ಚಿದಂಬರಯ್ಯನವರ ವಿದ್ಯಾರ್ಥಿಗಳಾಗಿದ್ದರು.

ಆ ಶಾಲೆ ನಡೆಯುತ್ತಿದ್ದ ರೀತಿಯನ್ನು ಗೋವಿಂದರಾಯರು ಹೀಗೆ ಬಣ್ಣಿಸಿದ್ದಾರೆ. "ಪ್ರಾರ್ಥನೆ ಸ್ನಾನಗಳಾದ ಮೇಲೆ ತುಸು ಓದಿನಲ್ಲಿ ಮುಳುಗಿ ಒಂಬತ್ತಕ್ಕೆ ತಿಂಡಿ ಮುಗಿಸಿ ಎರಡು ಗಂಟೆಗಳ ಕಾಲ ಪಾಠಗಳನ್ನು ಪೂರೈಸಿ

ಕೊಂಡು ಮಧುಕರಿಗೆಂದು ಹುಡುಗರು ಮನೆಮನೆಗಳಿಗೆ ಹೊರಡುತ್ತಿದ್ದರು. ಗುರುಕುಲ ಪದ್ಧತಿಯನ್ನು ವಿದ್ಯಾರ್ಥಿಗಳ ಅರಿವಿಗೆ ತಂದು ಕೊಡುವಂತಿದ್ದ ಆ ನಿಯಮವು ಶಿಸ್ತುಬದ್ಧ ಜೀವನಕ್ಕೆ ವಿದ್ಯಾರ್ಥಿಗಳನ್ನು ಒಳಪಡಿಸುವಂತಿತ್ತು. ರಂಗನಾಥ ರಾಮಚಂದ್ರ ದಿವಾಕರರು, ಬುರ್ಲಿಬಿಂದು ಮಾಧವರಾವ್, ಆಲೂರು ವೆಂಕಟರಾವ್ ಮೊದಲಾದವರು ಈ ರಾಷ್ಟ್ರೀಯ ಶಾಲೆಯ ಸ್ಥಾಪನೆಗೆ ಕಾರಣಕರ್ತರಾಗಿದ್ದರು.

ವಿದ್ಯಾರ್ಥಿಗಳ ಮೇಲೆ ಚಿದಂಬರಯ್ಯನವರು ತಮ್ಮ ಪಾಠ ಪ್ರವಚನ ಗಳಿಂದ ಎಷ್ಟರಮಟ್ಟಿಗೆ ಪ್ರಭಾವ ಬೀರಿದ್ದರು ಎಂದರೆ ಅವರ ವಿದ್ಯಾರ್ಥಿಗಳು ಹೇಳುವಂತೆ “ಹೊಸಕೆರೆ ಚಿದಂಬರಯ್ಯನವರೆಂಬ ಘನವಿದ್ವಾಂಸರು ನಮಗೆ ಅಧ್ಯಾಪಕರಲ್ಲಿ ಒಬ್ಬರಾಗಿದ್ದರು. ಅವರು ತಾವು ಹೇಳುವ ಧಾರ್ಮಿಕ ಶಿಕ್ಷಣದಲ್ಲಿ ಭಾರತದಲ್ಲಿ ಹಿಂದೆ ಆಗಿ ಹೋದ ಧಾರ್ಮಿಕ ಸತ್ಪುರುಷರು ಹಾಗೂ ರಾಷ್ಟ್ರೀಯ ಧೀರ ಶೂರರರನ್ನು ಒಳಗೊಂಡಂತೆ ೨೦ನೇ ಶತಮಾನದ ವಿಭೂತಿ ಪುರುಷರ ಚರಿತ್ರೆಗಳಲ್ಲಿಯ ಮುಖ್ಯಾಂಶಗಳನ್ನೆಲ್ಲ ಹೇಳುತ್ತಿದ್ದರು. ಇದರಿಂದ ನಾವೆಲ್ಲ ಪ್ರಭಾವಿತರಾಗಿದ್ದೆವು.”

ವಿದ್ಯಾರ್ಥಿಗಳ ಪಾಲಿಗಷ್ಟೆ ಅಲ್ಲ, ತಮ್ಮ ಸಹೋದ್ಯೋಗಿ ಅಧ್ಯಾಪಕರ ಪಾಲಿಗೂ ಆದರ್ಶಶಿಕ್ಷಕರಾಗಿದ್ದರು. ಚಿದಂಬರಯ್ಯನವರ ಸಹಾಧ್ಯಾಪಕರಾಗಿದ್ದ ವೈ. ಸುಬ್ಬರಾಯರು ಅವರ ಒಟ್ಟಿಗೆ ವೇದೋಪನಿಷತ್ತುಗಳ ಅಭ್ಯಾಸ ಮಾಡುತ್ತಿದ್ದರು ಶೃಂಗೇರಿ ಜಗದ್ಗುರು ನರಸಿಂಹಭಾರತೀಸ್ವಾಮಿಗಳಿಂದ ಒಟ್ಟಿಗೆ ಭಾಷ್ಯಶಾಂತಿ ಹೊಂದಿದ್ದರು. ಹರಿಹರದಲ್ಲಿದ್ದಾಗ ನದೀಸ್ನಾನಕ್ಕೆ ಒಟ್ಟಿಗೆ ಹೋಗುತ್ತಿದ್ದರು. ಅಷ್ಟೇ ಅಲ್ಲ “ಚಿದಂಬರಯ್ಯನವರು ಶಾಲೆಗೆ ಹೋಗುವಾಗ ಕೈಯಲ್ಲಿ ಒಂದು ಬಗನೆಯ ಮರದ ಕೋಲನ್ನು ಹಿಡಿದುಕೊಂಡು ಹೋಗುತ್ತಿದ್ದರು. ಸುಬ್ಬರಾಯರೂ ಒಂದು ಬಗನೆಯ ಕೋಲನ್ನು ಹಿಡಿದು ಹೋಗುತ್ತಿದ್ದರು. ಬಗನೆಯ ಕೋಲು ಹಿಡಿದರೆ ವ್ಯವಹಾರದಲ್ಲಿ ಎಲ್ಲೆಲ್ಲಿಯೂ ಜಯ ಎಂದು ಯಾರೋ ಹೇಳಿದ್ದನ್ನು ಸುಬ್ಬರಾಯರು ಕೇಳಿದ್ದರು. ಅದನ್ನು ತಿಳಿದ ಚಿದಂಬರಯ್ಯನವರೂ ಕೋಲು ಹಿಡಿದಿದ್ದರು.

ಚಿದಂಬರಯ್ಯನವರು ಬಾಲ್ಯದಿಂದಲೂ ವೈರಾಗ್ಯ ಜೀವಿಗಳಾಗಿದ್ದರು ಎನ್ನಬಹುದು. ಏಕೆಂದರೆ ಅವರಲ್ಲಿ ವೈರಾಗ್ಯಭಾವ ಸಹಜವಾಗಿತ್ತು. ಅವರು ಸಾಹಿತ್ಯದ ಗ್ರಂಥಗಳನ್ನು ರಚಿಸಿರುವಷ್ಟೇ ವೇದಾಂತದ ಗ್ರಂಥಗಳನ್ನು

ರಚಿಸಿದ್ದಾರೆ ಹಾಗೂ ಅನುವಾದಿಸಿದ್ದಾರೆ. ವಿದ್ವತ್ಪೂರ್ಣ ಟೀಕೆಯನ್ನು ಅನುಭವಾಮೃತಕ್ಕೆ ಬರೆದಿದ್ದಾರೆ. ಚಂಪೂವಿನಲ್ಲಿ ಹಳಗನ್ನಡದ ಕಾವ್ಯವನ್ನು ವಿದ್ಯಾರಣ್ಯರನ್ನು ಕುರಿತು ರಚಿಸಿದ್ದಾರೆ.

ಶಾಲಾ ಶಿಕ್ಷಕರಾಗಿದ್ದಾಗ, ಕುರ್ತುಕೋಟಿ ಭಾಗವತರ ಮೂಲಕ ಮಹಿಮಾನ್ವಿತರಾದ ಗೋಂದಾವಳಿ ಮಹಾರಾಜರ ವಿಷಯ ತಿಳಿದು ಅವರ ಶಿಷ್ಯರಾಗಲು ಹೊರಟರು. ಅವರು ಹಾಕಿದ ಷರತ್ತುಗಳನ್ನೆಲ್ಲ ನೆರವೇರಿಸಿ ಶಿಷ್ಯರಾದರು. ರಜದ ಮೇಲೆ ರಜ ಹಾಕಿದ್ದರಿಂದ ನಿವೃತ್ತರಾದರು. ಅವರು ಶಿಕ್ಷಕರಾಗಿದ್ದಾಗ ಅವರನ್ನು ಒಮ್ಮೆ ವರ್ಗಾವಣೆಗೆ ಬೇರೆ ಸ್ಥಳ ಸಿಗದ ಸಂದರ್ಭದಲ್ಲಿ ಟ್ರೈನಿಂಗ್ ಕಾಲೇಜಿಗೆ ತರಬೇತಿಗೆ ಕಳಿಸಿದ್ದರು. ಅಲ್ಲಿಗೆ ಹೋದಾಗ ಅಲ್ಲಿನ ಮುಖ್ಯಸ್ಥರು ಚಿದಂಬರಯ್ಯನವರಿಗೆ ನಮಸ್ಕರಿಸಿ 'ನಿಮಗೆ ನಮ್ಮಿಂದ ಅಲ್ಲ. ನಮಗೆ ನಿಮ್ಮಿಂದ ತರಬೇತಿ ದೊರಕಬೇಕು. ಘನ ವಿದ್ವಾಂಸರು ಆದರ್ಶ ಶಿಕ್ಷಕರು ನೀವು' ಎಂದು ಹೇಳಿ ಅದೇ ರೀತಿಯಾಗಿ ಸರ್ಕಾರಕ್ಕೆ ಬರೆದು ಕಳಿಸಿದರು. ಚಿದಂಬರಯ್ಯನವರು ಕೇವಲ ಮುಖ್ಯೋಪಾಧ್ಯಾಯರಾಗಿರಲಿಲ್ಲ. ಅಧ್ಯಾಪಕರಿಗಾಗಿ ಶಿಕ್ಷಣೋಪನ್ಯಾಸಗಳನ್ನು ಮಾಡಿ ಪ್ರಕಟಿಸಿದರು. ಮನಶ್ಶಿಕ್ಷಣ, ಬೋಧನಾಕ್ರಮ, ವಸ್ತುಪ್ರದರ್ಶನ, ಚರಿತ್ರ ಚಿಂತಾಮಣಿ, ಗಣಿತಾಬ್ಜ ಭಾಸ್ಕರ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಅದಕ್ಕಾಗಿ ಬಹುಮಾನಗಳನ್ನು ಗಳಿಸಿದ್ದಾರೆ. ೧೯೦೮ರಲ್ಲಿ ಕಡೂರಿನಲ್ಲಿ ವಿದ್ಯಾಭ್ಯಾಸ ಪ್ರದರ್ಶನವೊಂದನ್ನು ಏರ್ಪಡಿಸಿದಾಗ ಆ ಪ್ರದರ್ಶನವನ್ನು ನೋಡಲು ಶಿಕ್ಷಣ ಇಲಾಖೆಯವರು ಸುತ್ತಮುತ್ತಲ ಶಾಲೆಗಳಿಗೆ ರಜಾ ಘೋಷಿಸಿದ್ದರು.

ಹೊಸಕೆರೆ ಚಿದಂಬರಯ್ಯನವರ ಅಪಾರ ಓದುಗಾರಿಕೆಯು ಎಂಥವರನ್ನೂ ದಂಗುಬಡಿಸುವಂತದ್ದು. ಪ್ರೈಮರಿಶಾಲಾ ಮಾಸ್ತರರಾಗಿದ್ದ ಅವರು ಯಾವ ಕಾಲೇಜಿನ ಪ್ರೊಫೆಸರುಗಳಿಗಿಂತ ಕಡಿಮೆಯಿಲ್ಲದೆ ಓದಿದ್ದರು ಎಂದರೆ ತಪ್ಪಾಗಲಾರದು. ಉದಾಹರಣೆಗೆ, ಅವರು ಕನ್ನಡದಲ್ಲೆ ಏಕೈಕ ಕೃತಿಯಾದ ೪೮ ಹರಿಕಥೆಗಳ, **ಕೀರ್ತನ ಕಂಠಾಭರಣ** ಗ್ರಂಥವನ್ನು ರಚಿಸುವಾಗ ೧೯೨೦ರ ವೇಳೆಗೆ ಕನ್ನಡದಲ್ಲಿ ಪ್ರಕಟವಾದ ಧಾರ್ಮಿಕ ಕೃತಿಗಳನ್ನು ಕಾವ್ಯ ಗ್ರಂಥಗಳನ್ನು ವಚನ ಸಾಹಿತ್ಯ, ದಾಸಸಾಹಿತ್ಯ, ವೇದಾಂತ ಗ್ರಂಥಗಳನ್ನೆಲ್ಲಾ ಬಳಸಿ ಕೊಂಡಿದ್ದಾರೆ. "ಆದಿಪುರಾಣ, ಜೀವಂಧರ ಸಾಂಗತ್ಯ, ರತ್ನಾಕರಶತಕ, ಪಂಪರಾಮಾಯಣ, ಜಯ ನೃಪಕಾವ್ಯ ಕುಮುದೇಂದು ರಾಮಾಯಣ,

ಗೋಮಟೇಶ್ವರ ಚರಿತೆ ಮೊದಲಾದ ಜೈನ ಸಾಹಿತ್ಯವನ್ನೂ, ರಾಜಶೇಖರ ವಿಳಾಸ, ಮಲಬಸವ ರಾಜಚರಿತ್ರೆ, ಪ್ರಭುಲಿಂಗಲೀಲೆ, ವಿರೂಪಾಕ್ಷ ಶತಕ, ಸರ್ವಜ್ಞ, ಬಸವಣ್ಣನವರ ವಚನ ಇತ್ಯಾದಿ ವೀರಶೈವ ಗ್ರಂಥಗಳನ್ನೂ ಗೀತ ಗೋಪಾಲ ಕನ್ನಡ ಭಾಗವತ ಚೆಲ್ವನಾರಾಯಣಶತಕ, ಸಂಸ್ಕೃತ ರಾಮಾಯಣ ಭಾರತ ಭಾಗವತಗಳ ಅನುವಾದಗಳನ್ನು ಪ್ರಕಟಿತ ಅಪ್ರಕಟಿತ ಸ್ವರಚಿತ ಕೀರ್ತನೆಗಳನ್ನು ಸುಮಾರು ೪೦೦ಕ್ಕೂ ಹೆಚ್ಚಿನ ಗ್ರಂಥಗಳನ್ನು ಅಭ್ಯಸಿಸಿ ಸೂಕ್ತಿಗಳನ್ನು ಹೆಕ್ಕಿ ಅಳವಡಿಸಿದ್ದಾರೆ.

ಈ ಗ್ರಂಥದ ಪೀಠಿಕೆಯಲ್ಲಿ ಚಿದಂಬರಯ್ಯನವರು ಹೇಳಿದ ಮಾತುಗಳಲ್ಲಿ ಏನೇನೂ ಅತಿಶಯೋಕ್ತಿ ಇಲ್ಲ. ಅವರ ಮಾತಿದು. "ಈ ಗ್ರಂಥ ಕೀರ್ತನ ಕಂಠಾಭರಣವು ಕೇವಲ ಕೀರ್ತನಕಾರನು ಮಾತ್ರ ಹಿಡಿಯತಕ್ಕದ್ದೆಂದೂ ತಿಳಿಯಬಾರದೆಂದು ಮನೋರಂಜಕವಾದ ಈ ರಚನಾ ವಿಶೇಷದ ರುಚಿಯನ್ನು ಕನ್ನಡಿಗರೆಲ್ಲರೂ ಓದಬೇಕೆಂದೂ ಅನೇಕ ಗ್ರಂಥಗಳನ್ನು ಒಂದೇ ಕಡೆ ಉಪಯೋಗಿಸುತ್ತ ಕರ್ನಾಟಕ ಭಾಷಾ ಪ್ರಪಂಚಕ್ಕೆ ಒಂದು ಹೊಸ ಬಗೆಯ ಸಾಹಿತ್ಯವಾಗಿದ್ದು ಇದೊಂದನ್ನು ಓದಿದರೆ ಕನ್ನಡದ ವಾಙ್ಮಯವನ್ನೆಲ್ಲ ಓದಿದಂತಾಗಿ ಹೃದಯವು ಅರಳುವುದು" ಎಂದಿದ್ದಾರೆ.

ಹೊಸಕೆರೆ ಚಿದಂಬರಯ್ಯನವರು ಬಾಲ್ಯದಲ್ಲಿ ಸಾಕಷ್ಟು ಕಂಪೆನಿ ನಾಟಕಗಳನ್ನು ಬಯಲಾಟಗಳನ್ನು ನೋಡಿ ಪ್ರಭಾವಿತರಾಗಿದ್ದರು ಎಂಬುದನ್ನು ಅವರ ನಾಟಕ ಕೃತಿಗಳನ್ನು ಕಂಡರೆ ತಿಳಿಯುತ್ತದೆ. ತಮ್ಮ ಕಾಲದ ಸಂಸ್ಕೃತ-ಕನ್ನಡ ನಾಟಕಗಳನ್ನೆಲ್ಲ ಅಭ್ಯಾಸ ಮಾಡಿದ್ದರು. ತಮ್ಮ ೨೯ನೇ ವಯಸ್ಸಿನ ವೇಳೆಗೆ **'ಸುಶೀಲಾ ಪರಿಣಯ'** ಎಂಬ ನಾಟಕ ರಚಿಸಿದ್ದರು. ಬಸವಪ್ಪ ಶಾಸ್ತ್ರಿಗಳ ಶಾಕುಂತಲ ನಾಟಕವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಅದೇ ಧಾಟಿಯಲ್ಲಿ ನಾಟಕ ರಚಿಸಿದ್ದಾರೆ. ನಾಟಕದ ಪಠ್ಯಭಾಗದಲ್ಲಿ ಕಂದ ವೃತ್ತಗಳಲ್ಲಿ ಪದ್ಯಗಳನ್ನೂ ಅಡಿಯಲ್ಲಿ ಪ್ರದರ್ಶನಕ್ಕಾಗಿ ಬೇರೆ ಬೇರೆ ಮಟ್ಟುಗಳಲ್ಲಿ ಹಾಡುಗಳನ್ನೂ ರಚಿಸಿದ್ದಾರೆ. ಇವರು ರಚಿಸಿರುವ ನಾಟಕಗಳಲ್ಲಿ **ಕೃಷ್ಣ ಮಹೇಶ್ವರಿ** ನಾಟಕಕ್ಕೆ ಕನ್ನಡ ನಾಟಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ಏಕೆಂದರೆ, ಮೈಸೂರು ರಾಜ ಮನೆತನದ ದೊರೆಗಳ ಇತಿಹಾಸದ ಮೇಲೆ ರಚಿತವಾದ ನಾಟಕಗಳಲ್ಲಿ ಸಂಸರದೇ ಮೊದಲು ಎಂದು ವಿಮರ್ಶಕರು ಭಾವಿಸಿದ್ದಾರೆ. ಆದರೆ ಹೊಸಕೆರೆ ಚಿದಂಬರಯ್ಯನವರು ೧೯೧೦ರಲ್ಲಿ ರಚಿಸಿರುವ ಕೃಷ್ಣ ಮಹೇಶ್ವರಿ ನಾಟಕವೇ

ಕನ್ನಡದ ಮೊದಲ ಮೈಸೂರು ಇತಿಹಾಸದ ಐತಿಹಾಸಿಕ ನಾಟಕವಾಗಿದೆ. "ಮಾತೃಭೂಮಿಯಾದ ಮೈಸೂರು ದೇಶದ ಚರಿತ್ರೆ ಸೂಚಿತ ಸಂಗತಿಗಳನ್ನೆಲ್ಲಾ ಅಡಕ ಮಾಡಿ ಹೊಸ ಬಗೆಯ ಸಂವಿಧಾನದಿಂದ ಸಾಲಂಕೃತವಾಗಿದಂತೆ ರಚಿಸಲಾಗಿದೆ.

ಚಿದಂಬರಯ್ಯನವರ ಸಾಹಿತ್ಯಸೇವೆಯನ್ನು ಪರಿಗಣಿಸಿ ಮೆಚ್ಚಿ ಧಾರವಾಡದಲ್ಲಿ ವಿದ್ವತ್ ಸಭೆಯೊಂದರಲ್ಲಿ ಇವರಿಗೆ **'ಕರ್ನಾಟಕ ಕವಿರತ್ನ'** ಎಂಬ ಬಿರುದನ್ನು ನೀಡಿದರು. ಆಗ ಯಾರೋ ಇವರು ಕವಿತೆ, ಕೀರ್ತನೆ ಇತ್ಯಾದಿ ಬರೆದಿದ್ದಾರೆ ನಿಜ ಆದರೆ ಇಂಥ ಬಿರುದನ್ನು ಪಡೆಯುತ್ತಿರುವ ಇವರು ಪಾಂಡಿತ್ಯಪೂರ್ಣವಾಗಿ ಒಂದಾದರೂ ಕಾವ್ಯ ರಚಿಸಿದ್ದಾರಾ ಎಂದು ಮಾತಾಡಿ ಕೊಂಡರು. ಆ ಮಾತು ಕಿವಿಗೆ ಬಿದ್ದಾಗ ಅವರ ಮಾತಿಗೆ ಉತ್ತರವೆಂಬಂತೆ, ವಿದ್ಯಾರಣ್ಯ ಕಾವ್ಯವೆಂಬ ವಿದ್ವತ್ಪೂರ್ಣ ಚಂಪೂಕಾವ್ಯವನ್ನು ರಚಿಸಿದರು. ಇದರಲ್ಲಿ ಶಾರ್ದೂಲ ವಿಕ್ರೀಡಿತ, ಸ್ರಗ್ಧರಾ, ಮಂಜುಭಾಷಿಣಿ, ವಸಂತತಿಲಕ ಮಾಲಿನಿ, ಪುಷ್ಪಿತಾಗ್ರ, ವಂಶಸ್ಥ, ಪ್ರಹರ್ಷಣಿ, ಶಾಲಿನಿ ಮುಂತಾದ ೨೬ಕ್ಕೂ ಹೆಚ್ಚು ಛಂದಸ್ಸುಗಳಲ್ಲಿ ಕಾವ್ಯ ರಚಿಸಿದ್ದಾರೆ. ಕೀರ್ತನ ಕಂಠಾಭರಣದಲ್ಲಂತೂ ಕನ್ನಡದಲ್ಲೇ ಮೊದಲ ಬಾರಿಗೆ ದಿಂಡಿ, ಸಾಕಿ ಛಂದಸ್ಸಿನಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಕನ್ನಡದ ವಿದ್ವಾಂಸರಲ್ಲಿ ಚಿದಂಬರಯ್ಯನವರ ಹಾಗೆ ಛಂದೋನೈಪುಣ್ಯ ಪಡೆದವರು ಕೈಬೆರಳುಗಳಲ್ಲಿ ಎಣಿಸುವಷ್ಟೇ ಜನರಾಗಿದ್ದಾರೆ ಎಂದರೆ ತಪ್ಪಿಲ್ಲ.

ಚಿದಂಬರ ಅಂಕಿತದಲ್ಲಿ ನೂರಾರು ಕೀರ್ತನೆಗಳನ್ನು ರಚಿಸಿದ ಇವರು ಬಹಳ ಹೆಮ್ಮೆಯಿಂದ ವಿದ್ಯಾರಣ್ಯ ಕಾವ್ಯವನ್ನು ರಚಿಸಿದ್ದಾರೆ. ಇದು ಇವರ ಕನ್ನಡಾಭಿಮಾನಕ್ಕೆ ಸಾಕ್ಷಿಯಾಗಿದೆ. ಅವರೇ ಹೇಳಿದಂತೆ ಕವಿರತ್ನಾಖ್ಯೆಯನು + ಇತ್ತರ್ + ಆಗ ಕೆಲಬರ್ ವಿದ್ವಾಂಸರ್ + ಒಂದಾಗಿ ಸತ್ಕವಿತಾ ಪ್ರೌಢಿಮೆ ದೋರ್ಪ್ಪಮುನ್ನಂಥ ಅದಂ + ಆಗಳ್ ತಾಳಲ್ ಆಂ ನಾಣ್ಚಿದೆಂ ಕವಿತಾ ರತ್ನಂ ಇದೀಗಳ್ + ಎನಿಸಿಕೊಳ್ವ ಈ ಗ್ರಂಥಮೇ ಮುಂದಿರಲ್ ಕವಿರತ್ನಾಖ್ಯೆ ಅದೇಕೆ ಎಂದು ಅದನು ಉಪೇಕ್ಷಾ ದೃಷ್ಟಿಗೆ ಈಡಾಗಿಪೆಂ ಎಂದಿದ್ದಾರೆ.

ಚಿದಂಬರಯ್ಯನವರ ಕಾಲದಲ್ಲಿ ಇದ್ದ ಸಾಹಿತಿ ವಿದ್ವಾಂಸರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಗಣ್ಯರಾದವರು ಅವರ ನಡುವೆ ಎದ್ದು ಕಾಣುತ್ತಿದ್ದ ವಿದ್ವಾಂಸರು ಚಿದಂಬರಯ್ಯನವರಾಗಿದ್ದರು.

ಹೊಸಕೆರೆ ಚಿದಂಬರಯ್ಯನವರು ಸಾತ್ತ್ವಿಕರಾಗಿದ್ದರು. ಸಜ್ಜನರಾಗಿದ್ದರು. ಸದಾಚಾರ ಸಂಪನ್ನರು ವೈದಿಕರೂ ಆಗಿದ್ದರು. ಅವರ ಸೊಸೆ ಗುಂಡಮ್ಮನವರು ತಿಳಿಸಿದಂತೆ "ಪ್ರತಿದಿನ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಏಳುತ್ತಿದ್ದರು. ಸ್ನಾನ ಸಂಧ್ಯಾವಂದನಾದಿಗಳನ್ನೂ ಜಪ ಧ್ಯಾನಗಳನ್ನೂ ಪ್ರಾಣಾಯಾಮಾದಿ ಯೋಗ ಸಾಧನೆಯನ್ನೂ ಮಾಡುತ್ತಿದ್ದರು. ಅವರು ಧ್ಯಾನಮಾಡುತ್ತಿದ್ದಾಗ ನೆಲಬಿಟ್ಟು ಎರಡಡಿ ಮೇಲೇರುತ್ತಿದ್ದುದನ್ನು ಕಂಡವರಿದ್ದಾರೆ.

ದಿನಾ ಮನೆಯಲ್ಲಿ ಮಧ್ಯಾಹ್ನ ೩ ರಿಂದ ೫ರ ವರೆಗೆ ರಾಮಾಯಣ ಭಾರತ ಭಾಗವತಾದಿಗಳ ಪುರಾಣ ಪ್ರವಚನ ಮಾಡುತ್ತಿದ್ದರು. ವಿಶೇಷ ದಿನಗಳಲ್ಲಿ ಶಂಕರ ಸಪ್ತಾಹ, ರಾಮೋತ್ಸವ, ಕೃಷ್ಣಸ್ವಾಮಿ ಗುರುಪೂರ್ಣಿಮೆ ಬ್ರಹ್ಮಚೈತನ್ಯರ ಆರಾಧನೆಗಳನ್ನು ಆಚರಿಸುತ್ತಿದ್ದರು. ಪ್ರಶಾಂತ ವಾತಾವರಣ ಬಯಸುತ್ತಿದ್ದರು. ಗ್ರಂಥರಚನೆಗೆ ಪ್ರಶಾಂತಸ್ಥಳಗಳಿಗೆ ಹೋಗುತ್ತಿದ್ದರು. ವಿದುರಾಶ್ವತ್ಥದ ಪದ್ಮಾಶ್ರಮದಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಬೆಂಗಳೂರಿನಲ್ಲಿದ್ದಾಗ ಸಂಜೆ ಲಾಲ್‌ಬಾಗಿಗೆ ವಾಯುಸಂಚಾರ ಹೋಗಿ ಬರುತ್ತಿದ್ದರು. ಶಂಕರ ಜಯಂತಿ, ರಾಮೋತ್ಸವ ಮೊದಲಾದ ಸಂದರ್ಭಗಳಲ್ಲಿ ಹೊನ್ನವಳ್ಳಿ, ಹೊಳೆ ನರಸೀಪುರ, ದಾವಣಗೆರೆ, ಕಡೂರು ಮೊದಲಾದ ಸ್ಥಳಗಳಿಗೆ ಹೋಗಿ ಪ್ರವಚನ ನೀಡುತ್ತಿದ್ದರು. ಹೀಗೆ ಸಾಂಪ್ರದಾಯಿಕ ವೈದಿಕರಾಗಿದ್ದರೂ ಆಧುನಿಕ ವಿಚಾರ ವಾದಿಗಳು ಅವರಾಗಿದ್ದರು ಅವರದು ಕ್ರಾಂತಿಕಾರಕ ವಿಚಾರಧಾರೆ ಆಗಿತ್ತು.

೧೯೦೬ರಲ್ಲಿ ೩೬ನೇ ವಯಸ್ಸಿನಲ್ಲಿ ಅವರ ಹೆಂಡತಿ ತೀರಿಕೊಂಡ ಮೇಲೆ ಮರುವಿವಾಹಕ್ಕೆ ಅವರು ಒಪ್ಪಲಿಲ್ಲ. ದಂಪತಿಗಳು ಎಂದ ಮೇಲೆ ಸಮಾನ ಧರ್ಮಿಗಳು ಆಜೀವ ಪರ್ಯಂತ ಎಂದರ್ಥ. ಗಂಡ ಸತ್ತರೆ ಹೆಂಡತಿ ಮರು ಮದುವೆ ಆಗುತ್ತಾಳಾ? ಇಲ್ಲ ಅದೇ ನಿಯಮ ಗಂಡಿಗೂ ಇರಬೇಕು ನಾನು ಮರುವಿವಾಹವಾಗುವುದಿಲ್ಲ ಎಂದರು. ಅಷ್ಟೇ ಅಲ್ಲ. ಆ ಕಾಲದಲ್ಲಿ ವಿಧವೆ ಯಾದವರು ಒಪ್ಪತ್ತು ಊಟ ಮಾಡುತ್ತಿದ್ದರು. ಚಿದಂಬರಯ್ಯನವರು ಸಹ ತಮ್ಮ ಪತ್ನಿ ತೀರಿಕೊಂಡ ಮೇಲೆ ಸಾಯವವರೆಗೂ ದಿನಕ್ಕೊಪ್ಪತ್ತು ಊಟ ಮಾಡಿದರು. ಸಾಮಾನ್ಯವಾಗಿ ೧೧.೩೦ರ ಸುಮಾರಿಗೆ ಊಟ ಮಾಡುತ್ತಿದ್ದರು. ಅವರು ಸಾಯುವ ದಿನವೂ ೧೧.೩೦ಕ್ಕೆ ಊಟ ಮಾಡಿದರು. ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ. ಮನೆಯಲ್ಲಿ ಯಾರಾದರೂ ಹೊರಗೆ ಹೋದರೆ ಅವರಿಗೆ ಹೇಳಿ ಹೋಗಬೇಕಾಗಿತ್ತು. ಹೇಳಿದ ವೇಳೆಗೆ ಅವರು ಬರದೆ ಇದ್ದರೆ

ಚಡಪಡಿಸುತ್ತಾ ಮನೆ ಮುಂದೆ ಶತಪಥ ಹಾಕುತ್ತಿದ್ದರು. ಅಂಗಡಿಗೆ ಮಕ್ಕಳನ್ನು ಏನನ್ನಾದರೂ ಪದಾರ್ಥ ತರಲು ಕಳಿಸಿದರೆ ಅವರನ್ನೇಕೆ ಕಳಿಸಿದಿರಿ ನಾನೇ ಹೋಗುತ್ತಿದ್ದೆ ಎನ್ನುತ್ತಿದ್ದರು.

ಕೇಳಿದ ಪ್ರಕಾಶಕರಿಗೆಲ್ಲಾ ಪುಸ್ತಕ ಬರೆದು ಕೊಡುತ್ತಿದ್ದರು. ಪ್ರತಿಫಲವನ್ನು ಅಪೇಕ್ಷಿಸುತ್ತಿರಲಿಲ್ಲ. "ಕೆಲವು ಪ್ರತಿಗಳನ್ನು ಅಚ್ಚಾದ ಮೇಲೆ ಕಳಿಸಿಕೊಡಿರಪ್ಪಾ" ಎನ್ನುತ್ತಿದ್ದರು. ಅಡಿಗೆ ಖಾರ ಇರಕೂಡದು, ಸಪ್ಪೆ ಆಗಿರಬೇಕಿತ್ತು. ಕರಿದ ತಿಂಡಿ, ಹಪ್ಪಳ ಸಂಡಿಗೆ ಇಷ್ಟವಾಗಿತ್ತು. ಬರವಣಿಗೆ ಮಾಡುವಾಗ ಹುರಿಗಾಳು, ಕೊಬ್ಬರಿ ಮುಂತಾದ ಕುರುಕಲು ಇರಬೇಕಿತ್ತು. ಚಿದಂಬರಯ್ಯನವರದು ವಿದ್ವತ್ ಕುಟುಂಬವಾಗಿತ್ತು. ನಮ್ಮಲ್ಲಿ ತಂದೆ-ಮಕ್ಕಳಿಬ್ಬರೂ ಸಾಹಿತಿಗಳು ವಿದ್ವಾಂಸರು ಆಗಿರುವುದು ಅಪರೂಪ, ಕುವೆಂಪು-ಪೂರ್ಣಚಂದ್ರ ತೇಜಸ್ವಿ, ಬಿ. ಪುಟ್ಟಯ್ಯ ಬಿ.ಪಿ.ರಾಧಾಕೃಷ್ಣನ್, ಡಿವಿಜಿ-ಬಿಜಿಎಲ್ ಸ್ವಾಮಿ ಹೀಗೆ ಕೆಲವು ತಂದೆ-ಮಕ್ಕಳ ಸಾಹಿತ್ಯ ಜೋಡಿಯನ್ನು ಕಾಣುತ್ತೇವೆ. ಅಂತೆಯೇ ಚಿದಂಬರಯ್ಯ-ಅನಂತ ಮೂರ್ತಿಶಾಸ್ತ್ರಿ ತಂದೆ ಮಕ್ಕಳು ಇಬ್ಬರೂ ವಿದ್ವಾಂಸರೂ ಸಾಹಿತಿಗಳೂ ಆಗಿದ್ದರು. ಪುತ್ರರು ಶಿಕ್ಷಕರೂ ಗ್ರಂಥಕರ್ತರೂ ಆಗಿದ್ದರು. ಇನ್ನೊಬ್ಬ ಪುತ್ರ ಶ್ರೀನಿವಾಸ ಮೂರ್ತಿ ಅವರು ಭಾರತದ ಸವಿಕಟ್ಟು (೧೯೨೯) ಗ್ರಂಥ ರಚಿಸಿದ್ದಾರೆ.

ಚಿದಂಬರಯ್ಯನವರು ಸೂಕ್ಷ್ಮಮತಿಗಳೂ ಆಗಿದ್ದರು. ಸುಮಾರು ೧೯೦೭ರಲ್ಲಿ ಹುಬ್ಬಳ್ಳಿಗೆ ಶಂಕರ ಜಯಂತಿ ಉತ್ಸವಕ್ಕೆ ಹೋದಾಗ ಆ ಕಾಲದಲ್ಲಿ ಪ್ರಸಿದ್ಧ ವಿದ್ವಾಂಸರಾದ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳ ಮನೆಯಲ್ಲಿ ಇಳಿದು ಕೊಂಡಿದ್ದರು. ಅವರ ಮನೆಗೆ ಇವರು ಹೋದ ದಿನ ಏಕಾದಶಿ ದಿನವಾಗಿತ್ತು. ಉಪವಾಸದ ದಿನ. ಶಾಸ್ತ್ರಿಗಳು ಚಿದಂಬರಯ್ಯನವರನ್ನು ನಿಮಗೆ ದಶಮಿ ಆಗಬಹುದೇ ಎಂದರು. (ದಶಮಿ ಎಂದರೆ ಊಟದ ದಿನ ಏಕಾದಶಿ ಎಂದರೆ ಉಪವಾಸದ ದಿನ. ನಾವೆಲ್ಲ ಏಕಾದಶಿ ಎಂದರೆ ಉಪವಾಸದ ದಿನ. ನಾವೆಲ್ಲ ಏಕಾದಶಿ ಮಾಡುತ್ತಿದ್ದೇವೆ. ನಿಮಗೆ ಊಟ ಹಾಕೋಣವೇ ಎಂದು ಆ ಮಾತಿನ ಅರ್ಥ) ಆಗ ಚಿದಂಬರಯ್ಯ ಇಲ್ಲ ಏಕಾದಶಿ ಆಗುತ್ತದೆ ಎಂದರು. (ನಾವೂ ಉಪವಾಸ ಮಾಡುತ್ತೇವೆ ಎಂದರ್ಥ)

ಸಾಧು ಸಂತರನ್ನು ಕಂಡರೆ ಚಿದಂಬರಯ್ಯನವರಿಗೆ. ಪರಮಾದರ, ಆದರೆ ಕಪಟ ಸಂನ್ಯಾಸಿಗಳನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲ. "ಎಷ್ಟೋ ವೇಳೆ

ನಾನು ಸುದ್ದಿಯ ಬೆನ್ನು ಹತ್ತಿ ಅಂಥ ಎಷ್ಟೋ ಜನರ ಕಡೆಗೆ ಹೋಗಿ ಕೊನೆಗೆ ಮನೆಗೆ ಬಂದು ನಿಟ್ಟುಸಿರಿಟ್ಟ ಉದಾಹರಣೆಗಳು ನನಗೆ ಮರೆಯವ ಹಾಗಿಲ್ಲ" ಎಂದಿದ್ದಾರೆ. ಅವರು ಒಂದೆಡೆ ಹೇಳಿದಂತೆ, "ಸಾಮಾನ್ಯವಾಗಿ ಸಂನ್ಯಾಸದ ಮೇಲೆ ಹೆಚ್ಚಿನ ಪ್ರೀತಿ ಇರುವುದೇ ನನ್ನ ಹುಟ್ಟು ಗುಣ. ಈ ಗುಣದ ಸೆಳೆತಕ್ಕೆ ಸಿಕ್ಕಿ ಒಮ್ಮೆ ನಾನೂ ನನ್ನ ತಲೆಯನ್ನು ನುಣ್ಣಗೆ ಮಾಡಿಸಿಕೊಳ್ಳಬೇಕೆಂದಿದ್ದೆ. ಆದರೆ ತಲೆಯನ್ನು ನುಣ್ಣಗೆ ಮಾಡಿಕೊಂಡಿದ್ದರೂ ಮನಸ್ಸನ್ನು ನುಣ್ಣಗೆ ಮಾಡಿಕೊಳ್ಳದೆ ಇದ್ದ (ವೈರಾಗ್ಯವಿಲ್ಲದ) ಸಂನ್ಯಾಸಿಗಳೇ ಬಹಳವಾಗಿ ಕಂಡಿದ್ದರಿಂದ ಅವರ ಗುಂಪಿಗೆ ಸೇರಲು ಇಷ್ಟವಿಲ್ಲದೆ ನಾನಿನ್ನೂ ಜುಟ್ಟನ್ನು ಇಟ್ಟುಕೊಂಡಿರುವೆನು" ಎಂದಿದ್ದಾರೆ.

ಸ್ವಾಮಿಗಳ ಪಾದಪೂಜೆಯನ್ನು ನಾಣ್ಯಗಳಿಂದ ಮಾಡುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಗಂಧ, ಪುಷ್ಪಗಳಿಂದ ಮಾತ್ರ ಪಾದಪೂಜೆ ಮಾಡಬೇಕೆಂಬುದು ಅವರ ಖಚಿತಾಭಿಪ್ರಾಯವಾಗಿತ್ತು.

"ನಾಣ್ಯಗಳಿಂದ ಪೂಜೆ ಮಾಡಿಸಿಕೊಳ್ಳುವುದನ್ನು ನೋಡಿದರೆ ನನಗೆ ಎಲ್ಲಿಯೂ ಇಲ್ಲದಷ್ಟು ನಗೆ ಬರುತ್ತದೆ. ನಾಣ್ಯದ ಪಾದಪೂಜೆಯು ಪುರಾಣದಲ್ಲಿ ಎಲ್ಲಿಯೂ ಕಾಣಬರಲಿಲ್ಲ. ಹೂವಿನ ಸುವಾಸನೆ ಅದಕ್ಕಿಲ್ಲ. ಆದರೆ ಮನಸ್ಸಿನಲ್ಲಿ ವಿಷಯಾಸಕ್ತಿಯ ದುರ್ವಾಸನೆಯನ್ನು ನಾಣ್ಯ ಹುಟ್ಟಿಸಬಲ್ಲದು" ಎಂದಿದ್ದಾರೆ.

ಚಿದಂಬರಯ್ಯನವರು ಉದ್ದಾಮ ಸಾಹಿತಿಗಳು ಪ್ರತಿಭಾವಂತರು. ಭರತನ ಬಂಧು ಪ್ರೇಮ, ಭರತಖಂಡದ ಜೀವಜ್ಯೋತಿಗಳು, ತಾರಾನಾಥ ತರ್ಕವಾಚಸ್ಪತಿ ಮುಂತಾದ ೭ ಜೀವನ ಚರಿತ್ರೆಗಳನ್ನು, ಅನುಭವಾಮೃತ ಷಟ್ಪದಿ ಗ್ರಂಥವನ್ನು ಟೀಕೆಯೊಡನೆ, ಮಲ್ಲಾರಿ ಮಹಾತ್ಮೆಯನ್ನು ಟಿಪ್ಪಣಿಗಳೊಂದಿಗೆ ಸಂಪಾದಿಸಿದ್ದಾರೆ. ವಿದ್ಯಾರಣ್ಯ ಕಾವ್ಯ ಅವರ ಶ್ರೇಷ್ಠಕೃತಿಗಳಲ್ಲೊಂದು. ಸಮರ್ಥ ರಾಮದಾಸರ ಪ್ರಸಿದ್ಧ ಮನಾಚೆ ಶ್ಲೋಕಗಳನ್ನು ಮನಸ್ಸಿಗೆ ಉಪದೇಶವೆಂಬ ಹೆಸರಿನಲ್ಲಿ ಸಾಂಗತ್ಯದಲ್ಲಿ ಅನುವಾದಿಸಿದ್ದಾರೆ. ವಿದ್ಯಾರಣ್ಯರ ಪಂಚದಶಿ, ಶಂಕರರ ಗ್ರಂಥಗಳು, ಸ್ತೋತ್ರಗಳನ್ನು ಅನುವಾದಿಸಿದ್ದಾರೆ. ವಿದ್ಯಾರ್ಥಿಗಳಿಗಾಗಿ ನೀತಿಗಳ ನೆಲಗಟ್ಟು, ನೀತಿಸಾರ ಮುಂತಾದ ಕವಿತೆಗಳನ್ನು ಪ್ರಬಂಧಗಳನ್ನು ರಚಿಸಿದ್ದಾರೆ.

ಕೀರ್ತನ ಕಂಠಾಭರಣವೆಂಬ ಗ್ರಂಥರಚನೆ ಜತೆಗೆ ಸ್ವತಃ ರಚಿಸಿದ ಕೀರ್ತನೆಗಳ ಸಂಗ್ರಹ **'ಭಕ್ತಿ ಗೀತಾವಳಿ'** ರಚಿಸಿದ ಪ್ರಸಿದ್ಧ ಗೀತಾ ಸಾಹಿತಿಗಳು

ಆದ ಅವರು. ಆಲೂರು, ದೇವುಡು ಅವರಂತೆ ಅವರು ಹಲವು ಗೀತಾ ಗ್ರಂಥಗಳನ್ನು ರಚಿಸಿದ್ದಾರೆ. ಗೀತೆಯ ಕೈಗನ್ನಡಿ, ಮಕ್ಕಳ ಕೈಗೀತೆ, ಗೀತೆಯ ತಿರುಳು, ಗೀತಾರ್ಥ ಚಂದ್ರಿಕೆ, ಗೀತಾರ್ಥ ವಿವರಣೆ ಇತ್ಯಾದಿ ಅವರ ಗೀತಾಕೃತಿಗಳಲ್ಲಿ ಹಲವು. ಈ ಪೈಕಿ ಗೀತಾರ್ಥ ಚಂದ್ರಿಕೆ ಕನ್ನಡದಲ್ಲೇ ವಿಶಿಷ್ಟ ಗ್ರಂಥವಾಗಿದೆ. ಮೂಲಪದ ಸೇರಿದರೆ ಅನ್ವಯಾರ್ಥ ಒಟ್ಟು ಬರೀ ಗದ್ಯ ಓದಿದರೆ ಸೊಗಸಾದ ಗೀತಾಗದ್ಯ. ಈ ಗ್ರಂಥ ವ್ಯಾಖ್ಯಾನ ಕನ್ನಡದಲ್ಲಿ ಅತ್ಯಂತ ಜನಪ್ರಿಯ. ಗೀತಾ ಕೃತಿಗಳಲ್ಲಿ ಇದೊಂದು. ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು ಎಂದು ಪಂಡಿತ ತಾರಾನಾಥರಿಂದ ಹೊಗಳಿಸಿ ಕೊಂಡ ಹೊಸಕೆರೆ ಚಿದಂಬರಯ್ಯನವರು ತಮ್ಮ ಕಡೆಗಾಲದಲ್ಲಿ ಟೀ ನರಸೀಪುರದಲ್ಲಿ ಆಶ್ರಮವಾಸಿಗಳಾಗಿ ಕೈಲಾಸವಾಸಿಗಳಾದರು.

ಟೀ.ನರಸಿಪುರದಲ್ಲಿ ೧೭-೪-೧೯೩೮ರಂದು ನದೀಸ್ನಾನ ಮಾಡಿ ಕೊಂಡು ಮನೆಗೆ ಬಂದರು. ದಿನವೂ ಕನ್ನಡಿ ನೋಡಿಕೊಳ್ಳದೆ ಹಣೆಗೆ ಗಂಧಾಕ್ಷತೆ ವಿಭೂತಿ ಧರಿಸುತ್ತಿದ್ದವರು ಅಂದು ಕನ್ನಡಿ ತಂದಿಟ್ಟುಕೊಂಡು ಹಣೆಗಿಟ್ಟುಕೊಂಡರು. ಜಾಸ್ತಿ ಸಿಹಿ ತಿನ್ನದ ಅವರು ಅಂದು ಮೂರು ಬಟ್ಟಲು ಪಾಯಸ ಕುಡಿದರು. ಎಂದಿನಂತೆ ೧೧.೩೦ಕ್ಕೆ ಊಟ ಮಾಡಿದರು. ೧೨.೩೦ಕ್ಕೆ ನಿಧನರಾದರು. ಇವರ ಜಾತಕ ಬರೆದಿದ್ದವರು ಬರೆದಿದ್ದ ಹಾಗೆ. ನಿಧನರಾದ ಮೇಲೂ ಪ್ರಾಣ ಇವರ ದೇಹದಲ್ಲಿ ಹಲವು ಗಂಟೆಗಳ ಕಾಲ ಇರುತ್ತದೆ ಎಂದಿತ್ತು. ಹಾಗಾಗಿ ನಿಧನರಾದ ೨೪ ಗಂಟೆಗಳ ಅನಂತರ ಇವರ ಅಂತ್ಯ ಸಂಸ್ಕಾರ ಮಾಡಿದರು.

ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಗ್ರಂಥಗಳನ್ನು ರಚಿಸಿ, ಹೊಸಗನ್ನಡ ಗದ್ಯಕ್ಕೆ ವಿಶೇಷ ಕೊಡುಗೆಗಳನ್ನಿತ್ತು. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ವಿದ್ವಾಂಸ ರೊಡನೆ ಸೈ ಎನಿಸಿಕೊಂಡು ಸಾತ್ವಿಕ ಜೀವನ ನಡೆಸಿದ ಪ್ರೈಮರಿ ಶಾಲಾ ಮಾಸ್ತರು ಅದ್ವಿತೀಯ ವಿದ್ವಾಂಸ, ಸಾಹಿತಿ, ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರು ತಮ್ಮ ಸಾಹಿತ್ಯ ಸೇವೆಯಿಂದ ಇಂದಿಗೂ ಸ್ಫೂರ್ತಿ ಮೂರ್ತಿಗಳಾಗಿದ್ದಾರೆ.

❒



೭. ದಿವ್ಯಕೀರ್ತನಕಾರ

ಹುಯಿಲಗೋಳ ನಾರಾಯಣರಾಯರು

ಕನ್ನಡದಲ್ಲಿ ನಾಡಗೀತೆಗಳಿಗೆ ಕೊರತೆಯಿಲ್ಲ. ಆದರೆ ದೇಶಾಭಿಮಾನ ಕನ್ನಡಿಗರಲ್ಲಿ ಉಕ್ಕಿ ಹರಿಯಲು ಎಲ್ಲ ನಾಡಗೀತೆಗಳೂ ಸ್ಫೂರ್ತಿ ಕೊಟ್ಟಿಲ್ಲ. ದೇಶಾಭಿಮಾನಿಗಳೆಲ್ಲ ದೇಶಗೀತೆ ಬರೆದವರು. ಆದರೆ ದೇಶಗೀತೆ ಬರೆದವರೆಲ್ಲ ದೇಶಾಭಿಮಾನಿಗಳಾಗಿಲ್ಲ. ಎಲ್ಲೋ ಕೆಲವರು ಮಾತ್ರ, ಬೇಂದ್ರೆ, ಕುವೆಂಪು, ಕಣವಿ, ಕರ್ಕಿ, ಕೈಯಾರ ಕಿಞ್ಞಣ್ಣರೈ ಅಂಥವರು ದೇಶಗೀತೆ ಬರೆದವರೂ ಆಗಿದ್ದಾರೆ ದೇಶಾಭಿಮಾನಿಗಳೂ ಆಗಿದ್ದಾರೆ. ಆ ಸಾಲಿನ ಅಗ್ರಗಣ್ಯರು ನಾಡಗೀತೆಯ ಹುಯಿಲಗೋಳನಾರಾಯಣರಾಯರು "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು; ಬದುಕು ಬಲುಹಿನ ನಿಧಿಯ ಸದಭಿಮಾನದಗೂಡು" ಎಂಬ ನಾಡಗೀತೆ ರಚಿಸಿ ನಾಡಿನಾದ್ಯಂತ ಪ್ರಖ್ಯಾತರಾಗಿ ಇತಿಹಾಸ ನಿರ್ಮಿಸಿದರು.

ಬಂಕಿಂಚಂದ್ರರ ವಂದೇಮಾತರಂ ಗೀತೆಯ ಹಾಗೆ ದೇಶಾಭಿಮಾನವನ್ನು ಜನರಲ್ಲಿ ಉಕ್ಕಿಸಿದ ಹಾಡಿದು. ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಜನ ಮೈದುಂಬಿ ಹಾಡಿ ಸ್ಫೂರ್ತಿ ಪಡೆದ ಗೀತೆ ಇದು. ಈ ನಾಡಗೀತೆಗಿರುವ ಭವ್ಯ ಇತಿಹಾಸ ಇತರ ಅನೇಕ ನಾಡಗೀತೆಗಳಿಗಿಲ್ಲ. ನಾಡಿನಾದ್ಯಂತ ನಾಡಗೀತೆಯಾಗಿ ಹಲವಾರು ದಶಕಗಳು ವಿರಾಜಿಸಿದ ಗೀತೆಯಿದು. ಇಂದಿಗೂ ಹಾಡಿದಾಗ, ಕೇಳಿದಾಗ, ಓದಿದಾಗ, ನೆನೆದಾಗ ಕನ್ನಡಿಗನನ್ನು ರೋಮಾಂಚನಗೊಳಿಸುವ ವೀರಗೀತೆಯಿದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ರಂಗಭೂಮಿ ಇತಿಹಾಸದಲ್ಲಿ ನಾಟಕಗಳ ಮೂಲಕ ಪ್ರಸಿದ್ಧರಾದ ಹಿರಿಯವ್ಯಕ್ತಿ ಹುಯಿಲಗೋಳ ನಾರಾಯಣರಾಯರು, ಗದುಗಿನ ವೀರನಾರಾಯಣನ ಪರಮಭಕ್ತರು. ಅವರ ಕಾವ್ಯನಾಮವೇ ಗದುಗಿನ ವೀರನಾರಾಯಣ. ಅವರ ಕೀರ್ತನಗಳ ಅಂಕಿತವದು. ಬೆಳಿಗ್ಗೆ ಮತ್ತು ಸಂಜೆ ಪ್ರತಿದಿನವೂ ಎರಡೂ ಹೊತ್ತು ಶ್ರೀ ವೀರನಾರಾಯಣನ ದರ್ಶನವಿಲ್ಲದೆ

ಅವರ ದಿನಚರಿ ಪ್ರಾರಂಭ ಆಗುತ್ತಿರಲಿಲ್ಲ. ಅವರ ಮನೆಯಿಂದ ವೀರನಾರಾಯಣನ ಗುಡಿ ಸುಮಾರು ೧೧/೨ ಮೈಲಿಯಷ್ಟು ದೂರವಿದ್ದರೂ ದಿನಾ ಬೆಳಿಗ್ಗೆ ಸಂಜೆ ವೀರನಾರಾಯಣನ ದರ್ಶನ ತಪ್ಪುತ್ತಿರಲಿಲ್ಲ. ದಿನನಿತ್ಯ ದೇವರಿಗೆ ಮಂಗಳಾರತಿ ಮಾಡಿಸಿ ದಕ್ಷಿಣೆ ಹಾಕುವ ಪರಿಪಾಠ ಅವರದು. ಪರಸ್ಥಳಕ್ಕೆ ಹೋದಾಗ ವೀರನಾರಾಯಣ ದರ್ಶನ ತಪ್ಪಿದ್ದರೂ, ದಿನಾ ಮಂಗಳಾರತಿಗೆ ಹಾಕಬೇಕಾದ ದಕ್ಷಿಣೆಯನ್ನು ತೆಗೆದಿಟ್ಟಿದ್ದು ಊರಿಗೆ ಬಂದ ಮೇಲೆ ವೀರನಾರಾಯಣನಿಗೆ ಸಲ್ಲಿಸುತ್ತಿದ್ದರು. ಅದು ಅವರ ಭಕ್ತಿ ಆಗಿತ್ತು. ಅವರ ಕೊನೆಯ ದಿನಗಳಲ್ಲಿ ಮಲಗುವ ಮನೆಯಲ್ಲೇ ವೀರ ನಾರಾಯಣನ ದೊಡ್ಡ ಭಾವಚಿತ್ರ ಹಾಕಿಕೊಂಡಿದ್ದು ಆ ಫೋಟೋಗೆ ದೇವರ ದಕ್ಷಿಣೆಯನ್ನು ಅರ್ಪಿಸುತ್ತಿದ್ದರು. ಕುಮಾರವ್ಯಾಸನಲ್ಲಿರುವ ಅಪಾರಭಕ್ತಿ. ಕುಮಾರವ್ಯಾಸನ ಕಾವ್ಯವನ್ನು ಕಂಠಗತ, ಹೃದ್ಗತ ಮಾಡಿಕೊಂಡಿದ್ದ ಅವರು ಲೀಲಾಜಾಲವಾಗಿ ಷಟ್ಪದಿ ರಚನೆ ಮಾಡುತ್ತಿದ್ದರು. ವೀರನಾರಾಯಣನ ಗುಡಿಯಲ್ಲಿ ನಾರಾಯಣ ದೇವರಿಗೆ ನಮಸ್ಕಾರ ಮಾಡಿ ಹೊರಗೆ ಬರುವಾಗ ನವರಂಗ ಮಂಟಪದಲ್ಲಿದ್ದ ಕುಮಾರವ್ಯಾಸನ ಕಂಬದ ಎದುರಿಗೆ ನಿಂತು ಧ್ಯಾನದಿಂದ ನಮಸ್ಕರಿಸಿದ ಮೇಲೆ ಅವರು ಹೊರಗೆ ಬರುತ್ತಿದ್ದರು.

ಪರಮ ವೈಷ್ಣವಭಕ್ತರಾಗಿದ್ದರು. ಉದಾರ ಮತವಾದಿಗಳಾಗಿದ್ದರು. ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ ಅವರು ಗದುಗಿನ ಜುಮ್ಮಾ ಮಸೀದಿಯ ಅಭಿವೃದ್ಧಿಗೂ ಶ್ರಮಿಸಿದರು.

ಪ್ರತಿ ಹಬ್ಬ ಹುಣ್ಣಿಮೆಗಳಲ್ಲಿ ಗದುಗಿನ ಎಲ್ಲ ದೇವಸ್ಥಾನಗಳಲ್ಲಿ ಸೇವೆ ಸಲ್ಲಿಸಿದ ಹಾಗೆಯೇ ರಮಜಾನ್, ಈದ್ ಹಬ್ಬಗಳಲ್ಲಿ ಮಸೀದಿಯಲ್ಲಿ ಸಕ್ಕರೆ ಓದಿಸುತ್ತಿದ್ದರು. ಮಾಧವಮತದವರಾಗಿದ್ದಂತೆ ಮಾನವ ಮತದವರಾಗಿದ್ದ ಅವರು ತಮ್ಮ ಒಂದು ಕೀರ್ತನೆಯಲ್ಲಿ ಅವರು ಹೀಗೆ ಹಾಡಿದ್ದಾರೆ.

ಅಲ್ಲಾ ಅಂದರೆ ಬರುವ। ಶಿವನೆ ಎಂದರೆ ಬರುವ।
ಗೊಲ್ಲ ಕೃಷ್ಣನೆ ಬಾರೊ। ಎಂದರಾತನೆ ಬರುವ।
ಅಲ್ಲಾ ಇವ ಇಲ್ಲಿ ಅವ। ಎಂದು ಬಡಿದಾಡಿದರೆ।
ಖುಲ್ಲರೆಂದು ಎನರೇನು। ಬಲ್ಲವರು ಮರುಳಾ।

ಗಾಂಧಿವಾದಿಗಳಾದ ನಾರಾಯಣರಾಯರು ದೀನಜನರ ಬಗ್ಗೆ ಹರಿಜನರ ಬಗ್ಗೆ ವಿಶೇಷ ಕಳಿಕಳಿ ತೋರಿದರು.

೧೯೧೬ರಲ್ಲಿ ಸ್ವಾಮಿಗಳೊಬ್ಬರನ್ನು ನಾರಾಯಣರಾಯರು ಪ್ರಶ್ನೆಯೊಂದನ್ನು ಕೇಳಿದ್ದರು. ಗೀತೆಯಲ್ಲಿ ಚಾತುರ್ವರ್ಣ್ಯ ಹೇಳಿದೆಯಷ್ಟೆ. ವಿದೇಶಿಯರನ್ನು ಚಾತುರ್ವರ್ಣ್ಯದಲ್ಲಿ ಯಾವ ವರ್ಣಕ್ಕೆ ಸೇರಿಸಬೇಕು? ಎಂದು ಪ್ರಶ್ನೆ ಕೇಳಿದ್ದರು ಸ್ವಾಮಿಗಳು ಉತ್ತರಿಸಲಾರದೆ ನಿರುತ್ತರರಾದರಂತೆ. ಅವರ ಸ್ವಧರ್ಮನಿಷ್ಠೆ ಪೂರ್ಣವಾಗಿದ್ದರೂ ಸರ್ವಧರ್ಮ ಪುರಸ್ಕಾರ. ಸರ್ವದೇವ ನಮಸ್ಕಾರದ ಪಂಥದವರು ಅವರಾಗಿದ್ದರು. ಅವರ ಆಪ್ತಮಿತ್ರ ವರ್ಗದಲ್ಲಿ ಎಲ್ಲಾ ವರ್ಗದವರೂ ಇದ್ದರು. ಸರ್ವಜನಪ್ರಿಯ ವಕೀಲರು-ಸಾಹಿತಿಗಳು-ಭಕ್ತರು ಅವರಾಗಿದ್ದರು.

ಹುಯಿಲಗೋಳ ನಾರಾಯಣರಾಯರು ಎಂಬ ಹೆಸರಿನಲ್ಲಿಯೂ ಹುಯಿಲಗೋಳ ಎಂಬುದು ಅವರ ಮನೆತನದ ಅಡ್ಡಹೆಸರಾಗಿದೆ. ಹುಯಿಲಗೋಳ ಎಂಬ ಗ್ರಾಮ ಗದುಗಿನ ಹತ್ತಿರ ಇರುವ ವ್ಯಾಪಾರ ಕೇಂದ್ರದ ಸ್ಥಳ. ನಾರಾಯಣರಾಯರ ಪೂರ್ವಜರು ಮೊದಲಿಗೆ ಬಳ್ಳಾರಿಯಲ್ಲಿದ್ದರು ಈ ಮನೆತನದ ಹಿರಿಯರಲ್ಲಿ ಒಬ್ಬರಾದ ಬಳ್ಳಾರಿ ಹನುಮಂತರಾಯರ ನಿಷ್ಠಾಪೂರ್ಣ ಸೇವೆಗೆ ಮೆಚ್ಚಿ ಆಗಿನ ಬ್ರಿಟಿಷ್ ಅಧಿಕಾರಿ ಲೆಫ್ಟಿನೆಂಟ್ ಕ್ಯಾಂಬೆಲ್ ಹುಯಿಲಗೋಳ, ಕಳಸಾಪುರ ಹಾಗೂ ನಾಗಾವಿ ಹಳ್ಳಿಗಳನ್ನು, ಜಹಾಗೀರಾಗಿ ನೀಡಿದಾಗ, ಹುಯಿಲಗೋಳಕ್ಕೆ ೧೮೨೪ರಲ್ಲಿ ಅಲ್ಲಿಗೆ ಬಳ್ಳಾರಿಯಿಂದ ಬಂದು ನೆಲಸಿದರು. ಹಾಗಾಗಿ ಹುಯಿಲಗೋಳ, ಅಡ್ಡ ಹೆಸರು ಮನೆತನಕ್ಕೆ ಬಂದಿತು.

ಧಾರ್ಮಿಕರೂ, ಆಚಾರನಿಷ್ಠರೂ, ಆದ ಹುಯಿಲಗೋಳ ಹನುಮಂತ ರಾಯರ ಮರಿಮೊಮ್ಮಗ ಕೃಷ್ಣರಾಯರು ಮತ್ತು ರಾಧಾಬಾಯಿ ದಂಪತಿಗಳಿಗೆ ೪-೧೦-೧೮೮೪ರಲ್ಲಿ ಹಿರಿಯ ಮಗನಾಗಿ ಜನಿಸಿದವರೇ ಹುಯಿಲಗೋಳ ನಾರಾಯಣರಾಯರು. ಜನ್ಮಕುಂಡಲಿ ಪ್ರಕಾರ ೨೫-೯-೧೮೮೪ ಎಂದಿದೆ.

ನಾರಾಯಣರಾಯರ ಬಾಲ್ಯದ ಪ್ರಾಥಮಿಕ ಶಾಲಾಶಿಕ್ಷಣ ತಂದೆ ಕೃಷ್ಣರಾಯರು ಗೋಕಾಕದಲ್ಲಿ ಕೆಲಸ ಮಾಡುತ್ತಿದ್ದರಿಂದ ಅಲ್ಲಿಯೇ ಆಯಿತು. ಗದಗ, ಧಾರವಾಡಗಳಲ್ಲಿ ಮಾಧ್ಯಮಿಕ ಮ್ಯಾಟ್ರಿಕ್ ಪರೀಕ್ಷೆಗಳಲ್ಲಿ ಪಾಸಾಗಿ ಪುಣೆಯಲ್ಲಿ ಫರ್ಗ್ಯುಸನ್ ಕಾಲೇಜಿನಲ್ಲಿ ೧೯೦೭ರಲ್ಲಿ ಬಿ.ಎ. ಪದವಿ ಗಳಿಸಿದರು. ಅನಂತರ ಧಾರವಾಡಕ್ಕೆ ಬಂದರು. ಆಗ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಎಂದರೆ ಈಗಿನ ವಿದ್ಯಾರಣ್ಯ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಎರಡು ವರ್ಷ ಕಾರ್ಯ

ನಿರ್ವಹಿಸಿದರು. ಇವರು ಶಿಕ್ಷಕರಾಗಿದ್ದಾಗ ಇವರ ಶಿಷ್ಯರಾದವರಲ್ಲಿ ದ.ರಾ. ಬೇಂದ್ರೆಯವರು ಒಬ್ಬರು ಎಂಬುದು ಗಮನಾರ್ಹವಾಗಿದೆ.

ಬೇಂದ್ರೆಯವರು ಪ್ರತಿಭಾವಂತ ವಿದ್ಯಾರ್ಥಿ ಆಗಿದ್ದರು. ಬೇಂದ್ರೆ ಅವರಿಗೆ ತರಗತಿಯಲ್ಲಿ ನಾರಾಯಣರಾಯರು ಪಠ್ಯವಾಗಿದ್ದ ಷೇಕ್ಸ್‌ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್ಸಿನ ಒಂದು ಭಾಗವನ್ನು ಪಾಠ ಮಾಡಿದ್ದರು. ಮೂರನೇ ದಿನ ಅದನ್ನು ಬಾಯಿಪಾಠ (ಕಂಠಪಾಠ) ಯಾರು ಮಾಡಿದ್ದೀರಿ ಎಂದು ಕೇಳಿದರು. ಆಗ ಬೇಂದ್ರೆ ಮಾತ್ರ ಕೈಯೆತ್ತಿ ನಾನು ಕಂಠಪಾಠ ಮಾಡಿದ್ದೀನಿ ಅಂದಾಗ, ಹೇಳು ನೋಡೋಣ ಅಂದಾಗ ಇಡೀ ಆ ದೃಶ್ಯವನ್ನು ಚಾಚು ತಪ್ಪದೆ ಹೇಳಿ ಒಪ್ಪಿಸಿದರಂತೆ.

ಬೇಂದ್ರೆ ಅವರನ್ನು ಶಿಷ್ಯರಾಗಿದ್ದಾಗಲೆ ಮೆಚ್ಚಿಕೊಂಡಿದ್ದ ಹುಯಿಲಗೋಳ ನಾರಾಯಣರಾಯರು, ಅನಂತರದಲ್ಲಿ ಅವರು ವಿದ್ಯಾದಾನ ಸಮಿತಿಯ ಶಾಲೆ ಸ್ಥಾಪಿಸಿದಾಗ ಅದಕ್ಕೆ ಹೆಡ್ಮಾಸ್ಟರ್ ಆಗಿ ಬೇಂದ್ರೆಯವರನ್ನು ನೇಮಿಸಿದರು. ಕವಿ ಬೇಂದ್ರೆ ಬೇಂದ್ರೆ ಮಾಸ್ತರ್ ಆದರು.

ಬಿ.ಎ. ಮುಗಿಸಿದ ಕೆಲವು ವರ್ಷಗಳನಂತರ ಹುಯಿಲಗೋಳರು ಮುಂಬಯಿಗೆ ಹೋಗಿ ಎಲ್.ಎಲ್.ಬಿ. ಪರೀಕ್ಷೆ ಪಾಸು ಮಾಡಿ ಗದುಗಿಗೆ ಮರಳಿದರು. ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಸುಮಾರು ೪೫ ವರ್ಷಗಳಕಾಲ ಯಶಸ್ವೀ ವಕೀಲರಾಗಿ ಕೆಲಸ ಮಾಡಿ ಪ್ರಸಿದ್ಧರಾದರು. ಹುಯಿಲಗೋಳರು ನಿಷ್ಠಾವಂತ ವಕೀಲರಾಗಿ ಕೆಲಸ ಮಾಡಿದರು. ಗದಗಿನಲ್ಲಿ ನ್ಯಾಯಾಧೀಶರಾಗಿದ್ದವರು ಒಬ್ಬರು ನಾರಾಯಣರಾಯರಿಗೆ ಪರಮಾಪ್ತ ಸ್ನೇಹಿತರಾಗಿದ್ದರು. ಎಷ್ಟರಮಟ್ಟಿಗೆ ಎಂದರೆ ನಾನು ನೀನು ಅಂತ ಮಾತಾಡುವ ಏಕವಚನದ ಗೆಳೆಯರಾಗಿದ್ದರು. ಆದರೆ ಅದು ಯಾರಿಗೂ ತಿಳಿದಿರಲಿಲ್ಲ. ಆ ನ್ಯಾಯಾಧೀಶರು ಬೇರೆಡೆಗೆ ವರ್ಗವಾದಾಗ ಬೀಳ್ಕೊಡುವ ಸಮಾರಂಭದಲ್ಲಿ ಈ ಸಂಗತಿಯನ್ನು ಹೇಳಿ ಇಷ್ಟು, ಆತ್ಮೀಯರಾಗಿದ್ದರು. ನನ್ನ ಸ್ನೇಹವನ್ನು ಯಾವ ಕಾರಣಕ್ಕೂ, ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ ಎಂದರು. "ವೃತ್ತಿಯು ಉಪಜೀವನದ ಒಂದು ಮಾರ್ಗ. ಅದು ಜೀವನದ ಮೂಲಧ್ಯೇಯಕ್ಕೆ ಆದರ್ಶ ಬದುಕಿಗೆ ಅಡ್ಡಿ ಆಗಬಾರದು" ಎಂದಿದ್ದರು. ಇಂಥ ಸಜ್ಜನ ವಕೀಲರು ಹುಯಿಲಗೋಳರು ಆಗಿದ್ದರು.

ನಾರಾಯಣರಾಯರು ಕುಟುಂಬ ವತ್ಸಲರು. ಸಾರ್ವಜನಿಕ ಸೇವಾ ನಿರತರಾದವರಲ್ಲಿ ಅನೇಕರು ಕುಟುಂಬ ವತ್ಸಲರಾಗಿರುವುದಿಲ್ಲ. ಆದರೆ ನಾರಾಯಣರಾಯರು ತಮ್ಮ ಕುಟುಂಬವಷ್ಟೇ ಅಲ್ಲದೆ ತಮ್ಮನ ಕುಟುಂಬವನ್ನೂ ಇತರರನ್ನೂ ಪೋಷಣೆ ಮಾಡಿದರು. ಮನೆಯಲ್ಲಿ ಎಲ್ಲರೂ ನಾರಾಯಣ ರಾಯರನ್ನು 'ನಾನಾ' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ನಾರಾಯಣ ರಾಯರು ಗದಗಿನಲ್ಲಿ ಹಳೆಯ ಮಾದರಿ ಮಣ್ಣಿನ ಮನೆಯಲ್ಲಿದ್ದರು.

ಮೊಮ್ಮಗಳು ರಾಧಾ ಕುಲಕರ್ಣಿ ಹೇಳುವಂತೆ ನಾರಾಯಣರಾಯರ ದಿನಚರಿ ಬೆಳಿಗ್ಗೆ ದೇವರಪೂಜೆಯಿಂದ ಪ್ರಾರಂಭವಾಗುತ್ತಿತ್ತು. ಬೆಳಗಿನಜಾವ ೪ ಗಂಟೆಗೆ ಎದ್ದು ತಾವೇ ನೀರು ಕಾಯಿಸಿಕೊಂಡು ಸ್ನಾನಮಾಡಿ ದೇವರ ಮುಂದೆ ತಾವೇ ಸಾರಿಸಿ ರಂಗೋಲಿ ಇಟ್ಟು ಪೂಜೆ ಮುಗಿಸಿ ಅಕ್ಷತೆಗಳಿಂದ ಅಲಂಕೃತರಾಗಿ ತಮ್ಮ ಕೆಲಸದ ಕೋಣೆಗೆ ಹೋಗುತ್ತಿದ್ದರು. ಅವರು ಕೂಡುವ ಆ ಭಾಗದ ಮನೆಗೆ 'ಹೊಸಮನಿ' ಎನ್ನುತ್ತಿದ್ದರು. ಬಹುಶಃ ಅದನ್ನು ಅನಂತರ ಕಟ್ಟಿರಬೇಕು. ಈ ಚೊಕ್ಕವಾದ ಕೋಣೆಯಲ್ಲಿ ಜಮಖಾನೆ ಹಾಸಿರುತ್ತಿತ್ತು. ಮೂಲೆಯಲ್ಲಿ ಬರೆಯುವ ಮೇಜಿನ ಹಿಂದೆ ನಾನಾ ನೆಲದ ಮೇಲೆ ಕುಳಿತು ಬರೆಯುತ್ತಿದ್ದರು. ಹಳೆಯ ಕಾಲದ ಮನೆ ಆದ್ದರಿಂದ ಮನೆಯ ಬೆಳಕಿಂಡಿ ಯಿಂದ ಬರುವ ಬೆಳಕೇ ಬೆಳಕಾಗಿತ್ತು. ಗೋಡೆಗೆ ಗದುಗಿನ ವೀರನಾರಾಯಣನ ಫೋಟೋ ಇತ್ತು. ಬೆಳಗಿನ ಜಾವದಲ್ಲಿ ಎದ್ದು ತಾವೇ ಬರೆದ ಏಳು ನಾರಾಯಣ ಏಳು ಲಕ್ಷ್ಮೀ ರಮಣ, ಏಳಯ್ಯ ಏಳು ಬೆಳಗಾಯಿತು "ಉದಯರಾಗ" ಹೇಳುತ್ತಿದ್ದರು. ಊರಿನಲ್ಲಿ ಯಾವುದೇ ಧಾರ್ಮಿಕ ಪ್ರವಚನಗಳನ್ನು ಕೇಳಲು ತಪ್ಪಿಸಿಕೊಳ್ಳುತ್ತಿರಲಿಲ್ಲ. ಭಾರತದ ಬಿಂದೂರಾಯರ ಕುಮಾರವ್ಯಾಸ ಭಾರತದ ಕಾವ್ಯವಾಚನವನ್ನಾಗಲೀ ಪಂಡರೀನಾಥಾಚಾರ್ಯರ ಪ್ರವಚನವನ್ನಾಗಲೀ ಕೇಳುವುದನ್ನು ಅವರು ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಹುಯಿಲಗೋಳರಿಗೆ ಸಂಗೀತಜ್ಞಾನ ಸಾಕಷ್ಟಿತ್ತು. ಅವರು ಬರೆದ ಕವನಗಳಿಗೆ ಅವರೇ ರಾಗ-ತಾಳ ಹಾಕಿರುತ್ತಿದ್ದರು. ನಮ್ಮ ಕನ್ನಡ ಕವಿಗಳಲ್ಲಿ ಸಂಗೀತ-ಸಾಹಿತ್ಯ ಪರಿಣತರಾದವರೆಲ್ಲ ತಮ್ಮ ಹಾಡುಗಳಿಗೆ ತಾವೇ ರಾಗ ತಾಳ ಸೂಚಿಸುತ್ತಿದ್ದರು ಪುತಿನ, ಡಿವಿಜಿ, ವಿಸೀ ಮುಂತಾದವರಿಗೆ ಸಂಗೀತ ಜ್ಞಾನ, ಶಾಸ್ತ್ರಜ್ಞಾನ ಸಂಗೀತ ವಿದ್ವಾಂಸರಿಗಿದ್ದಷ್ಟೇ ಇತ್ತು. ಹಾಡಲು ಬರುತ್ತಿರಲಿಲ್ಲ ಅಷ್ಟೇ ಸಂಗೀತಪ್ರಿಯರಾದ ನಾರಾಯಣರಾಯರು ಗ್ರಾಮಾಫೋನು ಹೊಂದಿದ್ದರು.

ಅವರ ಸಂಗ್ರಹದಲ್ಲಿದ್ದ ಕಾರ್ಡ್‌ರೆ (ಹಾಡಿನ ತಟ್ಟೆ)ಗಳೆಲ್ಲ ಭಕ್ತಿಗೀತೆಗಳು ಅಥವಾ ನಾಡಗೀತೆಗಳು ಆಗಿದ್ದವು. ಬೇಂದ್ರೆ ಹಾಡುಗಳು, ಎಂ.ಎಸ್.ಸುಬ್ಬಲಕ್ಷ್ಮಿ ಅವರ ಮೀರಾಭಜನೆಗಳು ಅವರಿಗೆ ಪ್ರಿಯವಾಗಿದ್ದವು.

ನಮ್ಮ ನಾಡಿನ ಇತಿಹಾಸದಲ್ಲಿ ಕರ್ನಾಟಕದ ಬೆಳಗಾವಿ ಕಾಂಗ್ರೆಸ್ ಅಧಿವೇಶನ ೧೯೨೪ ಡಿಸೆಂಬರ್‌ನಲ್ಲಿ ನಡೆದದ್ದು ಒಂದು ಮಹತ್ವದ ಅಧಿವೇಶನ ಆಗಿತ್ತು. ಏಕೆಂದರೆ ಅದರ ಅಧ್ಯಕ್ಷರು ಗಾಂಧೀಜಿ ಅವರಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಮತ್ತು ಕರ್ನಾಟಕ ಏಕೀಕರಣದ ಹೋರಾಟ ಎಂದು ಮುನ್ನಡೆಯುತ್ತಿದ್ದ ಸಂಕ್ರಮಣ ಕಾಲ ಅದಾಗಿತ್ತು.

ಬೆಳಗಾವಿ ಅಧಿವೇಶನದಲ್ಲಿ ಹಾಡಲು ಸ್ವಾಗತಗೀತೆ ರಚಿಸಲು ವೃತ್ತಿಪತ್ರಿಕೆಗಳಲ್ಲಿ ಕವಿಗಳಿಗೆ ಆಹ್ವಾನ ನೀಡಲಾಗಿತ್ತು. ಸ್ವಾಗತಗೀತೆ ಶ್ರೇಷ್ಠಗೀತೆ ಆಗಿರಬೇಕು ಸಕಲಜನಾನಂದವಾಗಿ ನಾಡುನುಡಿಗಳಿಗೆ ಅಭಿಮಾನ ದ್ಯೋತಕ ವಾಗಿರಬೇಕೆಂದು ಸ್ವಾಗತಸಮಿತಿ ಅವರ ಆಶಯವಾಗಿತ್ತು. ಪತ್ರಿಕೆಯಲ್ಲಿ ಪ್ರಕಟವಾದ ಸ್ವಾಗತಗೀತ ರಚನೆಯ ಕರೆಯ ಸುದ್ದಿಯ ಪತ್ರಿಕೆಯ ಸಂಚಿಕೆಯನ್ನು ನಾರಾಯಣರಾಯರ ಮಿತ್ರರು ಕಂಡು, ಅದನ್ನು ಮಲೇರಿಯಾ ಜ್ವರದಿಂದ ನರಳುತ್ತ ಹಾಸಿಗೆ ಹಿಡಿದಿದ್ದ ನಾರಾಯಣರಾಯರಿಗೆ ಕೊಟ್ಟು ನೀವು ಸ್ವಾಗತ ಗೀತೆಯನ್ನು ಬರೆದು ಕಳಿಸಿ ಎಂದರು. ಭಕ್ತರಾದ ನಾರಾಯಣರಾಯರಲ್ಲಿ ನಾಡಪ್ರೇಮ, ದೇಶಪ್ರೇಮ ಪ್ರಜ್ವಲಿಸಿತು. ಭಾವಾವೇಶ ಮೂಡಿಬಂತು. ಸಾಗರದ ಅಲೆಗಳು ಒಂದರ ಮೇಲೊಂದು ತೇಲಿ ಬಂದ ಹಾಗೆ ಸ್ಫೂರ್ತಿಯಾವೇಶದಲ್ಲಿ ಕವನ ಹೊರ ಹೊಮ್ಮಿತು. ಕನ್ನಡ ನಾಡಗೀತೆಯಾಗಿ ಮೂಡಿತು.

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆ ಮಾಡು
ಕಾವ ಗದುಗಿನ ವೀರನಾರಾಯಣನ ಬೀಡು...

ಮೋಹನರಾಗದಲ್ಲಿ ಜಂಪೆ ತಾಳದಲ್ಲಿ ಹಾಡು ಮೂಡಿ ಬಂದಿತು. ಸ್ಫುಟವಾದ ಅಕ್ಷರಗಳಲ್ಲಿ ತಿಳಿಯಾದ ಭಾಷೆಯಲ್ಲಿ ನಾಡಿನ ಇತಿಹಾಸದ ವಿವರಗಳಿಂದ ಸ್ಫೂರ್ತಿಗೀತೆ ಮೂಡಿ ಬಂದಿತು.

ಸ್ವಾಗತ ಸಮಿತಿ ಹುಯಿಲಗೋಳರ ಗೀತೆಯನ್ನು ಆಯ್ಕೆ ಮಾಡಿತು. ಆಯ್ಕೆ

ಸಮಿತಿಯ ಸದಸ್ಯರು ಸಾಮಾನ್ಯರಾಗಿರಲಿಲ್ಲ. ದೇಶಪಾಂಡೆ ಗಂಗಾಧರರಾಯರು, ಬೆಟಗೇರಿ ಕೃಷ್ಣಶರ್ಮರು, ಮುದವೀಡು ಕೃಷ್ಣರಾಯರು ಮೊದಲಾದವರು ಇದ್ದರು. ಧಾರವಾಡದ ಗವಾಯಿ ಸುಬ್ಬರಾಯರು ಸಂಗಡಿಗರೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ಪ್ರಸಿದ್ಧ ಕರ್ನಾಟಕ ಗಾನಕೋಗಿಲೆ ಗಂಗೂಬಾಯಿ ಹಾನಗಲ್ ಆ ವೃಂದದಲ್ಲಿದ್ದರು. ಆ ಗೀತೆಯನ್ನು ಹಾಡಿದಾಗ ಆದ ಸಭೆಯ ಪರಿಣಾಮವನ್ನು ಹುಯಿಲಗೋಳ ನಾರಾಯಣರಾಯರ ಮೊಮ್ಮಗಳಾದ ರಾಧಾ ಕುಲಕರ್ಣಿ ಅವರು ತಾತನ ಜೀವನ ಸಾಧನೆ ಕುರಿತು ಬರೆದ ಅಮೋಘ ಗ್ರಂಥದಲ್ಲಿ ಹೀಗೆ ಬಣ್ಣಿಸಿದ್ದಾರೆ.

"ಸುಮಧುರ ಹಾಡನ್ನು ಕೇಳಿದ ಮಹಾತ್ಮಗಾಂಧಿ ಅವರು ಆನಂದ ಪರವಶರಾಗಿ ನಾರಾಯಣರಾಯರಿಗೆ ಗಾಂಧೀಜಿ ಅವರು ಪುಷ್ಪಹಾರ ಹಾಕಿ ಗೌರವಿಸಿದರು. ಖಾದಿಧಾರಿ ನಿರಾಡಂಬರವಾದ ನಿರಹಂಕಾರಿಯಾದ ನಾರಾಯಣರಾಯರನ್ನು ಗಾಂಧೀಜಿ ಸ್ವತಃ ಅಭಿನಂದಿಸಿದ್ದನ್ನು ಜನ ಕಂಡು ಆನಂದಪರವಶರಾಗಿ ಕುಣಿದಾಡಿದರು. ಕನ್ನಡನಾಡು ನುಡಿಗಳಿಗೆ ಏಳ್ಗೆಗೆ ಕಂಕಣ ಕಟ್ಟಿಸಿದ ಹಾಡು ಕನ್ನಡ ನಾಡಗೀತೆಯಾಗಿ ನಾಡಿನ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿಸಿತು. ಕನ್ನಡ ಚೇತನಗಳನ್ನು ಉದ್ದೀಪನಗೊಳಿಸಿತು. ನಾಡಗೀತೆಯ ನಾರಾಯಣರಾಯರೆಂದು ನಾನಾ ಅವರು ನಾಡಿನಲ್ಲೆಲ್ಲಾ ಚಿರಪರಿಚಿತರಾದರು. ಉತ್ತರ ಕರ್ನಾಟಕದಲ್ಲಿ ಈ ಗೀತೆಯನ್ನು ಹಾಡುವುದರ ಮೂಲಕ ಯಾವುದೇ ಸಾರ್ವಜನಿಕ ಸಮಾರಂಭಗಳೂ ಶಾಲೆಗಳೂ ಪ್ರಾರಂಭ ವಾಗುತ್ತಿತ್ತು. ಹಳೆಯ ಮೈಸೂರಿನ ಕಡೆ ಕನ್ನಡಕೋಗಿಲೆ ಕಾಳಿಂಗರಾಯರು ಇದನ್ನು ಹಾಡಿದಾಗ ಮತ್ತಷ್ಟು ಜನಪ್ರಿಯವಾಯಿತು. ಹೀಗಾಗಿ ಕರ್ನಾಟಕಾದ್ಯಂತ ಜನಪ್ರಿಯ ನಾಡಗೀತೆ 'ಉದಯವಾಗಲಿ' ಪ್ರಸರಿಸಿತು.

೧೯೫೬ ನವೆಂಬರ್ ಒಂದರಂದು ಕರ್ನಾಟಕ ರಾಜ್ಯೋದಯವಾದಾಗ ಕನ್ನಡ ನಾಡು ಉದಯವಾಗಿದೆ ಆದ್ದರಿಂದ ನಾಡಗೀತೆಯನ್ನು 'ಉದಯವಾಗಿದೆ ನಮ್ಮ ಚೆಲುವ ಕನ್ನಡನಾಡು' ಎಂದು ಬದಲಿಸಿ ಹಾಡಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಆಗ ಈ ಅಭಿಪ್ರಾಯಕ್ಕೆ ಉತ್ತರವಾಗಿ ಹುಯಿಲಗೋಳರು ಹೇಳಿದ ಮಾತುಗಳು ಮನನೀಯವಾಗಿವೆ.

"ಉದಯವಾಗಲಿ ಎಂಬ ಮಾತು ಶುಭಾಶಯವನ್ನು ಸೂಚಿಸುತ್ತದೆ. ಶ್ರೇಯಸ್ಸನ್ನು ಅಪೇಕ್ಷಿಸುತ್ತದೆ. ಕಾರಣ, ಉದಯವಾಗಲಿ ಎಂದು ಹಾಡುವುದೇ

ಯೋಗ್ಯ. ಉದಯ ಎಂದರೆ ಅಭ್ಯುದಯ, ಅಭ್ಯುದಯ ಎಂದರೆ ಸರ್ವತೋಮುಖ ಬೆಳವಣಿಗೆ, ಸುಖ ಸಂತೋಷ, ಸಮೃದ್ಧಿ- ಇವುಗಳನ್ನೆಲ್ಲ ಸಾಧಿಸಿದರೆ ನಿಜವಾದ ಅಭ್ಯುದಯವಾದಂತೆ. ಉದಯವಾಯಿತು. ಅಂದರೆ ಎಲ್ಲ ಮುಗಿಯಿತು. ಇನ್ನು ಮುಂದೆ ಹೆಚ್ಚಿನ ಬೆಳವಣಿಗೆಗೆ ಆಸ್ಪದ ಇಲ್ಲ ಎಂಬಂತೆ ಆಗುತ್ತದೆ. ನಾಡಗೀತೆಯಾಗಿ ಯಾವುದನ್ನೇ ಹಾಡಲಿ, ನನ್ನ ನಾಡಿನ ಅಭ್ಯುದಯವನ್ನೇ ನಾನು ಸದಾ ಹಾರೈಸುವುದು. ಇದು ಪ್ರಾರ್ಥನೆಯ ಗೀತೆ. ಭೂತಕಾಲದಲ್ಲಿ ಪ್ರಾರ್ಥನೆ ಎಂದೂ ಇರಬಾರದು. ಆಗ "ಬಲುಹಿನ ನಿಧಿಯು ಹೋಗಿ ಬಲುಹೀನ ನಿಧಿಯು ಆದೀತು. ಎಂದಿದ್ದಾರೆ. ಆದ್ದರಿಂದ ನಾಡಗೀತೆ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು... ಎಂದೇ ಹಾಡಲಾಗುತ್ತದೆ. ೧೯೭೦ರಲ್ಲಿ ಅಧಿಕೃತ ನಾಡಗೀತೆ ಪಟ್ಟಿಯಿಂದ ಈ ಹಾಡನ್ನು ತೆಗೆದು ಹಾಕಿದಾಗ ಸ್ಥಿತಪ್ರಜ್ಞರಾದ ನಾರಾಯಣರಾಯರು, ಲೋಕೋಭಿನ್ನರುಚಿ: ಎಂದು ಸುಮ್ಮನಾಗಿಬಿಟ್ಟರು. ನಾಡಗೀತೆ ಬದಲು ಮಾಡಿದ್ದು ನಿನಗೇನನಿ ಸಾಲಿಲ್ಲ ಅಂತಾ ಕೇಳಿದಳು ಮೊಮ್ಮಗಳು. ಅದಕ್ಕೆ ಅವರು ಆಗಿನ ಕಾಲದ ಮಂದಿಗೆ ಆ ಹಾಡು ಸೇರಿತು ಅವರು ಹಾಡಿದರು. ಈಗಿನವರಿಗೆ ಸೇರಲಿಲ್ಲ ಅಂತ ಬಿಟ್ಟಾರ ಎಂದರು. ಎಂಥ ಮಾರ್ಮಿಕ ಮಾತು! ಈಗಿನವರಿಗೆ ಎಂಬ ಮರ್ಮೋಕ್ತಿ ಮಾತು ಆಗಿದೆ.

ಕೇವಲ ನಾಡಗೀತೆಯೊಂದನ್ನೇ ಬರೆದ ಕವಿ, ಇವರಲ್ಲ, ಕನಸು, ಕರ್ನಾಟಕ, ಮಿಡುಕು, ರಥೋತ್ಸವ, ಭಾರತದ ಭೂವಂದನ ವಿಜಯನಗರ ವೀರವಾಣಿ ಮೊದಲಾದ ತಮ್ಮ ಕವನ ಸಂಕಲನಗಳಲ್ಲಿ ಅನೇಕ ವೀರಗೀತೆಗಳನ್ನು ನಾಡಗೀತೆಗಳನ್ನು ಇವರು ರಚಿಸಿದ್ದಾರೆ. ಅವೆಲ್ಲ ಜನಪ್ರಿಯವಾಗಿವೆ.

ಪ್ರಕೃತಿಗೀತೆಗಳ ವರ್ಣನೆಯಲ್ಲೂ ನಾಡಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ಸಹಜ ದೇಶಪ್ರೇಮಿ ಕವಿ ಇವರು. ಆಗುಂಬೆಯ ಸೂರ್ಯಾಸ್ತ ಎಂಬ ಕವನದಲ್ಲಿ ನೂಲುವರಾಟೆ, ಹಿಂಜಿದ ಅರಳೆಯ ರಾಶಿ, ಶುಭ್ರ ಖಾದಿಯ ರಾಷ್ಟ್ರಧ್ವಜ ಇವುಗಳನ್ನು ವರ್ಣಿಸುವುದರ ಮೂಲಕ ರಾಷ್ಟ್ರಧ್ವಜದ ವರ್ಣನೆ ಮಾಡಿದ್ದಾರೆ. ಒಂದು ಕಡೆ ನಿಸರ್ಗದ ವರ್ಣನೆ ಇನ್ನೊಂದೆಡೆ ದೇಶ ಪ್ರೇಮದ ವರ್ಣನೆ. ಈ ಕವಿತೆಯಲ್ಲಿದೆ.

ಸಂಜೆವೆಣ್ಣಿಗೆ ದಿಟ್ಟ ತೇಜಃಪುಂಜ ಚಿನ್ನದ ರಾಟೆ ಅದುವೆನೆ ಪಂಜ ಗದಿರನು ಪಶ್ಚಿಮಾಂಗಣದಲ್ಲಿ ಶೋಭಿಸಿದ ಹಿಂಜಿದರಳೆಯ ರಾಶಿಯೋ । ಬಿಳಿಗಂಜಿ

ಹಿಡಿಸಿದ ಖಾದಿ ಎನೆ ರಂಜಿಸಿದನು. ಆಗ ಅಂತು ಎಂದಿನ ಕಡಲದೊರೆ ಕಣ್ಣೆ. ಈ ರೀತಿ ಸಮುದ್ರದ ಸೂರ್ಯಾಸ್ತ ನೋಡುತ್ತ ಕವಿಗೆ ನೆನಪಾದುದು ಏನು ಗೊತ್ತೇ?

ದೆಸೆಯೊಳಗೆ ಕೇಸರಿಯ ಬಣ್ಣದ
ವಿಸರ ರತ್ನಾಕರನ ಹಬ್ಬಿದ
ವಸನ ಭೂಮಿಯ ಹಸಿರು ತೊಡಿಗೆಯು ಮತ್ತೆ ಮಧ್ಯದೊಳು
ಮಿಸುಪ ಸೂರ್ಯನ ಚರಕದಂದದೊ
ಳೆಸೆಯೆ ಸೋಜಿಗವೆನಲು ಜಗದೊಳು
ಹೆಸರು ಪಡೆದಿಹ ಭಾರತ ರಾಷ್ಟ್ರಧ್ವಜದ ನೆನಪಾಯ್ತು.

ಪುರಂದರ, ಕನಕದಾಸರ ಹಾಡುಗಳಂತೆ ಅನೇಕ ಭಕ್ತಿಗೀತೆಗಳನ್ನು ಗದುಗಿನ ವೀರನಾರಾಯಣನ ಅಂಕಿತದಲ್ಲಿ ರಚಿಸಿದ್ದಾರೆ.

ಕವಿತೆಗಳಲ್ಲಷ್ಟೇ ಅಲ್ಲ ನಿಜಜೀವನದಲ್ಲೂ ದೇಶಪ್ರೇಮಿಗಳು ಖಾದಿ ಧಾರಿಗಳು ಗಾಂಧಿಭಕ್ತರಾದವರು ನಾರಾಯಣರಾಯರು.

ಪೂನಾದಲ್ಲಿ ನಾರಾಯಣರಾಯರು ವಿದ್ಯಾಭ್ಯಾಸಕ್ಕೆ ಫರ್ಗ್ಯುಸನ್ ಕಾಲೇಜಿಗೆ ಸೇರಿದಾಗ ಅಲ್ಲಿ ದೇಶಭಕ್ತವೀರ ಸಾವರಕರ ಸಹವಿದ್ಯಾರ್ಥಿ ಆಗಿದ್ದರು. ನಾರಾಯಣರಾಯರು ತಮ್ಮ ಮಿತ್ರರೊಂದಿಗೆ ಬಟ್ಟೆ ಅಂಗಡಿಗೆ ಹೋದಾಗ ಮರಾಠಿ ಭಾಷೆ ಬಾರದೆ ಫಜೀತಿ ಪಡುತ್ತಿದ್ದಾಗ ಅಲ್ಲಿಗೆ ಬಂದಿದ್ದ ಸಾವರಕರರು ಇಂಗ್ಲಿಷಿನಲ್ಲಿ ಹುಯಿಲಗೋಳರನ್ನು ಮಾತಾಡಿಸಿ ಅಲ್ಲಿಂದ ಬೇರೆ ಬಟ್ಟೆ ಅಂಗಡಿಗೆ ಕರೆದೊಯ್ದರು. ಅಲ್ಲಿ ಅವರಿಗೆ ಆ ಸ್ವದೇಶೀ ವಸ್ತ್ರಾಲಯದಲ್ಲಿ ದೇಶೀ ವಸ್ತುಗಳನ್ನು ಬಳಸಲು ಹೇಳಿ ಸ್ವದೇಶಾಭಿಮಾನದ ಪಾಠ ಹೇಳಿ ಖಾದಿ ಕೊಡಿಸಿದರು. ಅಂದಿನಿಂದ ಖಾದಿಧಾರಿಗಳಾದರು. ಸಾವರಕರರನ್ನು ದೇಶ ಸೇವೆ ಕಲಿಸಿದ ಮೊದಲ ಗುರುವೆಂದು ಭಾವಿಸಿದರು.

ರಾಷ್ಟ್ರದ ಮಹಾನ್ ನಾಯಕರಿಂದ ಉಪದೇಶ – ದೀಕ್ಷೆ ಪಡೆದ ಭಾಗ್ಯ ಹುಯಿಲಗೋಳರದು. ೧೯೧೦ರಲ್ಲಿ ಬಾಲಗಂಗಾಧರತಿಲಕರನ್ನು ಭೇಟಿ ಆದಾಗ ರಾಷ್ಟ್ರೀಯ ವಿಚಾರಗಳ ಬಗ್ಗೆ ಮಾತಾಡಿದಾಗ ಅವರು ಬಹಳ ಸಂತೋಷಪಟ್ಟರು. ಹುಯಿಲಗೋಳರು ವಿದ್ಯಾರ್ಥಿಗಳೆಂದು ತಿಳಿದಾಗ "ಚೆನ್ನಾಗಿ ಅಭ್ಯಾಸ ಮಾಡಿ, ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಿ" ಎಂದರಂತೆ. ಗೋಪಾಲಕೃಷ್ಣ ಗೋಖಲೆಯರನ್ನು ಕಂಡಾಗ ಅವರ ಬಳಿ ರಾಷ್ಟ್ರೀಯ ಶಿಕ್ಷಣ,

ವಿದ್ಯಾಪ್ರಸಾರದ ಅನೇಕ ವಿಷಯಗಳನ್ನು ನಾರಾಯಣರಾಯರು ಚರ್ಚಿಸಿದರು. ೧೯೧೨ರಲ್ಲಿ ಆಗ ಅದರಿಂದ ಸಂತುಷ್ಟರಾದ ಗೋಖಲೆ ಅವರು ಹುಯಿಲಗೋಳರಿಗೆ ಹೇಳಿದರು. "ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ ಇದು ಪ್ರಗತಿ ಸಾಧಿಸಲು ವಿದ್ಯೆಯೊಂದೇ ಸರ್ವಶ್ರೇಷ್ಠ ಸಾಧನ ಆದ್ದರಿಂದ ಶಿಕ್ಷಣ ಪ್ರಸಾರ ಮಹಾಕಾರ್ಯ" ಎಂದು ಹೇಳಿದರು. ಈ ಉಪದೇಶದ ಫಲವಾಗಿ ಗದುಗಿನಲ್ಲಿ ವಿದ್ಯಾದಾನ ಸಮಿತಿ ಸ್ಥಾಪಿಸಿ ವಿದ್ಯಾ ಕೇಂದ್ರ, ಸ್ಥಾಪಿಸಿದರು. ಹೀಗೆ ರಾಷ್ಟ್ರೀಯ ಮಹಾನಾಯಕರಿಂದ ಮಾರ್ಗದರ್ಶನ ಪಡೆದ ಸೌಭಾಗ್ಯ ಹುಯಿಲ ಗೋಳರದಾಗಿದೆ.

ನಾಡಿನ ಪ್ರಸಿದ್ಧ ವ್ಯಕ್ತಿಯಾಗಿದ್ದರೂ ನನ್ನನ್ನು ಜನ ಗುರುತಿಸಬೇಕು ಗೌರವಿಸಬೇಕು ಎಂದು ಅವರೆಂದೂ ಬಯಸಲಿಲ್ಲ. ನಾಡಿನ ಸೇವೆ ನನ್ನ ಕರ್ತವ್ಯ ಎಂದಷ್ಟೆ ತಿಳಿದಿದ್ದರು. ಅವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭ ವಾದಾಗಿನಿಂದ ಕನ್ನಡ ಸಮ್ಮೇಳನಗಳಿಗೆ ಹೋಗಿ ಬರುತ್ತಿದ್ದರು. ಸಮ್ಮೇಳನಗಳಲ್ಲಿ ಸಾಮಾನ್ಯ ಪ್ರತಿನಿಧಿಯಾಗಿ ಹೋಗಿ ಜನ ಸಾಮಾನ್ಯರ ನಡುವೆ ಕುಳಿತು ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ವೇದಿಕೆಯಿಂದ ದೂರದಲ್ಲಿ ನೆಲದಲ್ಲಿ ಕುಳಿತಿರುತ್ತಿದ್ದರು. ಆಗ ನೆಲಕ್ಕೆ ಕುರ್ಚಿಗಳಿರುತ್ತಿಲಿಲ್ಲ. ಚಾಪೆ ಹಾಸುತ್ತಿದ್ದರು.

ಹೀಗೆ ತಮ್ಮ ಪಾಡಿಗೆ ತಾವಿದ್ದರೂ, ಅನೇಕ ಜನ ವಿದ್ವಾಂಸರು ಕವಿಗಳು ಗಣ್ಯರು ಅವರನ್ನು ಹುಡುಕಿಕೊಂಡು ಅವರ ಮನೆ ಬಾಗಿಲಿಗೇ ಬಂದು, ದರ್ಶಿಸಿ, ಸಮಾಲೋಚಿಸಿ ಧನ್ಯರಾಗುತ್ತಿದ್ದರು. ಕನ್ನಡದ ಕಣ್ವ ಬಿಎಂಶ್ರೀ ಅವರು ಗದುಗಿಗೆ ಇವರನ್ನು ಕಾಣಲೆಂದೇ ಬರುತ್ತಿದ್ದರು. ಮನೆಯೊಳಗೆ ಕಾಲಿಡುತ್ತಿದ್ದಂತೆ 'ಸತತ ಕಲ್ಯಾಣಂ ಅಚ್ಯುತನ ಭಕ್ತರಿಗೆ' ಎಂದು ಹಾಡುತ್ತಲೇ ಬರುತ್ತಿದ್ದರು.

ಹುಬ್ಬಳ್ಳಿಯಲ್ಲಿ ಸಚಿತ್ರ ಭಾರತವೆಂಬ ಸುಂದರ ಪತ್ರಿಕೆಯನ್ನು ಹೊರಡಿಸುತ್ತಿದ್ದ ಸಾಹಿತಿ ಕೆರೂರು ವಾಸುದೇವಾಚಾರ್ಯರು ವಿದ್ವಾಂಸರು, ನಾಟಕಕಾರರು ಕಾದಂಬರಿಕಾರರು. ಅವರ ಮನೆ ಇದ್ದುದು ಬಾಗಲ ಕೋಟೆಯಲ್ಲಿ. ಅಲ್ಲಿಗೆ ಹೋಗುವಾಗಲೆಲ್ಲ ಗದುಗಿನಲ್ಲಿ ಹುಬ್ಬಳ್ಳಿಯಿಂದ ಬಂದು ರೈಲುಗಾಡಿ ಬದಲಿಸಬೇಕಿತ್ತು. ರಾತ್ರಿ ೧೦ ಗಂಟೆಗೆ ಗದುಗಿಗೆ ರೈಲು ಬಂದರೆ ಅಲ್ಲಿಂದ ಹೊರಡುತ್ತಿದ್ದು, ರಾತ್ರಿ ೨ ಗಂಟೆಗೆ. ಅಲ್ಲಿವರೆಗೆ ರೈಲ್ವೆ ನಿಲ್ದಾಣದಿಂದ ಟಾಂಗಾ ಮಾಡಿಕೊಂಡು ನಾರಾಯಣರಾಯರ ಮನೆಗೆ ಆ ನಿಶೆಯಲ್ಲಿ ಹೋಗಿ ಚಹ

ಕುಡಿದು ಹರಟೆ ಹೊಡೆದು ೨ ಗಂಟೆಗೆ ರೈಲಿಗೆ ಬರುತ್ತಿದ್ದರು. ತಾವು ಬರೆಯುವ ನಾಟಕದ ಬಗ್ಗೆ ಸಲಹೆಗಳನ್ನು ಕೇಳುತ್ತಿದ್ದರು. ಗದುಗಿಗೆ ಬಂದ ನಾಡಿನ ಗಣ್ಯ ಸಾಹಿತ್ಯಿಗಳೆಲ್ಲ ನಾರಾಯಣರಾಯರ ದರ್ಶನವನ್ನು ಗದುಗಿನ ವೀರನಾರಾಯಣ ದರ್ಶನವನ್ನು ತಪ್ಪದೆ ತೆಗೆದುಕೊಳ್ಳುತ್ತಿದ್ದರು. ಕುವೆಂಪು, ಜಿ.ಪಿ. ರಾಜರತ್ನಂ, ಗೋವಿಂದಪೈ, ಅನಕೃ, ದಿವಾಕರರು ಮೊದಲಾದ ಕನ್ನಡದ ಹಿರಿಯ ಶ್ರೇಷ್ಠ ಸಾಹಿತಿಗಳೆಲ್ಲ ಗದುಗಿಗೆ ಬಂದು ಹುಯಿಲಗೋಳರನ್ನು ಭೇಟಿ ಮಾಡಿದ್ದಾರೆ. ಅವರ ದರ್ಶನ ಮತ್ತು ಅತಿಥ್ಯದಿಂದ ಧನ್ಯರಾಗಿದ್ದಾರೆ ಗದುಗಿನಲ್ಲಿ ವೀರನಾರಾಯಣ ಮೂಲಮೂರ್ತಿ ಆದರೆ ಹುಯಿಲಗೋಳ ನಾರಾಯಣ ರಾಯರು ಉತ್ಸವಮೂರ್ತಿ ಎಂದು ಗೆಳೆಯರೊಬ್ಬರು ಹೇಳಿದ ಮಾತು ಈಗಲೂ ನನ್ನ ಕಿವಿಯಲ್ಲಿ ಧ್ವನಿಸುತ್ತಿದೆ. ಹುಯಿಲಗೋಳರು ನಾಟಕಕಾರರು–ಕೀರ್ತನಕಾರರು ಆಗಿದ್ದರು.

ನಾಟಕದ ಹುಚ್ಚು ಅವರಿಗೆ ಬಾಲ್ಯದಿಂದಲೇ ಅಂಟಿ ಬಂದ ಚಟವಾಗಿತ್ತು. ಬಯಲಾಟ, ದೊಡ್ಡಾಟ, ಕಿಳ್ಳಿಕೇತರ ಆಟ, ಗೊಂಬೆಯಾಟ, ಯಕ್ಷಗಾನ ಯಾವುದೇ ಇರಲಿ ಅದು ಎಲ್ಲೇ ನಡೆದರೂ ತಪ್ಪದೆ ಹಾಜರಾಗಿ ಎಲ್ಲರಿಗಿಂತ ಮುಂದೆ ಕುಳಿತು ನೋಡಿ ಆನಂದಿಸುತ್ತಿದ್ದರು. ಆ ಕಾಲದಲ್ಲಿ ಈ ನಾಟಕಗಳಿಗೆ ಪ್ರವೇಶಧನ ಇರುತ್ತಿರಲಿಲ್ಲ. ಚಿಕ್ಕಂದಿನಲ್ಲೇ ನಾಟಕ ಪ್ರಭಾವ ಇವರ ಮೇಲೆ ಎಷ್ಟಾಗಿತ್ತು ಎಂದರೆ, ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಶಾಂತ ಕವಿಗಳ ಕೀಚಕವಧೆ, ವತ್ಸಲಾಹರಣ ನಾಟಕಗಳನ್ನು ನೋಡಿ ಪ್ರಭಾವಿತರಾಗಿ ಇಂದ್ರಜಿತ್ ವಧೆ, ಗರುಡ ಗರ್ವಭಂಗಗಳೆಂಬ ಎರಡು ನಾಟಕಗಳನ್ನು ಮನೆಯಲ್ಲೇ ಮನೆ ಅಂಗಳವನ್ನೇ ರಂಗಭೂಮಿ ಮಾಡಿ ಚಾದರಗಳನ್ನೇ ಪರದೆಯಾಗಿ ಕಟ್ಟಿ ಕೊಂಡು ನಾಟಕವಾಡಿದರು.

ಪೂನಾದಲ್ಲಿ ಓದಿಗೆ ಹೋದಾಗ ಅಲ್ಲಿ ಮರಾಠಿ ನಾಟಕಗಳನ್ನು ನೋಡಿ ಪ್ರಭಾವಿತರಾದರು. ಮರಾಠಿ ನಾಟಕಗಳಲ್ಲಿ ರಂಗಸಜ್ಜಿಕೆ ವೇಷಭೂಷಣಗಳು. ಸಂಗೀತ, ನಾಟಕಪ್ರದರ್ಶನಗಳಲ್ಲಿ ಅಚ್ಚುಕಟ್ಟಾಗಿರುತ್ತಿದ್ದುದನ್ನು ಕಂಡು ಆ ಮಟ್ಟಕ್ಕೆ ಕನ್ನಡ ನಾಟಕಗಳು ಏರಬೇಕೆಂದು ಬಯಸಿದರು. ಜತೆಗೆ ಮರಾಠಿ ಗೆಳೆಯರು ಮರಾಠಿಯಲ್ಲಿರುವ ಹಾಗೆ ನಿಮ್ಮ ಕನ್ನಡದಲ್ಲಿ ಒಳ್ಳೆಯ ನಾಟಕಗಳು ಎಲ್ಲಿವೆ? ಎಂದು ಸವಾಲು ಹಾಕಿದಾಗ ಪೂರಾ ಉತ್ತರ ಕೊಡಲಾಗಲಿಲ್ಲ ನಿಜಕ್ಕೂ ಕನ್ನಡ ನಾಟಕಗಳು ಆ ಮಟ್ಟಕ್ಕೆ ಆಗ ಇರುತ್ತಿರಲಿಲ್ಲ. ನಾರಾಯಣ ರಾಯರು ಈ

ಸವಾಲನ್ನು ಎದುರಿಸಲು ಸಿದ್ಧರಾದರು. ಇದೇ ವೇಳೆ ೧೯೦೨ರಲ್ಲಿ ಗದುಗಿನಲ್ಲಿ ಯಂಗ್‌ಮೆನ್ಸ್ ಪುಟ್ಬಾಲ್ ಕ್ಲಬ್ ಎಂಬ ತರುಣ ಆಟಗಾರರ ಸಂಘವನ್ನು ಸ್ಥಾಪಿಸಿದ್ದರು. ಸದಸ್ಯರಾದ ನಾರಾಯಣರಾಯರು ಕ್ಲಬ್ಬಿನ ವಾರ್ಷಿಕೋತ್ಸವದಲ್ಲಿ ಆಡಲು 'ವಜ್ರ ಮುಕುಟ'ವೆಂಬ ನಾಟಕವನ್ನು ಮೊದಲ ಬಾರಿಗೆ ಬರೆದರು. ಕ್ಲಬ್ಬಿನ ಸದಸ್ಯರು ಹಬ್ಬದಲ್ಲಿ ಆಡಿದರು. ಬರುಬರುತ್ತ ಈ ಕ್ಲಬ್ಬಿನ ಸದಸ್ಯರ ನಾಟಕ ಕಲಾವಿದರು ಪ್ರತಿವರ್ಷ ಒಂದೊಂದು ನಾಟಕ ಆಡುತ್ತಾ ಬಂದರು. ನಾರಾಯಣರಾಯರು ಬರೆಯುತ್ತಾ ಬಂದರು. ಈ ಹವ್ಯಾಸಿ ನಾಟಕಕಲಾವಿದರ ತಂಡ ಕ್ರಮೇಣ ನಾಟಕಮಂಡಲಿ ಆಯಿತು. ಇದರ ಫಲವಾಗಿ ಸುಮಾರು ೧೪ ನಾಟಕಗಳನ್ನು ನಾರಾಯಣರಾಯರು ಬರೆದರು. ಈ ಪೈಕಿ ಸ್ತ್ರೀಧರ್ಮ ರಹಸ್ಯ, ಶಿಕ್ಷಣ ಸಂಭ್ರಮ, ಪತಿತೋದ್ಧಾರ ನಾಟಕಗಳು ಪ್ರಸಿದ್ಧ ವಾದವು' ಪ್ರಕಟವಾದವು ಇತ್ತೀಚೆಗೆ ಜಿ.ಎಸ್. ಅಮೂರ ಮತ್ತು ಜಿ.ಬಿ. ಜೋಶಿ ಅವರ ಸಂಪಾದಕತ್ವದಲ್ಲಿ ಎಲ್ಲ ನಾಟಕಗಳು ಪ್ರಕಟವಾಗಿವೆ. ಇವರು ಬರೆದ ನಾಟಕಗಳು ವೈವಿಧ್ಯಮಯವಾದವು. ಸಂಗೀತಮಯವಾದವು ಕಥಾವಸ್ತುವಿನ ದೃಷ್ಟಿಯಿಂದ ಹೇಳುವುದಾದರೆ ಮೋಹಲಹರಿ, ಅಜ್ಞಾತವಾಸ, ವಿದ್ಯಾರಣ್ಯ ನಾಟಕಗಳು ಐತಿಹಾಸಿಕವಾದರೆ, ಉತ್ತರಗೋಗ್ರಹಣ, ಭಾರತ ಸುಪ್ರಭಾತ, ಗರುಡಗರ್ವ ಭಂಗ ಪೌರಾಣಿಕವಾದವು. ಸ್ತ್ರೀಧರ್ಮರಹಸ್ಯ, ಶಿಕ್ಷಣ ಸಂಭ್ರಮ ಪತಿತೋದ್ಧಾರ, ಪುನರಾಗಮನ, ನಾಟಕಗಳು, ಸಾಮಾಜಿಕ ನಾಟಕಗಳಾಗಿವೆ. ಆದ್ಯ ಸಾಮಾಜಿಕ ನಾಟಕರ್ತ ಎಂಬ ಪ್ರಸಿದ್ಧಿಯನ್ನು ಇವರಿಗೆ ತಂದುಕೊಟ್ಟಿವೆ.

ಇವರು ನಾಟಕಗಳನ್ನು ಬರೆದಾಗ ಕನ್ನಡ ರಂಗಭೂಮಿಯಲ್ಲಿ ಅರ್ಥಹೀನ ಸಂಗತಿಗಳು ರಂಗದ ಮೇಲೆ ಕಾಣಿಸಿಕೊಳ್ಳುತ್ತಿದ್ದವು. ಇವು ಸುಧಾರಣೆ ಆಗಬೇಕು ಎಂದು ನಿರ್ಧರಿಸಿದ್ದರು. ಉದಾಹರಣೆಗೆ ಈ ಪ್ರಸಂಗವನ್ನು ಗಮನಿಸಬಹುದು.

ಆ ಕಾಲದಲ್ಲಿ ಕನ್ನಡ ನಾಟಕ ರಂಗಭೂಮಿ ಹೇಗಿತ್ತೆಂದರೆ ಶಾಕುಂತಲ ನಾಟಕದಲ್ಲಿ ಶಕುಂತಲೆ ಸರಳ ಉಡುಪಿನಲ್ಲಿ ಕಣ್ವಮುನಿಯ ಆಶ್ರಮ ಕನ್ಯೆಯಾಗಿ ಇರಬೇಕಾದವಳು ಹೇಗಿದ್ದಳು ಎಂಬುದನ್ನು ನಾರಾಯಣರಾಯರು ತಮ್ಮ ನೆನಪುಗಳು ಬರಹದಲ್ಲಿ ಬಣ್ಣಿಸಿದ್ದಾರೆ. "ಶಕುಂತಲೆಯ ಕಾಲ್ಗಳಲ್ಲಿ ಬೆಳ್ಳಿಸರಪಳಿ, ಬಂಗಾರದ ವಂಕಿ ನಾಗಮುರಿಗೆಗಳು, ಕೊರಳಲ್ಲಿ ಸರಗಿ ಗೆಜ್ಜೆಟೀಕೆ ಮುತ್ತಿನ ಸರಗಳು, ಉಡುವ ಸೀರೆಗಳು ಭರ್ಜರಿ ರೇಶಿಮೆ ಸೀರೆಗಳು ಧರಿಸಿದ ಲೋಕಸುಂದರಿ ಆಗಿದ್ದಳು. ಇನ್ನು ಕಣ್ಣಿನಲ್ಲಿ ಹೂವಿನ ಎಸಳು ಬಿದ್ದು

ನೋವಾದಾಗ ದುಷ್ಯಂತ ಶಕುಂತಲೆಯ ಅವಳ ಕಣ್ಣನ್ನು ಊದಿ ಎಸಳನ್ನು ಹೊರಕ್ಕೆ ತೆಗೆಯುವುದಿಲ್ಲ. ೪-೫ ಮೊಳ ದೂರ ನಿಂತು ನಾಟಕೀಯವಾಗಿ ತೆಗೆಯುತ್ತಾನೆ.

ಸಂತ ನಾಮದೇವ ಪಾತ್ರಧಾರಿ ಜೈಜೈ ವಿಠಲ! ಜೈಜೈ ವಿಠಲ ಎಂದು ಭಜನೆ ಮಾಡುವಾಗ ತಲೆ ಮೇಲೆ ಅವನ ಜುಟ್ಟಿಗೆ ಒಂದು ಬಟ್ಟೆ ಚೆಂಡನ್ನು ತೂಗುಬಿಟ್ಟಿರುತ್ತಾರೆ. ಅದು ಆತ ಕುಣಿವಾಗ ಮುಂದಿನ ಹಣೆಗೆ ಹಿಂದಿನ ತಲೆಗೆ ಬಡಿಯುತ್ತಿತ್ತು. ಜನ ನೋಡಿ ಜನ ನಕ್ಕ ಕೂಡಲೇ ಮತ್ತೆ ಮತ್ತೆ ನಾಮದೇವ ಜುಟ್ಟಿನ ಚೆಂಡನ್ನು ಕುಣಿಸುತ್ತಿದ್ದ. ಭಕ್ತಿ ಭಜನೆ ಮಾಯಾವಾಗುತ್ತಿತ್ತು. ಈ ರೀತಿ ಅನೇಕ ರಸಾಭಾಸಗಳ ಅಭಿನಯ, ವೇಷಗಳ ಕಾಲ ಅದಾಗಿತ್ತು. ಇವುಗಳನ್ನೆಲ್ಲ ಗಮನಿಸಿದ್ದ ನಾರಾಯಣರಾಯರು ತಮ್ಮ ನಾಟಕಗಳಲ್ಲಿ ಸೂಕ್ತ ಸುಧಾರಣೆಗಳನ್ನು ತಂದು ಈ ಬಗೆಯ ಲೋಪದೋಷಗಳನ್ನು ಹೋಗಲಾಡಿಸಿದರು. ಸಂಗೀತದ ಪದಗಳಲ್ಲಿ ಸಾಹಿತ್ಯಕ್ಕೆ ಹೆಚ್ಚು ಪ್ರಾಶಸ್ತ್ಯವಿತ್ತರು. ಸ್ವತಃ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ತಾವು ನಟರಾಗಿ ನಾರಾಯಣರಾಯರು ಬರದಿದ್ದರೂ ರಂಗಭೂಮಿ ತಾಲೀಮಿಗೆ ಬಂದು ನಟವರ್ಗಕ್ಕೆ ಸೂಚನೆಗಳನ್ನು ನೀಡಿ ದಿಗ್ದರ್ಶನ ಮಾಡುತ್ತಿದ್ದರು. ತಿಂಗಳುಗಟ್ಟಲೆ ತಯಾರಿ, ತಾಲಿಮು ಆದ ಮೇಲೆ ನಾಟಕವನ್ನು ರಂಗಭೂಮಿಗೆ ತರುತ್ತಿದ್ದರು. ಈ ಕಾರ್ಯದಲ್ಲಿ ಅವರಿಗೆ ಬೆನ್ನೆಲುಬಾಗಿ ಶಾಂತ ಕವಿಗಳು ಇರುತ್ತಿದ್ದರು. ಕನ್ನಡದಾಸಯ್ಯ ಎಂದು ಪ್ರಸಿದ್ಧರಾದ ಸಕ್ಕರಿ ಬಾಳಾಚಾರ್ಯರು ಅರ್ಥಾತ್ ಶಾಂತಕವಿಗಳು ಆಗ ಗದುಗಿನಲ್ಲಿ ಮಾಸ್ತರ ರಾಗಿದ್ದರು. ದಿನವೂ ರಂಗಾಭ್ಯಾಸಕ್ಕೆ ಬಂದು ತಯಾರಿಕೊಡುತ್ತಿದ್ದರು. ಇದನ್ನು ಕಂಡ ಮರಾಠಿ ಮೇಲಧಿಕಾರಿ ಶಾಂತಕವಿಗಳನ್ನು ೯ ಮೈಲಿ ದೂರದ ಹೊಂಬಳಕ್ಕೆ ವರ್ಗಾಯಿಸಿದರು. ಆಗ ಶಾಂತಕವಿಗಳು ಏನು ಮಾಡಿದರು ಗೊತ್ತೆ? ನಾಟಕದ ತಾಲೀಮು ನಿಲ್ಲಿಸಬಾರದೆಂದು ಅವರು ಒಂದು ಎಮ್ಮೆಯನ್ನು ಕೊಂಡರು. ಸಂಜೆವರೆಗೆ ಶಾಲೆ ಕೆಲಸ ಮಾಡಿದ ಮೇಲೆ ರಾತ್ರಿ ಎಮ್ಮೆ ಮೇಲೆ ಕುಳಿತು ಸವಾರಿ ಮಾಡುತ್ತಾ ೯ ಮೈಲಿ ದೂರದಿಂದ ದಿನವೂ ತಪ್ಪದೆ ಬಂದು ನಾಟಕದ ತರಬೇತಿ ನೀಡಿ ಮತ್ತೆ ರಾತ್ರಿಯೇ ಎಮ್ಮೆ ಸವಾರಿಯಲ್ಲಿ ಹೊಂಬಳಕ್ಕೆ ಮರಳುತ್ತಿದ್ದರು. ಸಮಯಪ್ರಜ್ಞೆ ಅವರಿಗೆ ಎಷ್ಟಿತ್ತು ಎಂದರೆ ಯಾವುದೇ ಸಂದರ್ಭದಲ್ಲೂ ನಾಟಕದ ಯಾವುದೇ ದೃಶ್ಯದಲ್ಲೂ ತಡವಾಗದೆ ಪರದೆ ಮೇಲೇಳುತ್ತಿತ್ತು ಹುಯಿಲುಗೋಳರು ತಮ್ಮ ನಾಟಕಗಳಲ್ಲಿ ರಂಗ ಸೂಚನೆಗಳನ್ನು ಕರಾರುವಾಕ್ಕಾಗಿ ಸೂಚಿಸುತ್ತಿದ್ದರು.

ರಂಗಾಭಿಮಾನಿ ಆದ ಹುಯಿಲಗೋಳರು ನಾಟಕರಂಗಕ್ಕಷ್ಟೇ ಅಲ್ಲದೆ ವಿದ್ಯಾದಾನ ಸಮಿತಿಯನ್ನು ಸ್ಥಾಪಿಸಿ ಆ ಮೂಲಕ ಆದರ್ಶ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ತಮ್ಮ ನಾಟಕರಂಗದ ಆದಾಯವನ್ನೆಲ್ಲ ವಿನಿಯೋಗಿಸಿದರು. ದ.ರಾ. ಬೇಂದ್ರೆ, ಎನ್ಕೆ ಕುಲಕರ್ಣಿ ಅಂಥವರೆಲ್ಲಾ ಆ ಶಾಲೆಯ ಅಭ್ಯುದಯಕ್ಕೆ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ೧೯೮೪ರಲ್ಲಿ ಆ ಶಾಲೆ ವಜ್ರ ಮಹೋತ್ಸವವನ್ನು ಆಚರಿಸಿತು. ಗಾಂಧೀಜಿಯವರ ಭಾಷಣ ಕೇಳಿ ಖಾದಿಧಾರಿಗಳಾದ ಅವರು ವಿವೇಕಾನಂದರ ಪ್ರಭಾವದಿಂದ ಆಟಗಳಲ್ಲಿ ಬ್ರಿಟಿಷರನ್ನು ಸೋಲಿಸಬೇಕೆಂಬ ದೇಶಾಭಿಮಾನದಿಂದ ದೇಶದಲ್ಲೆಲ್ಲಾ ಆಗ ಪುಟ್‌ಬಾಲ್ ಕ್ಲಬ್ಬುಗಳು ಹುಟ್ಟಿಕೊಂಡವು. ಅದನ್ನು ಕಂಡು ಇವರು ಗದುಗಿನಲ್ಲಿ ಯಂಗ್‌ಮೆನ್ ಪುಟ್‌ಬಾಲ್ ಕ್ಲಬ್ ಸ್ಥಾಪಿಸಿದರು. ಇದು ಕ್ರೀಡಾರಂಗದ ಜತೆಗೆ ನಾಟಕರಂಗಕ್ಕೆ ಸ್ವಾತಂತ್ರ್ಯ ಚಳವಳಿಗೆ ಅಪಾರ ಸೇವೆ ಸಲ್ಲಿಸಿತು.

ನಾರಾಯಣರಾಯರ ಕುಟುಂಬದವರೆಲ್ಲ ದೇಶಪ್ರೇಮಿಗಳಾಗಿದ್ದರು. ನಾರಾಯಣರಾಯರ ಪತ್ನಿ, ಅವರ ತಂಗಿ, ಸಾರಾಯಿ ಅಂಗಡಿಗಳ ಮುಂದೆ ಪಿಕಿಟಿಂಗ್ ಮಾಡಲು ಹೋಗುತ್ತಿದ್ದರು. ಒಂದು ಕ್ಯಾಂಪಿನಿಂದ ಇನ್ನೊಂದು ಸತ್ಯಾಗ್ರಹಿಗಳ ಕ್ಯಾಂಪಿಗೆ ಬ್ರಿಟಿಷರ ಸರ್ಪಕಾವಲಿನ ನಡುವೆಯೂ ದೂರ ದೂರಕ್ಕೆ ಸುದ್ದಿಯನ್ನು ಹೇಗೆ ಮುಟ್ಟಿಸುತ್ತಿದ್ದರು ಗೊತ್ತೆ? ಚಪಾತಿ ರೊಟ್ಟಿಗಳ ನಡುವೆ ಕ್ಯಾಂಪಿನ ಸತ್ಯಾಗ್ರಹದ ಪತ್ರಗಳನ್ನು, ಅಡಗಿಸಿಟ್ಟು ಹೊಲಗದ್ದೆಗಳ ನಡುವೆ ಕೆಲಸ ಮಾಡುವ ರೈತರಿಗೆ ಬುತ್ತಿ ಒಯ್ಯುವ ನೆಪದಲ್ಲಿ ಅದನ್ನು ಸಾಗಿಸುತ್ತಿದ್ದರು. ಮನೆಯ ಹಿಂಭಾಗದಲ್ಲಿ ಮದ್ದು ಗುಂಡುಗಳನ್ನು ಶೇಖರಿಸಿದ್ದರು. ಕಾಂಗ್ರೆಸ್ಸಿನ ನೂರಾರು ದೇಶಭಕ್ತ ಕಾರ್ಯಕರ್ತರಿಗೆ ಆಶ್ರಯ ನೀಡಿದ್ದ ಅವರು ಮನೆಯಲ್ಲಿ ಗಾಂಧಿ ಭಜನೆ, ರಾಟೆಯಿಂದ ನೂಲು ತೆಗೆವ ಕ್ಲಾಸು ನಡೆಸಿ ಮಹಿಳೆಯರಲ್ಲಿ ದೇಶಪ್ರೇಮ ಮೂಡಿಸಿದ್ದರು. ಹೀಗೆ ಇಡೀ ಕುಟುಂಬವನ್ನು ಸುತ್ತಮುತ್ತಲಿನ ಜನರನ್ನೆಲ್ಲಾ ಕಾರ್ಯಕರ್ತರ ಪಡೆಯನ್ನಾಗಿ ಪರಿವರ್ತಿಸಿದ್ದರು. ನಾರಾಯಣ ರಾಯರು ಭಾಷಾಭಿಮಾನಿಗಳಾಗಿ ಸಾಹಿತ್ಯಸೇವೆ ಮಾಡಿರುವುದರ ಜತೆಗೆ ಜನರಲ್ಲಿ ಕನ್ನಡಾಭಿಮಾನ ಬೆಳೆಸುವುದರಲ್ಲಿ ಅಗ್ರಗಣ್ಯರಾಗಿದ್ದರು. ಸಮಾರಂಭ ಗಳಲ್ಲಿ ಹಾಡಲು ಸ್ವಾಗತ ಗೀತೆಗಳನ್ನು ಬರೆದರು. ಕಾಲೇಜಿನ ಪುಸ್ತಕ ಭಂಡಾರದಲ್ಲಿ ಕೇವಲ ಮರಾಠಿ ಪುಸ್ತಕಗಳು ಇದ್ದಾಗ ಕನ್ನಡ ಪುಸ್ತಕಗಳನ್ನು

ತರಿಸುವಂತೆ ಮಾಡಿ ಕನ್ನಡವಾಚನಾಭಿರುಚಿ ಉಂಟು ಮಾಡಿದರು. ಕನ್ನಡ ಅಂಕಿಗಳ ಬಳಕೆಗೆ ಯತ್ನಿಸಿದರು.

೨೦ನೇ ಶತಮಾನದಲ್ಲಿ 'ಹರಿದಾಸ ಕೀರ್ತನೆಗಳನ್ನು ರಚಿಸಿದವರು. ನೂರಾರು ಜನರಿದ್ದಾರೆ. ಆದರೆ ಅವರಲ್ಲಿ ಆಚಾರದಲ್ಲೂ ವಿಚಾರದಲ್ಲೂ ಶ್ರೀ ಹರಿಯ ಭಕ್ತರಾಗಿ ಕೀರ್ತನೆ ರಚಿಸಿದವರು ಸಂಗೀತಶಾಸ್ತ್ರಾನುಸಾರಿಯಾಗಿ ರಾಗ–ತಾಳಗಳಲ್ಲಿ, ಅಂಕಿತ ಸಹಿತವಾಗಿ ಪಲ್ಲವಿ ಅನುಪಲ್ಲವಿಗಳೊಡನೆ ಸಂಪ್ರದಾಯ ಬದ್ಧ ಕೀರ್ತನೆಗಳನ್ನು ರಚಿಸಿದವರಲ್ಲಿ ಹುಯಿಲಗೋಳ ನಾರಾಯಣರಾಯರು ಅಗ್ರಗಣ್ಯರಾಗಿದ್ದಾರೆ. ಶ್ರೀ ಪಾದರಾಜ, ಕನಕ, ಪುರಂದರ, ಮೊದಲಾದವರ ಕೀರ್ತನೆಗಳ ಪ್ರಭಾವವನ್ನು, ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಪಾದರಾಜರ ಇಟ್ಹಾಂಗೆ ಇರುವೆನೋ ಎಂಬ ಪ್ರಸಿದ್ಧಿಯ ಕೀರ್ತನೆಯ ಧಾಟಿಯಲ್ಲಿ ಅವರು ರಚಿಸಿರುವ ಕೀರ್ತನೆ ಸೊಗಸಾಗಿದೆ.

ಇಟ್ಟಂತೆ ಇರುವೆನು ಹರಿಯೆ। ನೀನು।
ಕೊಟ್ಟಿದ್ದನುಣ್ಣುವೆ ಮತ್ತೇನು ದೊರೆಯೆ।
ಪಟ್ಟೆ ಪೀತಾಂಬರ ಕೊಟ್ಟಾರೆ ಉಚಿತವು।
ಬಟ್ಟೆಯಿಲ್ಲದೆ ಚಿಂದಿ ತೊಟ್ಟು ಇರುವೆನು।
ಹಾಸಿಗೆ ಕೊಟ್ಟರೆ ಹಾಗೆ ನಾ ಮಲಗುವೆ
ಭೂ ಶಯನವಿತ್ತರೆ ಅಲ್ಲಿಯೇ ಒರಗುವೆ
ನೀ ಕೊಟ್ಟರೆ ಉಂಟು ಕೊಡದಿದ್ದರೆ ಏನುಂಟು
ಬೇಕು ಬೇಡಗಳು ನಿನ್ನಿಚ್ಛೆಯಾಧೀನ
ಲೋಕೇಶ ಸದಾಶಿವ ವೀರನಾರಾಯಣ

ಎಂದಿದ್ದಾರೆ. ಅವರು ತಾವೇ ರಚಿಸಿ ಹಾಡಿಕೊಳ್ಳುತ್ತಿದ್ದ ಉದಯರಾಗವಂತೂ ರಮಣೀಯ ಗೀತೆಯಾಗಿದೆ. ಏಳು ನಾರಾಯಣ ಏಳು ಲಕ್ಷ್ಮೀನಾರಾಯಣ ಏಳು ಬೆಳಗಾಯಿತು. ರಂಗ ಬರುತಿಹನೆಂದು ಮಂಗಳಾಂಗಿಯಿರೆಲ್ಲ ಅಂಗಳ ಸಾರಿಸುತ ಮಂಗಳವ ಹಾಡುತ್ತ

ರಂಗೋಲಿಯೊಳು ನಿನ್ನ ಚಿತ್ರವನು ರೇಖಿಸುತ
ಶೃಂಗರಿಸುತಿಹರು ನೋಡೆದ್ದು ಬಾರೋ

ಎಂದು ಹಾಡಿದ್ದಾರೆ. ಅಂಕಿತ ಬಿಟ್ಟು ಗಮನಿಸಿದರೆ ಕನಕ ಪುರಂದರರು ರಚಿಸಿರುವ ಕೀರ್ತನೆ ಇದು ಎಂದು ಭಾಸವಾಗುವ ರೀತಿಯಲ್ಲಿ ಸೊಗಸಾದ ದಾಸಸಾಹಿತ್ಯ ರಚಿಸಿದ ಹೆಗ್ಗಳಿಕೆ ಭಕ್ತ ಕವಿ ಹುಯಿಲಗೋಳರದು.

ಸನ್ಮಾನ ಪ್ರಶಸ್ತಿಗಳ ಕನಸು ಕಂಡವರೂ ಅಲ್ಲ ಅದನ್ನು ಬೆನ್ನಟ್ಟಿದವರೂ ಅಲ್ಲ. ಕನ್ನಡ ಸೇವೆ, ನಾಟಕ ರಚನೆ, ಕವಿತಾ ರಚನೆ, ವಿದ್ಯಾದಾನ ತಮ್ಮ ಬದುಕಿನ ಉಸಿರಾಟವಾಗಿಟ್ಟುಕೊಂಡಿದ್ದರು. ಪುಷ್ಪಗಳ ಪರಿಮಳವನ್ನು ದುಂಬಿಗಳು ಬೆನ್ನಟ್ಟಿ ಬರುವಂತೆ ಪ್ರಶಸ್ತಿ ಸನ್ಮಾನಗಳು ಅವರನ್ನು ಬೆನ್ನಟ್ಟಿ ಬಂದವು. ಉದಯವಾಗಲಿ ಚೆಲುವ ಕನ್ನಡನಾಡು ನಾಡಗೀತೆಗೆ ಬೆಳಗಾವಿ ಅಧಿವೇಶನದಲ್ಲಿ ಸ್ವತಃ ಗಾಂಧೀಜಿಯೇ ಅಭಿನಂದಿಸಿದ ಪ್ರಶಸ್ತಿ ನಮ್ಮಲ್ಲಿ ಯಾರಿಗೂ ಸಿಗದ ಪ್ರಶಸ್ತಿ ಆಗಿದೆ. ಕರ್ನಾಟಕ ರಾಜ್ಯೋತ್ಸವದ ಪ್ರಥಮ ಸಮಾರಂಭದಲ್ಲಿ ಸತ್ಕಾರ ಸನ್ಮಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾಗಿ ಸಮ್ಮೇಳನದಲ್ಲಿ ಸನ್ಮಾನಿತರಾದರು. ಇನ್ನು ನಾಟಕರಂಗದಲ್ಲಿ ರಂಗಭೂಮಿ ಪ್ರೇಮಿಗಳು ಕಲಾವಿದರು ಸಾರ್ವಜನಿಕರು ನೀಡಿದ ಸನ್ಮಾನ ಗೌರವಗಳು, ಅಪಾರ, ಅಗಾಧ. ೧೯೧೨ರಲ್ಲಿ ವಜ್ರಮುಕುಟ ನಾಟಕದ ೨ನೇ ಪ್ರಯೋಗವಾದಾಗ ಧಾರವಾಡದ ಜಿಲ್ಲಾ ಕಲೆಕ್ಟರ್ ೧೧೦೦ ರೂ. ಇನಾಂ ನೀಡಿದ್ದಾರೆ. ಗದುಗಿನ ಸಾಹಿತಿಯ ಮೊದಲ ನಾಟಕ ಸನ್ಮಾನ ಆಗಿದೆ.

ಸರಳತೆ, ನಿರಾಡಂಬರಕ್ಕೆ ಹೆಸರಾಗಿ ಸಾತ್ವಿಕ ಜೀವಿಗಳಾದ ಹುಯಿಲ ಗೋಳ ನಾರಾಯಣರಾಯರು, 'ಅನಾಯಾಸೇನಮರಣಂ ವಿನಾ ದೈನ್ಯೇನ ಜೀವನಂ' ಎಂಬಂತೆ ಬಾಳಿ ಯಾರಿಗೂ ತೊಂದರೆಕೊಡದೆ ವೈಕುಂಠ ಏಕಾದಶಿ ದಿನ ಸ್ವರ್ಗದ ಬಾಗಿಲು ತೆಗೆಯುವ ದಿನ ೧೯೭೧ರ ಜುಲೈ ೪ರಂದು ೮೯ನೇ ವಯಸ್ಸಿನಲ್ಲಿ ವೈಕುಂಠವಾಸಿಗಳಾದರು. ಸರಳ ಜೀವಿಗಳಾದ ಅವರು ತಮ್ಮ ಅಂತ್ಯಕ್ರಿಯೆಗಳನ್ನು ಆಡಂಬರದಿಂದ ಆಚರಿಸಬಾರದೆಂದು ತಿಳಿಸಿದ್ದರು.

ಗದುಗಿನ ವೀರನಾರಾಯಣನ ಭಕ್ತರಾಗಿ ಗದುಗಿನಲ್ಲಿ ಪ್ರತಿದಿನವೂ ಅವನನ್ನು ದರ್ಶಿಸುತ್ತ ಇದ್ದವರು. ದರ್ಶಿಸಲಾಗದ ದಿನಗಳಲ್ಲಿ ವೀರನಾರಾಯಣನ ಭಾವಚಿತ್ರಕ್ಕೆ ನಮಿಸಿ ದಕ್ಷಿಣೆ ಸಮರ್ಪಿಸುತ್ತಾ ಇದ್ದ ಭಕ್ತ, ಸಾಹಿತಿ, ದೇಶಪ್ರೇಮಿ ನಾಟಕಕಾರ ನಾಟಕಗೀತಕಾರ ಹುಯಿಲಗೋಳ ನಾರಾಯಣರಾಯರು ಕನ್ನಡಿಗರಿಗೆ ಎಂದೆಂದೂ ಸ್ಫೂರ್ತಿ ನೀಡುವ ದಿವ್ಯಮೂರ್ತಿ ಆಗಿದ್ದಾರೆ.

❒



೮. ಕನ್ನಡ ನ್ಯಾಯಾಧೀಶ
ಶ್ರೀಕಂಠೇಶಗೌಡ

ಈಗ ... ಕೆಲವು ಹಾಸ್ಯ ಚಟಾಕಿಗಳನ್ನು ಗಮನಿಸೋಣ. ಇವು ನಿಮಗೆ ಹಳೆಯದು ಅನ್ನಿಸಬಹುದು. ಅದೆಷ್ಟು ಹಳೆಯದು ಎಂಬುದನ್ನು ಆಮೇಲೆ ನೋಡೋಣ. ಮೊದಲು ಹಾಸ್ಯದ ನಗೆಹನಿಗಳನ್ನು ಗಮನಿಸೋಣ

ದಾರಿಹೋಕ : ಆಚಾರ್‍ರೇ ನೀವು ಕುದುರೆ ಮೇಲೆ ಕೂತುಕೊಂಡಿದ್ದೀರಿ. ನಿಮ್ಮ ಗಂಟನ್ನು ಕುದುರೆ ಮೇಲೆ ಇಡದೆ ತಲೆ ಮೇಲೆ ಯಾತಕ್ಕೆ ಹೊತ್ತುಕೊಂಡಿದ್ದೀರಿ?

ಆಚಾರ್‍ರು : ಕುದುರೆಗೆ ಹೊರೆ ಹೆಚ್ಚಾಗುತ್ತೆಂದು ಮಹಾರಾಯ.

* * *

ಮಗ : ಅಪ್ಪಾ, ಇಲ್ಲಿ ತಮಟೆಗಳನ್ನು ಮಾರುತ್ತಿದ್ದಾರೆ. ಆಡುವುದಕ್ಕೆ ನನಗೊಂದನ್ನು ಕೊಂಡುಕೊಡು.

ತಂದೆ : ಅದು ಬೇಡ. ಮನೆಯಲ್ಲಿ ಅದರಿಂದ ಎಲ್ಲರಿಗೂ ತೊಂದರೆ ಮಾಡುತ್ತೀಯೆ.

ಮಗ : ಅಪ್ಪಾಜಿ! ನಾನು ಹಾಗೆ ಮಾಡುವುದಿಲ್ಲ. ನೀನು ಮಲಗಿದ್ದಾಗ. ಅದನ್ನು ಬಡಿದು ನನ್ನ ಆಸೆ ತೀರಿಸಿ ಕೊಳ್ಳುತ್ತೇನೆ.

* * *

ನ್ಯಾಯಾಧೀಶರು : ನೀನು ಮೈಸೂರಿನಲ್ಲಿ ತಮ್ಮನ ಮನೆಯೊಳಗೆ ಪಾರಿವಾಳದ ಹಕ್ಕಿಯನ್ನು ಕದಿಯಲಿಲ್ಲವೆಂದು ಖಂಡಿತವಾಗಿ ಹೇಳುತ್ತೀಯ!

ಅಪರಾಧಿ : ಸ್ವಾಮಿ, ಆ ಕೆಲಸ ನಾನು ಮಾಡಿಲ್ಲ, ಆ ವಿಷಯದಲ್ಲಿ ನಾನು ನಿರಪರಾಧಿ.

ನ್ಯಾಯಾಧೀಶ : ಖಂಡಿತವಾಗಿ ನೀನು ಕದಿಯಲಿಲ್ಲವೆ?

ಅಪರಾಧಿ : ಖಂಡಿತವಾಗಿ ಇಲ್ಲ ಸ್ವಾಮಿ ಬೇಕಾದರೆ ರುಜುವಾತು ಮಾಡ್ತೇನೆ .

ನ್ಯಾಯಾಧೀಶ : ಮೈಸೂರಿನಲ್ಲಿ ಕದಿಯಲಿಲ್ಲ ಅಂತ ಹೇಗೆ ಸಾಬೀತು ಮಾಡ್ತೀಯಾ.

ಅಪರಾಧಿ : ಸ್ವಾಮಿ ಅದೇ ದಿನ ಅದೇ ಹೊತ್ತಿನಲ್ಲಿ ಕೋಳಿ ಕದ್ದಿದ್ದಕ್ಕೆ ಪೋಲಿಸರು ರಕ್ಷಿಸಿದ್ದಾರೆ. ವಿಚಾರಿಸಿಕೊಳ್ಳಬಹುದು.

* * *

ಗಡಿಯಾರ ಇಲ್ಲದೇನೆ ವೇಳೆ ತಿಳಿಯಬೇಕಾ! ಈ ಸಂಭಾಷಣೆ ಕೇಳಿ: ಲಾಯರ್‌ರನೊಬ್ಬನಿಗೆ ಕಕ್ಷಿದಾರ ಉತ್ತರಿಸಿದ ರೀತಿ ಹೀಗೆ:

೧. ಲಾಯರು: ಮಂಡ್ಯವನ್ನು ಎಷ್ಟು ಹೊತ್ತಿಗೆ ಬಿಟ್ಟೆ?
ಕಕ್ಷಿದಾರ– ಕೋಳಿಕೂಗಿದಾಗ

೨. ಲಾಯರು– ಇಂಡವಾಳಕ್ಕೆ ಎಷ್ಟು ಹೊತ್ತಿಗೆ ಬಂದೆ?
ಕಕ್ಷಿದಾರ– ಏರು ಕಟ್ಟೋಹೊತ್ತಿಗೆ

೩. ಲಾಯರು– ಇಂಡುವಾಳ ಎಷ್ಟು ಹೊತ್ತಿಗೆ ಬಿಟ್ಟೆ?
ಕಕ್ಷಿದಾರ–ಕುರಿಬಿಡೋ ಹೊತ್ತಿಗೆ

೪. ಲಾಯರು–ಗಣಂಗೂರಲ್ಲಿ ಎಷ್ಟು ಹೊತ್ತಿಗೆ ಬಂದೆ
ಕಕ್ಷಿದಾರ– ದನಬಿಡೋ ಹೊತ್ತಿಗೆ

೫. ಲಾಯರು–ಗಣಂಗೂರಲ್ಲಿ ಎಷ್ಟು ಹೊತ್ತಿದ್ದೆ?
ಕಕ್ಷಿದಾರ– ಅವರೆಬೇಯೋ ಹೊತ್ತು

೬. ಲಾಯರು–ಎಲೆಯೂರಿಗೆ ಎಷ್ಟು ಹೊತ್ತಿಗೆ ಬಂದೆ?
ಕಕ್ಷಿದಾರ–ಉಣ್ಣೋ ಹೊತ್ತಿಗೆ ಬಂದೆ ಅಲ್ಲಿ ಹುರುಳಿ

ಬೆಯ್ಯೋ ಹೊತ್ತು ಇದ್ದು ಸಂಜೆ ಏರುಕಟ್ಟೋ ಹೊತ್ತಿಗೆ ಕಿರಂಗೂಲಿಗೆ ಬಂದೆ.

೭. ಲಾಯರು ಪಟ್ಟಣಕ್ಕೆ ಎಷ್ಟು ಹೊತ್ತಿಗೆ ಬಂದೆ
ಕಕ್ಷಿದಾರ– ದನ ಬರೋ ಹೊತ್ತಿಗೆ ಕೋಟೆ ಬಾಗಿಲಿಗೆ ಬಂದೆ. ಊರು ಒಳಕ್ಕೆ ಹೋದಾಗ ದೀಪ ಹಚ್ಚೋ ಹೊತ್ತಾಗಿತ್ತು.

ಇಂಥಾ ಹಾಸ್ಯಗಳನ್ನು ನ್ಯಾಯಾಧೀಶ ಸಂಪಾದಕರೊಬ್ಬರು ೮೫ ವರುಷಗಳ ಹಿಂದೆ ಸುರಭಿ ಎಂಬ ಪತ್ರಿಕೇಲಿ ಬರೆಯುತ್ತಿದ್ದರು. ಅವರು ಹಾಸ್ಯ ಸಾಹಿತಿ ಅಷ್ಟೇ ಅಲ್ಲ, ಪ್ರಸಿದ್ಧ ನಾಟಕಕಾರ, ಕಾದಂಬರಿಕಾರ ವಕೀಲರು– ನ್ಯಾಯಾಧೀಶರು ಆಗಿದ್ದರು. ೨೦ನೇ ಶತಮಾನದ ಪ್ರಾರಂಭದ ಪ್ರಸಿದ್ಧ ಸಾಹಿತಿ ಶ್ರೀಕಂಠೇಶಗೌಡರು.

ಶ್ರೀಕಂಠೇಶಗೌಡರು ಡಿವಿಜಿ, ಮಾಸ್ತಿ, ಕೆರೂರು, ರಾಮಾನುಜಯ್ಯಂಗಾರ್, ಅಳಸಿಂಗರಾಚಾರ್ಯರು, ಅಂಥವರಿಗೆ, ಶಾಮರಾಯರು, ಪುಟ್ಟಣ್ಣ ಮುಂತಾದ ಆ ತಲೆಮಾರಿನವರಿಗೆ ಪರಿಚಯವಿದ್ದ ಪ್ರತಿಭಾವಂತ ಸಾಹಿತಿ ಶ್ರೀಕಂಠೇಶಗೌಡರು.

ಕನ್ನಡ–ಇಂಗ್ಲಿಷ್ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ, ಎರಡು ಭಾಷೆಗಳ ಸಾಹಿತ್ಯದ ಗುಣಮಟ್ಟವನ್ನು ಹೋಲಿಕೆ ಮಾಡಿ, "ಇಂಗ್ಲಿಷ್ ಸಾಹಿತ್ಯ ದಲ್ಲಿರುವಷ್ಟು ವಸ್ತು ವೈವಿಧ್ಯ, ಪ್ರಕಾರಗಳು ನಮ್ಮಲ್ಲಿ ಏಕಿಲ್ಲ? ಮುಂದೊಮ್ಮೆ ಅಂಥಾ ಕೊರತೆಯನ್ನು ತುಂಬಬೇಕು ಎಂದು ಹಂಬಲಿಸುತ್ತಿದ್ದವರು ಸಂಸ್ಕೃತ– ಕನ್ನಡ–ಇಂಗ್ಲಿಷ್ ಮೂರು ಭಾಷೆಗಳಲ್ಲೂ ಪರಿಣತರಾಗಿದ್ದ ಶ್ರೀಕಂಠೇಶಗೌಡರು.

ಸಂಸ್ಕೃತ ಜಾನಕೀ ಪರಿಣಯ ನಾಟಕವನ್ನು ಆಧರಿಸಿ ಸೀತಾ ಸ್ವಯಂ ವರವೆಂದು ಕನ್ನಡದಲ್ಲಿ ಸ್ವತಂತ್ರ ನಾಟಕವಾಗಿ ರಚಿಸಿದ್ದಾರೆ. ಇಂಗ್ಲಿಷಿನಿಂದ ಷೇಕ್ಸ್‌ಪಿಯರನ ಮ್ಯಾಕ್ಬೆತ್, ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ ನಾಟಕಗಳನ್ನು ಕನ್ನಡದಲ್ಲಿ ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯ ಎಂದು ರಚಿಸಿದರು.

ಕನ್ನಡದಲ್ಲಿ ಭವಾನಿಬಾಳು ಎಂಬ ಕಾದಂಬರಿ ರಚಿಸಿದರು. ಹೀಗೆ ಸಂಸ್ಕೃತ–ಕನ್ನಡ–ಇಂಗ್ಲಿಷ್ ಮೂರು ಭಾಷೆಗಳಲ್ಲೂ ಸಾಹಿತ್ಯ ರಚಿಸಿದರು.

ಇದಲ್ಲದೆ ಅವರು ಪತ್ರಿಕಾಸಂಪಾದಕರಾಗಿ ಸುರಭಿ ಎಂಬ ಪತ್ರಿಕೆ ನಡೆಸಿದ್ದಾರೆ. ನಾಟಕಗಳಲ್ಲಿ ಕಂದ, ವೃತ್ತಗಳನ್ನು ಹಾಡುಗಳನ್ನು ರಚಿಸಿದ

ಕವಿಗಳಾಗಿದ್ದರು. ಜಾನಪದ ಕಥೆಗಳನ್ನು ಸಂಗ್ರಹಿಸಿ ಜಾನಪದ ಸಂಗ್ರಹಕಾರರಾಗಿ, ನಗೆಹನಿಗಳನ್ನು ರಚಿಸಿ ಹಾಸ್ಯ ಸಾಹಿತಿಗಳಾದರು. ಇದಲ್ಲದೆ ವಿಶಿಷ್ಟ ಕನ್ನಡ ತೀರ್ಪುಗಳಿಂದ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು. ಹೀಗೆ ಬಹುಮುಖ ಪ್ರತಿಭಾ ಸಾಹಿತಿ ವಿದ್ವಾಂಸ ಶ್ರೀ ಕಂಠೇಶಗೌಡರು ಆಗಿದ್ದರು.

ಶ್ರೀಕಂಠೇಶಗೌಡರು ಹುಟ್ಟಿದುದು ೧೨ ಆಗಸ್ಟ್ ೧೮೬೪ರಲ್ಲಿ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ದೇಶಹಳ್ಳಿಯಲ್ಲಿ. ಶ್ರೀಕಂಠೇಶಗೌಡರ ಹಿರಿಯರು ಮಲ್ಲನಾಯಕನಹಳ್ಳಿಯವರು. ನಾಗಮಂಗಲದ ಆ ಭಾಗದಲ್ಲಿ ಭೀಕರ ಬರಗಾಲ ಬಂದಾಗ ಅಲ್ಲಿಂದ ಹೊರಟು ದೇಶಹಳ್ಳಿಯಲ್ಲಿ ನೆಲಸಿದರು. ಈ ವಂಶದಲ್ಲಿ ಲಿಂಗೇಗೌಡ ಎಂಬುವರು ವಿದ್ಯಾವಂತರಾಗಿ ಸ್ವಸಾಮರ್ಥ್ಯದಿಂದ ಸುಭೇದಾರ್ ಪದವಿ ಗಳಿಸಿದ್ದರು. ಇವರಿಗೆ ೪ ಜನ ಗಂಡು ಮಕ್ಕಳು. ನಾಲ್ವರು ಮಕ್ಕಳಿಗೂ ಆಧುನಿಕ ಶಿಕ್ಷಣವನ್ನು ಇಂಗ್ಲಿಷ್ ಶಿಕ್ಷಣವನ್ನು ನೀಡಿದ್ದರು. ಲಿಂಗೇಗೌಡರ ಎರಡನೇ ಮಗ ಭೈರೇಗೌಡರ ಮಗನೇ ಶ್ರೀಕಂಠೇಶಗೌಡರು.

ಶ್ರೀಕಂಠೇಶಗೌಡರು ತಮ್ಮ ಆರನೇ ವಯಸ್ಸಿನಲ್ಲಿಯೇ ತಾತ ಲಿಂಗೇಗೌಡರ ಬಳಿ ಬಂದರು. ಲಿಂಗೇಗೌಡರಿಗೆ ತಮ್ಮ ತಾತ ಹಕ್ಕಿ ಗೌಡರನ್ನು ಹೋಲುತ್ತಿದ್ದ ಇವರನ್ನು ಕಂಡರೆ ತುಂಬಾ ಪ್ರೀತಿಯಿತ್ತು. ತಮ್ಮ ಅಧಿಕಾರದ ಪ್ರಯುಕ್ತ ಹಳ್ಳಿ ತಾಲ್ಲೂಕುಗಳಲ್ಲಿ ಸಂಚರಿಸುತ್ತಿದ್ದಾಗಲೆಲ್ಲ ಶ್ರೀಕಂಠೇಶಗೌಡರನ್ನು ಜತೆಗೆ ಕರೆದೊಯ್ಯುತ್ತಿದ್ದರು. ಲಿಂಗೇಗೌಡರಿಗೆ ಯಕ್ಷಗಾನ ಬಯಲಾಟ ಮೊದಲಾದ ಜನಪದ ಕಲೆಗಳಲ್ಲಿ ವಿಶೇಷ ಆಸಕ್ತಿಯಿತ್ತು. ತಾತನ ಜತೆ ಬಯಲಾಟದ ಪಾತ್ರಗಳು ಇವರ ಮೇಲೆ ಪ್ರಭಾವ ಬೀರಿತು. ಇನ್ನು ಆ ಕಾಲದಲ್ಲಿ ಎಲ್ಲೆಡೆ ಆಗುತ್ತಿದ್ದ ಕಾವ್ಯ ವಾಚನವೂ ಇವರ ಮನಸೆಳೆದು, ಚಿಕ್ಕಂದಿನ ತಾತನ ಸಹವಾಸದಲ್ಲಿ ಜಾನಪದ ಕಲೆ, ನಾಟಕ, ಸಾಹಿತ್ಯಗಳಲ್ಲಿ ಆಸಕ್ತಿ ಅಭಿರುಚಿ ಬೆಳೆಯಲು ಕಾರಣವಾಯಿತು.

ಮುಂದೆ ಕುಣಿಗಲ್ಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಕುಣಿಗಲ್‌ನಲ್ಲಿ ಲಿಂಗೇಗೌಡರು ನುರಿತ ಉಪಾಧ್ಯಾಯರಿಂದ ಕನ್ನಡ ಸಂಸ್ಕೃತ ಇಂಗ್ಲಿಷ್ ಭಾಷೆಗಳನ್ನು ಕಲಿಸಲು ವ್ಯವಸ್ಥೆ ಮಾಡಿದ್ದರು.

ಇಂದೂ ಸಹ ಭಾಷೆಗಳ ಶಿಕ್ಷಣ ಎಲ್ಲರಿಗೂ ಅಗತ್ಯವಾಗಿದೆ. ಮಾತೃಭಾಷೆ

ಕನ್ನಡ, ಸಾಂಸ್ಕೃತಿಕ ಭಾಷೆ ಸಂಸ್ಕೃತ ಅಂತಾರಾಷ್ಟ್ರೀಯ ಭಾಷೆ ಇಂಗ್ಲಿಷ್ ಬಾಲ್ಯದಲ್ಲಿ ಕಲಿಸಿದ ಪದ್ಧತಿ ಸರ್ವೋತ್ಕೃಷ್ಟ ಪದ್ಧತಿಯಾಗಿದೆ. ಮುಂದಿನ ಭವಿಷ್ಯದಲ್ಲಿ ಈ ಭಾಷೆಗಳನ್ನು ಕಲಿತವರು ಹೆಚ್ಚಾಗಿ ಮುಂದೆ ಬರಬಲ್ಲವರು ಆಗಿದ್ದಾರೆ.

ಶ್ರೀಕಂಠೇಶಗೌಡರು ತಾತನ ಆಶ್ರಯದಲ್ಲಿ ಬೆಳೆಯುತ್ತಿದ್ದು ಶಾಲೆಗೆ ಸೇರಿಸಿದಾಗ ತಂದೆ ಹೆಸರಿರಬೇಕಾದ ಕಡೆ ತಾತ ಲಿಂಗೇಗೌಡರ ಹೆಸರೇ ದಾಖಲಾಗಿ ಎಂ.ಎಲ್. ಶ್ರೀಕಂಠೇಶಗೌಡರಾದರು.

ಲಿಂಗೇಗೌಡರು ಆ ಕಾಲಕ್ಕೆ ಉನ್ನತ ಹುದ್ದೆ ಎನಿಸಿಕೊಂಡಿದ್ದ ಸುಭೇದಾರಿಕೆಯಲ್ಲಿದ್ದುದರಿಂದ, ಶ್ರೀಕಂಠೇಶಗೌಡರಿಗೆ ಆಂಗ್ಲ ಮಕ್ಕಳಿಗೆ ಶಿಕ್ಷಣ ನೀಡುವಂಥ ಯೂರೋಪಿಯನ್ ಪ್ರೌಢಶಾಲೆಯಲ್ಲಿ ಸೀಟು ಸಿಕ್ಕಿತು. ಆದರೆ ಅಲ್ಲಿಯ ವಾತಾವರಣ ಮತ್ತು ಅಲ್ಲಿಯವರ ತಮ್ಮ ಧರ್ಮವೇ ಮೇಲು ಎಂಬ ಅಹಂಕಾರ ಇವರ ಮನಸ್ಸಿನಲ್ಲಿ ಕೋಪವುಂಟುಮಾಡಿತು. ಆಗ ಆತ್ಮಾಭಿಮಾನಿಯಾದ ಶ್ರೀಕಂಠೇಶಗೌಡರು ಭಾರತೀಯರ ಪ್ರೌಢಶಾಲೆಗೆ ಬದಲಾಯಿಸಿಕೊಂಡು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅವರ ದೇಶಾಭಿಮಾನ, ಭಾಷಾಭಿಮಾನ ಆಗಲೇ ವ್ಯಕ್ತವಾಗತೊಡಗಿತು. ಸೆಂಟ್ರಲ್ ಕಾಲೇಜಿಗೆ ಬಿ.ಎ. ತರಗತಿಗೆ ಸೇರಿದ ಮೇಲೆ ಕಾಲೇಜಿನ ಪ್ರಿನ್ಸಿಪಾಲರ ಪ್ರೋತ್ಸಾಹದಿಂದ ಅವರ ಚಟುವಟಿಕೆಗಳು ವಿಶಾಲಗೊಂಡವು. ಇಂಗ್ಲಿಷ್, ಕನ್ನಡ, ಸಂಸ್ಕೃತಗಳ ಆಳ ಅಭ್ಯಾಸಕ್ಕೆ ಇಳಿದರು. ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿದರು. ಜನಪ್ರಿಯ ವಿದ್ಯಾರ್ಥಿ ಆದರು. ಕನ್ನಡ ವ್ಯಾಕರಣ, ಛಂದಸ್ಸು ಸಾಹಿತ್ಯವನ್ನು ಬಲವಾಗಿ ಆಳವಾಗಿ ಅಧ್ಯಯನ ಮಾಡತೊಡಗಿದರು. ಆಗ ಇಂಗ್ಲಿಷಿನಲ್ಲಿರುವ ಎಲ್ಲ ಬಗೆಯ ಸಾಹಿತ್ಯ ಕನ್ನಡದಲ್ಲಿ ಬರಬೇಕೆಂದು ಬಯಸಿದರು.

ಆದರೆ ಕನ್ನಡ ಸಾಹಿತಿ, ವಿದ್ವಾಂಸರಾಗಲು ಆಶಿಸಿದರು. ಆದರೆ ಅವರ ತಾತ ಲಿಂಗೇಗೌಡರಿಗೆ ಮೊಮ್ಮಗ ನ್ಯಾಯಾಧೀಶನೋ, ಕೌನ್ಸಿಲರೋ ಆಗಬೇಕೆಂಬ ಆಸೆಯಿತ್ತು. ಅದಕ್ಕಾಗಿ ಮೊಮ್ಮಗನಿಗೆ ಧೈರ್ಯ ಹೇಳಿ ಮದರಾಸಿಗೆ ವಕೀಲಿ ವ್ಯಾಸಂಗಕ್ಕೆ ಕಳಿಸಿದರು ಎರಡು ವರ್ಷ ಮದರಾಸಿನಲ್ಲಿ ವ್ಯಾಸಂಗ ಮಾಡಿ ಬಿ.ಎಲ್. ಪದವೀಧರರಾದರು. ಆಗ ಅವರಿಗೆ ವಯಸ್ಸು ೨೪. ೧೮೮೫ರಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು.

೧೮೮೦ರಲ್ಲಿ ಅವರಿಗೆ ಅಕ್ಕನ ಮಗಳು ಸುಬ್ಬಮ್ಮನೊಂದಿಗೆ ವಿವಾಹ ವಾಯಿತು. ೧೮೯೬ರಲ್ಲಿ ಸುಬ್ಬಮ್ಮ ತೀರಿದಾಗ ಮೂರೂ ಜನ ಮಕ್ಕಳು ಅಜ್ಜಿಯ ಆಶ್ರಯದಲ್ಲಿ ಬೆಳೆದರು. ಆ ವೇಳೆಗೆ ನ್ಯಾಯಾಧೀಶ ಪದವಿ ಸಿಕ್ಕಿ ಹಾಸನಕ್ಕೆ ಹೊರಟರು. ಕಾರ್ಯದಕ್ಷತೆ ಪ್ರಾಮಾಣಿಕತೆ, ನ್ಯಾಯಶಾಸ್ತ್ರ ಪರಿಣತಿಯಿಂದ ೮ ಜುಲೈ ೧೮೯೮ರಲ್ಲಿ ಮಧುಗಿರಿಯಲ್ಲಿ ೩ನೇ ದರ್ಜೆ ಮುನ್ಸೀಫ್ ಆಗಿ ನೇಮಕ ಗೊಂಡರು.

ಗೌಡರಿಗೆ ಹೆಂಡತಿ ಸುಬ್ಬಮ್ಮನವರಲ್ಲಿ ಅಪಾರ ಪ್ರೀತಿಯಿತ್ತು. ತಮ್ಮ ಗಾಢ ಪ್ರೀತಿಯನ್ನು ೧೮೯೬ರಲ್ಲಿ ರಚಿಸಿದ ಷೇಕ್ಸ್‌ಪಿಯರ್ ನಾಟಕದ ರೂಪಾಂತರವಾದ ಪ್ರಮೀಳಾರ್ಜುನೀಯಂ ನಾಟಕವನ್ನು, ಸುಬ್ಬಮ್ಮನವರಿಗೆ ಅರ್ಪಿಸುವುದರ ಮೂಲಕ ತೋರ್ಪಡಿಸಿಕೊಂಡಿದ್ದಾರೆ. ಅರ್ಪಣಾ ಪದ್ಯ ಹೀಗಿದೆ.

ಚಿಂತಾರೋಗದ ಬೇಗೆಯಿಂ ತವಿಸಿ।
ಮೈಯ್ಯಂ ಬಿಟ್ಟು ಕೈಲಾಸಮಂ ಪಿಂತೆ ಆನಂದದಿಂದೆ ಸಂದ।
ಸದ್ಗುಣಯುತ ಶ್ರೀಕಂಠಭಾರ್ಯ ಆರ್ಯೆಯಾ
ಸ್ವಂತ ಪ್ರೇಮದ ಮೈಮೆಯಿಂ ರಚಿತವಾದ
ಈ ಕಾವ್ಯಮಂ ಶ್ರಾವ್ಯಮಂ ಸಂತರ್ ಸಂತತಂ ಓದಿ
ಸಂತಸಮಂ ಆಂತು ಒಪ್ಪಿರ್ಕೆ ಭೂಭಾಗದೊಳ್

ಇಂಥ ಪ್ರೀತಿಪಾತ್ರಳಾದ ಪತ್ನಿಯ ಮರಣದಿಂದ ತಪ್ತರಾದ ಗೌಡರು ಮತ್ತೊಂದು ಮದುವೆ ಮಾಡಿಕೊಳ್ಳಬಾರದೆಂದು ನಿರ್ಧರಿಸಿದ್ದರು. ತಮ್ಮ ಮೂವರು ಮಕ್ಕಳನ್ನು ತಾವು ಊರೂರು ಅಲೆಯುತ್ತಾ ಒಂದು ನೆಲೆಯಿಲ್ಲದೆ ನೋಡಿಕೊಳ್ಳಲು ಆಗದೆಂದು ಚಿಂತಿಸುತ್ತಿದ್ದರು. ಹಿರಿಯರು ಮತ್ತೊಂದು ಮದುವೆಗೆ ಒತ್ತಾಯಿಸಿದರೂ ಬೇಡವೆನ್ನುತ್ತಿದ್ದರು.

ಆದರೆ ವಿಚಿತ್ರ ಸನ್ನಿವೇಶದ ಫಲವಾಗಿ ಎರಡನೇ ಮದುವೆಗೆ ಭಾಗೀರಥಮ್ಮನೊಂದಿಗೆ ಮದುವೆಯಾಗುವ ಪ್ರಸಂಗ ಒದಗಿತು. ನಂಜನಗೂಡಿನ ಪ್ರಸಿದ್ಧ ಮನೆತನದವರಾದ ಕರೋಹಿಹಟ್ಟಿ ಸಿದ್ದಪ್ಪನವರ ಮಗಳು ಭಾಗೀರಥಮ್ಮ, ಶ್ರೀಕಂಠೇಶಗೌಡರನ್ನೇ ಮದುವೆಯಾಗುವುದಾಗಿ ಹಠತೊಟ್ಟಿದ್ದಳು. ಶ್ರೀಕಂಠೇಶಗೌಡರಿಗೂ ಅವಳಿಗೂ ಪರಿಚಯ ಭೇಟಿ ಏನೂ ಇರಲಿಲ್ಲ. ಆಕೆ ಯಾರು ಅಂತ ಇವರಿಗೆ ಇವರು ಯಾರು ಅಂತ ಆಕೆಗೆ

ಹೇಳಿರಲಿಲ್ಲ. ಹೇಗೋ ಏನೋ ಆಕೆ ಶ್ರೀಕಂಠೇಶಗೌಡರನ್ನೇ ಅವರು ವಿಧುರ ರಾಗಿದ್ದರೂ ಅವರನ್ನೇ ಮದುವೆ ಆಗುತ್ತೇನೆ ಎಂದು ಹಠ ಹಿಡಿದಿದ್ದಳು. ಈ ವಿಷಯ ತಿಳಿದು ಶ್ರೀಕಂಠೇಶಗೌಡರಿಗೆ ಆಶ್ಚರ್ಯವುಂಟಾಯಿತು. ಹಿರಿಯರ ಒತ್ತಾಯದ ಮೇರೆಗೆ ಆಕೆಯನ್ನು ಮದುವೆ ಆದರು. ಮದುವೆ ದೈವನಿಯಾಮಕ ಎಂಬ ಮಾತಿಗೆ ನಿದರ್ಶನವಾಯಿತು.

ಮುನ್ಸೀಫರಾಗಿ ಮಧುಗಿರಿ (೧೮೯೮) ಹಾಸನ (೧೯೦೧) ಚಿತ್ರದುರ್ಗ, (೧೯೦೨) ಹೊಳೆನರಸೀಪುರ (೧೯೦೩) ದೊಡ್ಡಬಳ್ಳಾಪುರ (೧೯೦೫) ಪಟ್ಟಣ, ನಂಜನಗೂಡುಗಳಲ್ಲಿ ಕೆಲಸ ಮಾಡಿದರು. ಬೆಂಗಳೂರು ಕೋಲಾರಗಳಲ್ಲಿ ಮೊದಲದರ್ಜೆ ಮುನ್ಸೀಫರಾಗಿ ಕಾರ್ಯನಿರ್ವಹಿಸಿದರು. ೧೯೧೬ರ ವೇಳೆಗೆ ಅವರು ಕೆಲಸದಿಂದ ಬಿಡುಗಡೆ ಆದರೂ, ಅವರು ಅಮಾನತ್ತಿನಲ್ಲಿದ್ದುದರಿಂದ ಕೆಲಸದಿಂದ ವಜಾ ಆದರೋ ಅವರೇ ರಾಜೀನಾಮೆ ಇತ್ತರೋ ತಿಳಿಯದು ಎಂದು ಶ್ರೀಕಂಠೇಶಗೌಡರ ಬಗ್ಗೆ ಅಧ್ಯಯನಪೂರ್ಣ ಲೇಖನ ಬರೆದ ಕೆ.ಎಂ. ಮುನಿಕೃಷ್ಣಪ್ಪನವರು ತಿಳಿಸುತ್ತಾರೆ. ಅದೇನೇ ಇರಲಿ ಅವರು ನ್ಯಾಯಾಧೀಶ ವೃತ್ತಿಯನ್ನು ಪ್ರಭಾವಶಾಲಿಯಾಗಿ ನಡೆಸಿದ್ದಾರೆ ಎಂಬುದು ನಿಜ. ಅವರ ಮುನ್ಸೀಫ್ ವೃತ್ತಿಯ ಕೆಲವು ಪ್ರಸಂಗಗಳು ಅವರ ಪ್ರಚಂಡ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

ನಮ್ಮಲ್ಲಿ ಅನೇಕರ ವೃತ್ತಿ ಪ್ರವೃತ್ತಿಗಳು ಬೇರೆ ಬೇರೆ ಇರುತ್ತವೆ. ಯಾವುದೋ ಕಾರಣದಿಂದ, ಸನ್ನಿವೇಶದ ಬಲದಿಂದ ಅವರಿಗೆ ಇಷ್ಟವಿರದ ಅಥವಾ ಅನಿವಾರ್ಯ ಕಾರಣಗಳಿಂದ ವೃತ್ತಿಯೊಂದರಲ್ಲಿ ನಿರತರಾಗಿಬಿಡುತ್ತಾರೆ. ಎಷ್ಟೋ ಸಲ ಅವರ ಬಡತನ, ಹಿರಿಯರ ಒತ್ತಾಯದ ಕಾರಣ ತಾವೊಲ್ಲದ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ನಿರತರಾಗುತ್ತಾರೆ. ಪ್ರತಿಭಾವಂತರಾದುದರಿಂದ ಅಲ್ಲಿಯೂ ಯಶಗೊಳಿಸಿ ವೃತ್ತಿ ನಿರತರಾಗುತ್ತಾರೆ. ಕೆಲವರಿಗೆ ತಮ್ಮ ಪ್ರವೃತ್ತಿ ಒಲವು ಅಂತರಂಗದಿಚ್ಛೆ ಏನೆಂದು ತಿಳಿಯುವಷ್ಟರಲ್ಲೇ ಒಂದು ವೃತ್ತಿಯಲ್ಲಿ ನಿರತರಾಗಿ ಬಿಡುತ್ತಾರೆ. ವೈದ್ಯ ಇಂಜನಿಯರಿಂಗ್ ರಂಗಗಳಲ್ಲಿ ಇರುವ ಎಷ್ಟೋ ಜನರಿಗೆ ಅವರು ವೃತ್ತಿನಿರತರಾದ ಮೇಲೆ ಅವರ ನಿಜ ಆಸಕ್ತಿ ಅವರ ಒಳಮನಸ್ಸಿನ ತುಡಿತ ತಿಳಿದು ಸಾಹಿತ್ಯಕ್ಷೇತ್ರ ಕಲಾರಂಗದಲ್ಲಿ ದುಡಿದವರಿದ್ದಾರೆ. ಶತಾವಧಾನಿ ಗಣೇಶ್ ಅವರನ್ನು ಉದಾಹರಿಸಬಹುದು. ಅವರು ಇಂಜನಿಯರಿಂಗ್ ಕ್ಷೇತ್ರದಲ್ಲಿ ವಿದ್ಯಾಭ್ಯಾಸ ಮಾಡಿ ವೃತ್ತಿನಿರತರಾದರು. ಅವರ ನಿಜಪ್ರವೃತ್ತಿ

ಸಾಹಿತ್ಯಕಲಾರಂಗವಾಗಿತ್ತು. ಆದ್ದರಿಂದ ಅವರು ಇಂಜನಿಯರ್ ಆಗಿ ಮುಂದುವರೆಯಲಿಲ್ಲ. ನಮ್ಮ ನಿಜವಾದ ಪ್ರತಿಭೆಗೆ ಅನುಗುಣ ವೃತ್ತಿ ಎಷ್ಟೋ ವೇಳೆ ನಮ್ಮದಾಗಿರುವುದಿಲ್ಲ. ಹೊಟ್ಟೆಪಾಡಿಗೆ ಕಲಿತ ವಿದ್ಯೆ ಕಾರಣದಿಂದ ಆ ವೃತ್ತಿಯಲ್ಲಿ ಇರುತ್ತೇವೆ. ಇದು ಲೋಕಸಹಜವಾಗಿಬಿಟ್ಟಿದೆ. ಶ್ರೀಕಂಠೇಶಗೌಡರು ವೃತ್ತಿಯಲ್ಲಿ ನ್ಯಾಯರಂಗದಲ್ಲಿ ದಕ್ಷರು ಸಮರ್ಥರು ಆಗಿದ್ದರು. ಅವರ ಒಲವು ಸಾಹಿತ್ಯ, ನಾಟಕಕ್ಷೇತ್ರವಾಗಿತ್ತು ಹಾಗಾಗಿ ತಕ್ಕಡಿಯ ಎರಡು ಬಟ್ಟಲಂತೆ ನ್ಯಾಯಾಂಗವೃತ್ತಿಯನ್ನೂ ಸಾಹಿತ್ಯಸೇವೆಯನ್ನೂ ಸರಿದೂಗಿಸುತ್ತಿದ್ದರು. ಒಮ್ಮೊಮ್ಮೆ ಇದರಲ್ಲಿ ಸ್ವಷ್ಟ ಏರುಪೇರು ಆಗುತ್ತಿತ್ತು. ಆದರೆ ಪ್ರತಿಭಾವಂತರು ತಮಗೆ ಬಂದ ಸಮಸ್ಯೆಗಳನ್ನು ತಮ್ಮದೇ ರೀತಿಯಲ್ಲಿ ನಿಭಾಯಿಸಿಬಿಡುತ್ತಾರೆ.

ಶ್ರೀಕಂಠೇಶಗೌಡರಿಗೆ ಅಪಾರ ನೆನಪಿನ ಶಕ್ತಿ ಇತ್ತು. ಒಮ್ಮೆ ಇವರು ಮಧುಗಿರಿಯಲ್ಲಿ ನ್ಯಾಯಾಧೀಶರಾದಾಗ ಒಂದು ಪ್ರಸಂಗ ನಡೆಯಿತು. ಅವರ ಅದ್ಭುತ ನೆನಪಿನಶಕ್ತಿಗೆ ಸಾಕ್ಷಿಯಾಯಿತು ಈ ಪ್ರಸಂಗ. ಮಧುಗಿರಿಯಲ್ಲಿ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದಾಗ "ಊರಿಗೆ ಪ್ಲೇಗು ಬಂದ ಪರಿಣಾಮವಾಗಿ ಜನರೆಲ್ಲ ಊರ ಹೊರಗೆ ಶೆಡ್ಡಿನಲ್ಲಿ ಇರಬೇಕಾಗಿತ್ತು. ನ್ಯಾಯಾಧೀಶರೂ ನ್ಯಾಯಾಲಯವೂ ಊರ ಹೊರಗೆ ಶೆಡ್ಡಿನಲ್ಲಿ ಇರಬೇಕಾಗಿತ್ತು. ಆಗ ಕೊಲೆ ಮೊಕದ್ದಮೆಯಲ್ಲಿ ಭಾಗಿಯಾಗಿದ್ದ ಹಣವಂತನೊಬ್ಬ ಹಣಕೊಟ್ಟು ಶ್ರೀಕಂಠೇಶಗೌಡರನ್ನು ಒಲಿಸಿಕೊಳ್ಳಲು ವಿಫಲನಾಗಿದ್ದ. ಶ್ರೀಕಂಠೇಶಗೌಡರು ವೃತ್ತಿಯಲ್ಲಿ ಮತ್ತು ನಿಜಜೀವನದಲ್ಲಿ ಸತ್ಯಸಂಧರೂ ಪ್ರಾಮಾಣಿಕರೂ ಲಂಚಕ್ಕೆ ಕನಸು ಮನಸಿನಲ್ಲಿಯೂ ಕೈಯೊಡ್ಡದ ನಿಸ್ಪೃಹರೂ ಶುದ್ಧಚರಿತ್ರರೂ ಆಗಿದ್ದರು. ಹಾಗಾಗಿ ಆ ಶ್ರೀಮಂತನ ಆಟ ಏನೂ ನಡೆಯಲಿಲ್ಲ. ಆ ಹೊಟ್ಟೆ ಉರಿಗೆ ಆತ ತನ್ನ ಕಡೆಯವರಿಂದ ಅವರ ಗುಡಿಸಿಲಿಗೆ ಬೆಂಕಿ ಹಾಕಿಸಿ ಕಾಗದ ಪತ್ರಗಳನ್ನು ಸುಡಿಸಿದ. ದಾಖಲೆಗಳು ನಾಶವಾದ್ದರಿಂದ ಅದರ ಲಾಭ ಪಡೆದು ಮೊಕದ್ದಮೆಯನ್ನು ತನ್ನ ಕಡೆ ಮಾಡಿಕೊಳ್ಳಬಹುದು ಎಂದುಕೊಂಡ. ಸರ್ಕಾರಕ್ಕೆ ಮೊಕದ್ದಮೆಯ ಕಾಗದ ಪತ್ರಗಳು ಮತ್ತು ತೀರ್ಪುಗಳು ಅಗ್ನಿದೇವನಿಗೆ ಆಹಾರವಾಗಿದೆ ಎಂದು ದೂರು ಹೋಯಿತು. ಆದರೆ ನೆನಪಿನ ಗಣಿಯಾಗಿದ್ದ ಶ್ರೀಕಂಠೇಶಗೌಡರು ಕಾಗದ ಪತ್ರಗಳ ಸಾಕ್ಷ್ಯವನ್ನು ತೀರ್ಪನ್ನು ಮೊದಲಿ ನಂತೆಯೇ ಬರೆದಿಟ್ಟರು. ತಪ್ಪಿತಸ್ಥರಿಗೆ ಶಿಕ್ಷೆ ತಪ್ಪದೆ ಆಯಿತು.

ಸಾಕಷ್ಟು ಕಾಲ ನಾಟಕ್ಕ ಸಂಗೀತ ಸಾಹಿತ್ಯ ಸೇವೆಯಲ್ಲಿ ಶ್ರೀಕಂಠೇಶಗೌಡರು

ನಿರತರಾಗಿರುತ್ತಿದ್ದರು. ಹೀಗಾಗಿ ಎಷ್ಟೋ ವೇಳೆ ಹಲವಾರು ಮೊಕದ್ದಮೆಗಳ ತೀರ್ಪನ್ನು ಒಟ್ಟಿಗೆ ಒಮ್ಮೆಗೇ ಬಿಡುವಾದಾಗ ಬರೆದುಬಿಡುತ್ತಿದ್ದರು. ಪ್ರತಿ ಮೊಕದ್ದಮೆ ಮುಗಿದ ಕೂಡಲೇ ಬರೆದಿಡುತ್ತಿರಲಿಲ್ಲ. ಹೀಗಾಗಿ ಒಮ್ಮೆ ನಂಜನಗೂಡಿನಲ್ಲಿ ಅವರು ಕೆಲಸ ಮಾಡುತ್ತಿದ್ದಾಗ ೧೯ ಮೊಕದ್ದಮೆಗಳ ತೀರ್ಪುಗಳನ್ನು ಅವರು ಬರೆದು ಸಾರಬೇಕಾಗಿತ್ತು. ಇದರಿಂದ ಬೇಗನೇ ತೀರ್ಪು ಕೊಟ್ಟಿಲ್ಲವೆಂದು ಅಸಮಾಧಾನಿಗಳಾದವರು ಸಾಹಿತ್ಯ ಕಲಾರಂಗದಲ್ಲಿ ಇವರಿಗೆ ಆಗದವರು ಎಲ್ಲರು ಸೇರಿ ಇದೇ ಸುಸಮಯ ಇವರ ಮೇಲೆ ಸೇಡು ತೀರಿಸಿ ಕೊಳ್ಳಲು ಎಂದು ಭಾವಿಸಿ "ಇವರು ಸದಾ ಸಂಗೀತ, ನಾಟಕ ಸಾಹಿತ್ಯ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ನ್ಯಾಯಾಲಯದ ಕೆಲಸಗಳು ತೀರಾ ವಿಳಂಬವಾಗುತ್ತಿವೆ. ಹತ್ತಾರು ಮೊಕದ್ದಮೆಗಳ ತೀರ್ಪುಗಳನ್ನು ಇವರು ಬರೆದು ಘೋಷಿಸದೆ ಇರುವುದರಿಂದ ನ್ಯಾಯವಿಳಂಬವಾಗಿ ತಮಗೆಲ್ಲಾ ತೊಂದರೆ ಆಗಿದೆ. ಈ ಬಗ್ಗೆ ಸೂಕ್ತ ಕ್ರಮ ಸರ್ಕಾರ ಕೈಗೊಳ್ಳಬೇಕು" ಎಂದು ದೂರಿತ್ತರು.

ಆಗ ಸರ್ಕಾರ ಮುಖ್ಯ ನ್ಯಾಯಾಧೀಶರಾಗಿದ್ದ ಮಿಲ್ಲರ್ ಎಂಬುವವರಿಗೆ ಕೂಡಲೇ ಅನಿರೀಕ್ಷಿತ ಭೇಟಿ ಇತ್ತು ಈ ಬಗ್ಗೆ ವರದಿ ಸಲ್ಲಿಸಲು ಸೂಚಿಸಿತು. ಈ ವಿಷಯ ಹೇಗೋ ಶ್ರೀಕಂಠೇಶಗೌಡರ ಮಿತ್ರರೊಬ್ಬರಿಗೆ ತಿಳಿಯಿತು. ಅವರು ಬಾಕಿ ಇರುವ ತೀರ್ಪುಗಳ ಬಗ್ಗೆ ನ್ಯಾಯಾಧೀಶರು ಕೂಡಲೇ ಅನಿರೀಕ್ಷಿತ ಭೇಟಿ ನೀಡುತ್ತಾರೆ ಎಂದು ತಂತಿ ಮೂಲಕ ಇವರಿಗೆ ಸಂದೇಶ ನೀಡಿದರು. ಆ ಸುದ್ದಿ ತಿಳಿದಾಗ ಸಂಜೆ ಆಗಿತ್ತು ಅಂದಿನ ಕೋರ್ಟು ಕಲಾಪಗಳು ಮುಗಿದಿದ್ದವು. ಆಗ ರಾತ್ರಿ ಏಳು ಗಂಟೆಗೆ ಊಟ ಮಾಡಿ ಕೆಲವು ಮೇಣದ ಬತ್ತಿ ಹಾಳೆ ಮಸಿಗಳನ್ನು ತೆಗೆದುಕೊಂಡು ನ್ಯಾಯಾಲಯಕ್ಕೆ ಹೋಗಿ ಕುಳಿತರು ೧೯ ಬಾಕಿ ಉಳಿದಿದ್ದ ಮೊಕದ್ದಮೆಗಳ ತೀರ್ಪುಗಳನ್ನು ಬರೆಯತೊಡಗಿದರು. ಬೆಳಗಿನ ಜಾವ ೫ ಗಂಟೆ ಹೊತ್ತಿಗೆ ಅವುಗಳನ್ನು ಸಿದ್ಧಪಡಿಸಿ ಮನೆಗೆ ಬಂದರು. ಸೇವಕ ನಿದ್ದೆ ಮಾಡುತ್ತಿದ್ದ ಅವನನ್ನು ಎಬ್ಬಿಸಿದರು.

ಹಿಂದಿನ ದಿನ ಬೆಂಗಳೂರಿನಿಂದ ಹೊರಬಿದ್ದ ಮುಖ್ಯ ನ್ಯಾಯಾಧೀಶರು ಬೆಳಿಗ್ಗೆ ೧೧ ಗಂಟೆಗೆ ನಂಜನಗೂಡನ್ನು ತಲುಪಿ ಕೋರ್ಟಿಗೆ ಹಾಜರಾದರು. ಆ ವೇಳೆಗೆ ಶ್ರೀಕಂಠೇಶಗೌಡರು ಕರ್ತವ್ಯದ ಮೇಲೆ ಹಾಜರಿದ್ದರು. ವಿರೋಧಿಗಳೆಲ್ಲ "ನ್ಯಾಯಾಧೀಶರ ಕಥೆ ಮುಗಿಯಿತು. ೧೯ ಮೊಕದ್ದಮೆಗಳ ತೀರ್ಪು ಸಿದ್ಧವಾಗಿರುವುದಿಲ್ಲ ಅದನ್ನು ಮುಖ್ಯನ್ಯಾಯಾಧೀಶರು ಎಲ್ಲ ತನ್ನಿ ಆ

ತೀರ್ಪುಗಳನ್ನು ಎನ್ನುತ್ತಾರೆ. ಇವರು ಕಣ್ ಕಣ್ ಬಿಡುತ್ತಾರೆ" ಎಂದೆಲ್ಲಾ ಮನಸ್ಸಿನಲ್ಲಿ ಲೆಕ್ಕಾಚಾರ ಹಾಕಿಕೊಂಡು ಖುಷಿಯಾಗಿ ಕಾಯುತ್ತಿದ್ದರು. ಆದರೆ ೧೯ ತೀರ್ಪುಗಳು ಸಿದ್ಧವಾಗಿದ್ದವು. ಎಲ್ಲವೂ ಸರಿಯಾಗಿದೆ. ದೂರು ಕೊಟ್ಟವರು ಯಾರು ತಿಳಿಸಿ ಅವರ ಮೇಲೆ ಉಗ್ರಕ್ರಮ ಕೈಗೊಳ್ಳುತ್ತೇನೆ ಎಂದರು. ಮುಖ್ಯ ನ್ಯಾಯಾಧೀಶರು ಆದರೆ ಉದಾರಿಗಳು ದಯಾಮಯಿಗಳಾದ ಶ್ರೀಕಂಠೇಶಗೌಡರು ದೂರು ಕೊಟ್ಟವರು ಯಾರೆಂದು ಮಿತ್ರರಿಂದ ತಿಳಿದು ಬಂದಿದ್ದರೂ, ಅದನ್ನು ಹೇಳದೆ, ಯಾರೋ ತಿಳಿಯದೆ ದೂರಿದ್ದಾರೆ ಹೋಗಲಿ ಬಿಡಿ ಎಂದುಬಿಟ್ಟರು. ನ್ಯಾಯಾಧೀಶರು ಅವರ ಕರ್ತವ್ಯನಿಷ್ಠೆಯನ್ನು ಉದಾರತನವನ್ನು ಕೊಂಡಾಡಿದರು. ಇಂಥ ಹತ್ತಾರು ಪ್ರಸಂಗಗಳು ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದ್ದವು.

ಇನ್ನೊಂದು ಸಂಗತಿ ಅಂದರೆ ಅವರು ಕನ್ನಡಾಭಿಮಾನಿಗಳು ಕನ್ನಡ ಪರಿಣತರೂ ಆಗಿದ್ದರು. ತಮ್ಮ ತೀರ್ಪುಗಳನ್ನೆಲ್ಲ ಕನ್ನಡದಲ್ಲೇ ಕೊಡುತ್ತಿದ್ದರು. ಅವರ ಕಾಲದ ಮೈಸೂರಿನ ವಾತಾವರಣದಲ್ಲಿ ಕನ್ನಡಕ್ಕೆ ಪ್ರೋತ್ಸಾಹ ಇರಲಿಲ್ಲ. ಆಂಗ್ಲರ ಆಳ್ವಿಕೆಯ ಪ್ರಭಾವದಿಂದ ಹಳೆಯ ಮೈಸೂರು ವಿಭಾಗದಲ್ಲಿ ದೇಶ ಭಾಷೆಗಳು ತಿರಸ್ಕಾರಕ್ಕೆ ಒಳಗಾಗಿದ್ದವು. ಇಂಥ ಸಂದರ್ಭದಲ್ಲಿ ದೇಶ ಭಾಷೆಯಲ್ಲಿ ನ್ಯಾಯ ಒದಗಿಸದೆ ಇದ್ದರೆ ಸಾಮಾನ್ಯನಿಗೆ ನ್ಯಾಯ ಸಿಗುವುದಿಲ್ಲವೆಂದು ತಿಳಿದಿದ್ದರು. ಶಿಕ್ಷಣ, ಆಡಳಿತ, ನ್ಯಾಯ, ವ್ಯವಹಾರ ಎಲ್ಲವೂ ದೇಸೀ ಭಾಷೆಯಲ್ಲಿ ಕನ್ನಡದಲ್ಲೇ ನಡೆಯಬೇಕು ನಡೆಸಬೇಕು ಎಂಬುದು ಅವರ ಸಂಕಲ್ಪವಾಗಿತ್ತು. ನಮಗೆ ಕನ್ನಡದಿಂದಲೇ ಮುಕ್ತಿ ಎಂದು ಅವರು ನಂಬಿದ್ದರು. ಅವರು ನ್ಯಾಯಾಧೀಶರಾದ ಕೂಡಲೇ ಮೊಕದ್ದಮೆಗಳ ವಿಚಾರಣೆಗಳನ್ನು ಕನ್ನಡದಲ್ಲಿ ನಡೆಸಿದರು. ಮೊಟ್ಟಮೊದಲು ಕನ್ನಡದಲ್ಲಿ ತೀರ್ಪುಗಳನ್ನು ಬರೆದರು. ಪತ್ರವ್ಯವಹಾರವನ್ನೆಲ್ಲ ಕನ್ನಡದಲ್ಲಿ ಮಾಡಿದರು.

ಆಡಳಿತದಲ್ಲಿ ಕನ್ನಡವನ್ನು ೨೦ನೇ ಶತಮಾನದ ಪ್ರಾರಂಭದಲ್ಲಿ ಜಾರಿಗೆ ತಂದ ಅಧಿಕಾರಿಗಳಲ್ಲಿ ಶ್ರೀ ಕಂಠೇಶಗೌಡರು ಅಗ್ರಗಣ್ಯರಾಗಿದ್ದಾರೆ. ಅಷ್ಟೇ ಅಲ್ಲ ತಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿದರು. ಮಕ್ಕಳು ಓದುತ್ತಿದ್ದ ಇಂಗ್ಲಿಷ್ ಪಠ್ಯ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಹೇಳುತ್ತಿದ್ದರು. ಮಕ್ಕಳಿಗೆ ಕನ್ನಡದಲ್ಲಿ ಹೇಳಿದರೆ ಅನ್ಯಭಾಷೆಯ ಸಂಗತಿಗಳು ಚೆನ್ನಾಗಿ ತಿಳಿಯುತ್ತದೆ ಎಂಬುದು ಅವರಿಗೆ ಗೊತ್ತಿತ್ತು. ಅವರ ಕಿರಿಯ ಮಗಳು ಶಾರದೆ ಶಾಲೆಯಲ್ಲಿ ಓದುತ್ತಿದ್ದಾಗ ಅವಳಿಗಾಗಿ ಭೂಗೋಳ ಗ್ರಂಥವನ್ನು ಕನ್ನಡದಲ್ಲಿ ಬರೆದು

ಶಾರದಾ ಭೂಗೋಳವೆಂದು ಹೆಸರಿಟ್ಟು ಪ್ರಕಟಿಸಿದರು. ಅಷ್ಟೇ ಅಲ್ಲ ಹತ್ತಾರು ಕನ್ನಡದ ಸ್ವತಂತ್ರ ಗ್ರಂಥಗಳನ್ನು ಅನುವಾದಿತ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಜನಕ್ಕೆ ಕೊಟ್ಟ ಅಂದಿನ ಕಾಲದಲ್ಲಿ ಪ್ರಸಿದ್ಧಿ ಪಡೆದ ಜಿಟಿಎ ಎಂದರೆ ಗ್ರಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್ ಎಂಬ ಕನ್ನಡ ಪ್ರಕಾಶನ ಸಂಸ್ಥೆಯನ್ನು ಹುಟ್ಟು ಹಾಕಿದರು. ವಿದ್ಯಾದಾಯಿನಿ, ಸುರಭಿ ಪತ್ರಿಕೆಗಳ ಹುಟ್ಟಿಗೆ ಕಾರಣರಾದರು. ಅವರೇ ಸ್ಥಾಪಿಸಿ ನಡೆಸಿದ ಸುರಭಿ ಪತ್ರಿಕೆ ವಿದ್ಯಾರ್ಥಿಗಳಲ್ಲಿ ಹಿರಿಯರಲ್ಲಿ ಸಾಹಿತ್ಯಾಸಕ್ತಿ ಮೂಡಿಸಿತು.

ಶ್ರೀಕಂಠೇಶಗೌಡರ ನಾಟಕಗಳ ಅನುವಾದಗಳಲ್ಲಿ ಪ್ರತಾಪ ರುದ್ರದೇವ, ಪ್ರಮೀಳಾರ್ಜುನೀಯ, ರಾಮವರ್ಮ ಲೀಲಾವತಿ ನಾಟಕಗಳು ಪ್ರಸಿದ್ಧವಾಗಿವೆ. ಆದರೆ ಅವರು ಘೋಷಾಯಾತ್ರೆ (ಪಾಂಡವರ ವನವಾಸದ ಕಥೆ) ಪ್ರಿಯದರ್ಶಿನಿ ಸುರಭಿ ಸಂಸ್ಕೃತ ನಾಟಕಗಳ ಅನುವಾದ ಮಾಡಿದ್ದಾರೆ ಇಂಗ್ಲಿಷ್ ಕವಿ ನಾಟಕಕಾರ ಹೆನ್ರಿಟೇಲರ್‌ನ ಎ.ಸಿ.ಸಿಲಿಯನ್ ಸಮ್ಮರ್ ನಾಟಕವನ್ನು 'ಕನ್ಯಾ ವಿತಂತು' ಎಂಬ ಹೆಸರಿನಿಂದ ಕಾದಂಬರಿಯಾಗಿ ರಚಿಸಿದ್ದಾರೆ. ಶಿವಾಜಿ ಬಗ್ಗೆ ರಚಿಸಿದ 'ಭವಾನಿ ಬಾಳು' ಇನ್ನೊಂದು ಕಾದಂಬರಿ ಒಳ್ಳೆಯ ಕವಿಗಳಾಗಿದ್ದು ಕಂದ ವೃತ್ತ ಪದ್ಯಗಳನ್ನು ರಚಿಸುವಲ್ಲಿ ಯಾವ ವಿದ್ವಾಂಸರಿಗೂ ಕಡಿಮೆಯಿಲ್ಲದ ಅವರು ಚಾಮನೃಪಚಂದ್ರ ಪ್ರಭೆ (೧೮೯೫) ಎಂಬ ಕಿರುಕಾವ್ಯ ರಚಿಸಿದ್ದಾರೆ. ಬಿಡಿ ಪದ್ಯಗಳನ್ನು ಬರೆದಿದ್ದಾರೆ. ಹಾಸ್ಯ ಚಟಾಕಿಗಳನ್ನು ನ್ಯಾಯಾಧೀಶರೊಬ್ಬರು ಅಧಿಕ ಪ್ರಮಾಣದಲ್ಲಿ ರಚಿಸಿದವರು ಅವರೇ ಎನ್ನಬಹುದು. ಅವು ಇಂದಿಗೂ ನಮ್ಮನ್ನು ನಗಿಸಬಲ್ಲದು.

ಉದಾಹರಣೆಗೆ ಅವರದೊಂದು ಹಾಸ್ಯ ಚಟಾಕಿ ಹೀಗಿದೆ "ಪುರಾಣಿಕರೆ ನೀವು ಪುರಾಣ ಹೇಳುವಾಗ ಜನಗಳು ತೂಕಡಿಸುತ್ತಿದ್ದರೆ ನಿಮಗೆ ಸಿಟ್ಟು ಬರುವುದಿಲ್ಲವೆ?"

ಪುರಾಣಿಕ: ಜನ ತೂಕಡಿಸುತ್ತಿದ್ದರೆ ಸ್ವಲ್ಪ ನಾಚಿಕೆ ಆಗುತ್ತೆ ನಿಜ ಆದರೆ ಅದರಿಂದ ಅನುಕೂಲ ಇದ್ದೇ ಇದೆ. ಅದೇನೆಂದರೆ, ಭಾರತವನ್ನು ಓದಿ ರಾಮಾಯಣದ ಅರ್ಥ ಹೇಳಬಹುದು ತೂಕಡಿಕೆ ಜನರಿಗೆ.

ಇದಲ್ಲದೆ ಸುರಭಿ ಎಂಬ ಪತ್ರಿಕೆ ನಡೆಸಿದರು. ಚಿಕ್ಕ ಬಣಜಿಗರು ಎಂಬ ಕೃತಿಯನ್ನು ರಚಿಸಿದರು. ಮರಿಯಾ ಎಜ್‌ವರ್ತ್ ಬರೆದ ದಿ ಲಿಟಲ್ ಮರ್ಚೆಂಟ್ಸ್

ಎಂಬ ಕೃತಿಯ ಅನುವಾದ ಇದು. ಇದನ್ನು ಕನ್ನಡ ಕೃತಿಯನ್ನಾಗಿ ರಚಿಸಿದ್ದಾರೆ. ಹೀಗೆ ಕಾದಂಬರಿ ನಾಟಕ, ಕವಿತೆ, ಕಾವ್ಯ, ಹಾಸ್ಯ, ಪ್ರಬಂಧ ಮೊದಲಾದ ನಾನಾ ಬಗೆಯ ಸಾಹಿತ್ಯವನ್ನು ನ್ಯಾಯಾಧೀಶ ವೃತ್ತಿ ಮಾಡುತ್ತಲೇ ರಚಿಸಿದ್ದಾರೆ.

ಶ್ರೀಕಂಠೇಶಗೌಡರಿಗೆ ನಾಟಕಗಳಲ್ಲಿ ವಿಶೇಷ ಆಸಕ್ತಿ ಮೈಸೂರಿನಲ್ಲಿ ಅವರ ಸ್ನೇಹಿತರ ಬಳಗದಲ್ಲಿ ವಿದ್ವಾಂಸರು ಸಾಹಿತಿಗಳಲ್ಲದೆ ಪ್ರಸಿದ್ಧ ನಾಟಕಕಾರರು, ನಟರು ಇದ್ದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾದ ಬಸವಪ್ಪಶಾಸ್ತ್ರಿಗಳು ವಿದ್ವನ್ಮಣಿ ಪಂಡಿತ ಕರಿಬಸಪ್ಪಶಾಸ್ತ್ರಿ, ದೇವೋತ್ತಮ ಜೋಯಿಸರು, ಶ್ರೇಷ್ಠ ನಟರಾದ ವರದಾಚಾರ್ಯರು, ಮಹಮದ್ ಪೀರರು ಮೊದಲಾದವರು ಅವರಿಗೆ ಸುಪರಿಚಿತರಾಗಿದ್ದರು. ಅವರಲ್ಲಿಗೆ ಬಂದು ಹೋಗುತ್ತಿದ್ದರು.

ಇಂಗ್ಲಿಷ್ ಸಾಹಿತ್ಯವನ್ನು ವಿಶೇಷವಾಗಿ ಷೇಕ್ಸ್‌ಪಿಯರ್ ನಾಟಕಗಳನ್ನು ಅಧ್ಯಯನ ಮಾಡಿದ ಅವರು ವಿಶ್ವಮಾನ್ಯವಾದ ಆ ನಾಟಕಗಳು ಕನ್ನಡಕ್ಕೆ ತರಬೇಕೆಂದು ಹಂಬಲಿಸುತ್ತಿದ್ದರು. ಚಿಕ್ಕಂದಿನಿಂದಲೂ ನಾಟಕಗಳನ್ನು ನೋಡಿ ಪ್ರಭಾವಿತರಾಗಿದ್ದ ಅವರು ಕಾಲೇಜಿನಲ್ಲಿ ಇಂಗ್ಲಿಷ್ ನಾಟಕಗಳ ಪಾಠ ಅವರ ಮೇಲೆ ಪ್ರಭಾವ ಬೀರಿತ್ತು ಮತ್ತು ಕನ್ನಡದಲ್ಲಿ ಜಗತ್ತಿನ ಶ್ರೇಷ್ಠ ಸಾಹಿತ್ಯವೆಲ್ಲ ಕನ್ನಡಿಗರಿಗೆ ದೊರಕಿಸಬೇಕೆಂಬ ಹಂಬಲ ಅವರಿಗಿತ್ತು. ಹೀಗಾಗಿ ೨೦ ನೇ ಶತಮಾನದಲ್ಲಿ ಕನ್ನಡವನ್ನು ಬೆಳೆಸಿದವರಲ್ಲಿ ಅವರೊಬ್ಬರಾಗಿದ್ದರು. ಹೀಗಾಗಿ ೧೮೯೫ರಲ್ಲಿ ಷೇಕ್ಸ್‌ಪಿಯರನ ಪ್ರಸಿದ್ಧ ಮ್ಯಾಕ್ಬೆತ್ ನಾಟಕವನ್ನು, ಕನ್ನಡದಲ್ಲಿ ಮೊದಲ ಬಾರಿಗೆ ಪ್ರತಾಪರುದ್ರದೇವ ಎಂದು ರೂಪಾಂತರಿಸಿದರು. ಷೇಕ್ಸ್‌ಪಿಯರನ ಇನ್ನೊಂದು ನಾಟಕವಾದ ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ಅನ್ನು ಪ್ರಮೀಳಾರ್ಜುನೀಯ ಎಂದೂ ರೂಪಾಂತರಿಸಿದರು. ರೂಪಾಂತರ ಎಂದರೆ ನೇರ ಭಾಷಾನುವಾದ ಅಲ್ಲ; ಎಂದರೆ ನಮ್ಮ ಭಾಷೆಗೆ ಅನುಗುಣವಾಗಿ ನಮ್ಮ ಸಂಸ್ಕೃತಿಗೆ ತಕ್ಕಂತೆ ಅನ್ಯಭಾಷೆ ನಾಟಕವನ್ನು ಅಳವಡಿಸುವುದು. ಆಂಗ್ಲ ಸಂಸ್ಕೃತಿ ಭಾಷೆ ಇತಿಹಾಸ ತಿಳಿಯದವರಿಗೆ ಕನ್ನಡ ನಾಟಕದಂತೆ ರೂಪಾಂತರದಲ್ಲಿ ತಿಳಿಯುತ್ತದೆ. ಶ್ರೀಕಂಠೇಶಗೌಡರು ಜಾತಿ, ಮತ, ಪಂಥಗಳ ಸಂಕುಚಿತ ಸ್ವಭಾವಗಳಿಂದ ದೂರವಿದ್ದವರು. ಸಕಲಮತ ಮನುಜಪಥವೆಂದು ತಿಳಿದಿದ್ದರು.

ಒಮ್ಮೆ ಅವರು ಕೋಲಾರದಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿದ್ದಾಗ, ಗಣಪತಿ ಉತ್ಸವಕ್ಕಾಗಿ ಮಂಟಪ ಕಟ್ಟುವವರು ಬರಲಿಲ್ಲ. ಆಗ ತಾವೇ

ಹಗಲಿರುಳು ಶ್ರಮಿಸಿ ಕಲಾತ್ಮಕವಾದ ಸುಂದರ ಮಂಟಪವನ್ನು ತಯಾರಿಸಿದರು. ಜನರೆಲ್ಲ ಆ ಮಂಟಪವನ್ನು ಕಂಡು ತುಂಬಾ ಮೆಚ್ಚಿದರು. ಗಣಪತಿ ವಿಸರ್ಜನೆ ಆದ ಮೇಲೆ ಆ ಮೆಂಟಪವನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದರು. ಆಗ ಅವರ ಮನೆಗೆ ಬಂದ ಮುಸಲ್ಮಾನ ಹಿರಿಯರೊಬ್ಬರು ಆ ಮಂಟಪದ ಸೌಂದರ್ಯಕ್ಕೆ ಬೆರಗಾಗಿ ಅದನ್ನು ಕೊಡುವಿರಾ ಎಂದು ಕೇಳಿದರು. ಸಂತೋಷದಿಂದ ತೆಗೆದು ಕೊಂಡು ಹೋಗಿ ಎಂದರು. ಇದು ಕೆಲವರಿಗೆ ಸಹನೆ ಆಗಲಿಲ್ಲ. ದೇವರನ್ನು ಕೂಡಿಸಿದ ಮಂಟಪವನ್ನು ಯಾರಿಗೋ ಕೇಳಿದರು ಅಂತ ಕೊಟ್ಟುಬಿಡೋದೆ ಅಂತ ಆಕ್ಷೇಪಿಸಿದರು. ಸಂತೋಷಂ ಜನಯೇತ್ ಪ್ರಾಜ್ಞ; ಸಹೃದಯರಿಗೆ ಸಂತೋಷ ಉಂಟು ಮಾಡುವುದೇ ತಿಳಿದವರ ಕರ್ತವ್ಯ ಎಂದು ಉತ್ತರಿಸಿದರು. ಆ ಕಾಲದಲ್ಲಿ ಜನ ಮೂಢನಂಬಿಕೆಗಳಿಂದ ತಾವು ತಿಳಿದಿದ್ದೇ ಸರಿ ಎಂದು ಭಾವಿಸಿದರು. ಒಬ್ಬ ಕೃಷಿಕವರ್ಗದ ವ್ಯಕ್ತಿ ಪಂಡಿತ ಸಾಹಿತ್ಯವನ್ನು ರಚಿಸುವುದು ಎಂದರೇನು ಎಂದು ಅವರ ಕೀರ್ತಿಯನ್ನು ಸಹಿಸಿದ ಕೆಲವರು ಅವರನ್ನು ದೂಷಿಸಿದರು. ನಾಯಿ ಬೊಗಳಿದರೆ ದೇವಲೋಕ ಹಾಳೇ ಎಂದು ಅದನ್ನು ಕಡೆಗಣಿಸಿದರು. ಶ್ರೀಕಂಠೇಶಗೌಡರು ಕನ್ನಡ ಸಾಹಿತ್ಯ ಸೇವೆ ಎಲ್ಲರಿಗೂ ತೆರೆದಿಟ್ಟ ಬಾಗಿಲು ಯಾರು ಬೇಕಾದರೂ ಕನ್ನಡಮ್ಮನ ಸೇವೆಯಲ್ಲಿ ನಿರತರಾಗಿ ಧನ್ಯರಾಗ ಬಹುದು ಆದ್ದರಿಂದಲೇ ನಮ್ಮಲ್ಲಿ ಎಲ್ಲ ವರ್ಗದ ಎಲ್ಲ ಜಾತಿ ವಿರುದ್ಧದ ಸಾಹಿತಿಗಳನ್ನು ಕಾಣುತ್ತೇವೆ. ಸಾಹಿತ್ಯಕ್ಕೆ ಕಲೆಗೆ ಜಾತಿ ಪಂಥಗಳಿವೆ. ಎಂದು ಹೇಳಿದ್ದು ಸೋಜಿಗವೆ, ಗೌಡ ಕಬ್ಬವ ಪೇಳೆ! ಎಂದು ವ್ಯಂಗ್ಯವಾಡಿದವರಿಗೆ ಅವರು ಉತ್ತರಿಸಿದ್ದು ಹೀಗೆ.

"ಕರ್ಣಾಟಕದೊಳ್ ವಾಣಿಯೆ ರಾಣಿಯು; ಸೋಜಿಗವೆ ಕಬ್ಬವ ಪೇಳೆ ಗೌಡಂ?" ಎಂದು ಉತ್ತರಿಸಿದರು. ಕರ್ನಾಟಕದಲ್ಲಿ ಕನ್ನಡ ಸರಸ್ವತಿ ರಾಣಿ ಆಗಿರುವಾಗ ಯಾರು ಬೇಕಾದರೂ ಕಾವ್ಯ ಬರೆಯಬಲ್ಲರು ಕನ್ನಡಸೇವೆ ಮಾಡಬಲ್ಲರು. ಪ್ರತಿಯೊಬ್ಬ ಕನ್ನಡಿಗ ಅವನು ಎಷ್ಟೇ ಅನ್ಯಭಾಷಾ ವಿಶಾರದನಾದರೂ ಅವನ ಸೇವೆ ಕನ್ನಡಕ್ಕೆ ಮಿಸಲಾಗಿರಬೇಕು ಎಂಬುದು ಅವರ ಧ್ಯೇಯವಾಗಿತ್ತು. ಅವರೊಂದು ಕಡೆ ಸೊಗಸಾದ ಮಾತನ್ನು ಹೇಳಿದ್ದಾರೆ.

"ನಾನು ಎಷ್ಟೇ ಚೆನ್ನಾಗಿ ಇಂಗ್ಲಿಷಿನಲ್ಲಿ ಬರೆದರೂ ಷೇಕ್ಸ್‌ಪಿಯರ್‌ನನ್ನು ಮೀರಿಸಲಾರೆ ಷೇಕ್ಸ್‌ಪಿಯರ್ ಎಷ್ಟೋ ಚೆನ್ನಾಗಿ ಕನ್ನಡದಲ್ಲಿ ಬರೆದರೂ ನನ್ನನ್ನು ಮೀರಿಸಲಾರ" ಎಂದು ತಿಳಿಸಿದ್ದಾರೆ.

ಶ್ರೀಕಂಠೇಶಗೌಡರು ಸಾಹಿತ್ಯ ನಾಟಕ ಕ್ಷೇತ್ರಗಳಲ್ಲಿ ಗಳಿಸಿದ ಯಶಸ್ಸನ್ನು ಸಹಿಸಿದ ಅನೇಕರು ಆ ಕಾಲದಲ್ಲಿದ್ದ ಗೌಡನೊಬ್ಬ ಇಂಥ ಕಾವ್ಯ ನಾಟಕಗಳನ್ನು ಬರೆದನಲ್ಲಾ ನಮ್ಮಂಥವರಿಗೆ ಆಗಲಿಲ್ಲವಲ್ಲಾ ಎಂಬ ಅಸೂಯೆ ಅವರಲ್ಲಿ ಮನೆ ಮಾಡಿತ್ತು. ಈ ಹೊಟ್ಟೆಉರಿಯನ್ನು ನೀಚ ರೀತಿಯಲ್ಲಿ ಸೇಡು ತೀರಿಸಿ ಕೊಂಡಿದ್ದರು. ಪುಸ್ತಕ ಭಂಡಾರಗಳಲ್ಲಿ ಇದ್ದ ಶ್ರೀಕಂಠೇಶಗೌಡರ ಕೃತಿಗಳನ್ನು ಹಾಳುಮಾಡಲು ಯತ್ನಿಸಿದ್ದರು ಈ ಬಗ್ಗೆ ಶ್ರೀಕಂಠೇಶಗೌಡರ ಕೃತಿಗಳನ್ನು ಅಪಾರಶ್ರಮದಿಂದ ಸಂಗ್ರಹಿಸಿ ಕನ್ನಡಿಗರಿಗೆ ದೊರಕಿಸಿಕೊಟ್ಟ ಹ.ಕ. ರಾಜೇಗೌಡರು ಹೇಳುವ ಮಾತುಗಳನ್ನು ಗಮನಿಸಬೇಕು. ಅಕ್ಷರಸ್ಥರಿಗೆ ಅಕ್ಷರಸ್ಥರೇ ಶತ್ರುಗಳಾಗಿ ಬಿಡುತ್ತಾರೆ ಎಂಬುದಕ್ಕೆ ಈ ಮಾತುಗಳು ನಿದರ್ಶನವಾಗಿವೆ. ಅವರ ಮಾತುಗಳಿವು!

“ನಾನು ಶ್ರೀಕಂಠೇಶಗೌಡರ ಕೃತಿಗಳ ಸಂಗ್ರಹಣೆ ಕಾಲದಲ್ಲಿ ಒಂದು ವಿಷಯ ನನ್ನ ಮನಸ್ಸಿಗೆ ಆಕ್ರೋಶ ಮತ್ತು ಬೇಸರವನ್ನುಂಟುಮಾಡಿತು. ಅದೆಂದರೆ ನನಗೆ ಶ್ರೀಕಂಠೇಶಗೌಡರ ಕೃತಿಗಳು ದೊರೆತ ಅನೇಕ ಗ್ರಂಥ ಭಂಡಾರಗಳಲ್ಲಿ ಕೃತಿಕಾರನ ಹೆಸರಿರುವ ಹಾಳೆಯನ್ನು ಯಾರೋ ಹರಿದು ಹಾಕಿದ್ದು ಕಂಡುಬಂದಿತು. ಶ್ರೀಕಂಠೇಶಗೌಡರ ಪುಸ್ತಕಗಳ ಮೇಲೆ ಬರೆದಿದ್ದ ಅನಾಮಧೇಯ ವಾಕ್ಯಗಳು ಜಾತ್ಯಂಧತೆಯ ಕುರುಹುಗಳಾಗಿ ಕಾಣಿಸಿತ್ತು. ಪಂಚಾಂಗ ಸುಟ್ಟರೆ ನಕ್ಷತ್ರ ಹೋದೀತೇ? ಆದರೆ ಶ್ರೀರಂಗಪಟ್ಟಣದಲ್ಲಿ ಮೊದಲ ಹಾಳೆ ಹರಿಯದ ಕೃತಿಗಳು ದೊರೆತಿದ್ದರಿಂದ ಶ್ರೀಕಂಠೇಶಗೌಡರ ಕೃತಿಗಳವು ಎಂದು ಗುರುತಿಸುವಂತಾಯಿತು ಎಂದಿದ್ದಾರೆ.

ಹಿಂದೆ ನಮ್ಮಲ್ಲಿ ದೇವಸ್ವ ಬ್ರಹ್ಮಸ್ವ ರಾಜಸ್ವ ಎಂಬುದನ್ನು ಯಾರೂ ಹಾಳು ಮಾಡಬಾರದು ಎಂಬ ನಿಯಮವಿತ್ತು. ದೇವರಿಗೆ ಸೇರಿದ್ದು ವಿದ್ವಾಂಸರಿಗೆ ಸೇರಿದ್ದು ರಾಜರಿಗೆ ಸೇರಿದ್ದು ಪವಿತ್ರವಾದುದು ಅದನ್ನು ಹಾಳು ಮಾಡಬಾರದು ಎಂದು ನಂಬಿಕೆಯಿತ್ತು. ಗ್ರಂಥಸ್ವವೂ ಅಷ್ಟೆ. ಪುಸ್ತಕಗಳನ್ನು ಹಾಳು ಮಾಡಬಾರದು ಅದು ಸರಸ್ವತಿಯ ಸಾಕಾರ ರೂಪ. ಅದನ್ನು ದುರುಪಯೋಗ ಮಾಡಿಕೊಳ್ಳಬಾರದು; ಪುಸ್ತಕ ಕಳ್ಳತನ ಮಹಾ ಪಾಪ, ನಮ್ಮ ವಿಶ್ವವಿದ್ಯಾಲಯ ದಂಥ ಅತ್ಯುನ್ನತ ವಿದ್ಯಾಕೇಂದ್ರಗಳಲ್ಲಿ ಅಭ್ಯಾಸ ಮಾಡತಕ್ಕವರು ತಮಗೆ ಬೇಕಾದ ಹಾಳೆಗಳನ್ನು ಹರಿದುಕೊಂಡು ಹೋಗಿರುವ ಸರಸ್ವತಿ ನಿವಾಸದ ಕಳ್ಳರನ್ನು ಕಾಣುತ್ತೇವೆ. ಗ್ರಂಥಗಳ ಮೇಲೆ ಗೀಚಿರುವುದನ್ನು ಕಾಣುತ್ತೇವೆ.

ಇದನ್ನು ಅನಕ್ಷರಸ್ಥರಲ್ಲ ವಿದ್ಯಾವಂತರೇ ಮಾಡುತ್ತಾರೆ ಎಂಬುದನ್ನು ನೆನಪಿಡಬೇಕು. ಎಷ್ಟೋ ಮುಂದುವರೆದಿದ್ದೇವೆ ಲಕ್ಷಾಂತರ ಓದು ಬರಹ ಕಲಿತಿದ್ದಾರೆ ಎನ್ನುವ ಈ ಕಾಲದಲ್ಲೇ ಹೀಗಿರುವಾಗ ಇನ್ನು ಹೋದ ಶತಮಾನದ ಅಕ್ಷರಜ್ಞಾನ ಇಲ್ಲದವರೇ ಅಧಿಕರಾಗಿದ್ದಾಗ, ಇಂಥ ಪುಸ್ತಕದ ಮೇಲೆ ಸೇಡು ತೀರಿಸಿಕೊಳ್ಳಲು ಸರಸ್ವತೀ ಶತ್ರುಗಳಾದ ಸರಸ್ವತೀ ಪುತ್ರರು ಇದ್ದುದರಲ್ಲಿ ಅಚ್ಚರಿ ಏನಿದೆ? ಎಂಥ ಕಾಲದಲ್ಲಿ ಎಂಥ ಸನ್ನಿವೇಶದಲ್ಲಿ ಶ್ರೀಕಂಠೇಶಗೌಡರ ಕನ್ನಡ ಸಾಹಿತ್ಯ ಸೇವೆ ಮಾಡಿದರು ಎಂಬುದು ಈ ಸಂಗತಿ ಸಾರುತ್ತದೆ.

ಕೇವಲ ಸಾಹಿತಿಗಳಾಗಿರದೆ ಕಲಾವಿದರೂ ಆಗಿದ್ದ ಶ್ರೀಕಂಠೇಶಗೌಡರು ೧೮೯೫ರಲ್ಲಿ ಶ್ರೀ ಶ್ರೀಕಂಠೇಶ್ವರ ಕರ್ನಾಟಕ ನಾಟಕಸಭಾ ಎಂಬ ನಾಟಕ ಮಂಡಲಿಯನ್ನು ಸ್ಥಾಪಿಸಿ ತಮ್ಮ ನಾಟಕಗಳನ್ನು ಇತರರ ನಾಟಕಗಳನ್ನು ಪ್ರದರ್ಶಿಸಿದರು. ತಾವೂ ಅಭಿನಯಿಸಿದರು.


ಸುರಭಿ ಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಜನರಿಂದ ಕಥೆಗಳನ್ನು ಮತ್ತು ಹಾಸ್ಯ ಚಟಾಕಿಗಳನ್ನು ವಿಶೇಷವಾಗಿ ಪ್ರಕಟಿಸಿದರು. ವಿಚಾರ ಪ್ರಬಂಧಗಳು ಪ್ರಕಟವಾಗಿ ಪತ್ರಿಕೆ ಜನಪ್ರಿಯವಾಗಿತ್ತು. ಅವರು ಸಂಗ್ರಹಿಸಿ ಪ್ರಕಟಿಸಿದ ಜನಪದಗಳು ಎಷ್ಟು ಸೊಗಸಾಗಿದ್ದವು ಎಂದರೆ ಅವು ಪಠ್ಯಗ್ರಂಥಗಳಲ್ಲೂ ಸೇರಿ ವಿದ್ಯಾರ್ಥಿಗಳಿಗೆ ಮೆಚ್ಚುಗೆ ಆಗಿತ್ತು. ಉದಾಹರಣೆಗೆ ವಿವೇಕಕ್ಕೆ ತಕ್ಕಂಥಾ ಪ್ರತಿಫಲ ಕಥೆಯನ್ನು ನೋಡಬಹುದು.

ಆ ಕಥೆಯಲ್ಲಿ ರಾಜನೊಬ್ಬ ವೃದ್ಧನಾದ ೬೦ ವರುಷದ ತೋಟಗಾರನನ್ನು ಕಂಡು ನಿನ್ನ ವಯಸ್ಸೆಷ್ಟು ಎಂದು ಕೇಳುತ್ತಾನೆ. ಅದಕ್ಕೆ ಅವನು ನಾಲ್ಕು ವರ್ಷ ಬುದ್ಧಿ ಎನ್ನುತ್ತಾನೆ. ಇದೇನು ಹುಡುಗಾಟಿಕೆ ಮಾಡುತ್ತಿದ್ದೀಯ ಎಂದಾಗ ಆ ಮುದುಕ ಹೇಳುತ್ತಾನೆ; ಹೊಟ್ಟೆ ಪಾಡಿನ ಯೋಚನೆಯಲ್ಲಿ ಅವಿವೇಕದಿಂದ ಕಳೆದ ಕಾಲವನ್ನೆಲ್ಲ ಲೆಕ್ಕ ಹಾಕಬಾರದು. ದೇವರಧ್ಯಾನದಲ್ಲಿ ಪರೋಪಕಾರದಲ್ಲಿ ನಿರತನಾದ ಕಾಲವನ್ನಷ್ಟೆ ಲೆಕ್ಕ ಹಾಕಿದರೆ ನನ್ನದು ೪ ವರ್ಷ ಎಂದನು. ಈಗ ನೆಡುತ್ತಿರುವ ತೆಂಗಿನ ಗಿಡದ ಫಲ ನಿನಗೆ ಸಿಗೊಲ್ಲ ಆದರೂ ಏಕೆ ನೆಡುತ್ತಿದ್ದೀಯಾ ಎಂದು ಕೇಳಿದಾಗ ಹಿಂದಿನವರು ನೆಟ್ಟಿದ್ದು ಈವತ್ತು ನಮಗೆ ಸಿಗುತ್ತಿಲ್ಲವೇ ಹಾಗೆ ಮುಂದಿನವರಿಗಾಗಿ ನೆಡಬೇಕು ಎಂದನು. ಆಗ ಅವನ

ಮಾತನ್ನು ಮೆಚ್ಚಿ ಧಾರಾಳವಾಗಿ ದೊರೆ ಹಣಕೊಟ್ಟನು. ಆಗ ಆ ವೃದ್ಧ ಹೇಳಿದನು. ನಾನೆಟ್ಟ ಸಸಿ ಮರವಾಗುವ ಮುಂಚೆಯೇ ಲಾಭ ಕೊಟ್ಟಿತು ಎಂದನು. ಇನ್ನು ನಿನ್ನೊಂದಿಗೆ ಮಾತಾಡುತ್ತಿದ್ದರೆ ನನ್ನ ಖಜಾನೆಯೇ ಖಾಲಿ ಆಗುತ್ತೆ ಎಂದು ದೊರೆ ಮುಂದಕ್ಕೆ ಹೊರಟನು.

ಹೀಗೆ ಜನಪದ ಕಥೆಗಳನ್ನು ಕೊಟ್ಟ, ಕಥೆ ಕಾದಂಬರಿಗಳ ಜೊತೆಗೆ ಸೊಗಸಾಗಿ ಷೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡಕ್ಕೆ ಕೊಟ್ಟು ಕನ್ನಡ ಕೆಲಸ ಮಾಡಿದ ಕನ್ನಡಾಭಿಮಾನಿ, ಆಡಳಿತ ಕನ್ನಡದ ನಾಯಕ, ಶ್ರೀಕಂಠೇಶಗೌಡರು ಬೆಂಗಳೂರಿನಲ್ಲಿ ೨೬-೧೧-೧೯೨೬ರಲ್ಲಿ ನಿಧನರಾದರು. ಅಮೂಲ್ಯ ಸಾಹಿತ್ಯ ಕೃತಿಗಳನ್ನು ನಮಗೆ ಬಿಟ್ಟು ಹೋದರು.

❐



೯. ಘನವಿದ್ವಾಂಸ

ದೇವುಡು ನರಸಿಂಹಶಾಸ್ತ್ರಿ

ಕನ್ನಡ ಸಾಹಿತಿಗಳಲ್ಲಿ ಎಲ್ಲರೂ ಮಕ್ಕಳ ಸಾಹಿತಿಗಳಲ್ಲ ಮಕ್ಕಳ ಜತೆ ನಲಿದಾಡಿ ಪಾಡಿದರೂ ಮಕ್ಕಳಿಗಾಗಿ ಕಥೆ ಬರೆದು ಪದ್ಯ ಬರೆದು ನಾಟಕ ಬರೆದು ಓದಿದವರು ಆಡಿಸಿದವರಲ್ಲ ಇನ್ನು ಮಕ್ಕಳ ಸಾಹಿತ್ಯ ಬರೆದವರು ಎಷ್ಟೋ ಮಂದಿ ಘನವಿದ್ವಾಂಸರಲ್ಲ. ಆದರೆ ದೇವುಡು ನರಸಿಂಹಶಾಸ್ತ್ರಿಗಳು ಘನವಿದ್ವಾಂಸರೂ ಹೌದು ಮಕ್ಕಳ ಸಾಹಿತಿಗಳೂ ಹೌದು. ಅಷ್ಟೇ ಅಲ್ಲ ಕೇವಲ ಪರಂಪರೆಯಿಂದ ಹಿರಿಯರಿಂದ ಬಂದ ಮನೆ ಮಾತು ತೆಲುಗಾದರೂ ಟಿ.ಎಸ್. ವೆಂಕಣ್ಣಯ್ಯನವರಂತೆ ಕನ್ನಡದೇಶವೇ ನನ್ನ ಮನೆ, ಕನ್ನಡ ಭಾಷೆಯೇ ನನ್ನ ಜೀವ ಭಾಷೆ. ಕನ್ನಡ ಸೇವೆಯೇ ದೇವರ ಸೇವೆ ಎಂದು ತಿಳಿದವರು ಹಾಗೆಯೇ ಬಾಳಿದವರು.

ದೇವುಡು ಅವರ ಕನ್ನಡ ಭಾಷಾ ಪ್ರೌಢಿಮೆ, ಸಂಸ್ಕೃತ ಪಾಂಡಿತ್ಯ, ಇಂಗ್ಲಿಷ್ ಪರಿಣಿತಿ ಹೊಂದಿರುವುದರ ಜತೆಗೆ ಅವರಲ್ಲಿ ಕಂಡು ಬರುವ ಅದ್ವಿತೀಯ ವ್ಯಕ್ತಿತ್ವದ ಅಂಶ ಎಂದರೆ ಅವರ ಸರ್ವಸೋದರ ಭಾವ, ಹೃದಯವೈಶಾಲ್ಯ, ಮನುಜಕುಲ ಒಂದೆಕುಲವೆಂಬ ದೇಶಾಚಾರ, ಕುಲಾಚಾರಗಳನ್ನು ಮೀರಿದ ಮಾನವೀಯ ಸ್ವಭಾವ, ಒಂದು ರೀತಿಯಲ್ಲಿ ವಿಶ್ವಮಾನವರು ದೇವುಡು ಅವರು. ದೇವುಡು ಅಂದರೆ ದೇವರು ಎಂದರ್ಥ. ಕವಿ ಎಂ.ಎನ್. ವ್ಯಾಸರಾವ್ ಹೇಳುವಂತೆ ದೇವತಾ ಮನುಷ್ಯ ಅವರು.

> "ಉರುಳಿ ಹೋದ ಯುಗಗಳನ್ನು ಕಣ್ಣು ಮುಂದೆ ಮರಳಿಸಿ
> ಮರೆತು ಹೋದ ಆಶ್ರಮಗಳನ್ನು ಮತ್ತೆ ಇಲ್ಲಿ ಸೃಷ್ಟಿಸಿ
> ದೇವಲೋಕ ಮರ್ತ್ಯಲೋಕ ಬೆಸೆದು ಒಂದುಗೂಡಲು
> ದೈವತ್ವಕೆ ಒಯ್ದರಂದು ಮನುಜರನು ದೇವುಡು"

ದೇವುಡು ಅವರ ಸರ್ವಧರ್ಮಸಮಭಾವವನ್ನು ಸ್ನೇಹ ಮಾನವೀಯತೆಗಳನ್ನು ಎತ್ತಿಹಿಡಿದ ಅನೇಕ ಜೀವನಪ್ರಸಂಗಗಳಲ್ಲಿ ಈ ಪ್ರಸಂಗ ಅತಿ ಪ್ರಸಿದ್ಧವಾದುದು. ದೇವುಡು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಆಗಿದೆ.

ಸರ್ವಜ್ಞ ಕವಿಯನ್ನು ಬೆಳಕಿಗೆ ತಂದು ಪ್ರಸಿದ್ಧರಾಗಿದ್ದ ಕನ್ನಡ ಸಾಹಿತಿ ಫಾದರ್ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು ಒಮ್ಮೆ ಧಾರವಾಡದಿಂದ ಬೆಂಗಳೂರಿಗೆ ಬಂದಿದ್ದಾಗ ಅವರನ್ನು ತಮ್ಮ ಮನೆಗೆ ದೇವುಡು ಅವರು ಭೋಜನಕ್ಕೆ ಆಹ್ವಾನಿಸಿದರು. ಆ ಸುದ್ದಿ ತಿಳಿದು ಜುಟ್ಟು ಬಿಟ್ಟು ಪಂಚೆ ಉಟ್ಟು ಶಾಲು ಹೊದ್ದು ವೇದಾಭ್ಯಾಸ ಮಾಡಿದ ಶುದ್ಧ ವೈದಿಕಸಂಪ್ರದಾಯದ ಶಾಸ್ತ್ರಿಗಳು ಅನ್ಯಮತೀಯನನ್ನು ಕರೆದು ತಮ್ಮ ಮನೆಯೊಳಗೆ ಊಟ ಹಾಕುವುದು ಸರಿಯಲ್ಲ ಸಂಪ್ರದಾಯಕ್ಕೆ, ಶಾಸ್ತ್ರಿಗಳ ವೈದಿಕತನಕ್ಕೆ ಅಪಚಾರ ಎಂದು ಆಕ್ಷೇಪಿಸಿದರು. ಆ ಕಾಲ ಹಾಗಿತ್ತು. ಈಗ ಹಾಗಿಲ್ಲ ಎನ್ನಿ. ಈ ಆಕ್ಷೇಪಣೆ ಕರ್ಣಾಕರ್ಣಿಕೆಯಾಗಿ ದೇವುಡು ಅವರ ಕಿವಿಗೆ ಬಿತ್ತು. ಆಗ ಬೆಂಗಳೂರು ಶಂಕರಮಠದಲ್ಲಿ ವೇದಾಭ್ಯಾಸ ಮಾಡುತ್ತಿದ್ದ ಶಾಸ್ತ್ರಿಗಳು ತಮಗೆ ಮೀಮಾಂಸಾ ಶಾಸ್ತ್ರ ಬೋಧಿಸುತ್ತಿದ್ದ ಪ್ರಕಾಂಡಪಂಡಿತ ಪರಿಶುದ್ಧ ಸಂಪ್ರದಾಯವಾದಿ ಸನಾತನ ಮಾನವಧರ್ಮಾಚಾರ್ಯ, ಮೀಮಾಂಸಾರತ್ನ ಪರಮಪೂಜ್ಯ ವೈದ್ಯನಾಥ ಶಾಸ್ತ್ರಿಗಳನ್ನು ತಮ್ಮ ಗುರುಗಳನ್ನು ಈ ಬಗ್ಗೆ ಏನು ಮಾಡಬೇಕೆಂದು ಕೇಳಿದರು. ಆಗ ಶಿಷ್ಯನಿಗೆ ವೈದ್ಯನಾಥಶಾಸ್ತ್ರಿಗಳು ಹೇಳಿದ ಮಾತುಗಳು ಇಂದಿಗೂ ಆದರ್ಶಪ್ರಾಯವಾಗಿದೆ; ಅಂಥಾ ಕಟ್ಟಾವೈದಿಕ ಸಂಪ್ರದಾಯವಾದಿ ಆದರೆ ನಿಜವಾದ ಮಾನವತಾವಾದಿ ವೈದ್ಯನಾಥಶಾಸ್ತ್ರಿಗಳು ಶಾಸ್ತ್ರಿಗಳಿಗೆ ಹೇಳಿದ ಮಾತಿದು: "ಕ್ರಿಸ್ತನು ನಿಮ್ಮ ಮನೆಗೆ ಬಂದಿದ್ದರೆ ಹೇಗೆ ಗೌರವಿಸಿ ಸ್ವಾಗತಿಸುತ್ತಿದ್ದೆಯೋ ಹಾಗೆಯೇ ಮಾಡು" ಈ ಮಾತನ್ನು ದೇವುಡು ಅವರು ತಮ್ಮ ನೋಟ್ ಬುಕ್ಕಿನಲ್ಲಿ ಸ್ವಹಸ್ತಾಕ್ಷರದಲ್ಲಿ ಬರೆದಿಟ್ಟಿದ್ದಾರೆ.

ಅನಂತರ ಗುರುಭಕ್ತರಾದ ದೇವುಡು ಅವರು ಉತ್ತಂಗಿಯವರನ್ನು 'ಅತಿಥಿ ದೇವೋಭವ' ಎಂಬ ಉಪನಿಷತ್ತಿನ ವಾಕ್ಯದಂತೆ, ಅತಿಥಿಯನ್ನು ದೇವರೆಂದು ಭಾವಿಸಿ ಸ್ವಾಗತಿಸಿ ಸತ್ಕರಿಸಿದರು. ಅರ್ಘ್ಯಪಾದ್ಯಾದಿಗಳಿಂದ ಬರಮಾಡಿಕೊಂಡು ಕುಶಲ ವಿಚಾರಿಸಿ ದೇವರನ್ನು ನಮ್ಮಲ್ಲಿ ಪೂರ್ವಾಭಿಮುಖವಾಗಿ ಕೂಡಿಸುತ್ತೇವೆ. ಹಾಗೆ ಉತ್ತಂಗಿ ಅವರನ್ನು ದೇವದಿಕ್ಕಿನಲ್ಲಿ ಊಟಕ್ಕೆ ಪೂರ್ವಾಭಿಮುಖವಾಗಿ ಕೂಡಿಸಿದರು. ನಮ್ಮ ಮನೆಗೆ ಇಂದು ಸಾಕ್ಷಾತ್ ಏಸುಕ್ರಿಸ್ತನೇ ನಿಮ್ಮ ರೂಪದಲ್ಲಿ

ಬಂದಿದ್ದಾನೆ ಎಂದರು. ಆಗ ಉತ್ತಂಗಿ ಹೇಳಿದರು. ನಾನು ಏಸುಭಕ್ತ ಅಷ್ಟೆ, ಏಸು ಪ್ರತಿನಿಧಿ ಅಲ್ಲ. ಅದಕ್ಕೆ ದೇವುಡು ಹೇಳಿದರು. ನಮ್ಮಲ್ಲಿ ಭಗವಂತ ಭಕ್ತ ಪರಾಧೀನ. ಭಕ್ತನ ಮೂಲಕ ಭಗವಂತನ ಸಾನ್ನಿಧ್ಯ ಕಾಣುವುದು ನಮ್ಮ ಸಂಪ್ರದಾಯ ಪದ್ಧತಿ. ಅದಕ್ಕೇನೆ ದೇವಸ್ಥಾನಗಳಲ್ಲಿ ಗರುಡಗಂಭ ಅಥವಾ ನಂದಿಯನ್ನು ದರ್ಶಿಸಿದನಂತರವೇ ವಿಷ್ಣು ಅಥವಾ ಶಿವನ ದರ್ಶನ" ಎಂದರು. ದೇವುಡು ಅವರು ವೇದಸಾಹಿತ್ಯದ ಹಾಗೇ ಕ್ರಿಸ್ತಸಾಹಿತ್ಯವನ್ನು ಬೈಬಲ್ಲನ್ನು ಚೆನ್ನಾಗಿ ಅಭ್ಯಾಸ ಮಾಡಿದವರಾಗಿದ್ದರು. ಧರ್ಮ ತಿಳಿಯಲು ಕುಲಜಾತಿ ಭೇದಗಳಿಲ್ಲ, ಯೇಸು, ವಿಚಾರಣೆ ಮುಂತಾದ ಕ್ರಿಸ್ತನನ್ನು ಕುರಿತ ನಾಟಕಗಳನ್ನು ಕನ್ನಡದಲ್ಲಿ ದೇವುಡು ರಚಿಸಿದ್ದಾರೆ. ಸರ್ವಧರ್ಮ ಸಮಭಾವವನ್ನು ಭಾಷಣ ಲೇಖನಗಳಿಗೆ ಮೀಸಲಿಟ್ಟವರಲ್ಲ ಆಚರಣೆಯಲ್ಲಿ ತಂದುಕೊಂಡವರು ದೇವುಡು ಅವರು.

ದೇವುಡು ಅವರು ವೇದಶಾಸ್ತ್ರಸಂಪನ್ನ ರಾಜಪುರೋಹಿತರ ಮನೆತನಕ್ಕೆ ಸೇರಿದವರು. ದೇವುಡು ಎಂಬುದು ಮನೆತನದ ಹೆಸರು. ಈ ಮನೆತನದಲ್ಲಿ ಹತ್ತಾರು ಮಂದಿ ಹಿರಿಯರು ವಿದ್ವಾಂಸರು ಆಗಿ ಹೋಗಿದ್ದಾರೆ. ಈ ವಂಶದಲ್ಲಿ ಪೂರ್ವಿಕರಲ್ಲಿ ಯಾರೋ ಒಬ್ಬರಿಗೆ ದೇವರು ಪ್ರತ್ಯಕ್ಷವಾಗಿದ್ದನಂತೆ! ಅದರಿಂದ ದೇವುಡು ಎಂಬ ಹೆಸರು ಮನೆತನಕೆ ಬಂದಿತಂತೆ! ಇಂಥ ಭವ್ಯ ಪರಂಪರೆಯ ಮನೆತನಕ್ಕೆ ಸೇರಿದ ದೇವುಡು ಅವರು ಹುಟ್ಟಿದ್ದು ೨೯ ಡಿಸೆಂಬರ್ ೧೮೯೧ರಲ್ಲಿ ಸುಬ್ಬಮ್ಮ ಕೃಷ್ಣಶಾಸ್ತ್ರಿ ದಂಪತಿಗಳಿಗೆ ಎರಡನೆಯ ಮಗನಾಗಿ ಜನಿಸಿದರು. ಹೆಂಡತಿ ಗೌರಮ್ಮ ಸಾಧ್ವೀ ಶಿರೋಮಣಿ ಆದರ್ಶ ಸತಿ. ೬ ಜನ ಹೆಣ್ಣುಮಕ್ಕಳು ೩ ಜನ ಗಂಡು ಮಕ್ಕಳು. ಗಂಡು ಮಕ್ಕಳ ಪೈಕಿ ಮೊದಲ ಮಗ ರಾಮು ಕುವೆಂಪು ಅವರ ಪ್ರಿಯಶಿಷ್ಯ ಪ್ರತಿಭಾವಂತ ಸಾಹಿತಿ ಆಗಿದ್ದರು. ಗಂಗಾಧರ, ಸದಾಶಿವ, ಉದ್ಯಮರಂಗದಲ್ಲಿ ಪ್ರಸಿದ್ಧರಾಗಿದ್ದಾರೆ. ತುಂಬುಸಂಸಾರದ ಸದ್ಗೃಹಸ್ಥ ದೇವುಡು ಈಸಬೇಕು ಇದ್ದು ಜೈಸಬೇಕು ಎಂಬಂತೆ ಸಂಸಾರದಲ್ಲೇ ಸಂನ್ಯಾಸಿಗಳಾಗಿ, ಅವಧೂತರಾಗಿ, ವೇದಾಂತಿಗಳಾಗಿ, ಸಾಹಿತಿಗಳಾಗಿ ಸಾರ್ವಜನಿಕ ಸೇವಾಧುರಂಧರರಾಗಿ ಬಾಳಿದರು. ಬಸವಣ್ಣನವರು ಹೇಳುವಂತೆ ಇಲ್ಲಿಯೂ ಸಲ್ಲುವವರು ಆದರು; ಅಲ್ಲಿಯೂ ಸಲ್ಲುವವರಾದರು.

ದೇವುಡು ಅವರು ವಿದ್ಯಾರ್ಥಿ ಜೀವನದಲ್ಲಿದ್ದಾಗಲೇ ಪ್ರತಿಭಾವಂತ ರಾಗಿದ್ದರು. ಜ್ಞಾನದಾಹಿಗಳಾಗಿದ್ದರು ಪ್ರಚಂಡ ವಿದ್ಯಾರ್ಥಿ ಎನಿಸಿದ್ದರು. ಆಟ

ಪಾಟಗಳಲ್ಲಿ ಗ್ರಂಥಾಭ್ಯಾಸಗಳಲ್ಲಿ ಜತೆಯವರನ್ನೆಲ್ಲ ಮೀರಿಸಿದ್ದರು. ಮೈಸೂರಿನಲ್ಲಿ ಆಗ ಅವರಿಗಿದ್ದ ಸಾಹಿತ್ಯಕ, ಸಾಮಾಜಿಕ, ಕೌಟುಂಬಿಕ ಧಾರ್ಮಿಕ ವಾತಾವರಣ ಇವರನ್ನು ರೂಪಿಸಿತು. ಅವರು ಮಾಧ್ಯಮಿಕಶಾಲೆಯ ವಿದ್ಯಾರ್ಥಿ ಆಗಿದ್ದಾಗ ಒಂದು ಘಟನೆ ನಡೆಯಿತು.

ಮೈಸೂರಿನಲ್ಲಿ ಅವರಿದ್ದ ಬೀದಿಯಲ್ಲಿ ಸಂಧ್ಯಾಸಂಘವೆಂಬ ಮಹಿಳಾ ಸಂಘವೊಂದಿತ್ತು. ಅಲ್ಲಿ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಮಹಿಳೆಯರು ಸೇರಿ ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದರು. ಕುಶಾಗ್ರಮತಿ ಬಾಲಕ ದೇವುಡು ಅಲ್ಲಿಗೆ ಹೋಗುತ್ತಿದ್ದರು. ಅವನ ಕೈಲಿ ಹಾಡುಗಳನ್ನು ಹೇಳಿ ಬರೆಯಿಸುತ್ತಿದ್ದರು. ಒಮ್ಮೆ ಆ ಸಂಘದಲ್ಲಿ ಚರ್ಚೆಗೆ ಸವಾಲು ಹೀಗಿತ್ತು: ಕೃಷ್ಣನು ಕೊಳಲು ಊದಿದಾಗ ಬೃಂದಾವನದಲ್ಲಿ ಇದ್ದ ಒಣಗಿದ ಗಿಡ ಮರಗಳೆಲ್ಲ ಚಿಗುರಿದವಲ್ಲ. ಅವನ ಕೈಲಿದ್ದ ಬಿದಿರಿನ ಕೊಳಲು ಒಣಗಿದ್ದು ತಾನೇ ಅದೇಕೆ ಚಿಗುರಲಿಲ್ಲ?

ಆಗ ಆ ಮಹಿಳಾ ಮಣಿಗಳ ನಡುವೆ ಇದ್ದ ಬಾಲಕ ದೇವುಡು ಹೇಳಿದ; ಇದೇನು ಮಹಾ ದೊಡ್ಡ ಪ್ರಶ್ನೆ. "ತಾನು ಚಿಗುರಿದರೆ ತನ್ನನ್ನು ಕೃಷ್ಣ ಎಸೆದು ಬಿಡುತ್ತಾನೆ ಏಕೆಂದರೆ ನುಡಿಸಲು ಬರುವುದಿಲ್ಲವಲ್ಲಾ ಎಂದು ಕೃಷ್ಣನ ಕೈಲಿದ್ದ ಕೊಳಲು ಹೆದರಿಕೊಂಡು ಚಿಗುರಲಿಲ್ಲ."

ಮಾಧ್ಯಮಿಕ ವಿದ್ಯಾರ್ಥಿ ಆಗಿದ್ದಾಗಲೇ ರಾಮಾಯಣ, ಭಾರತ, ಭಾಗವತ ಬ್ರಹ್ಮಾಂಡ ಪುರಾಣಗಳನ್ನು ಇತರರಿಗೆ ಓದಿ ಹೇಳುವುದರ ಮೂಲಕ ಪರಿಚಯ ಮಾಡಿಕೊಂಡ ದೇವುಡು ಹೈಸ್ಕೂಲ್ ವಿದ್ಯಾರ್ಥಿ ಆಗುವ ವೇಳೆಗೆ ಕನ್ನಡ ಪರಿಣತ ಆಗಿದ್ದರು. ಶಬ್ದಮಣಿದರ್ಪಣ, ನಾಗವರ್ಮನ ಛಂದೋಂಬುಧಿ ಮುಂತಾದ ಗ್ರಂಥಗಳನ್ನು ಅರಗಿಸಿಕೊಂಡು, ಎಫ್.ಎ. ಬಿ.ಎ ವಿದ್ಯಾರ್ಥಿಗಳಿಗೆ ಈ ಹೈಸ್ಕೂಲು ಬಾಲಕ ಪಾಠ ಹೇಳುತ್ತಿದ್ದ.

೧೯೧೨ರ ವೇಳೆಗೆ ವಿದ್ಯಾರ್ಥಿ ದೆಸೆಯಲ್ಲೇ ಸಾಹಸವರ್ಮ ಎಂಬ ಕಾದಂಬರಿ ಬರೆದಿದ್ದರು, ರತ್ನಾವಳಿ, ಕಂಸ ವಿಜಯ ನಾಟಕಗಳನ್ನು ಬರೆದ ರಾಜಕವಿ ಶ್ರೀನಿವಾಸ ಅಯ್ಯಂಗಾರ್ ಅವರಿಂದ ನಾಟಕ ರಚನೆ, ಪದ್ಯ ರಚನೆ ಕಲಿತು ನಾಟಕ ಬರೆದು ಹುಡುಗರಿಂದ ಆಡಿಸಿದ್ದರು. ಪ್ರತಿಭಾವಂತ ಬಾಲಸಾಹಿತಿ ಎನಿಸಿ ಕೊಂಡಿದ್ದರು.

೧೯೧೭ರಿಂದ ೧೯೨೫ ವರೆಗೆ ಕಾಲೇಜು ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿ ಗಳಿಸಿದ ದೇವುಡು ಅವರು ವಿಸೀ ಅವರ ಸಹಪಾಠಿಗಳಾಗಿದ್ದರು. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಸಾಹಿತ್ಯ, ವೇದಾಂತಗಳಲ್ಲಿ ಕನ್ನಡ ತೆಲುಗು, ಇಂಗ್ಲಿಷ್-ಸಂಸ್ಕೃತಗಳಲ್ಲಿ ಚತುರ್ಭಾಷಾ ಪಂಡಿತರಾಗಿದ್ದು ಆ ಕಾಲದ ಅದ್ಭುತ ವಾಗ್ಝರಿಯ ವಾಗ್ಮಿಗಳಲ್ಲಿ ಒಬ್ಬರಾಗಿದ್ದರು. ೧೯೨೫ರ ವೇಳೆಗೆ ಮೈಸೂರಿನಲ್ಲಿ ಸದ್ವಿದ್ಯಾ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಉದ್ಯೋಗಿಗಳಾದ ಅವರು ತಿರುಮಲೆ ತಾತಾಚಾರ್ಯ ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮರ ಕರೆ ಮೇರೆಗೆ ಬೆಂಗಳೂರಿಗೆ ಬಂದರು. ಅನಂತರ ಜೀವನ ಪರ್ಯಂತ ೨೭-೧೦-೧೯೬೨ರಲ್ಲಿ ನಿಧನರಾಗುವವರೆಗೆ ಬೆಂಗಳೂರು ವಾಸಿಗಳೇ ಆಗಿದ್ದರು.

ಬೆಂಗಳೂರಿಗೆ ಬರುವ ಮುಂಚೆ ಸ್ವಲ್ಪಕಾಲ ಶೃಂಗೇರಿಮಠದ ಸೇವೆಯಲ್ಲಿದ್ದರು. ಆಗ ಸ್ವತಂತ್ರಪ್ರವೃತ್ತಿಯ ಸ್ವಾಭಿಮಾನಿದೇವುಡು ಕಲಿತ ಪಾಠವೆಂದರೆ "ಯಾರ ಕೈ ಕೆಳಗೂ ಕೆಲಸ ಮಾಡಬಾರದು ಹಾಗೆ ಮಾಡುವುದು ನನ್ನ ಜಾಯಮಾನವಲ್ಲ" ಈ ನಿರ್ಧಾರದಿಂದ ಅವರು ಮುಂದೆ ಜೀವನದಲ್ಲಿ ಎಂಥೆಂಥ ಉನ್ನತಹುದ್ದೆಗಳನ್ನು ಅಲಂಕರಿಸುವ ಸುವರ್ಣಾವಕಾಶಗಳು ಬಂದರೂ ಅವುಗಳನ್ನು ಸ್ವೀಕರಿಸಲಿಲ್ಲ. ಒಂಟಿ ಸಲಗದಂತೆ ಸ್ವತಂತ್ರರಾಗಿಯೇ ಉಳಿದರು. ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ದೇವುಡು ಅವರ ಸಲಹೆ ಮೇರೆಗೆ ಸ್ಥಾಪಿಸಿದಾಗ ಅದಕ್ಕೆ ಅವರೇ ನಿರ್ದೇಶಕರಾಗಲು ಸೂಚಿಸಿದರು. ಆದರೆ ದೇವುಡು ಅವರು ಸಿ.ಕೆ. ವೆಂಕಟರಾಮಯ್ಯನವರನ್ನು ಆ ಜಾಗಕ್ಕೆ ಸೂಚಿಸಿದರು.

ದೇವುಡು ಅವರು ಶಿಕ್ಷಣತಜ್ಞರು, ಮಕ್ಕಳಪ್ರೇಮಿ; ಮಕ್ಕಳಸಾಹಿತಿಯಾಗಿ ಬಾಳನ್ನು ಕಳೆದವರು. ಆದರ್ಶ ಅಧ್ಯಾಪಕರು ಅವರು. ಅವರ ಮಕ್ಕಳಪ್ರೇಮ ಎಷ್ಟಿತ್ತು ಎಂದರೆ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಬರುತ್ತಿದ್ದಾಗಲೆಲ್ಲ ತಾವಾಗಿ ಮಕ್ಕಳಕೂಟಕ್ಕೆ ಬಂದು ಮಕ್ಕಳಿಗೆ ಕಥೆ ಹೇಳುತ್ತಿದ್ದರು. ಈ ರೀತಿ ಮಕ್ಕಳ ಸಾಹಿತಿಗಳು ತಾವಾಗಿ ಬಂದು ಮಕ್ಕಳಿಗೆ ಕಥೆ ಪದ್ಯ, ನಾಟಕ ಹೇಳುತ್ತಿದ್ದವರು ಜಿ.ಪಿ.ರಾಜರತ್ನಂ, ಬಿ.ಶ್ರೀ. ಪಾಂಡುರಂಗರಾವ್ ಮತ್ತು ಹೊಯಿಸಳ ಅವರು. ೧೯೩೦ರಲ್ಲಿ ಒಮ್ಮೆ ದೇವುಡು ಅವರು ಕನ್ನಡ

ಸಾಹಿತ್ಯ ಪರಿಷತ್ತಿನ ಬಳಿ ನಿಂತಿದ್ದರು. ಆಗ ಅಲ್ಲೊಂದು ವಿದ್ಯಾರ್ಥಿಗಳ ಮೆರವಣಿಗೆ ಬರುತ್ತಿತ್ತು. ಬೆಂಗಳೂರಿನ ನ್ಯಾಷನಲ್ ಸ್ಕೂಲ್ ಅದುವರೆಗೆ ಹೊಸತರಗು ಪೇಟೆ (ಮಂಡಿಪೇಟೆ)ಯಲ್ಲಿ ಬಾಡಿಗೆ ಕಟ್ಟಡದಲ್ಲಿತ್ತು. ಈಗಿರುವ ನ್ಯಾಷನಲ್ ಸ್ಕೂಲಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿ ಅಲ್ಲಿಗೆ ಶಾಲೆಯನ್ನು, ಬದಲಾಯಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲ ಸರಸ್ವತಿಪಟ ಹಿಡಿದು ಮಂಗಳವಾದ್ಯಗಳೊಡನೆ ಶಾಲೆಯ ಸಾಮಗ್ರಿ ಹೊತ್ತು ಹೊಸ ಕಟ್ಟಡಕ್ಕೆ ಮೆರವಣಿಗೆ ಹೊರಟಿದ್ದರು.

ಪರಿಷತ್ತಿನ ಮುಂದೆ ವಿದ್ಯಾರ್ಥಿಗಳ ಮೆರವಣಿಗೆ ಬಂದಾಗ ದೇವುಡು ಅವರಿಗೆ ವಿಷಯ ತಿಳಿಯಿತು. ಓದುವ ಮಕ್ಕಳಿಗೆ ಸ್ವಂತ ಮನೆ–ಕಟ್ಟಡ ಸಿಕ್ಕಿತಲ್ಲಾ ಎಂಬ ಸಂತೋಷದಿಂದ ಆನಂದಪರವಶರಾದರು ಅವರಿಗೆ ಸಂತೋಷ ಎಷ್ಟು ಉಕ್ಕಿ ಹರಿಯಿತು ಎಂದರೆ ಜತೆಯಲ್ಲಿದ್ದ ಮಿತ್ರರಿಗೆ ಹೇಳಿದರು. "ನಮಗೆ ಮನೆ ಇದ್ದರೆ ನಮ್ಮ ಮಕ್ಕಳಿಗೆ ಸಂತೋಷ. ಶಾಲೆಗೆ ಕಟ್ಟಡ ಸಿಕ್ಕರೆ ದೇಶದ ಎಲ್ಲ ಮಕ್ಕಳಿಗೆ ಸಂತೋಷ, ನಾಡಿಗೆ ಭಾಗ್ಯ. ಇದಕ್ಕಿಂತ ಆನಂದ ಇನ್ನೇನಿದೆ? ಹೇಳಿ" ಎಂದವರೇ ಅಲ್ಲೇ ರಸ್ತೆ ಬದಿಯಲ್ಲಿ ಕೈಗಾಡಿ ತುಂಬ ದ್ರಾಕ್ಷಿಯನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಯನ್ನು ಕಂಡು, ಎಷ್ಟು ಬುಟ್ಟಿ ದ್ರಾಕ್ಷಿ ಇದೆ ಎಂದು ಕೇಳಿ ಅವನಲ್ಲಿದ್ದ ಬುಟ್ಟಿಗಳ ದ್ರಾಕ್ಷಿಯಷ್ಟನ್ನೂ ಕೊಂಡು, ಗಾಡಿಯನ್ನೇ ಖಾಲಿ ಮಾಡಿದರು. ಆ ಬುಟ್ಟಿ ಬುಟ್ಟಿ ದ್ರಾಕ್ಷಿಯನ್ನು ವಿದ್ಯಾರ್ಥಿಗಳಿಗೆಲ್ಲ ಕೈತುಂಬ ಹಂಚಿ ಸಂತೋಷಪಟ್ಟವರು ದೇವುಡು ಅವರು. ಆದರ್ಶ ವಿದ್ಯಾರ್ಥಿಪ್ರೇಮಿ ಆದ ಅವರು ಆದರ್ಶ ಶಾಲಾಸ್ಥಾಪಕರೂ ಹೌದು. ೧೯೪೨ರಲ್ಲಿ ಗಾಂಧೀನಗರ ಪ್ರೌಢಶಾಲೆ ಸ್ಥಾಪಿಸಿದರು. ಬೆಟಗೇರಿ ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗ, ಹೆಚ್.ಎಸ್. ದೊರೆಸ್ವಾಮಿ ಮೊದಲಾದ ಪ್ರಸಿದ್ಧರೆಲ್ಲ ಅಲ್ಲಿ ಅಧ್ಯಾಪಕರಾಗಿ ದೇವುಡು ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಸೇವೆ ಸಲ್ಲಿಸಿದ್ದಾರೆ.

ಪಠ್ಯಪುಸ್ತಕ ಸಮಿತಿಗಳಲ್ಲಿದ್ದು ಪಠ್ಯಪುಸ್ತಕ ರಚಿಸಿದ್ದಾರೆ. ಸಂಸ್ಕೃತ ಕಲಿಯುವ ಇಂಗ್ಲಿಷ್ ಕನ್ನಡ ಕಲಿಯುವ ವಿನೂತನ ಗ್ರಂಥಗಳನ್ನು, ಭಾಷಾಂತರ ಗ್ರಂಥಗಳನ್ನು ರಚಿಸಿದ್ದಾರೆ. ಪರೀಕ್ಷಾ ಸಮಿತಿಗಳಲ್ಲಿ ಗ್ರಂಥ ಪ್ರಕಟನ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ನಾಡಿನಲ್ಲಿ ಶಿಕ್ಷಣರಂಗದಲ್ಲಿ ಆದರ್ಶ ರೀತಿಯಲ್ಲಿ ಶಿಕ್ಷಣರಂಗದಲ್ಲಿ ಸೇವೆ ಸಲ್ಲಿಸಿದ ಶಿಕ್ಷಣತಜ್ಞರಲ್ಲಿ ದೇವುಡು ಅವರ ಕೊಡುಗೆ ಅನನ್ಯವಾದುದು.

ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕೆ ನಡೆಸಿ, ಸಂಘ ಕಟ್ಟಿ, ಮಕ್ಕಳೊಡನೆ ಬೆರೆತು ಅವರಿಗೆ ಕಥೆ ಹೇಳಿ, ಪದ್ಯ ಹಾಡಿ, ನಾಟಕ ಬರೆದು, ಮಕ್ಕಳ ನಡುವೆ ಮಕ್ಕಳಾಗಿ ಮಕ್ಕಳಿಗೆ ಸೇವೆ ಸಲ್ಲಿಸಿದ ಮಹಿಳಾ ಸಾಹಿತಿಗಳಲ್ಲಿ ಶ್ರೀಮತಿ ಆರ್. ಕಲ್ಯಾಣಮ್ಮ ನವರು ಪುರುಷ ಸಾಹಿತಿಗಳಲ್ಲಿ ದೇವುಡು ಅವರು ಅಗ್ರಗಣ್ಯರು. ದೇವುಡು ಅವರು ಬರೆದ ೧೦೦ಕ್ಕೂ ಹೆಚ್ಚು ಕಥೆಗಳ ಮಕ್ಕಳ ಪುಸ್ತಕಗಳನ್ನು ಓದಿ ಬೆಳೆದವರು ಇಂದಿನ ಕಾಲದ ಎಲ್ಲ ಹಿರಿಯರು ಸಾಹಿತಿಗಳು ಗಣ್ಯರು ಆಗಿದ್ದಾರೆ. ಅವರ ದೇಶಾಂತರ ಕಥೆಗಳು, ಬುದ್ಧಿಯ ಕಥೆಗಳು ಮಂಗಪ್ಪಾಜಿ ಪುರಾಣ ಯವನ ಪುರಾಣ, ಭೀಮಸೇನ ಬೆಕ್ಕು, ಕಂದನ ಕಥೆಗಳು ಮುಂತಾದವನ್ನು ಓದಿ ನಕ್ಕು ನಲಿಯದ ಮಕ್ಕಳೇ ಆ ಕಾಲದಲ್ಲಿ ಇರಲಿಲ್ಲ.

ಯುವಕರಾದವರಿಗೆ ರಾಮಾಯಣದ ಮಹಾಪುರುಷರು ಭಾರತದ ಮಹಾಪುರುಷರು, ಪಂಚತಂತ್ರ, ಕಥಾಸರಿತ್ಸಾಗರ ಗ್ರಂಥಗಳು ಖುಷಿ ಮೇಲೆ ಖುಷಿ ಕೊಟ್ಟವು.

ಹಿರಿಯರಿಗಂತೂ ಅವರ ಕಾದಂಬರಿಗಳು ರಸಗವಳಗಳಾಗಿದ್ದವು. ಅಂತರಂಗ, ಮಯೂರ, ಮಲ್ಲಿ, ಚಿನ್ನ, ಡಾ. ವೀಣಾ, ಮಹಾಬ್ರಾಹ್ಮಣ ಮಹಾಕ್ಷತ್ರಿಯ, ಮಹಾದರ್ಶನ ಕಾದಂಬರಿಗಳನ್ನು ಒಂದು ಸಲ ಅಲ್ಲ ಹತ್ತಾರು ಸಲ ಓದಿದ ಓದುಗರೇ ಹೆಚ್ಚು. ಮಹಾಬ್ರಾಹ್ಮಣ ಕಾದಂಬರಿಯಂಥ ಕಾದಂಬರಿ ಕನ್ನಡದಲ್ಲೇ ಇನ್ನೊಂದಿಲ್ಲ. ಅಂಥ ರೀತಿಯಲ್ಲಿ ನಾನೊಂದು ಕಾದಂಬರಿ ಬರೆಯಬೇಕೆಂಬ ಆಸೆಯಿಂದ ಬೆಳಕು ತಂದ ಬಾಲಕ ಎಂಬ ನಚಿಕೇತನನ್ನು ಕುರಿತು ತ.ರಾ.ಸು ಕಾದಂಬರಿ ಬರೆದಾಗ ಹೆಜ್ಜೆ ಹೆಜ್ಜೆಗೂ ದೇವುಡು ಅವರಿಂದ ಆಶೀರ್ವಾದ ಮಾರ್ಗದರ್ಶನ ಪಡೆದು ಬರೆದರು. ಧಾರ್ಮಿಕ ಕಾದಂಬರಿ ಬರೆಯುವವರಿಗೆ ಪರಮಗುರು ದೇವುಡು. 'ಮಕ್ಕಳ ಪುಸ್ತಕ' ಮತ್ತು 'ನಮ್ಮ ಪುಸ್ತಕ' ಪತ್ರಿಕೆ ಮೂಲಕ ಮಕ್ಕಳಿಗೆ ಅವರು ಸಲ್ಲಿಸಿದ ಸೇವೆ ಇಂದಿಗೂ ನಮ್ಮ ಜನರಿಗೆ ಮಾದರಿ ಆಗಿದೆ. ದೇವುಡು ಅವರು ಮಕ್ಕಳ ಪತ್ರಿಕೆ ಹೊರಡಿಸಿದ ಹಾಗೆ ನಮ್ಮ ನಾಡಿನಲ್ಲಿ ಯಾರೂ ಹೊರಡಿಸಿಲ್ಲ ಎಂದರೆ ಸತ್ಯದ ಮಾತು. ಅವರು ನಮ್ಮ ಪುಸ್ತಕ ಮಾಸಪತ್ರಿಕೆಯಲ್ಲಿ ೩ ಭಾಗ ಮಾಡಿದ್ದರು. ಬಾಲಕರ ವಿಭಾಗ ವಿದ್ಯಾರ್ಥಿ ವಿಭಾಗ, ತಾಯಿತಂದೆ ವಿಭಾಗ, ಚಿಕ್ಕ ಮಕ್ಕಳಿಗೆ ನರ್ಸರಿ ಮಕ್ಕಳಿಗೆ ಚಿತ್ರಕಥೆ ಅಕ್ಷರ ಪರಿಚಯ ಚಿತ್ರ ಲಿಪಿ ದಾರಿ ಹುಡುಕು ಪುಟ್ಟ ಕಥೆ ಚುಟುಕ ಪದ್ಯ ಇತ್ಯಾದಿ ಇರುತ್ತಿದ್ದವು. ಪ್ರೌಢಶಾಲಾ ವಿದ್ಯಾರ್ಥಿ ವಿಭಾಗದಲ್ಲಿ ಕಥೆ, ಪದ್ಯ,

ನಾಟಕ, ಪ್ರಬಂಧ, ವಿಜ್ಞಾನ, ಶಿಕ್ಷಣ ಲೇಖನಗಳಿರುತ್ತಿದ್ದವು. ತಾಯಿ ತಂದೆ ವಿಭಾಗದಲ್ಲಿ ಮಕ್ಕಳ ಬಗ್ಗೆ ಶಿಕ್ಷಣದ ಬಗ್ಗೆ ತಾಯಿ ತಂದೆಯರ ಕರ್ತವ್ಯದ ಬಗ್ಗೆ ಲೇಖನಗಳಿರುತ್ತಿದ್ದವು. ಹೀಗೆ ಸರ್ವಾಂಗ ಪೂರ್ಣವಾಗಿ ಮನೆ ಮಂದಿಗೆಲ್ಲ ಮಕ್ಕಳಿಂದ ಕುಟುಂಬದ ಹಿರಿಯರಿಗೆಲ್ಲ ಬೇಕಾಗಿದ್ದ ನಿಜವಾದ ಅರ್ಥದಲ್ಲಿ ಕೌಟುಂಬಿಕ ಮಕ್ಕಳ ಪತ್ರಿಕೆ ನಮ್ಮ ಪುಸ್ತಕ ಆಗಿತ್ತು. ಉದಾಹರಣೆಗೆ ಎಂಥ ನಾಗರಿಕ ಶಿಕ್ಷಣದ ಮಾತುಗಳು ಆ ಪತ್ರಿಕೆಯಲ್ಲಿ ತಾಯಿ ತಂದೆಯರಿಗೆ ಹೇಳುತ್ತಿದ್ದರು ಎಂದರೆ ೧೯೩೮ನೇ ಅಕ್ಟೋಬರ್ ನಮ್ಮ ಪುಸ್ತಕ ಸಂಚಿಕೆಯಲ್ಲಿ ಹೇಳಿದ ಮಾತುಗಳನ್ನು ಗಮನಿಸಬೇಕು.

"ಮಕ್ಕಳಿಗೆ ಮೊದಲಿನಿಂದಲೂ ಕಸವನ್ನು ಬಿಸಾಡುವುದರ ವಿಚಾರವಾಗಿ ಪಾಠ ಕಲಿಸಬೇಕು. ಮನೆಯಲ್ಲಿ ಒಂದು ಕಡೆ ಒಂದು ಪುಟ್ಟಿಯನ್ನು ಇಟ್ಟು, ಮನೆಯಲ್ಲಿ ಎಲ್ಲಿ ಕಸ ಬಿದ್ದರೂ ಆ ಪುಟ್ಟಿಗೆ ಹಾಕಬೇಕು. ಮನೆಯ ಪುಟ್ಟಿ ಕಸವನ್ನು ಬೀದಿ ಕಸವನ್ನು ರಸ್ತೆಯ ತೊಟ್ಟಿ ಒಳಗೆ ಹಾಕಿಸಬೇಕು. ಮನೆಯಲ್ಲಿ ಬುಟ್ಟಿಗೆ ಕಸ ಬೀದಿಯಲ್ಲಿ ತೊಟ್ಟಿಗೆ ಕಸ ಹಾಕಿಸುವುದನ್ನು ಮಕ್ಕಳಿಗೆ ಕಲಿಸಿದರೆ ಮುಂದಿನ ತಲೆಮಾರಿನವರಿಗೆ ಉಪಕಾರ ಮಾಡಿದಂತಾಗುತ್ತದೆ. ನಾಡಿನ ಋಣ ತೀರುತ್ತದೆ. ಊರಿನ ನೈರ್ಮಲ್ಯ, ಗೃಹನೈರ್ಮಲ್ಯ ಕಾಪಾಡಿ ಆರೋಗ್ಯ ರಕ್ಷಣೆ ಮಾಡುವುದು ಎಲ್ಲರದು. ಎಲ್ಲರಿಗೂ ಸೇರಿದ ಕೆಲಸವನ್ನು ಯಾರೂ ಅದು ನನ್ನ ಕೆಲಸ ಅಲ್ಲ ಎನ್ನಬಾರದು." ಇನ್ನು ಅವರು ಈ ಪತ್ರಿಕೆ ಮೂಲಕ ಹಾಗೂ ತಾವೇ ಶಿಬಿರಗಳನ್ನು ನಡೆಸಿ ಮಾಡಿದ ಸಾಕ್ಷರತಾ ಪ್ರಚಾರ ಇಂದಿಗೂ ಮಾದರಿ ಆಗಿದೆ. ಅವರು ಮತ್ತು ಎಂಆರ್‌ಶ್ರೀ ಅವರು ನಮ್ಮ ನಾಡಿನಲ್ಲಿ ಅಕ್ಷರ ಪ್ರಚಾರವನ್ನು ಕೈಗೊಂಡ ಹಾಗೆ ಇನ್ನಾರೂ ಆ ಪ್ರಮಾಣದಲ್ಲಿ ನಡೆಸಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ.

ಮೈಸೂರು ಅಕ್ಷರಪ್ರಚಾರ ಯೋಜನೆ ಮೂಲಕ ವಯಸ್ಕರ ಶಿಕ್ಷಣ ಪ್ರಾರಂಭಿಸಿದವರು ದೇವುಡು ಅವರು. ಮಕ್ಕಳಿಗೂ ಹಿರಿಯರಿಗೂ ಕೆಲವೇ ವಾರಗಳಲ್ಲಿ ಎಬದರಲ ಪದ್ಧತಿ ಮೂಲಕ ಎಂದರೆ ಎಬದರಲ ೫೫ ಅಕ್ಷರಗಳ ಕಲಿಕೆ ಮೂಲಕ ಕನ್ನಡ ಓದು ಬರಹ ಕಲಿಸುವ ವಿನೂತನ ಪದ್ಧತಿ ಕಂಡು ಹಿಡಿದು ನಾಡಿನಲ್ಲಿ ಸಾವಿರಾರು ಜನರನ್ನು ಅಕ್ಷರಸ್ಥರನ್ನಾಗಿ ಮಾಡಿದ ಹಿರಿಮೆ ದೇವುಡು ಅವರದು. ಅಕ್ಷರ, ಚಿತ್ರ, ಪದ, ವಾಕ್ಯ ಸಂಯೋಜನೆಯಲ್ಲಿ ಅವರು ಕನ್ನಡ ಕಲಿಸುವ ಪದ್ಧತಿಯನ್ನು ಅಳವಡಿಸಲು ಸ್ಥಾಪಿಸಿದ ಸಂಸ್ಥೆಯೇ

ವಯಸ್ಕರ ಶಿಕ್ಷಣ ಇಲಾಖೆ. ದೇವುಡು ಅವರು ಈ ಪದ್ಧತಿಯನ್ನು ಬಳಕೆಗೆ ತಂದಾಗ ಸರ್ಕಾರದ ಅಧಿಕಾರಿಗಳು ಆಗಿನ ಕ್ಲೋಸ್‌ಪೇಟೆ ಈಗಿನ ರಾಮನಗರದಲ್ಲಿ ೨೭-೧೧-೧೯೩೯ರಲ್ಲಿ ದೇವುಡು ನಡೆಸಿದ ಹಲವು ವಾರಗಳಲ್ಲಿ ಕನ್ನಡ ಕಲಿಸಿದ ಶಿಬಿರಗಳನ್ನು ಪರೀಕ್ಷಿಸಿದರು. ಆಗ ಕೊಟ್ಟ ವರದಿ ಹೀಗಿದೆ.

"ಕ್ಲೋಸ್ಪೇಟೆಯಲ್ಲಿ ಕ್ಲಾಸುಗಳು ನಡೆದುದು ೧೯೩೯ರ ಸೆಪ್ಟೆಂಬರ್ ಆದಿಭಾಗದಲ್ಲಿ ೧೫ ದಿನಗಳು ಮಾತ್ರ. ಅಲ್ಲಿ ಇಬ್ಬರು ಮೈಸೂರು ಪದ್ಧತಿಯ ರೀಡರುಗಳನ್ನು ಬಲು ಚೆನ್ನಾಗಿ ಓದಿದರು. ಚೆನ್ನಪಟ್ಟಣದಲ್ಲಿ ಒಬ್ಬನು ಅದುವರೆಗೆ ನೋಡದೆ ಇದ್ದ ಪುಸ್ತಕವನ್ನು ಓದಿದನು ಮತ್ತಿಕೆರೆಯಲ್ಲಂತೂ ಒಬ್ಬನು ಒಂದೂವರೆ ತಿಂಗಳು ಪಾಠವನ್ನು ಕಲಿತವನು ಡಿಪಾರ್ಟ್‌ಮೆಂಟಿನ ನಾಲ್ಕನೇ ರೀಡರನ್ನು ಧಾರಾಳವಾಗಿ ಓದಿದನು ೧೦ ದಿನಗಳು ಮಾತ್ರ ಕ್ಲಾಸಿಗೆ ಬಂದಿದ್ದವನು, ಮೈಸೂರು ಪದ್ಧತಿಯ ರೀಡರನ್ನು ದಡದಡನೆ ಓದಿದನು ೬ ದಿನ ಮಾತ್ರ ಶಿಬಿರಕ್ಕೆ ಬಂದಿದ್ದ ಹರಿಜನ ಬಾಲಕನು (೧೪ವರ್ಷ) ಬಾಲಬೋಧೆಯ ದಪ್ಪ ದಪ್ಪ ಅಕ್ಷರದ ಪಾಠಗಳನ್ನು ಓದಿದನು."

ಸರ್ಕಾರದವರು ನಾಡಿನಾದ್ಯಂತ ಶಿಬಿರಗಳನ್ನು ಮಾಡಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ದೇವುಡು ಅವರನ್ನು ಪ್ರಾರ್ಥಿಸಿದರು. ಇಂದು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಸರ್ಕಾರ ಸಂಸ್ಥೆಗಳು ದೇವುಡು ಅವರ ಮೈಸೂರು ಅಕ್ಷರಪ್ರಚಾರ ಪದ್ಧತಿಯನ್ನು ಜಾರಿಗೆ ತಂದರೆ ನಾಡಿಗೆ ಕೋಟ್ಯಂತರ ರೂ. ಉಳಿಯುತ್ತದೆ. ಕನ್ನಡ ನಾಡಿನ ಮಕ್ಕಳು ನಿಜಕ್ಕೂ ಸರಿಯಾಗಿ ತಪ್ಪಿಲ್ಲದೆ ಕನ್ನಡ ಕಲಿಯುತ್ತವೆ. ದೇವುಡು ಹೇಳಿದ ಮಾತು ನೆನೆಯಬೇಕು: "ಇಂದಿನ ಅಕ್ಷರ ಪ್ರಚಾರ ಮುಂದಿನ ಸಾಹಿತಿಗಳ ಕಾಮಧೇನು" "ಅಷ್ಟೇ ಅಲ್ಲ ನಾಡಿನ ಕಲ್ಯಾಣ ಅದರಲ್ಲಿ ಅಡಗಿದೆ. ದೇವುಡು ಅವರು ಕನ್ನಡಕ್ಕೆ ಶ್ರಮಿಸಿದಷ್ಟೇ ಸಂಸ್ಕೃತ ಭಾಷೆಗಾಗಿ ಶ್ರಮಿಸಿದ್ದಾರೆ. 'ಗೀತಾ ಪ್ರಚಾರ' ಅವರ ಜೀವನ ಧ್ಯೇಯಗಳಲ್ಲಿ ಒಂದಾಗಿತ್ತು. ಆಚಾರ್ಯತ್ರಯರ ಭಾಷ್ಯವುಳ್ಳ ಗೀತಾ ಗ್ರಂಥವನ್ನು ಉಚಿತವಾಗಿ ಉಡುಗೊರೆಯಾಗಿ ಪ್ರತಿಯೊಬ್ಬ ವಿಶ್ವವಿದ್ಯಾಲಯದ ಪದವೀಧರನಿಗೆ ನೀಡಬೇಕೆಂದು ಅವರ ಆಸೆ ಆಗಿತ್ತು. ಮಕ್ಕಳಿಂದ ಪಂಡಿತರವರೆಗೆ ಎಲ್ಲರಿಗೂ ಉಪಯುಕ್ತವಾಗುವ ಬೇರೆ ಬೇರೆ ಮಟ್ಟದ ಗೀತಾಗ್ರಂಥಗಳನ್ನು ರಚಿಸುವುದು ಅವರ ಹೆಬ್ಬಯಕೆ ಆಗಿತ್ತು. ಈ ರೀತಿ

ಪ್ರಯತ್ನ ಮಾಡಿದವರಲ್ಲಿ ಹೊಸಕೆರೆ ಚಿದಂಬರಯ್ಯ ಮತ್ತು ಆಲೂರು ವೆಂಕಟರಾಯರು ಗಣ್ಯರು. ದೇವುಡು ಆ ವಿಷಯದಲ್ಲಿ ಆದರ್ಶ ಪ್ರಾಯರು.

ಗೀತೆಯನ್ನು ಕೇವಲ ಪ್ರಚಾರಕ್ಕೆ ಅಲ್ಲ ಜೀವನದಲ್ಲೇ ಅನುಷ್ಠಾನ ಮಾಡಿದವರು ದೇವುಡು ಅವರು. ಇದಕ್ಕೊಂದು ನಿದರ್ಶನ ಎಂದರೆ, ಒಮ್ಮೆ ಉಡುಪಿ ಪರ್ಯಾಯೋತ್ಸವದಲ್ಲಿ ಗೀತೆ ಬಗ್ಗೆ ಉಪನ್ಯಾಸ ಮಾಡಲು ದೇವುಡು ಅವರು ಆಹ್ವಾನಿತರಾಗಿದ್ದರು. ವೇದಿಕೆ ಹತ್ತಿ ಉಪನ್ಯಾಸ ಪ್ರಾರಂಭ ಮಾಡುವ ವೇಳೆಗೆ ಅವರ ಕೈಗೆ ಚೀಟಿಯೊಂದನ್ನು ವ್ಯವಸ್ಥಾಪಕರು ಕೊಟ್ಟರು. ಅದರಲ್ಲಿ ಅವರ ಹಿರಿಯಮಗ ರಾಮು ಕೋಲಾರದಲ್ಲಿ ನಿಧನರಾದ ಸುದ್ದಿ ಇತ್ತು ಅದನ್ನೋದಿ ಒಂದು ಕ್ಷಣ ಮೌನಿಗಳಾದ ಅವರು ಸಾವರಿಸಿಕೊಂಡು ಮಾತನಾಡಲು ಸಿದ್ಧರಾದರು. ಅವರ ಮುಖಭಾವ ಕಂಡ ಪಕ್ಕದಲ್ಲಿದ್ದವರು, ಏನು ಸುದ್ದಿ ಎಂದು ಕೇಳಿದರು.

ದೇವುಡು ಅವರು ಯಾವುದೋ ಪುಸ್ತಕ ಪ್ರಕಟನೆ ವಿಚಾರ ಎಂದು ಹೇಳಿ ನಿರ್ವಿಕಾರಚಿತ್ತರಾಗಿ ಏನೂ ಆಗದವರಂತೆ ಶುದ್ಧ ಮನಸ್ಕರಾಗಿ ಅತ್ಯಮೋಘವಾಗಿ ಗೀತಾ ಪ್ರವಚನ ಮಾಡಿದರು. ಎಷ್ಟರ ಮಟ್ಟಿಗೆ ಎಂದರೆ ಸಭೆಯಂತೂ ಎಲೆ ಅಲುಗದ ಸಭೆ ಆಗಿತ್ತು. ಸ್ವಾಮಿಗಳು ದಯಮಾಡಿ ಇನ್ನೊಂದು ವಾರ ಇದ್ದು ಮತ್ತೊಂದು ಗೀತಾ ಸಪ್ತಾಹ ಕಾರ್ಯಕ್ರಮ ನಡೆಸಿಕೊಡಿ. ನಿಮ್ಮ ಗೀತಾ ಪ್ರವಚನ ಅಮೋಘ ಎಂದರು. ಕಾರ್ಯಕ್ರಮ ಮುಗಿದ ಮೇಲೆ ಜತೆಗಿದ್ದ ಆತ್ಮೀಯ ಮಿತ್ರರು ಬೆಳಗೆರೆ ಕೃಷ್ಣಶಾಸ್ತ್ರಿಗಳು ಕೇಳಿದರು. ಈ ಸಂಯಮ ನಿಮಗೆ ಹೇಗೆ ಸಾಧ್ಯವಾಯಿತು. ಪುತ್ರಶೋಕ ಪಕ್ಕಕ್ಕಿಟ್ಟು ತಲ್ಲೀನಚಿತ್ತರಾಗಿ ಗೀತಾ ಪ್ರವಚನ ಮಾಡುವ ಶಕ್ತಿ ಎಲ್ಲಿಂದ ಬಂತು? ಅದಕ್ಕೆ ದೇವುಡು ಹೇಳಿದರು. 'ನಾನು ಸಭೆಯಲ್ಲಿ ಗೀತೆ ಬಗ್ಗೆ ಭಾಷಣ ಮಾಡಲಿಲ್ಲ. ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ, ಸ್ಥಿತಪ್ರಜ್ಞನ ಲಕ್ಷಣಗಳನ್ನು ಸುಖದಲ್ಲಾಗಲಿ ದುಃಖದಲ್ಲಾಗಲಿ ಲಾಭ ನಷ್ಟಗಳಲ್ಲಾಗಲಿ ಸಮಭಾವ ತಾಳು ಎಂಬ ಕೃಷ್ಣನ ಗೀತಾ ವಾಕ್ಯಗಳನ್ನು ನನಗೆ ನಾನೇ ಬೋಧಿಸಿಕೊಂಡೆ ಅದರಿಂದ ಮಾತಾಡಲು ಸಾಧ್ಯವಾಯಿತು'. ಹೀಗೆ ಜೀವನದಲ್ಲಿ ಗೀತಾ ಸಂದೇಶವನ್ನು ಅನುಷ್ಠಾನಕ್ಕೆ ತಂದುಕೊಂಡ ಗೀತಾಭಕ್ತರು ದೇವುಡು ಅವರು.

ದೇವುಡು ಅವರ ವಾಗ್ವಿಲಾಸದ ವೈಭವ ಕುರಿತು ಒಂದು ಪ್ರಸಂಗ ಹೇಳಬೇಕು. ಕನ್ನಡದಲ್ಲಿ ಅನಕೃ ಅಂಥ ವಾಗ್ಮಿಗಳ ಸಾಲಿಗೆ ನಿಲ್ಲಬಲ್ಲವರು

ದೇವುಡು ಅವರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾಳಿದಾಸನ ಬಗ್ಗೆ ಅಮೋಘ ವಿಶೇಷ ಉಪನ್ಯಾಸ ನೀಡಿದಾಗ, ಒಬ್ಬ ವಿದ್ವಾಂಸರು ಎಷ್ಟು ವರ್ಷ ಕಾಳಿದಾಸನನ್ನು ಅಭ್ಯಾಸ ಮಾಡಿದಿರಿ ಈ ಉಪನ್ಯಾಸಕ್ಕೆ ಎಂದರು. ಅದಕ್ಕೆ ದೇವುಡು ನಕ್ಕು ಹೇಳಿದರು. ಭಾಷಣ ಪ್ರಾರಂಭ ಮಾಡುವ ಮುಂಚೆ ಕೆಲವು ನಿಮಿಷಗಳು ಮಾತ್ರ ಎಂದರು.

ಒಮ್ಮೆ ಬೆಂಗಳೂರಿನ ಮಹಾರಾಣಿ ಕಾಲೇಜಿನ ಬಳಿಯ ಓಣಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ದೇವುಡು ಉಪನ್ಯಾಸ ಮಾಡಿದರು. ಆಗಿನ ಮುಖ್ಯಮಂತ್ರಿಗಳು ಹಲವು ಸಚಿವರು ಆ ಸಭೆಗೆ ಬಂದಿದ್ದರು. 'ದೇವುಡು ಅವರು ಏನು ಮಾತನಾಡುತ್ತಾರೆ ಗೊಡ್ಡು ಶಾಸ್ತ್ರಿ ಭಾಷಣದಲ್ಲಿ ಏನಿರುತ್ತೆ' ಅಂತ ತಿರಸ್ಕಾರ ಭಾವದಿಂದ ಇದ್ದ ಇತರ ಸಚಿವರು ಮುಖ್ಯಮಂತ್ರಿಗಳ ಮಾತು ತೆಗೆದು ಹಾಕಲಾರದೆ ಅವರ ಜತೆ ಬಂದಿದ್ದರಂತೆ. ದೇವುಡು ಅವರ ಭಾಷಣ ಕೇಳಿದ ಮೇಲೆ ಅವರ ಬಗ್ಗೆ ಪೂಜ್ಯ ಭಾವ ತಾಳಿ ನಿಮ್ಮ ಮಾತನ್ನು ಕೇಳದೆ ಇದುವರೆಗೆ ನಮ್ಮ ಜನ್ಮವನ್ನು ವ್ಯರ್ಥ ಮಾಡಿಕೊಂಡೆವು ಎಂದರಂತೆ. ಆಗ ಮುಖ್ಯಮಂತ್ರಿಗಳು ನಿಮಗೇನು ಬೇಕು ಕೇಳಿ ಶಾಸ್ತ್ರಿಗಳೇ ಕೊಡ್ತೇನೆ ಈಗ ನನಗೆ ಅಧಿಕಾರವಿದೆ ಎಂದರಂತೆ. ಆಗ ದೇವುಡು ಅವರು 'ನನಗೇನೂ ಬೇಡ ಈ ದೇವಸ್ಥಾನಕ್ಕೆ ಪ್ರವಚನಕ್ಕೆ, ದೇವರ ದರ್ಶನಕ್ಕೆ ಜನ ಬಂದರೆ ಸಾಕಷ್ಟು ಜಾಗ ಇಲ್ಲ. ದೇವಸ್ಥಾನಕ್ಕೆ ಸ್ವಲ್ಪ ಜಾಗ ಕೊಡಿ' ಅಂದರಂತೆ. ಆಗ ದೊರಕಿದ ಜಾಗದಲ್ಲಿ ಈಗ ಕಟ್ಟಡವಿದೆ ಈಗ ಹೆಸರಿಗೆ ಓಣಿ ಆಂಜನೇಯ. ಆಂಜನೇಯ ಇದ್ದಾನೆ ಓಣಿ ಇಲ್ಲ. ದೇವುಡು ಪ್ರವಚನದ ಪ್ರಭಾವ.

ದೇವುಡು ಅವರಿಗೆ ಸಾರ್ವಜನಿಕ ಜೀವನದಲ್ಲೂ ದೂರದೃಷ್ಟಿ ಇತ್ತು. ಅವರೊಮ್ಮೆ ಸ್ಥಳೀಯ ಚುನಾವಣೆಗೆ ನಿಂತಿದ್ದರು. ಆಗ ಹೇಳಿದರು. ನಾನೇನಾದರೂ ಆರಿಸಿ ಬಂದರೆ ಕ್ರಾಪ್ ಇನ್ಸೂರೆನ್ಸ್ (ಬೆಳೆ ವಿಮೆ) ಜಾರಿಗೆ ತರುತ್ತೇನೆ ಎಂದು ಹೇಳಿದರು. ಭಾಷಣ ಕೇಳುತ್ತಿದ್ದವರಲ್ಲಿ ಒಬ್ಬರು ಹಾಸ್ಯ ಮಾಡಿದ್ದು ಕ್ರಾಪ್ ಇಲ್ಲದ ಈ ಆಸಾಮಿ ಕ್ರಾಪ್ ಇನ್ಸೂರೆನ್ಸ್ ಜಾರಿಗೆ ತರುತ್ತಾರಂತೆ. ಆದರೆ ಇಂದು ಬೆಳೆ ವಿಮೆ ಜಾರಿಗೆ ದೇವುಡು ಅವರ ದೂರದೃಷ್ಟಿ ಮಾತು ನಿಜವಾಗಿದೆ.

ಅರ್ಧ ಶತಮಾನದ ಹಿಂದೆ ಬೆಂಗಳೂರಿನಲ್ಲಿ ಬಾಲ್ಯವಿವಾಹವನ್ನು ಸಮರ್ಥಿಸಿ ವಾದ ಮಾಡಿದ ಪಂಡಿತ ಮಂಡಳಿ ಸಭೆಯಲ್ಲಿ ಶಾಸ್ತ್ರಾಧಾರಗಳಿಂದ

ಬಾಲ್ಯ ವಿವಾಹವನ್ನು ಖಂಡಿಸಿ ವಾದ ಮಂಡಿಸಿದವರಲ್ಲಿ ದೇವುಡು ಅವರು ಒಬ್ಬರು.

ದೇವುಡು ಅವರು ಕೇವಲ ಸಾಹಿತಿ, ವೇದಾಂತಿ ಶಿಕ್ಷಣ ತಜ್ಞ ಅಷ್ಟೇ ಆಗಿರಲಿಲ್ಲ. ದೇಶಪ್ರೇಮಿ ಭಾಷಾಪ್ರೇಮಿ ಆಗಿದ್ದರು. ಗಾಂಧಿಭಕ್ತರಾಗಿದ್ದರು. ಗಾಂಧಿಸೇವಾನಿಷ್ಠರಾದ ಸಿದ್ದವನಹಳ್ಳಿ ಕೃಷ್ಣಶರ್ಮ ತಿ.ತಾ.ಶರ್ಮ ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದವರು ಒಂದು ಕಾಲದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಲ್ಲಿ ದೇವುಡು ಅವರೂ ಒಬ್ಬರಾಗಿದ್ದರು. ೧೯೩೬ರಲ್ಲಿ ಗಾಂಧೀಜಿ ನಾಲ್ವಡಿ ಕೃಷ್ಣರಾಜ ಒಡೆಯ ಆಹ್ವಾನದ ಮೇರೆಗೆ ಬೆಂಗಳೂರಿಗೆ ಬಂದಾಗ ಗಾಂಧಿ ಬಿಡಾರದಲ್ಲಿ ಸ್ವಯಂಸೇವಕರ ಮೇಲ್ವಿಚಾರಣೆ ವಹಿಸಿದವರು ದೇವುಡು ಅವರು, ಅವರ ಕೈ ಕೆಳಗೆ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದವರಲ್ಲಿ ನ್ಯಾಷನಲ್ ಕಾಲೇಜಿನ ಡಾ.ಎಚ್. ನರಸಿಂಹಯ್ಯನವರೂ ಒಬ್ಬರಾಗಿದ್ದರು.

ರಾಜಕೀಯ ಚಳುವಳಿಗಳ ಸಭೆಗಳಲ್ಲಿ ಗುಂಡೇಟಿಗೂ ಜಗ್ಗದೆ ಭಾಗವಹಿಸುತ್ತಿದ್ದವರು ದೇವುಡು ಅವರು, ೧೯೩೦ರಲ್ಲಿ ನಾರೀಮನ್ ಗಲಾಟೆಯ ಚಳುವಳಿ ನಡೆದಾಗ ಬೆಂಗಳೂರಿನ ಮೈಸೂರು ಬ್ಯಾಂಕಿನ ಚೌಕದ ಬಳಿ ಉಜ್ವಲ ಭಾಷಣ ಮಾಡಿ ಗೋಲಿಬಾರಿನಲ್ಲಿ ಗಾಯಗೊಂಡವರು ದೇವುಡು. ೧೯೨೮ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆ ಗಣಪತಿ ಗಲಭೆಯ ಸಭೆಯೊಂದು ಬಳೇಪೇಟೆ ಚೌಕದಲ್ಲಿ ನಡೆದಾಗ ಗುಂಡಿನ ಮಳೆಯನ್ನು ಪೊಲೀಸರು ಸುರಿಸಿದರು. ಆಗ ಆ ಗುಂಡಿನ ಸುರಿಮಳೆ ನಡುವೆ ಜೀವದ ಹಂಗು ತೊರೆದು ನುಗ್ಗಿ ಹಣ್ಣು ಹಣ್ಣು ವೃದ್ಧರೊಬ್ಬರನ್ನು ರಕ್ಷಿಸಿದವರು ದೇವುಡು ಅವರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮೆರವಣಿಗೆಯಲ್ಲಿ ಪೊಲೀಸರನ್ನು ಪ್ರತಿಭಟಿಸಿ ಮುನ್ನುಗ್ಗಿ ಬಲವಾಗಿ ಲಾಠಿ ಏಟು ತಿಂದು ಹಲವಾರು ತಿಂಗಳು ನರಳಿದವರು ದೇವುಡು ಅವರು, ಇಂಥ ಸಾಹಸಗಳು ಅದೆಷ್ಟೋ. ಸ್ವಾತಂತ್ರ್ಯ ಹೋರಾಟದಲ್ಲಿ ಹೀಗೆ ನಿರಂತರ ಭಾಗವಹಿಸಿದ ಅವರು ಸ್ವಾತಂತ್ರ್ಯ ಬಂದ ಮೇಲೆ ಸರ್ಕಾರದಿಂದ ಪೆನ್ಷನ್, ಸೈಟ್, ಪ್ರಶಸ್ತಿ, ಮಾಸಾಶನ ಯಾವುದನ್ನು ಬಯಸದೆ ಅದನ್ನು ಕೊಟ್ಟರೂ ಬೇಡವೆಂದು ತಿರಸ್ಕರಿಸಿದ ಅಪ್ಪಟ ದೇಶಪ್ರೇಮಿ ದೇವುಡು ಅವರು. ಒಮ್ಮೆ ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಪ್ರಭಾವವನ್ನು ತಡೆಯಲಾಗದೆ ದಿವಾನರೊಬ್ಬರು ಇವರಿಗೆ ಆಮಿಷ ಒಡ್ಡಿದರು: "ನೀವು ರಾಜಕಾರಣದಿಂದ ನಿವೃತ್ತರಾಗುವುದಾದರೆ ಸರಕಾರದಿಂದ ಪ್ರತಿ ತಿಂಗಳೂ

ನಿವೃತ್ತಿ ವೇತನ ದೊರೆಯುವಂತೆ ಇತರ ಸೌಲಭ್ಯ ಪಡೆಯುವಂತೆ ಏರ್ಪಾಡು ಮಾಡುತ್ತೇನೆ" ಎಂದರಂತೆ ಆಗ ದೇವುಡು ನಕ್ಕು ಹೇಳಿದರಂತೆ ನೀವು ನನ್ನ ಬೆಲೆ ಎಷ್ಟು ಅಂತ ತಿಳಿದಿಲ್ಲ ನನ್ನ ದೇಶಪ್ರೇಮದ ಬೆಲೆ ಎಷ್ಟಿದೆ ಎಂದರೆ ಜಗತ್ತಿನಲ್ಲಿ ಯಾವ ಕೋಟ್ಯಾಧೀಶನೇ ಆಗಲಿ ಸರ್ಕಾರವೇ ಆಗಲಿ ನನ್ನನ್ನು ಕೊಳ್ಳಲಾರರು ಎಂದರಂತೆ.

ದೇವುಡು ದೇಶಭಕ್ತರೂ ಸಾಹಿತಿಗಳೂ ಆಗಿದ್ದಂತೆ ನಾಟಕಕಾರರು ಕಲಾವಿದರೂ ಚಲನಚಿತ್ರ ನಟರೂ ಆಗಿದ್ದರು. ಬಹುಮುಖ ಪ್ರತಿಭೆ ಅವರದು. ರಂಗಭೂಮಿ ಪತ್ರಿಕೆ ಸಂಪಾದಕರಾಗಿದ್ದರು. ರತ್ನಾವಳಿ ಕಂಪೆನಿ, ಚಾಮುಂಡೇಶ್ವರಿ ನಾಟಕ ಕಂಪೆನಿ ಮುಂತಾದ ಕಡೆಗಳಲ್ಲಿ ನಟರಾಗಿ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ವಾಜಶ್ರವಸಮುನಿ, ರಾವಣ, ಮಾರ್ಕಂಡೇಯ ಮೊದಲಾದ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿದ್ದಾರೆ. ದೇವುಡು ಪಾತ್ರ ವಹಿಸಿದ ನಾಟಕಗಳು ಶತದಿನೋತ್ಸವ ಕಂಡಿವೆ. ದುರ್ಮಂತ್ರಿ, ಸಾವಿತ್ರಿ, ವಿಚಿತ್ರಶಿಕ್ಷೆ, ಮೊದಲಾದ ಮಕ್ಕಳ ನಾಟಕ ರಚಿಸಿ ಆಡಿಸಿದ್ದಾರೆ.

೧೯೨೬ರಲ್ಲಿ ಕಳ್ಳರ ಕೂಟ ಎಂಬ ಮೂಕಿ ಚಿತ್ರವನ್ನು ತಯಾರಿಸಿದ್ದರು. ಚಿರಂಜೀವಿ ಚಿತ್ರದಲ್ಲಿ ಮೃಕಂಡು ಪಾತ್ರ ಅಭಿನಯಿಸಿದ್ದನ್ನು ನೋಡಲು ೧೯೩೦ರಲ್ಲಿ ಮೆಜೆಸ್ಟಿಕ್‌ನಲ್ಲಿ ಆ ಚಿತ್ರದ ಪ್ರಥಮ ಪ್ರದರ್ಶನಕ್ಕೆ ಸರ್. ಸಿ.ವಿ. ರಾಮನ್, ಸರ್ ಪುಟ್ಟಣಶೆಟ್ಟರು, ಬಿಎಂಶ್ರೀ, ಲೇಡಿ ಮಿರ್ಜಾ ಇಸ್ಮಾಯಿಲ್, ಮುಂತಾದ ಗಣ್ಯರು ಹಾಜರಿದ್ದರು. ಕನ್ನಡ ಚಲನಚಿತ್ರರಂಗಕ್ಕೆ ಅಸ್ತಿಭಾರ ಹಾಕಿದವರಲ್ಲಿ ದೇವುಡು ಅವರು ಒಬ್ಬರು.

ದೇವುಡು ಅವರು ದೈವಭಕ್ತರು ಅವಧೂತರು, ದೈವಸಿದ್ಧಿ ಪಡೆದವರು ಬಾಲ್ಯದಲ್ಲೇ ದೇವೀ ಕೃಪಾಕಟಾಕ್ಷಕ್ಕೆ ಒಳಗಾದವರು. ದತ್ತಾತ್ರೇಯ ಉಪಾಸಕರು ದೇವುಡು ಅವರು.

ದೇವುಡು ಅವರ ಬಾಲ್ಯದ ಆತ್ಮಕಥನ ಪ್ರಸಂಗವೊಂದು ಅವರಿಗೆ ದೇವೀಕೃಪೆ ಬಾಲ್ಯದಲ್ಲೇ ಒದಗಿದ್ದಕ್ಕೆ ಸಾಕ್ಷಿ ಆಗಿದೆ.

ದೇವುಡು ಅವರು ಮೈಸೂರಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ೧೯೦೭-೦೮ರ ಸುಮಾರಿನಲ್ಲಿ ಬಾಲಕ ದೇವುಡು ಅವರನ್ನು ಅವರಮ್ಮ ಮನೆಯಲ್ಲಿ ಸೀಮೆಎಣ್ಣೆ ದೀಪದ ಚಿಮಣಿಗೆ ಗಾಜಿನ ಬುರುಡೆ ತರಿಸಲು

ಕಳಿಸಿದರು. ಎರಡಾಣೆ ಕೊಟ್ಟು, ಜತೆಗೆ ಚಿಕ್ಕ ಹುಡುಗ ಆದ್ದರಿಂದ ಜತೆಗಿರಲಿ ಎಂದು ಮನೆಯಲ್ಲಿದ್ದ ರಾಮು ಎಂಬ ದಡ್ಡಶಿಖಾಮಣಿಯನ್ನು ಕಳಿಸಿದರು. ಗೋಡೆಲ್ಯಾಂಪಿನ ಚಿಮಣಿಯ ಗಾಜಿನ ಬುರುಡೆಯನ್ನು ಬೆಲೆ ಒಂದಾಣಿ ಒಂಬತ್ತು ಕಾಸು ಕೊಟ್ಟು ಕೊಂಡರು. ಉಳಿದ ಮೂರು ಕಾಸಿಗೆ ಕಡಲೆಪುರಿ ಕೊಂಡು ತಿನ್ನುತ್ತಾ ಕುಣಿದಾಡುತ್ತಾ ಬಂದರು. ದಾರಿಯಲ್ಲಿ ರಸ್ತೆ ಅಂಚಿನ ಕಟ್ಟೆ ಮೇಲೆ ಬರುತ್ತಿದ್ದರು. ದೇವುಡು ಜಾರಿಬಿದ್ದರು. ಚಿಮಣಿ ಒಡೆಯಿತು. ರಸ್ತೆಯಲ್ಲಿ ತಕ್ಷಣ ದೇವುಡು ಅವರ ಮನಸ್ಸಿನಲ್ಲಿ ಕಣ್ಣ ಮುಂದೆ ಅವರ ತಾಯಿ ನೆನಪಾಯಿತು. "ಕೈಯಲ್ಲಿ ಸಿಕ್ಕಿದುದರಲ್ಲಿ ಹೊಡೆಯುವ ತಾಯಿ ಚಿತ್ರ ಕಣ್ಣ ಮುಂದೆ ಬಂತು" ದಿಗಿಲಾಗಿ ಅಳಲು ಶುರು ಮಾಡಿದರು. ರೋದನ ಹೆಚ್ಚಾಗಲು ಸುಮಾರು ೪೦-೫೦ ಜನ ಸೇರಿದರು. ವಯಸ್ಸಾದ ಹೆಂಗಸು ಒಬ್ಬಳು ಬಂದಳು, ಹಣೆ ತುಂಬ ಕುಂಕುಮ, ತಲೆ ತುಂಬ ಮುಸುಕು, ಬಾಯಿ ತುಂಬ ಎಲೆ ಅಡಿಕೆ, ಸುತ್ತಲಿನ ಜನರೆಲ್ಲಾ ತಳ್ಳಿ ಕೊಂಡು ಬಂದು ದೇವುಡು ಅವರನ್ನು 'ಯಾಕಪ್ಪಾ ಅಳುತ್ತೀ ಏನಪ್ಪಾ ಆಯಿತು' ಅಂತ ಕೇಳಿ ಅವನ ಕಣ್ಣೊರಿಸಿ ವಿಷಯ ತಿಳಿದುಕೊಂಡಳು. ಇಷ್ಟೇನಾ ಎಂದು ತನ್ನ ಎಲೆ ಅಡಿಕೆ ಚೀಲದಿಂದ ಎರಡಾಣೆ ತೆಗೆದುಕೊಟ್ಟು ನಿವಾಳಿ ತೆಗೆದು ನೆಟಿಕೆ ಮುರಿದು ತನ್ನ ಪಾಡಿಗೆ ತಾನು ಹೊರಟು ಹೋದಳು. ಹತ್ತಾರು ವರ್ಷಗಳಾದ ಮೇಲೂ ದೇವುಡು ಅವರು ತಮ್ಮ ಮಿತ್ರರ ಬಳಿ ಈ ಮಾತು ಹೇಳುತ್ತಿದ್ದರು. "ಆಗ ನಡೆದುದೆಲ್ಲ ವಿವರವಾಗಿ ಈಗಲೂ ಒಂದಿಷ್ಟೂ ತಪ್ಪದೆ ಮನಸ್ಸಿನ ರಜತ ಪರದೆ ಮೇಲೆ ಕಂಡಂತೆ ಸ್ಪಷ್ಟವಾಗಿ ಕಾಣುತ್ತದೆ. ಆ ತಾಯಿ ನೆನಪು ವಾತ್ಸಲ್ಯ ನೋಟ ಮಾತು, ಪ್ರೀತಿ ಮನಸ್ಸಿನಲ್ಲಿ ಹೃದಯದಲ್ಲಿ ವಜ್ರ ಖಚಿತವಾಗಿದೆ. ಆಕೆಯ ನೆನಪು ಅನುಗ್ರಹ ಇಂದಿಗೂ ನನ್ನನ್ನು ದಯೆಯತ್ತ ನಡೆಯುವ ಈ ನನ್ನ ಕೈ ಸುರಿವ ಕಂಬನಿ ಒರೆಸಿ ನಗೆಯುಂಟುಮಾಡಲು ಕಾರಣವಾಗಿರುವ ಕೈದೀವಿಗೆ ಆ ತಾಯಿ ನೆನಪು."

ಶೃಂಗೇರಿ ಜಗದ್ಗುರುಗಳಿಂದ ಮಂತ್ರೋಪದೇಶ ಪಡೆದು 'ದತ್ತಸಿದ್ಧಿ' ಪಡೆದವರು ದೇವುಡು ಅವರು. ಗಾಯಿತ್ರಿ ಸಾಕ್ಷಾತ್ಕಾರ ಹೊಂದಿದವರು. ದೇವುಡು ಅವರ ಅಧ್ಯಾತ್ಮಸಿದ್ಧಿ ಹೊರಜಗತ್ತಿಗೆ ಅಷ್ಟಾಗಿ ತಿಳಿದಿಲ್ಲ. ಬೇಂದ್ರೆ ಅವರು ದೇವುಡು ಅವರನ್ನು ಅವಧೂತರೆಂದು ತಿಳಿದಿದ್ದರು. ಅವರು ದೇವುಡು ಅವರನ್ನು ಕುರಿತು ಬರೆದ ಪದ್ಯವೊಂದರಲ್ಲಿ.

ಬಾಲನಂಥ ದೇವುಡು। ಉನ್ಮತ್ತನಾದ ದೇವುಡು।
ಜಡ–ಪಿಶಾಚಿ ದೇವುಡು। ಹುಚ್ಚು –ಮರುಳು ದೇವುಡು
ಜೀವನವೇ ನಾಟಕ। ತಾನೂ ಒಬ್ಬ ನಾಟಕ
ಆಟವೋ ಬೂಟಾಟವೋ ನೋಟವೆಂದ ದೇವುಡು

ಎಂದಿದ್ದಾರೆ.

ದೇವುಡು ಅವರು ತಮ್ಮ ಅಧ್ಯಾತ್ಮ ಸಿದ್ಧಿಯ ಫಲವನ್ನು ಸಾಂದರ್ಭಿಕವಾಗಿ ಇತರರಿಗೂ ನೀಡಿದ್ದಾರೆ. ಆದರೆ ಅದು ಗುಪ್ತದಾನ.

ಅರಮನೆಯ ಶ್ರೀ ಚೆಲುವಾಜಮ್ಮಣ್ಣಿ ಅವರಿಗೆ ಗೌರೀ ಪಂಚಾಕ್ಷರೀ ಉಪದೇಶ ಮಾಡಿದರು. ೧೯೪೫ರಲ್ಲಿ ಹಿರಿಯೂರಿನಲ್ಲಿ ರಾಮೋತ್ಸವ ಸಂದರ್ಭದಲ್ಲಿ ಉಪನ್ಯಾಸಕ್ಕೆ ಹೋದಾಗ ವ್ಯವಸ್ಥಾಪಕರೂ ಶಾಲಾ ಮುಖ್ಯೋಪಾಧ್ಯಾಯರಾದ ವೆಂಕಟೇಶಯ್ಯ ಅವರು ಹಾಸಿಗೆ ಹಿಡಿದು ಮಲಗಿದ್ದಾಗ ಅವರ ಕೈ ಹಿಡಿದು ಹತ್ತಿಪ್ಪತ್ತು ಕ್ಷಣ ಧ್ಯಾನ ಮಾಡಿ ಅವರ ಸುಸ್ತು ಜ್ವರವನ್ನು ಪೂರ್ಣವಾಗಿ ಮಂಗಮಾಯ ಮಾಡಿದ್ದರು. "ಲೋಕದಲ್ಲಿ ಜಡ–ಚೇತನ ಎಂದು ಸೃಷ್ಟಿ ಎರಡು ವಿಧವಾಗಿದ್ದರೂ ಜಡ ಚಲಿಸಿದರೆ ಚೇತನ ವಾಗುತ್ತದೆ. ಚೇತನ ಸ್ಥಿರಗೊಂಡರೆ ಜಡವಾಗುತ್ತದೆ ಈ ಅನುಭವ ನೋಡುವವರ ವಿಧಾನದ ಮೇಲೆ ನಿಂತಿದೆ ಎಂದು ಅತೀತಾನುಭವವನ್ನು ಒಂದೆಡೆ ದೇವುಡು ವಿವರಿಸಿದ್ದಾರೆ. ಇಂಥಾ ಅಧ್ಯಾತ್ಮ ಸಿದ್ಧಿ ಇದ್ದುದರಿಂದಲೇ ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನದಂಥ ಅಪೂರ್ವ ಧಾರ್ಮಿಕ ಕಾದಂಬರಿತ್ರಯ ಬರೆಯಲು ಸಾಧ್ಯವಾಯಿತು.

ಅತಿಥಿ ಸತ್ಕಾರಕ್ಕೆ ಬಡತನಕ್ಕೆ ಸಂಬಂಧವಿಲ್ಲ ಎಂದು ದೇವುಡು ತಮ್ಮ ಜೀವನದಲ್ಲಿ ಅನೇಕ ಬಾರಿ ತೋರಿಸಿಕೊಟ್ಟಿದ್ದಾರೆ.

ದೀನಾರ್ತರನ್ನು ಕಂಡರೆ ಅವರ ಹೃದಯ ಕರಗುತ್ತಿತ್ತು ಸಂಪದ್ಗಿರಿ ರಾಯರು ಹೇಳುವಂತೆ "ದೇವುಡು ಅವರ ಎರಡು ಕಣ್ಣುಗಳು ಎರಡು ನೀರಿನ ಟ್ಯಾಂಕುಗಳಾಗಿದ್ದವು. ಕಷ್ಟ ಕಾರ್ಪಣ್ಯದಲ್ಲಿರುವವರನ್ನು ಕಂಡರೆ ಸಾಕು ಅವು ಧುಮ್ಮಿಕ್ಕುತ್ತಿದ್ದವು."

ಒಮ್ಮೆ ಅವರ ಪತ್ನಿ ಗೌರಮ್ಮನವರು "ಮನೆಯಲ್ಲಿ ಈವತ್ತು ಒಂದು ಅಕ್ಕಿ ಕಾಳೂ ಇಲ್ಲ ಬರೋವರಿಗೆ ಇರಲಿ ಇರೋವರಿಗೆ ಊಟವಿಲ್ಲ" ಎಂದರು. ಆಗ

ದೇವುಡು ಪ್ರಕಾಶಕರೊಬ್ಬರ ಬಳಿಗೆ ಹೋಗಿ ಪುಸ್ತಕವೊಂದನ್ನು ವಾರದೊಳಗೆ ಬರೆದುಕೊಡುವ ಭರವಸೆ ಕೊಟ್ಟು ಸಾಕಷ್ಟು ಹಣ ತಂದರು. ಆ ವೇಳೆಗೆ ಮನೆಗೆ ಬಂದಾಗ ಮಿತ್ರರೊಬ್ಬರು ತಮ್ಮ ಸಂಕಷ್ಟ ಸ್ಥಿತಿ ಹೇಳಿಕೊಂಡಾಗ ಸಾಲವಾಗಿ ತಂದ ಹಣದಲ್ಲಿ ಅಂದು ಊಟದ ಖರ್ಚಿಗೆ ಅಂತ ೫ ರೂ. ಉಳಿಸಿಕೊಂಡು ಉಳಿದ ಹಣವನ್ನೆಲ್ಲಾ ಅವನ ಕೈಗಿಟ್ಟು ಹೇಳಿದರು. ಈ ಹೊತ್ತು ಊಟಕ್ಕೆ ಅಂತ ೫ ರೂ. ಇಟ್ಟುಕೊಂಡಿದ್ದೇನೆ ಉಳಿದಿದ್ದೆಲ್ಲಾ ಕೊಟ್ಟಿದ್ದೇನೆ. ದೇವರು ನಿನಗೆ ಒಳ್ಳೆಯದು ಮಾಡಲಿ ಎಂದರು. ಆ ಹಣವನ್ನು ಮತ್ತೆ ಇವರು ಕೇಳಲಿಲ್ಲ ಅವರೂ ಕೊಡಲಿಲ್ಲ.

ಎಷ್ಟೋ ಸಲ ಮನೆ ಎಷ್ಟು ಖಾಲಿ ಇರುತ್ತಿತ್ತು ಎಂದರೆ, ಒಮ್ಮೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಅವರ ಮನೆಗೆ ಬಂದಾಗ ದೇವುಡು ಅವರು, ಕೃಷ್ಣಶಾಸ್ತ್ರಿಗಳು ಬಂದಿದ್ದಾರೆ. ಏನಾದರೂ ಕೊಡು ಎಂದರು. ಮನೆಯೆಲ್ಲ ತಡಕಾಡಿದರೂ ಏನೂ ಇರಲಿಲ್ಲ. ಕೊನೆಗೆ ಡಬ್ಬವೊಂದರ ಬುಡದಲ್ಲಿ ಸೇರಿಕೊಂಡಿದ್ದ ೨ ಕೋಡುಬಳೆ ತಂದು ಮುಂದಿಟ್ಟರು. ಆಗ ದೇವುಡು ನಗುತ್ತಾ ಬೆಳೆಗೆರೆ ಬಚ್ಚುಬಾಯಿ ನೋಡಿಲ್ವಾ ನೀನು ಕೋಡುಬಳೆ ತಂದಿಟ್ಟಿದ್ದೀಯಲ್ಲಾ ಎಂದರು. ಅವರು ಕಣ್ ಕಣ್ ಬಿಟ್ಟಾಗ ದೇವುಡುಗೆ ಮನೆಯಲ್ಲಿ ಏನೂ ಇಲ್ಲ ಎಂದು ತಿಳಿಯಿತು. ಆಗ ದೇವುಡು ಹೋಗಲಿ ಬಿಡು, ಕೃಷ್ಣಶಾಸ್ತ್ರಿ ಏನೂ ತಿಳಿದುಕೊಳ್ಳೋದಿಲ್ಲ. ಮನೆಯಲ್ಲಿ ಏನೂ ಇಲ್ಲ ಅಂತ ಹೇಳಲು ಸಂಕೋಚ ಪಡಬೇಕಾಗಿಲ್ಲ ಒಂದು ಲೋಟ ಮಜ್ಜಿಗೆ ಕೊಡು" ಎಂದರು.

ಇರಲಿ ಇಲ್ಲದಿರಲಿ ನಾಸ್ತಿ ಎನ್ನದೆ ದೇಹಿ ಎನ್ನದೆ ಇದ್ದುದ್ದನ್ನು ತೆತ್ತು ಬಿಡುವ ದೇವುಡು ಅವರು ಕೊಡುವುದರಲ್ಲೇ ಸುಖ ಕಂಡ ಜೀವಿ. ಸರಳ ಜೀವಿ, ಸ್ವತಂತ್ರ ಜೀವಿ, ಸ್ವಾಭಿಮಾನಿ, ಉನ್ನತಚಿಂತಕ, ಸಾಹಿತಿ, ಅನುಭಾವಿ, ಸ್ನೇಹಪ್ರೇಮಿ, ಮಕ್ಕಳ ಒಡನಾಡಿ, ಘನವಿದ್ವಾಂಸ, ಶಿಕ್ಷಣ, ತಜ್ಞ, ಕಾದಂಬರಿಕಾರ, ನಟ, ವಾಗ್ಮಿ, ಜ್ಞಾನ ಪ್ರಚಾರಕ, ಗೀತಾ ಭಕ್ತ ದೇವುಡು ನರಸಿಂಹಶಾಸ್ತ್ರಿ ಕನ್ನಡ ಸಾಹಿತ್ಯದ ಅನರ್ಘ್ಯ ರತ್ನ ಆದರ್ಶಜೀವಿ.

❐



೧೦. ಶ್ರೇಷ್ಠಕತೆಗಾರ

ಕೆರೂರು ವಾಸುದೇವಾಚಾರ್ಯ

ಕರ್ನಾಟಕದ ಇತಿಹಾಸದಲ್ಲಿ ನಾನಾ ಕ್ಷೇತ್ರಗಳಲ್ಲಿ ಹೆಸರುಗಳಿಸಿದವರು ತಮ್ಮ ಪ್ರಸಿದ್ಧಿಯೊಡನೆ ಊರಿಗೂ ಪ್ರಸಿದ್ಧಿ ತಂದಿರುತ್ತಾರೆ. ಊರಿನ ಹೆಸರಿನ ಉದ್ಧಾರ ಆಯಾ ಸ್ಥಳದಲ್ಲಿ ಹುಟ್ಟಿದ ಪುಣ್ಯಪುರುಷರಿಂದ ಆಗುವುದು ಒಂದು ಸಾಂಸ್ಕೃತಿಕ ಲಕ್ಷಣವಾಗಿದೆ.

ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಸಂಗೊಳ್ಳಿ ರಾಯಣ್ಣ, ಮೊದಲಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಸಿದ್ಧರಾಗಿ ಊರಿಗೆ ಹೆಸರು ತಂದಿದ್ದರೆ ಸಾಹಿತ್ಯ ಕ್ಷೇತ್ರದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗಳಗನಾಥ ವೆಂಕಟೇಶ ತಿರಿಕೋ ಕುಲಕರ್ಣಿ. ಆಲೂರು ವೆಂಕಟರಾಯರು ಮೊದಲಾದವರಿಂದ ಅವರ ಪೂರ್ವಿಕರ ಊರುಗಳನ್ನು ತಮ್ಮ ಹೆಸರಿನ ಮೂಲಕ ಪ್ರಸಿದ್ಧಿಗೆ ತಂದಿದ್ದಾರೆ. ಹಾಗೆಯೇ ಬಾಗಿಲಕೋಟೆಯ ಬಹಾದ್ದೂರ್ ಸಾಹಿತಿ ಕೆರೂರ ವಾಸುದೇವಾಚಾರ್ಯರಿಂದ ಕೆರೂರು ಪ್ರಸಿದ್ಧವಾಗಿದೆ.

ಕನ್ನಡದ ನಾಲ್ಕು ಪ್ರಥಮ ಸಾಮಾಜಿಕ ಕಾದಂಬರಿಗಳಲ್ಲಿ ಒಂದಾದ ಇಂದಿರಾ ಸಾಮಾಜಿಕ ಕಾದಂಬರಿಯಿಂದ ನಾಡಿನಲ್ಲೆಲ್ಲಾ ಪ್ರಸಿದ್ಧಿ ಪಡೆದವರು. ಅವರು ಕಾದಂಬರಿ, ಕಥೆ, ನಾಟಕ, ಪತ್ರಿಕಾ ಸಂಪಾದಕತ್ವ ನಾಲ್ಕು ರಂಗಗಳಲ್ಲಿ ಅಪ್ರತಿಮ ಸಾಧನೆ ಮಾಡಿದ್ದರೂ ನಮ್ಮ ಸಾಹಿತ್ಯ ವಿಮರ್ಶಕರು ನಾಡಿನ ಸಾಹಿತ್ಯ ಚರಿತ್ರಕಾರರು ಅವರನ್ನು ಗುರುತಿಸುವುದು ಇಂದಿರಾ ಕಾದಂಬರಿಕಾರ ಕೆರೂರ ವಾಸುದೇವಾಚಾರ್ಯರೆಂದೇ.

ಕೆರೂರು ಎಂಬುದು ವಾಸುದೇವಾಚಾರ್ಯರ ಪೂರ್ವಜರ ಊರು ಇದು ಬಾದಾಮಿ ತಾಲ್ಲೂಕಿನಲ್ಲಿದ್ದು ಬಾಗಿಲುಕೋಟೆಯಿಂದ ೩೦ ಕಿಲೋ ಮೀಟರ್ ದೂರದಲ್ಲಿದೆ. ೧೮೫೭ರಲ್ಲಿ ನರಗುಂದ ಬಂಡಾಯದ ಸಂದರ್ಭದಲ್ಲಿ

ಜೀವರಕ್ಷಣೆಗಾಗಿ ನರಗುಂದ, ಕೆರೂರು ಹಿರಿಯರು ಬಾಗಿಲಕೋಟೆಯ ಘಟಪ್ರಭಾ ನದಿ ದಂಡೆ ಮೇಲಿನ ಹೆರಕಲ್‌ನಲ್ಲಿ ಬಂದು ನೆಲೆಸಿದರು.

ಬಾಗಿಲುಕೋಟೆಯ ಪಕ್ಕದಲ್ಲಿರುವ ತೋಳಮಟ್ಟಿ ಗ್ರಾಮದಲ್ಲಿ ೧೫-೧೦-೧೮೬೬ರಂದು ಶ್ರೀನಿವಾಸಾಚಾರ್ಯ-ಪದ್ಮಾವತೀಬಾಯಿ ಅವರ ಸುಪುತ್ರರಾಗಿ ಜನಿಸಿದ ವಾಸುದೇವಾಚಾರ್ಯರ ಜನ್ಮನಾಮ ಭೀಮಾಚಾರ್ಯರೆಂದಿತ್ತು. ಆದರೆ ಅವರು ವಾಸುದೇವಾಚಾರ್ಯರೆಂದೇ ಪ್ರಸಿದ್ಧರಾದರು. ಬರಹ ಪ್ರಪಂಚದಲ್ಲಿ ಶ್ರೀನಿವಾಸಸುತ, ಬಾಗಿಲುಕೋಟೆಯ ಆಚಾರ್ಯರು, ಮೊದಲಾದ ಕಾವ್ಯ ನಾಮಗಳಿಂದ ಲೇಖನಗಳನ್ನು ಬರೆದಿದ್ದಾರೆ.

ವಾಸುದೇವಾಚಾರ್ಯರ ಮನೆತನ ಘನಸಂಸ್ಕೃತ ಪಾಂಡಿತ್ಯದ ಮನೆತನವಾಗಿತ್ತು. ಇವರ ಅಜ್ಜ ಯಲಗುರ್ದಾಚಾರ್ಯರು ದೇವತಾರ್ಚನೆ ವಿದ್ಯಾದಾನದಲ್ಲಿ ಪ್ರಖ್ಯಾತರಾಗಿದ್ದರು. ಧರ್ಮಕಾರ್ಯ ದೇವತೋಪಾಸನೆಗಳಲ್ಲಿ ನಿಷ್ಣಾತರಾಗಿದ್ದರು. ಮುತ್ತಜ್ಜ ಶ್ರೀನಿವಾಸಚಾರ್ಯರು ಶ್ರೀಮಂತರು ಧೀರೇಂದ್ರ ತೀರ್ಥಸ್ವಾಮಿಗಳ ಸನ್ನಿಧಿಯಲ್ಲಿ ಅಧ್ಯಯನ ನಡೆಸಿ ಘನ ಶಾಸ್ತ್ರಪಂಡಿತರಾಗಿ ಪಾಲಕೀಪದಸ್ಥರಾಗಿದ್ದರು. ಅಂದರೆ ಪಲ್ಲಕ್ಕಿ ಮರ್ಯಾದೆ ಹೊಂದಿದ್ದರು. ಇಂಥ ಸಂಸ್ಕೃತ ಪಾಂಡಿತ್ಯದ ಮನೆತನದಲ್ಲಿ ಬಂದ ವಾಸುದೇವಾಚಾರ್ಯರಿಗೆ ಸಹಜವಾಗಿ ಮನೆಯಲ್ಲಿಯೇ ತಂದೆಯಿಂದ ಸಂಸ್ಕೃತ ಶಿಕ್ಷಣ ದೊರೆಯಿತು. ಅನಂತರ ಬಾಗಿಲುಕೋಟೆಯಲ್ಲಿ ಮುಲ್ಕೀ ಪರೀಕ್ಷೆವರೆಗೆ (೭ನೇ ಕ್ಲಾಸಿನವರೆಗೆ) ಓದಿದರು. ಅನಂತರ ಬೆಳಗಾವಿಯಲ್ಲೂ ಧಾರವಾಡದಲ್ಲೂ ಹೈಸ್ಕೂಲಿನಲ್ಲೂ ವಿದ್ಯಾಭ್ಯಾಸ ಮುಂದುವರೆಸಿ ೧೮೮೬ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಹೀಗೆ ಬಾಲ್ಯದಲ್ಲಿ ಹೆರಕಲ್ಲು, ಬಾಗಿಲುಕೋಟೆಯಲ್ಲಿ ಬಾಲ್ಯ ಕಳೆದಿದ್ದರಿಂದ ಹಿರಿಯರು, "ಬಾಗಿಲುಕೋಟೆ, ಹೆರಕಲ್ಲಿನ ಬಳಿ ಹರಿಯುವ ಘಟಪ್ರಭೆಯ ನೀರು ಮತ್ತು ಉರಿವಬಿಸಿಲು ಹೆಪ್ಪುಗಟ್ಟಿ ಇವರ ರೂಪ ಬುದ್ಧಿ ಬೆಳೆದಿವೆ" ಎನ್ನುತ್ತಿದ್ದರು. ಸ್ನೇಹಿತರು ಅವರ ಕಪ್ಪು ಬಣ್ಣವನ್ನು ನೋಡಿ "ಬಾಗಿಲು ಕೋಟೆಯ ಶಾಲಿಗ್ರಾಮ" ಎಂದು ವಿನೋದ ಮಾಡುತ್ತಿದ್ದರು. ಶಾಲಾಜೀವನ ಕಾಲದಲ್ಲಿ ಇವರ ಬದುಕು ಸರಳವಾಗಿತ್ತು. ಮನೆಯಲ್ಲಿ ವೈದಿಕಪಾಠ. ಶಾಲೆಯಲ್ಲಿ ಲೌಕಿಕ ಪಾಠ, ಪಾಠ ಮುಗಿದ ಮೇಲೆ ಪ್ರತಿದಿನ ಹಸುಕರುಗಳನ್ನು ನದಿಗೆ ಒಯ್ಯುವುದು ನದಿಯಲ್ಲಿ ಈಜಾಡುವುದು ಬಳಿಕ ಮತ್ತೆ ಶಾಲೆ. ಇಂದಿನ

ವಿದ್ಯಾರ್ಥಿಗಳಿಗೆ ಸಿಗದ ಅಂದಿನ ವಿದ್ಯಾರ್ಥಿಗಳ ನೆಮ್ಮದಿ ಬದುಕಿನ ಒಂದು ಮಾದರಿ ಶಿಕ್ಷಣ ಪದ್ಧತಿ ಅದಾಗಿತ್ತು.

ಮೆಟ್ರಿಕ್ ಪರೀಕ್ಷೆ ತೇರ್ಗಡೆ ಆದ ಮೇಲೆ ೩ ವರ್ಷಗಳ ಕಾಲ ಶಿಕ್ಷಕರಾಗಿ ಬಾದಾಮಿ, ಬಾಗಿಲುಕೋಟೆ, ಧಾರವಾಡಗಳಲ್ಲಿ ಸೇವೆ ಸಲ್ಲಿಸಿದ ಮೇಲೆ ಹೆಚ್ಚಿನ ವ್ಯಾಸಂಗಕ್ಕಾಗಿ ಪುಣೆಯ ಫರ್ಗ್ಯುಸನ್ ಕಾಲೇಜನ್ನು ೧೮೯೬ರಲ್ಲಿ ಸೇರಿದರು. ಪುಣೆಯಲ್ಲಿದ್ದಾಗ ಆರ್ಥಿಕ ತೊಂದರೆಯಿಂದ ಹಾಗೂ ಸಾಂಸಾರಿಕ ಕಾರಣ ಗಳಿಂದ ಬಾಗಿಲುಕೋಟೆಗೆ ೧೮೯೧ರಲ್ಲಿ ಮರಳಿದರು. ೧೯೦೦ರ ವೇಳೆಗೆ ಮುಂಬಯಿ ಹೈಕೋರ್ಟು ನಡೆಸುತ್ತಿದ್ದ ಲಾ ಸ್ಟ್ಯಾಂಡರ್ಡ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಕೀಲಿ ವೃತ್ತಿ ಪ್ರಾರಂಭಿಸಿದರು.

ವಕೀಲಿ ವೃತ್ತಿಯಲ್ಲಿ ಏನೇ ಆಗಲಿ ಹಣ ಮಾಡುವುದು ಮುಖ್ಯ ಎಂಬ ವಕೀಲರಾಗಿರಲಿಲ್ಲ. ಒಮ್ಮೆ ಒಬ್ಬ ವ್ಯಕ್ತಿ ಬಂದು 'ಯಪ್ಪಾ ನನ್ನ ಮ್ಯಾಲೆ ಎರಡು ಸಾವಿರ ರೂಪಾಯಿ ದ್ಯಾವೆ ಮಾಡ್ಯಾನ ನನ್ನ ವೈರಿ ನಾಳೆ ಅದರ ಮುದ್ದತಿ ಐತಿ, ತಮ್ಮನ್ನು ವಕೀಲಿ ಕೊಡಾಕ ಬಂದಿದೀನಿ' ಅಂದನು. 'ನೀನು ಅವನಿಂದ ಸಾಲ ತೆಗೆದು ಕೊಂಡಿದ್ದೀಯಾ' ಅಂದಾಗ 'ಹೌದು' ಎಂದ. ಈಗೇನು ಮಾಡಬೇಕು ಎಂದು ಕೇಳಿದಾಗ, ಅವನು ಸಾಲಾ ಕೊಟ್ಟಿರಲಿಲ್ಲ. ಅಂತ ಕೋರ್ಟಿನಲ್ಲಿ ಸುಳ್ಳು ಮಾಡಿಸಬೇಕು ಎಂದಿದೀನಿ. ಅದು ಹೇಗೆ ಸಾಧ್ಯ ನೀನು ಹಣ ತೆಗೆದು ಕೊಂಡಿದ್ದೀನಿ ಅಂತೀಯ ಅವನು ಕೊಟ್ಟಿಲ್ಲ ಅನ್ನಿಸಬೇಕು ಅಂತಿದ್ದೀಯಾ ಹೇಗೆ ಸಾಧ್ಯ ಎಂದು ಕೇಳಿದರು. ಅದಕ್ಕೆ ಅವನು "ನನ್ನ ವೈರಿಯ ಸಾಲವು ಅವನಿಗೆ ಮುಟ್ಟಿದಂತೆ ಖೊಟ್ಟಿ ಪಾವತಿ ಪತ್ರ ತಂದೀನಿ. ಅದನ್ನು ಕೋರ್ಟಿಗೆ ಹಾಜರು ಪಡಿಸಿ ಸುಳ್ಳು ಮಾಡಿಸಬೇಕು ಎಂದಿದ್ದೀನಿ "ಇದಕ್ಕೆ ನಿಮಗೆ ಕೊಡಬೇಕಾದ ರುಸುಂಕೊಡಲು ಸಿದ್ಧ" ಎಂದ. ಆಗ ಆಚಾರ್ಯರು 'ಎಲಾ ಮೂರ್ಖ ಇಂಥ ಖೊಟ್ಟಿ ಕೆಲಸ ಮಾಡಲಿಕ್ಕೆ ನಿನಗೆ ನಾಚಿಕೆ ಬರುವುದಿಲ್ಲವೇ' ಎಂದು ಹೇಳಿ ಎದ್ದು ಗದ್ದರಿಸಿ ಒದ್ದೋಡಿಸಿದರು.

ಜೀವನದಲ್ಲಿ ವಕೀಲವೃತ್ತಿಗೆ ಪುಸ್ತಕ ಪಾಂಡಿತ್ಯ ಜ್ಞಾನ್ಮೆ ಇದ್ದರೆ ಅದನ್ನು ನ್ಯಾಯವಾಗಿ ಬಳಸಬೇಕು ಎಂಬುದು ಅವರ ಪ್ರವೃತ್ತಿ ಆಗಿತ್ತು.

"ವಕೀಲರಿಗೆ ಕೇವಲ ಹಣ ಮಾಡುವುದೇ ಮುಖ್ಯವಲ್ಲ ವ್ಯಾವಹಾರಿಕ ಜ್ಞಾನ್ಮೆ ಬೇಕು" ಎನ್ನುತ್ತಿದ್ದರು.

ಒಮ್ಮೆ ಅವರು ಸಂತೆಯಲ್ಲಿ ಕಟ್ಟಿಗೆ ಹೊರೆಯನ್ನು ಮನೆಗಾಗಿ ಕೊಂಡರು. ಅದನ್ನು ಹೊತ್ತ ಹೆಂಗಸಿಗೆ ತಮ್ಮ ಮನೆಯನ್ನು ಹೇಳಿದರು ತೋರಿಸಲು ಜತೆಯಲ್ಲಿದ್ದ ವಕೀಲಿ ಕಲಿಯುತ್ತಿದ್ದ ಮುಂಜಾಮದಾರರಿಗೆ ಹೇಳಿದರು.

ಇವರಿಗೆ ನಮ್ಮ ಮನೆ ತೋರಿಸು ನಾನು ಬೇರೆಡೆಗೆ ಹೋಗಬೇಕಿದೆ ಎಂದರು. ಅವನು ಮನೆ ಗೊತ್ತಿಲ್ಲ ಎಂದು ಸುಳ್ಳು ಹೇಳಿದನು. ಹೊರೆ ಹೊತ್ತ ಹೆಂಗಸು ಕೆರೂರರಿಗೆ "ನಿಮ್ಮ ಮನೆ ಗೊತ್ತಿದೆ ಯಾರೂ ತೋರಿಸಬೇಕಿಲ್ಲ" ಎಂದಳು. ಆಗ ಆಚಾರ್ಯರು ಮುಂಜಾಮದಾರರಿಗೆ ಹೇಳಿದರು. "ತಮ್ಮ ಕೇವಲ ಪುಸ್ತಕ ಪಾಂಡಿತ್ಯ ದಿಂದ ಮನುಷ್ಯ ಪಂಡಿತನಾಗುವುದಿಲ್ಲ. ವ್ಯವಹಾರ ಜ್ಞಾನಬೇಕು" ಎಂದರು. ಮುಂದೆ ಆ ಮುಂಜಾಮದಾರರು ವಕೀಲರಾಗಿ ವಾಸುದೇವಾಚಾರ್ಯರ ವಿರುದ್ಧ ಮೊಕದ್ದಮೆಯೊಂದರಲ್ಲಿ ವಾದ ಮಾಡಿ ಸೋತರು. ಆಗ ವಾಸುದೇವಾಚಾರ್ಯರು ಹೇಳಿದರು. "ನ್ಯಾಯ ಯಾವಾಗಲೂ ಸತ್ಯದ ಕಡೆ ಇರುತ್ತೆ ತಮ್ಮಾ" ಎಂದರು.

ವಕೀಲಿ ವೃತ್ತಿಯಲ್ಲಿದ್ದರೂ ಅವರ ಒಲವೆಲ್ಲಾ ಸಾಹಿತ್ಯದಲ್ಲಿ ಇತ್ತು. ಒಮ್ಮೆ ಒಬ್ಬರು 'ಅರೆರೆ!' ಎಂದು ಉದ್ಗಾರ ತೆಗೆದಾಗ 'ಅರೆ!= ಅರೆ ಇದು ಮರಾಠಿ ಶಬ್ದ ಅದರ ಬದಲು ಭಾಪು ಭಾಪು ಸಾಧು ಸಾಧು ಎಂದು ಶಬ್ದಗಳನ್ನು ಪ್ರಯೋಗಿಸಬೇಕು' ಎಂದಿದ್ದರು. ಧಾರವಾಡದಲ್ಲಿ ವಿದೇಶೀ ಪಂಡಿತನೊಬ್ಬನು ಭಗವದ್ಗೀತೆ ಮತ್ತು ಪಂಚಕನ್ಯೆಯರ ಬಗ್ಗೆ ಅಸಂಬದ್ಧ ಮಾತಾಡಿದಾಗ ಸಭೆಯಲ್ಲಿದ್ದ ಆಚಾರ್ಯರು ಎದ್ದು ನಿಂತು "ನಿಮ್ಮಪ್ಪನಾದರೂ ಸಂಸ್ಕೃತ ಕಲಿತಿರುವನೇನು? ಗೊತ್ತಿಲ್ಲದ್ದನ್ನು ಗೊತ್ತಿದೆ ಎಂದು ಹೇಳಿ ಅವಹೇಳನಕ್ಕೆ ಒಳಗಾಗಬೇಡಿ" ಎಂದು ನಿಷ್ಠುರವಾಗಿ ನುಡಿದ್ದಿದ್ದರು. ಖಂಡ ತುಂಡವಾಗಿ ಅಸತ್ಯದ ನುಡಿಗಳನ್ನು ವರ್ತನೆಗಳನ್ನು ಖಂಡಿಸುತ್ತಿದ್ದರು.

ಹಾಗೆಂದು ಅವರು ಕಠಿಣ ಮನುಷ್ಯರೂ ಕಠಿಣ ನುಡಿಗಳನ್ನಾಡುವವರೆಂದು ಯಾರಾದರೂ ಭಾವಿಸಿದರೆ ತಪ್ಪಾದೀತು ಅವರು ವಿನೋದಕ್ಕೆ ಬರಹದಲ್ಲೂ ಮಾತಿನಲ್ಲೂ ಹೆಸರಾಗಿದ್ದರು.

ಒಂದು ಸಲ ಆಚಾರ್ಯರನ್ನು ಕುರಿತು "ಚಳವಳಿ ಚಳವಳಿ ಅಂತ ಎನ್ನುತ್ತಾರೆ ಪ್ರತಿಯೊಂದಕ್ಕೂ ಚಳವಳಿ ಬೇಕೇ" ಎಂದರು. ಆಗ ಆಚಾರ್ಯರು ಕೊಟ್ಟ ಉತ್ತರ "ಏನು ಗೊತ್ತೇ? ಹೌದು ಬೇಕು. ಜಮಖಂಡಿ ಅಪ್ಪಾಸಾಹೇಬರ ಶ್ರಾದ್ಧಕ್ಕೂ ಅದೇ ಮಂತ್ರ." ಓರ್ವ ಬಡ ವೈದಿಕ ಬ್ರಾಹ್ಮಣನ ಶ್ರಾದ್ಧಕ್ಕೂ ಅದೇ ಮಂತ್ರ.

"ಅವರು ಹಾಸ್ಯ ವಿಡಂಬನೆಗೆ ಇನ್ನೊಂದು ನಿದರ್ಶನವೆಂದರೆ ಮುತ್ತಮ್ಮನ ಸ್ತುತ್ಯವಾದ ಮದುವೆ ಎಂಬ ಲೇಖನ" ವಿನ್ಸೆಂಟ್ ಚರ್ಚಿಲ್ ಎಂಬ ಬ್ರಿಟಿಷ್ ಪ್ರಧಾನಿಯ ಹೆಂಡತಿ ಲೇಡಿ ಚರ್ಚಿಲ್ ಎಂಬ ಸೌಭಾಗ್ಯಾಕಾಂಕ್ಷಿಣೀ ಜಠರ ಕನ್ಯೆಯು ಹೊನ್ನೆ ಲೆಫ್ಟಿನೆಂಟ್ ಪೋರ್ಚ್‌ನೆಂಬ ಶಿಪಾಯಿ ಗಡಿಯನ್ನು ಮದುವೆ ಮಾಡಿಕೊಂಡಳು ಎಂಬ ಅಚುಂಬಿತವಾರ್ತೆ ಬಂದಿರುವುದು ಮದುವೆ ಕಾಲಕ್ಕೆ ಈ ನೂತನ ನವತಾರೆಯಾದ ಕನ್ಯೆಯ ವಯಸ್ಸು ೬೪ ಇತ್ತು. "ನಮ್ಮಲ್ಲಿ ಅಷ್ಟ ವರ್ಷೇ ಭವೇತ್ ಕನ್ಯಾ ಎಂದು ಹೇಳಿದೆ." ಆ ಅಷ್ಟಕ್ಕೆ ಅಷ್ಟರಿಂದ ಗುಣಿಸಲಾಗಿ ಬಂದಷ್ಟು ಗುಣಾಕಾರವೆ ಎಂದರೆ ೮x೮=೬೪ ಲೇಡಿ ಚರ್ಚಿಲ್ಲಳ ವಯಸ್ಸಾಗಿರುವುದರಿಂದ ಅವಳು ಕನ್ಯತ್ವದ ವರ್ಗದಲ್ಲಿರುವಳು ಎಂದು ಹೇಳಬಹುದು.

ಲಾರ್ಡ್ ಕ್ಯಾಂಡೋಲ್ಫನು ೧೮೬೫ರಲ್ಲಿ ತೀರಿಕೊಂಡನಂತರ ಆ ಸತಿ ಮತ್ತೊಬ್ಬ ವರನನ್ನು ಹುಡುಕಿ ಮದುವೆ ಆದಳು. ಮತ್ತೆ ೧೯೧೩ರಲ್ಲಿ ಮಂಗಲ ಸೂತ್ರ ಹರಿದೊಗೆದು ಇವನನ್ನು ಮಂಚದಿಂದ ಬರ್ತ್‌ಫ್ ಮಾಡಿಸಿ ಮೂರನೆಯ ಕಲ್ಯಾಣೋತ್ಸವವನ್ನು ಬೆಳಸಿಕೊಂಡಿರುವಳು. ಈ ಚೇಂಬರ್ಲಿನನ್ನು ವರಿಸಿ ವೃದ್ಧಾ ಮಾತೋಶ್ರೀ ಈಗ ೭-೮ ತಿಂಗಳುಗಳಾಚೆಗೆ ನವೀನ ಗೃಹಿಣಿ ಪದ ಹೊಂದಿದಳೆಂಬ ಸಮಾಚಾರವನ್ನು ನಮ್ಮ ವಾಚಕರು ಕೇಳಿರಬಹುದು.

ಹಿಂದೂಸ್ಥಾನ ವಾಸಿಗಳಾದ ನಮಗೆ ಇದೆಲ್ಲ ವಿಪರೀತವಾಗಿ ತೋರಿದರೂ ಸುಧಾರಿಸಿದ ಪಾಶ್ಚಾತ್ಯ ಜನಾಂಗಗಳಲ್ಲಿ ಇಂಥ ವಿವಾಹಗಳು ಸಮ್ಮತವಾಗಿವೆ.

ನಮ್ಮಲ್ಲಿಯಾದರೂ ಖಾನೇಷುಮಾರಿಯಲ್ಲಿ ಮಾತ್ರ ಗಂಡಸರೆಂದು ಬರಿಸಿ ಕೊಳ್ಳಲಿಕ್ಕೆ ಪಾತ್ರರಾದ ವೃದ್ಧಮುದಿಮಕ್ಕಳು ತಮ್ಮ ಪೂರ್ವದ ಹೆಂಡತಿಯ ಸ್ಮಶಾನಯಾತ್ರೆಯನ್ನು ಮುಗಿಸಿಕೊಂಡು ಮನೆಗೆ ಬರುವಾಗ ಮಾರ್ಗದಲ್ಲಿ ಕಂಡ ಕನ್ಯೆಯನ್ನು ತಮ್ಮ ಸುಲೋಚನಗಳ (ಚಾಳೀಸು) ದ್ವಾರಾ ದಿಟ್ಟಿಸಿ ನೋಡಿ 'ಇವಳಾರ ಮಗಳು? ಇವಳಾರ ಮಗಳು?' ಎಂದು ಪ್ರಶ್ನೆಯನ್ನು ಮಾಡುತ್ತಾರಲ್ಲವೇ?

ಬರಹದಲ್ಲಷ್ಟೆ ವಿಡಂಬನೆ ಹಾಸ್ಯ ಮಾಡುತ್ತಿದ್ದುದ್ದಲ್ಲದೆ ನಿಜ ಜೀವನದಲ್ಲೂ ನಗೆ ಪ್ರಸಂಗಗಳನ್ನು ನಡೆಸಿದ್ದರು. ಪ್ರಸಿದ್ಧ ಸಾಹಿತಿಗಳಾದ ರಾ.ಯ ಧಾರವಾಡಕರರ ತಂದೆ ಶಾಮಾಚಾರ್ ಧಾರವಾಡಕರ ಜತೆ ವಾಸುದೇವಾ ಚಾರ್ಯರು ಹುಬ್ಬಳ್ಳಿಯಿಂದ ಬಾಗಿಲುಕೋಟೆಗೆ ಹೊರಟಿದ್ದರು. ರೈಲಿನಲ್ಲಿ ತುಂಬಾ

ಗದ್ದಲವಿತ್ತು. ಕೂಡಲಿಕ್ಕೆ ಇರಲಿ ನಿಲ್ಲಲಿಕ್ಕೂ ತಾವಿಲ್ಲ ಎಂದಷ್ಟು ಜನಸಂದಣಿ. ಆಗ ವಾಸುದೇವಾಚಾರ್ಯರು ಒಂದು ಉಪಾಯ ಮಾಡಿದರು.

ಕ್ಯಾಲೆಂಡರ್ ಹಾಳೆ ಮಗುಚಿದ ಹಾಗೆ ಪ್ರತಿ ವರುಷವೂ ಆಗ ಬಿಟ್ಟೂ ಬಿಡದೆ ಪ್ಲೇಗ್ ಹಾವಳಿ ಇರುತ್ತಿತ್ತು. ಆಚಾರ್ಯರು ಶಾಮನಿಗೆ ಒಂದು ಉಪಾಯ ಹೇಳಿ, ನೀನು ಹೂಂ ಅನ್ನುವೆ ತಾನೆ ಎಂದರು. ಅವರು 'ಹೂಂ' ಎಂದರು. 'ನೋಡು ನನ್ನ ಉಪಾಯದಿಂದ ಇಷ್ಟೊಂದು ಜನಸಂದಣಿ ಇದ್ದರೂ ನಾವಿಬ್ಬರೂ ಆರಾಮಾಗಿ ಪ್ರಯಾಣ ಮಾಡುತ್ತೇವೆ ನೋಡುತ್ತಿರು' ಎಂದರು. ಸರಿ ಎಂದು ಶಾಮಾಚಾರ್ಯರು ಹೇಳಿದರು ನಾನು ಮುಸುಕು ಹಾಕಿಕೊಂಡು ಮಲಗುತ್ತೇನೆ. ನೀನು ನನ್ನ ಹತ್ತಿರ ಕುಳಿತು ಅಳುತ್ತಿರಬೇಕು ಯಾರಾದರೂ ಯಾಕೆ ಅಳುತ್ತೀರಿ ಅಂತ ಕೇಳಿದ ಕೂಡಲೇ "ಇವ ನನ್ನ ತಮ್ಮ ಇವನಿಗೆ ಪ್ಲೇಗ ಬಂದಿದೆ ಎಂದು ಇನ್ನೂ ಹೆಚ್ಚಾಗಿ ಅಳಬೇಕು ಎಂದರು. ಶಾಮಾಚಾರ್ಯರು ಹಾಗೇ ಮಾಡಿದರು. ಪ್ಲೇಗು ಎಂದಾಕ್ಷಣ (ಅದು ಅಂಟುರೋಗವಲ್ಲವೇ?) ಗಾಡಿಯಲ್ಲಿದ್ದ ಜನರೆಲ್ಲ ಕೆಳಗೆ ಇಳಿದು ಹೋದರು. ಆಮೇಲೆ ಶಾಮಾಚಾರ್ಯರು ಒಂದೇ ಸವನೆ ಅಳುವ ಪ್ರಮೇಯ ಬರಲಿಲ್ಲ. ಬರಿಯ ಸ್ಟೇಷನ್ ಬಂದಾಗ ಅತ್ತರೆ ಸಾಕಾಗುತ್ತಿತ್ತು. ಜನವೆಲ್ಲ ಮುಂದಿನ ಡಬ್ಬಿಗೆ (ಬೋಗಿಗೆ) ಹೋಗುತ್ತಿದ್ದರು. ಇದರಿಂದ ಆ ಕಂಪಾರ್ಟ್‌ಮೆಂಟಿಗೆ ಬಾಗಿಲುಕೋಟೆಯವರೆಗೆ ಯಾವ ನರಪಿಳ್ಳೆಯೂ ಬರಲಿಲ್ಲ.

ಖಂಡತುಂಡ ಬರಹಗಾರರೂ ವಿನೋದಿಗಳೂ ಆಗಿದ್ದ ವಾಸುದೇವಾಚಾರ್ಯರು ಮಕ್ಕಳೊಡನೆ ಆಟವಾಡುವುದೂ ಅವರಿಗೆ ಚೇಷ್ಟೆ ಮಾಡುವುದೂ ಮಾಡುತ್ತಿದ್ದರು. ಚಿಕ್ಕಮಕ್ಕಳೆಂದೇ ಆಚಾರ್ಯರಿಗೆ ತುಂಬ ಅಕ್ಕರೆ.

ಅವರು ಮಕ್ಕಳಿಗೆ 'ಕಲ್ಲುಸಕ್ಕರೆ ಕೊಡುವೆ ಬರ್ರಿ' ಎಂದು ಎಲ್ಲಾ ಮಕ್ಕಳನ್ನು ಕರೆಯುತ್ತಿದ್ದರು. ಅವರು ಬಳಿಗೆ ಬಂದೊಡನೆ ಅವರಿಗೆ ಕೊಡದೆ ನಾನು ತಿನ್ನುತ್ತಿರುವೆ. ನೀವು ನೋಡುತ್ತಿರಿ ಎಂದು ಅವರನ್ನು ರೇಗಿಸುತ್ತಿದ್ದರು. ಆ ಮಕ್ಕಳು ಅಳತೊಡಗಿದಾಗ ನಕ್ಕು ಅವರಿಗೆಲ್ಲಾ ಕಲ್ಲು ಸಕ್ಕರೆ ಹಂಚುತ್ತಿದ್ದರು.

ಆಚಾರ್ಯರು ಸಚಿತ್ರ ಭಾರತ ಪತ್ರಿಕಾ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಮೇಲೆ ತಾವೇ ಶುಭೋದಯವೆಂಬ ವಾರಪತ್ರಿಕೆಯನ್ನು ೧೯೧೭ ಪ್ರಾರಂಭಿಸಿದರು. ಸುಮಾರು ೩ ವರ್ಷಗಳ ಕಾಲ ಅವರು ದಿವಂಗತರಾಗುವವರೆಗೆ ಆ ಪತ್ರಿಕೆಯಲ್ಲಿ ಸುಮಾರು ೨೦೦೦ ಪುಟಗಳಷ್ಟು ಬರೆದಿದ್ದಾರೆ.

ಆ ಪತ್ರಿಕೆಯ ಉದ್ದೇಶವನ್ನು ಹೀಗೆ ಬಣ್ಣಿಸಿದ್ದಾರೆ "ಧಾರ್ಮಿಕ ವಿಷಯಗಳಲ್ಲಿ ಉದಾರ ಮತವಾದಿಗಳ ಪ್ರಾಗತಿಕವಾದ ಅನುಕರಣೆಯನ್ನೆ ನಾವು ಮಾಡುತ್ತಿರುವೆವಲ್ಲದೆ ಆ ವಿಷಯದಲ್ಲಿ ನಾವು ಸಂಕುಚಿತವಾದ ವಿಚಾರವನ್ನು ತಳೆದವರಲ್ಲ. ಸ್ತುತಿಯನ್ನು ಮಾಡುವಂಥ ಭಟ್ಟಂಗಿ ಕೆಲಸವನ್ನು ಶುಭೋದಯಕಾರರು ಸರ್ವಥಾ ಮಾಡತಕ್ಕವರಲ್ಲ.

ಶುಭೋದಯ ಪತ್ರಿಕೆಯ ಧ್ಯೇಯಶ್ಲೋಕ ಹೀಗಿತ್ತು. "ವೀರ ವಿಚಾರಯುಕ್ತ-ವರಧಾರ್ಮಿಕ-ನೈತಿಕ-ರಾಜಕೀಯ-ಸಾಂಸಾರಿಕ-ವಿದ್ಯೆ-ಉದ್ಯಮ ಕಲಾ-ಕೃಷಿಕರ್ಮ ಸಾಲೇಖಮಾಲೆಯಿಂ ಚಾರುಚರಿತ್ರ ಸಂಪದಭಿವೃದ್ಧಿ- ಸಮಾಜ ಹಿತ ಪ್ರಬಂಧದಿಂ ಭಾರತಸಾರ ಕಲ್ಪಲತೆಯಂತೆ ಎಸೆಯುತ್ತ ಇಹುದು ಈ ಶುಭೋದಯಂ" ಹಿಂದಿನ ಕಾಲದಲ್ಲಿ ಎಲ್ಲ ಪತ್ರಿಕೆಗಳೂ ಪದ್ಯರೂಪದಲ್ಲಿ ತಮ್ಮ ಧ್ಯೇಯವನ್ನು ಮುಖ ಪುಟದಲ್ಲಿ ಪ್ರಕಟಿಸುತ್ತಿದ್ದವು. ಪ್ರತಿಶುಕ್ರವಾರ ಸಾಯಂಕಾಲ ಶುಭೋದಯ ನಾಲ್ಕು ಪುಟಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ ಅನಂತರ ಹೆಚ್ಚು ಪುಟಗಳು ಆಯಿತು. ಸಚಿತ್ರ ಭಾರತ ಹೆಚ್ಚಾಗಿ ಸಾಹಿತ್ಯ ವಿಷಯಗಳಿಗೆ ಮೀಸಲಾಗಿತ್ತು. ಶುಭೋಧಯದಲ್ಲಿ ರಾಜಕೀಯಾಂಶ ಹೆಚ್ಚಾಗಿರುತ್ತಿತ್ತು. ರಾಜಕೀಯ ಸಾಮಾಜಿಕ ಅಭಿಪ್ರಾಯ, ಕನ್ನಡಾಭಿಮಾನದ ವಿಷಯಗಳು ವ್ಯಂಗ್ಯ ಶೈಲಿಯಲ್ಲಿ ಪ್ರಕಟವಾಗುತ್ತಿದ್ದವು.

ಶುಭೋಧಯ ಪತ್ರಿಕೆಯ ಜನಪ್ರಿಯತೆ ಎಷ್ಟಿತ್ತು ಎಂದರೆ ಅದಕ್ಕೊಂದು ಬುರ್ಲಿ ಬಿಂದು ಮಾಧವರು ಹೇಳಿದ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಬಹುದು.

ಧಾರವಾಡದಲ್ಲಿ ಕನ್ನಡಿಗರ ಬೇಡಿಕೆಗಳನ್ನು ಜನರ ಮುಂದಿಡಲು ಒಂದು ಸಭೆ ಏರ್ಪಾಟಾಗಿತ್ತು ಇದರಲ್ಲಿ ಆಲೂರವೆಂಕಟರಾವ್, ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರ ಹೊನ್ನಾಪುರ ಗದ್ದಿಗೆ ಮಠ ಮುಂತಾದ ಮುಖಂಡರು ಮುಂಚೂಣಿಯಲ್ಲಿದ್ದರು. ೧೯೧೯ರ ಒಂದು ಸಾಯಂಕಾಲ ಆ ಸಭೆ ಏರ್ಪಾಟಾಯಿತು. ಆ ಸಭೆಗೆ ಅಧ್ಯಕ್ಷರಾಗಲು ವಾಸುದೇವಾಚಾರ್ಯರೇ ಯೋಗ್ಯ ರೆಂದು ಸರ್ವಾನುಮತದಿಂದ ನಿರ್ಧರಿಸಿದರು. ವಾಸುದೇವಾಚಾರ್ಯರನ್ನು ಆಹ್ವಾನಿಸಲು ಶ್ರೀ ಮುಳಿಯ ಗೋವರ್ಧನರಾಯರು, ಬುರ್ಲಿ ಬಿಂದು ಮಾಧವಾಚಾರ್ಯರು ಬಂದರು. ಆಚಾರ್ಯರು ಮೊದಲು ಒಪ್ಪದೆ ಬಲವಂತಕ್ಕೆ ಒಪ್ಪಿದರು. ಏಕೆಂದರೆ ಆಚಾರ್ಯರು ವಾಚಾಳಿಗಳಾದರೂ, ಭಾಷಾ ಪಾಂಡಿತ್ಯ

ವಿದ್ದರೂ ಅವರಿಗೆ ಸಭಾಕಂಪನವಿತ್ತು. ಸಭೆಗಳಲ್ಲಿ ಅದರಲ್ಲೂ ಬೃಹತ್ ಸಭೆಯಲ್ಲಿ ಮಾತನಾಡಿಯೇ ಇರಲಿಲ್ಲ. ಹಾಗಾಗಿ ಅವರು ಹಿಂದೇಟು ಹಾಕಿದ್ದರು. ಗಣ್ಯರ ಒತ್ತಾಯಕ್ಕೆ ವಿಧಿಯಿಲ್ಲದೆ ಒಪ್ಪಿಕೊಂಡಿದ್ದರು.

ಮಂಗಳವಾರಪೇಟೆಯ ವಿಠೋಬದೇವರ ಗುಡಿಯಲ್ಲಿ ಸಭೆ ಏರ್ಪಾಟಾಗಿತ್ತು. ಊರ ಜನರೆಲ್ಲ ಅರ್ಧ ಗಂಟೆ ಮುಂಚಿತವಾಗಿ ಬಂದು ಜಮಾಯಿಸಿದ್ದರು. ಮನೆ ಮಾಳಿಗೆಗಳ ಮೇಲೆಲ್ಲ ಜನ ಕೂತಿದ್ದರು.

ಹೊನ್ನಾಪುರಮಠ, ಕಡಪಾರಾಘವೇಂದ್ರರಾವ್, ದೇಶಪಾಂಡೆ, ವಿಠ್ಠಲರಾವ್ ಮೊದಲಾದ ಮಹನೀಯರು ವಾಗ್ಮಿಗಳು ಅಮೋಘವಾಗಿ ಮಾತಾಡಿದರು. ಅನಂತರ ಈಗ ಸಭಾಧ್ಯಕ್ಷರಾದ ವಾಸುದೇವಾಚಾರ್ಯರು ಮಾತಾಡುತ್ತಾರೆ ಎಂದು ಹೇಳಿದ ಕೂಡಲೆ ಜನರು ಭಾರೀ ಕರತಾಡನ ಮಾಡಿದರು. ಶುಭೋದಯ ಪತ್ರಿಕೆಯ ಮಾರ್ಮಿಕ ವಿನೋದ, ಸೂಕ್ಷ್ಮ ನಿರೀಕ್ಷಣೆ ಧಾರಾಳ ಶೈಲಿ ಓದುಗರನ್ನು ಸೆರೆ ಹಿಡಿದಿತ್ತು. ಆಗಿನ ಯುವಜನರನ್ನು ಬಡಿದೆಬ್ಬಿಸಿತ್ತು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಈ ಪತ್ರಿಕೆಯಲ್ಲಿ ಬರುತ್ತಿದ್ದ ವಿಚಾರಗಳನ್ನು ಚರ್ಚಿಸುತ್ತಿದ್ದರು. ಹೀಗಾಗಿ ಜನ ಕಾತುರದಿಂದ ನೋಡುತ್ತಿದ್ದರು. ವಾಸುದೇವಾ ಚಾರ್ಯರು ಎದ್ದು ನಿಂತರು. ತಡವರಿಸುತ್ತ ನಿಂತರು. ಸಭಾ ಕಂಪನದಲ್ಲೇ "ನಾನು ಭಾಷಣ ಮಾಡುವುದನ್ನೆಲ್ಲ ನಾಳಿನ ಶುಭೋದಯ ಪತ್ರಿಕೆಯಲ್ಲಿ ಬರೆಯುವೆನು" ಎಂದು ಹೇಳಿ ಕುಳಿತುಬಿಟ್ಟರು. ಮರುದಿನ ಪತ್ರಿಕಾ ಕಚೇರಿಗೆ ಜನ ತುದಿಕಾಲಲ್ಲಿ ನಿಂತು ಪತ್ರಿಕೆ ಖರ್ಚಾಯಿತು. ಬೇಗ ಕೊಡಿ ಕೊಡಿ ಎಂದು ೭೦೦–೮೦೦ ಜನ ಕೂಗಿಟ್ಟರು. ಕೆಲವೇ ನಿಮಿಷಗಳಲ್ಲಿ ಪ್ರತಿಗಳೆಲ್ಲ ಆಚಾರ್ಯರು ಶುಭೋದಯ ಪತ್ರಿಕೆಯಲ್ಲಿ ಹಲವಾರು ಸಾಹಸಗಳನ್ನು ಪ್ರಯೋಗಗಳನ್ನು ಮಾಡಿದ್ದರು. ಧಾರವಾಡಕರರು ಇಂಥ ಒಂದು ಪ್ರಸಂಗವನ್ನು ಹೀಗೆ ಹೇಳಿದ್ದಾರೆ. 'ಕಲ್ಕತ್ತೆಯಲ್ಲಿ ಕಾಂಗ್ರೆಸ್ ಮಹಾಧಿ ವೇಶನ ಸೇರಿದ ಸಮಯ... ಆಗ ಆಚಾರ್ಯರು ತಮ್ಮ ಪತ್ರಿಕೆಯಿಂದ ಅಧಿವೇಶನದ ವರದಿ ಮಾಡಲು ತಾವು ಒಬ್ಬ ಸ್ವಂತ ಬಾತ್ಮಿದಾರರನ್ನು ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳನ್ನು ವರದಿ ಮಾಡಲು ಕಲ್ಕತ್ತೆಗೆ ಕಳಿಸಿರುವುದಾಗಿ ಬರೆದರು. ಇದರಿಂದ ಜನ ನೇರ ಸುದ್ದಿ ಓದಲು ಕಾತುರರಾದರು. ಕಾಂಗ್ರೆಸ್ ಅಧಿವೇಶನದ ಮೆರವಣಿಗೆಯ ವೈಭವವು ಪತ್ರಿಕೆಯಲ್ಲಿ ವರ್ಣರಂಜಿತವಾಗಿ ಮೂಡಿ ಬಂದಿತ್ತು. ಮೆರವಣಿಗೆಗೆ ಸಿದ್ಧಪಡಿಸಿದ ಕುದುರೆಗಳ ರಥ. ಮಾಲೆಗಳ ಅಲಂಕಾರ ಮಂಗಳವಾದ್ಯಗಳು,

ಕಲಾಪ್ರದರ್ಶನಗಳ ವೈಭವ ಮೊದಲಾದವುಗಳ ವಿವರಗಳು ಬಂದವು. ಜನ ಆನಂದ ಉತ್ಸಾಹಗಳಿಂದ ಓದಿದರು. ಇಂಗ್ಲಿಷ್ ಪತ್ರಿಕೆಗಳಿಗಿಂತ ಮುಂಚಿತವಾಗಿ ಇಷ್ಟು ವಿವರಗಳನ್ನು ಹೇಗೆ ಯಾವ ಅಂಚೆ ಮೂಲಕ ತರಿಸಿದ್ದಾರೆ ಎಂಬುದನ್ನು ತಿಳಿಯದೆ ಆಶ್ಚರ್ಯ ಹೊಂದಿದರು.

ಆದರೆ ನಿಜವಾದ ಸಂಗತಿ ಏನಾಗಿತ್ತು ಎಂದರೆ ಆಚಾರ್ಯರು ತಮ್ಮ ಕಲ್ಪನೆಯಿಂದಲೇ ಮೆರವಣಿಗೆಯ ಎಲ್ಲ ವಿಷಯಗಳನ್ನು ಊಹಿಸಿ ಪತ್ರಿಕೆಯಲ್ಲಿ ಬರೆದಿದ್ದರು. ಕಾಂಗ್ರೆಸ್ ಅಧ್ಯಕ್ಷರ ಮಹಾಧಿವೇಶನದ ಮೆರವಣಿಗೆ ವೈಭವೋಪೇತ ವಾಗಿರಲೇಬೇಕೆಂದು ಊಹಿಸಿ ಬರೆದಿದ್ದರು ಜನ ಮೂರು ದಿನಗಳವರೆಗೆ ವರದಿಗಳನ್ನು ಓದಿದ್ದೇ ಓದಿದ್ದು ನಲಿದಿದ್ದೇ ನಲಿದಿದ್ದು...

ಇಂಥ ವಿಚಿತ್ರ ಸಾಹಸ ಮಾಡುತ್ತಿದ್ದ ಕೆರೂರು ಜೀವನದಲ್ಲಿ ಮಾತು ಕಥೆಗಳಲ್ಲಿ ವಿನೋದಿಗಳಾದ ಅವರು ತಮ್ಮ ಬರಹಗಳಲ್ಲೂ ಹಾಸ್ಯವನ್ನು ಮಿಂಚಿಸಿದ್ದಾರೆ. ಅವರ ಎಲ್ಲ ಕೃತಿಗಳಲ್ಲಿ ಸಹಜವಾಗಿ ಹಾಸ್ಯಮಯ ಸಂಭಾಷಣೆಯು ನಗೆನುಡಿಗಳು ಧಾರಾಳವಾಗಿ ಕಾಣುತ್ತವೆ. ಇದು ಅವರ ಶೈಲಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಪ್ರಹ್ಲಾದ್ ಮೌದ್ಗಲ್ಯರು ಇಂಥ ಪ್ರಸಂಗದ ನುಡಿಗಳನ್ನೆಲ್ಲ ತಮ್ಮ ಮಹಾಪ್ರಬಂಧದಲ್ಲಿ ಹೆಕ್ಕಿ ಕೊಟ್ಟಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಗಮನಿಸಬಹುದು.

'ವ್ಯಕ್ತಿಗಳನ್ನು ವರ್ಣಿಸುವಾಗ ನಳ ಚರಿತ್ರೆಯಲ್ಲಿ ವಿಕಾರಗೊಂಡ ನಳನನ್ನು ಕನಕದಾಸರು ವರ್ಣಿಸಿದಂತೆ ಆಚಾರ್ಯರು ವರ್ಣಿಸುತ್ತಾರೆ. ಅದರಲ್ಲಿ ಕಿರಿ ಮಿಂಚಿನಂತೆ ಹಾಸ್ಯ ಸುಳಿದು ಹೋಗುತ್ತದೆ.

ಉದಾಹರಣೆಗೆ, ಗುಲ್‌ಬಾಯಿ ಕಥೆಯಲ್ಲಿ ಥಂಡೇರಿ ವ್ಯಕ್ತಿಯ ವರ್ಣನೆ ಹೀಗಿದೆ: "ಥಂಡೇರೆಯವರ ತಲೆಯ ಮೇಲೆ ಪೇಶ್ವಾಯಿ ಕಾಲದ ಕೆಂಪು ಮುಂಡಾಸವಿತ್ತು. ಜರತಾರಿ ಅರಿವೆಯು ಅವರ ಉದ್ದಂಗಿಯ ಮೊಳಕಾಲ ಕೆಳಗೆ ಒಂದು ಗೇಣು ಇಳಿ ಬಿದ್ದಿತ್ತು. ಉಟ್ಟಿರುವ ಸೊಲ್ಲಾಪುರದ ಗಿರಣಿಯ ಧೋತರವು ಕಲ್ಲು ನೀರುಗಳ ಹೊಡೆತವನ್ನು ಎರಡು ವರ್ಷಗಳವರೆಗೆ ಸಹಿಸಿದ್ದರೂ ಹಣಿದಿದ್ದಿಲ್ಲ." ಔರಂಗಸೇಬ ಕಾದಂಬರಿಯಲ್ಲಿ ಅಡಿಗೆಯವನ ವರ್ಣನೆಯ ಮಾತುಗಳಿವು "ಮುಂಡಿಗೆಯ ತುಂಡುಗಳ ಮೇಲೆ ಇರಿಸಿದ ತುಂಬಿದ ಚೀಲದಂತಿರುವ ಅವನ ಹೊಟ್ಟೆ ಎದ್ದು ಕಾಣುತ್ತಿತ್ತು. ಹೊಟ್ಟೆಯ

ಭವ್ಯವಾದ ತಿರಿಯು ಎಡಬಿಡದೆ ಊದುತ್ತಿರಲು ಆಧ್ಯತೆ ಪ್ರಮಾಣವಾಗಿ ಹೊರಟ ಉಸುರಿಗೆ ಗೆಣಸಿನಂತಿರುವ ಅವನ ಮೂಗು ಸಾಲದೆ ಹೋದದ್ದರಿಂದ ಅವನು ತನ್ನ ವಿಸ್ತಾರವಾದ ಬಾಯಿಯನ್ನು ತೆರೆದಿಟ್ಟಿದ್ದನು."

ಸಂಭಾಷಣೆಗಳಲ್ಲೂ ಮಿಂಚು ಹುಳುಗಳಂತೆ ಅವರ ಹಾಸ್ಯ ಮಿನುಗುತ್ತದೆ. ಮಲ್ಲೇಶಿಯ ನಲ್ಲೆಯರು ಕಥೆಯಲ್ಲಿ ಮುಗ್ಧನೊಬ್ಬನನ್ನು ತರುಣಿಯೊಬ್ಬಳು ನಿಮಗೆ ಹೆಣ್ಣು ಎಂಥದ್ದಿರಬೇಕು. ಕಪ್ಪು ಬಣ್ಣದವಳೂ ಒಂಟಿಗಣ್ಣಿನವಳೂ ಇದ್ದರೆ. ಆಗುವುದೇನು? ಎನ್ನುತ್ತಾಳೆ ಅದಕ್ಕೆ ಅವನು ನಿನ್ನಂಥ ಹುಡುಗಿ ಇದ್ದರೆ ಸೊಗಸಾದೀತು ಎನ್ನುತ್ತಾರೆ. ಅಂಬೆ ಎಂಬ ತರುಣಿ ಬಾವಿಯ ಬಳಿ ನೀರಿನ ಕೊಡವನ್ನು ತರುಣನೊಬ್ಬನಿಗೆ ಮಲ್ಲೇಶಿ ಈ ಕೊಡವನ್ನು ಸ್ವಲ್ಪ ಹೊರೆಸು ಎಂದಾಗ ಅಲ್ಲೇ ಇದ್ದ ವಿಧವೆ ಭಾಯಕ್ಕ ಕಬ್ಬಿನ ಜೆಲ್ಲೆಯಂಥ ಹುಡುಗನ ಮೇಲೆ ಕಣ್ಣು ಹಾಕಿದೆಯಲ್ಲೇ ಎನ್ನುತ್ತಾಳೆ. ಅನಂತರ ಆ ಹುಡುಗನನ್ನು ನನ್ನ ಕೊಡವನ್ನು ಸ್ವಲ್ಪ ಎತ್ತಿ ಹೊರಸು ಎಂದಳು ಅಂಬೆ. "ಭಾಯಕ್ಕ ಸುಮ್ಮಸುಮ್ಮನೆ ಯಾರಿಗೆ ಯಾರು ಕೊಡವನ್ನು ಹೊರಸುತ್ತಾರೆ? ಅನ್ನುತ್ತಾಳೆ. ನೀನು ಕಣ್ಣು ಹಾಕಿದೆ ಅಲ್ಲವೇ ಎಂಬರ್ಥದಲ್ಲಿ. ವಾಸುದೇವಾಚಾರ್ಯರ ನಿತ್ಯಜೀವನ ಕಂಡಾಗ ಕೆಲವು ವಿಶಿಷ್ಟ ಹವ್ಯಾಸಗಳನ್ನು ಕಾಣುತ್ತೇವೆ. ಆ ಪೈಕಿ ಚಹಾಚಟವೂ ಒಂದು, ವಾಸುದೇವಾಚಾರ್ಯರನ್ನು ಕುರಿತು ಸಂಶೋಧನ ಪ್ರಬಂಧ ರಚಿಸಿದ ಪ್ರಹ್ಲಾದ ಮುದ್ಗಲ್‌ರು ವರ್ಣಿಸಿರುವುದು ಹೀಗೆ:

'ವಾಸುದೇವಾಚಾರ್ಯರು ದಿನಕ್ಕೆ ನಾಲ್ಕೈದು ಸಲವಾದರೂ ಚಹಾ ಕುಡಿಯುತ್ತಿದ್ದರು. ಪ್ರತಿಸಲಕ್ಕೆ ನಾಲ್ಕು ಕಪ್ಪಾದರೂ ಚಹ ಬೇಕು. ಅವರ ಮನೆಯಲ್ಲಿ ನಾಲ್ಕು ಕಪ್ಪು ಚಹಾ ಹಿಡಿಯುವ ಒಂದು ಹಿತ್ತಾಳೆ ಕೆಟಲ್ ಇತ್ತು. ಅದರ ತುಂಬ ಚಹಾ ಬದಿಗೊಂದು ಬಸಿ. ಕೋಣೆಯಲ್ಲಿ ದಿಂಬಿಗೆ ಆತು ಕುಳಿತು ಕೊಂಡು ಎಡಗೈಯಲ್ಲಿ ಪುಸ್ತಕ ಅಥವಾ ಪತ್ರಿಕೆ ಹಿಡಿದು ಓದಲು ಪ್ರಾರಂಭಿಸುವ ಮುನ್ನ ಎಡಗೈಯಲ್ಲಿ ಚಹಾ ಬಟ್ಟಲು ಹಿಡಿದು ಗುಟುಕು ಗುಟುಕಾಗಿ ಕುಡಿಯುತ್ತಿದ್ದರು. ಮನೆಯಲ್ಲಿ ಚಹಾ ಸೇವನೆ ಜತೆಗೆ ಗದ್ದನಕೇರಿ ವೆಂಕಟೇಶಾ ಚಾರ್ಯರ ಚಹಾ ಫರಾಳದ ಅಂಗಡಿಗೆ ಭೇಟಿ ಕೊಡುತ್ತಿದ್ದರು. ಚೂಡಾದೊಂದಿಗೆ ಎಂದರೆ ಕರೆದವಲಕ್ಕಿಯನ್ನು ಒಂದೆರಡು ಪ್ಲೇಟಿನೊಂದಿಗೆ ಇನ್ನೊಂದು ಕೆಟಲಿನಷ್ಟು ಚಹಾಪಾನ ಮಾಡುತ್ತಿದ್ದರು.

ಚಹಾಚಟದಂತೆ ಬೀಡಿ-ಸಿಗರೇಟು ಸೇದುವ ಚಟವೂ ಆಚಾರ್ಯರಿಗಿತ್ತು.

ಎಡ್ವರ್ಡ್‌ನ ಚಿತ್ರದ ರೂಲರ್ ಎಂಬ ಬ್ರಾಂಡಿನ ಸಿಗರೇಟು ಇಲ್ಲವೇ ಬಾಗಿಲ ಕೋಟೆಯ ರಾಯಪ್ಪನ ಬೀಡಿ ಸೇದುವುದು ಮಾಮೂಲಾಗಿತ್ತು. ಸಾಮಾನ್ಯವಾಗಿ ಸಾಹಿತಿಗಳಿಗೂ ಬೀಡಿಗಳಿಗೂ ಅದೇನೋ ಒಂದು ಬಗೆಯ ನಂಟು. ಹಲವು ಸಾಹಿತಿಗಳಲ್ಲಿ ವಿಶೇಷವಾಗಿ ಕಾಣುತ್ತೇವೆ. ಎಲ್ಲರಲ್ಲೂ ಅಲ್ಲ. ಕನ್ನಡದ ಪ್ರಸಿದ್ಧ ಕವಿಗಳೊಬ್ಬರು ಬೀಡಿಯನ್ನು ಸಿಗರೇಟು ಪ್ಯಾಕಿನಲ್ಲಿಟ್ಟುಕೊಂಡು ಸೇದುತ್ತಿದ್ದರು. ನೋಡಿದವರಿಗೆ ಬೀಡಿ ಸೇದುವುದು ತಿಳಿಯದಿರಲು. ಇನ್ನೊಬ್ಬ ಪ್ರಸಿದ್ಧ ನವ್ಯ ಹಿರಿಯ ಕವಿಗಳು ಸಾಹಿತ್ಯ ಸಮ್ಮೇಳನದಲ್ಲಿ ಸಿಗರೇಟು ಸಿಗದೆ ಪರಿತಪಿಸಿದರು. ಆಗ ಬಡ್ಜೆಟ್ ಪ್ರಕಟವಾಗುವ ಕಾಲದಲ್ಲಿ ಎಲ್ಲವೂ ಮಾಯ ವಾಗಿತ್ತು. ಸಮ್ಮೇಳನ ವೊಂದರಲ್ಲಿ ಭಾಗವಹಿಸಿದ ಅವರಿಗೆ ವ್ಯವಸ್ಥಾಪಕರು ಆ ಸಮಯದಲ್ಲಿ ಎಲ್ಲಿದಲೋ ತಿಂಗಳುಗಟ್ಟಲೆ ಕುಡಿಯುವಷ್ಟು ಹತ್ತಾರು ಟಿನ್ನುಗಳ ಸಿಗರೇಟಿನ ದೊಡ್ಡ ಪೆಟ್ಟಿಗೆಯನ್ನು ತರಿಸಿಕೊಟ್ಟರು. ಅವರನ್ನು ಕಂಡಾಗಲೆಲ್ಲ ನಾನು ಸಮ್ಮೇಳನ ಮುಗಿದು ೨ ತಿಂಗಳಾಯಿತು. ನಿಮ್ಮ ಪಾಲಿಗೆ ಇನ್ನು ಎಷ್ಟು ತಿಂಗಳು ಸಮ್ಮೇಳನ ಮುಂದುವರೆಯುತ್ತದೆ ಎಂದು ಅವರ ಗೆಳೆಯರು ಕೇಳುತ್ತಿದ್ದರು. ಇನ್ನು ೪ ತಿಂಗಳಾದರೂ. ನಡೆಯುತ್ತದಯ್ಯ ಎನ್ನುತ್ತಿದ್ದರು. ಅಷ್ಟೊಂದು ಸಿಗರೇಟುಗಳ ಟಿನ್ನುಗಳನ್ನು ವ್ಯವಸ್ಥಾಪಕರು ಕೊಟ್ಟಿದ್ದರು. ಸಿಗರೇಟಿನ ಬಗ್ಗೆ ಸೊಗಸಾದ ಕವನಗಳನ್ನೇ ಬರೆದಿದ್ದಾರೆ ಆ ಕವಿಗಳು.

ವಾಸುದೇವಾಚಾರ್ಯರು ಹೆಚ್ಚಾಗಿ ರಾತ್ರಿ ಬರಹದ ಕಾರ್ಯ ಮಾಡುತ್ತಿದ್ದರು. ಅವರ ಮನೆಯ ಪಡಸಾಲೆಯ ಎಡಭಾಗದಲ್ಲಿ ಚಿಕ್ಕದೊಂದು ಕೋಣೆ ಅಲ್ಲೊಂದು ಡೆಸ್ಕ್, ಟೇಬಲ್‌ಲ್ಯಾಂಪ್ ಮಾದರಿಯ ದೊಡ್ಡ ಕಂದೀಲಿನ (ಪಂಜಿನ) ಬೆಳಕಿನಲ್ಲಿ ಚಹ ಸೇವಿಸುತ್ತ ಬರವಣಿಗೆ ಸಾಗಿಸುತ್ತಿದ್ದರು. ಒಮ್ಮೆ ತಮ್ಮ ತಂದ್ರಿಯಲ್ಲಿಯೇ ನಿದ್ದೆ ಹೋಗಿ ದೀಪವು ಪ್ರಜ್ವಲಿಸಿ ಹಾಸಿಗೆ ಭಾಗ ಕೆಲವು ಬರಹದ ಪ್ರತಿಗಳು ಅಗ್ನಿ ಪಾಲಾಗಿದ್ದು ಉಂಟು.

ಈ ಸಂದರ್ಭದಲ್ಲಿ ಕನ್ನಡ ಐತಿಹಾಸಿಕ ನಾಟಕಕಾರ ಸಂಸರ ನೆನಪಾಗುತ್ತೆ. ಸಂಸರು, ರಾತ್ರಿ ಹೊತ್ತು ದೊಡ್ಡದೊಂದು ಸೀಮೆಎಣ್ಣೆ ಡಬ್ಬದ ಮೂತಿಗೇ ಒಂದು ಹಗ್ಗವನ್ನು ಬತ್ತಿ ಮಾಡಿಟ್ಟು ಇಡೀ ರಾತ್ರಿ ಉರಿಸುತ್ತ ಬರೆಯುತ್ತಿದ್ದಂತೆ.

ಹೀಗೆ ಸಾಹಿತಿ–ಕಲಾವಿದ–ವಿದ್ವಾಂಸರ ಭವ ಪ್ರಪಂಚ ಬೇರೆ ತೆರನಾಗಿರುತ್ತದೆ ಭಾವ ಪ್ರಪಂಚ ಬೇರೆ ತೆರನಾಗಿರುತ್ತದೆ. ಭಾವ ಪ್ರಪಂಚದಲ್ಲಿ

ವ್ಯಕ್ತಿಯ ಹವ್ಯಾಸಗಳು ಪರಿಸರದಿಂದ ಜನಸಂಪರ್ಕವನ್ನು ಅವಲಂಬಿಸಿರುತ್ತದೆ. ಭಾವಪ್ರಪಂಚ ವ್ಯಕ್ತಿಯಪ್ರತಿಭೆ ಪಾಂಡಿತ್ಯಗಳ ಫಲವಾಗಿರುತ್ತದೆ. ಒಬ್ಬ ಸಾಹಿತಿಯನ್ನು, ಅವನ ಕಾವ್ಯ ನಾಟಕ ಗದ್ಯ ಕೃತಿಗಳ ಮೂಲಕ ಕಂಡಾಗ ನಮ್ಮ ಮನಸ್ಸಿನಲ್ಲಿ ಮೂಡುವ ಚಿತ್ರವೇ ಬೇರೆ. ಅವರನ್ನು ಕಂಡಾಗ ನಮಗಾಗುವ ಅನುಭವವೇ ಬೇರೆ ಎಲ್ಲೋ ಕೆಲವರ ದರ್ಶನ ಮತ್ತು ಸಾಹಿತ್ಯ ಭವ್ಯವೂ ದಿವ್ಯವೂ ಆಗಿರುತ್ತದೆ. ಅದು ಅಪರೂಪ. ನಾಡಿನ ಭಾಗ್ಯ ವಿನೋದಕ್ಕೆ ಒಬ್ಬ ಪ್ರಸಿದ್ಧ ಸಾಹಿತಿಗಳು ಹೇಳಿದರು. ನೋಡಿ ಕೃತಿ ಓದಿ ಕೃತಿಕಾರನನ್ನು ಫೋಟೋದಲ್ಲಿ ನೋಡಿ ಆನಂದಿಸಿ ಆದರಿಂದ ಕೃತಿ ಓದಿದ ಸಂತೋಷ ನಿಮ್ಮಲ್ಲಿ ಉಳಿಯುತ್ತೆ. ಕೆರೂರು ವಾಸುದೇವಾಚಾರ್ಯರು ಕನ್ನಡಕ್ಕೆ ವಿಶಿಷ್ಟ್ಯ ಕೃತಿಗಳನ್ನು ಕೊಟ್ಟವರು. ಇಂದಿರೆ, ಯದು ಮಹಾರಾಜ, ಭ್ರಾತೃಘಾತುಕ. ಔರಂಗಸೇಬ, ವಾಲ್ಮೀಕಿ ವಿಜಯ, ಯವನಸ್ಯೆರಂಧ್ರೀ ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಇದರಲ್ಲಿ ಇಂದಿರೆ ಕನ್ನಡ ಕಾದಂಬರಿ ಇತಿಹಾಸದಲ್ಲಿ ಮಹತ್ವದ ಸ್ಥಾನಗಳಿಸಿದೆ.

ನಾಟಕರಂಗದಲ್ಲಿ ವಾಸುದೇವಾಚಾರ್ಯ ಅವರು ನೀಡಿದ ಕೊಡುಗೆ ಕಾದಂಬರಿ ಕ್ಷೇತ್ರಕ್ಕಿಂತ ಉನ್ನತವಾದುದು.

ಇಂಗ್ಲಿಷ್ ನಾಟಕಗಳನ್ನು ೨೦ನೇ ಶತಮಾನದ ಪ್ರಾರಂಭದಲ್ಲಿ ತಂದವರಲ್ಲಿ ಅಗ್ರಗಣ್ಯರು ಎಂದರೆ ತಪ್ಪಿಲ್ಲ. ಗೋಲ್ಡ್‌ಸ್ಮಿತ್ ಕವಿಯ 'ಷೀ ಸ್ಟೂಪ್ಸ್ ಟು ಕಾಂಕರ್' ಕೃತಿಯನ್ನು ಪತಿವಶೀಕರಣ ನಾಟಕವಾಗಿ ಅನುವಾದಿಸಿದ್ದಾರೆ. ಷೇಕ್ಸ್‌ಪಿಯರನ 'ದಿ ಮರ್ಚೆಂಟ್ ಆಫ್ ವೆನಿಸ'ನ್ನು ಸುರತನಗರದ ಶ್ರೇಷ್ಠಿ, ಎಂದೂ ಇನ್ನೂ ಷೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ ನಾಟಕವನ್ನು ವಸಂತಯಾಮಿನೀ ಸ್ವಪ್ನ ಚಮತ್ಕಾರ, ರೋಮಿಯೋ ಅಂಡ್ ಜೂಲಿಯೆಟ್ ಕೃತಿಯನ್ನು ರಮೇಶ ಲಲಿತಾ ಎಂದೂ ಇಂಗ್ಲಿಷ್ ನಾಟಕಗಳನ್ನು ಕನ್ನಡೀಕರಣ ಮಾಡಿದ್ದಾರೆ. ಬೆಳ್ಳಿ ಚಿಕ್ಕಿ, ತೊಳೆದ ಮುತ್ತು, ಬೆಳಗಿದ ದೀಪಗಳು ಈ ಮೂರು ಸಂಕಲನಗಳಲ್ಲಿ ಸುಮಾರು ೨೬ ಕಥೆಗಳಿವೆ. ಈ ಪೈಕಿ ಸಚಿತ್ರ ಭಾರತ, ಶುಭೋದಯ ಪತ್ರಿಕೆಗಳಲ್ಲಿ ಇವರು ಬರೆದ ವಿಚಾರ ಪ್ರಚೋದಕ ಲೇಖನಗಳು ಸಾವಿರಾರು ಪುಟಗಳಾಗುತ್ತವೆ.

ಈ ಎಲ್ಲಾ ಕೃತಿಗಳು ಸಂಸ್ಕೃತ ಇಂಗ್ಲಿಷ್ ಕನ್ನಡ ಭಾಷೆ ಸಾಹಿತ್ಯಗಳ ತ್ರಿವೇಣಿ ಸಂಗಮವಾಗಿವೆ. ಗಂಗಾ-ಥೇಮ್ಸ್ ಕಾವೇರಿ ಸಂಸ್ಕೃತಿ ಸಂಗಮವಾಗಿದೆ

ಎನ್ನಬಹುದು. ಇವೆಲ್ಲದರಲ್ಲಿ ಆಚಾರ್ಯರ ಶೈಲಿಯೊಂದು ಎದ್ದು ಕಾಣುತ್ತದೆ. ಈ ಆಚಾರ್ಯ ಶೈಲಿ ಮೂಡಿದ ಬಗ್ಗೆ ರಂ.ಶ್ರೀ. ಮುಗಳಿ ಅವರು ಮನೋಜ್ಞವಾಗಿ ಹೇಳಿದ ಮಾತುಗಳಿವು.

ವಾಸುದೇವಾಚಾರ್ಯರ ಮೇಲೆ ೧೯ನೆಯ ಶತಮಾನದ ಕೊನೆಯ ಭಾಗದಿಂದಲೂ ಅನೇಕ ತರದ ಸಂಸ್ಕಾರಗಳಾಗಿವೆ. ಮನೆತನದ ಸಂಸ್ಕೃತ ಪಾಂಡಿತ್ಯವು ಸ್ಥಾಯಿಯಾಗಿದ್ದು ಉಳಿದ ಸಂಸ್ಕಾರಗಳು ಸಂಚಾರಿಯಾಗಿ ಬಂದು, ಅವರ ಜೀವನ ದೃಷ್ಟಿಯನ್ನು ಶೈಲಿಯನ್ನೂ ರೂಪಿಸಿದೆ.

"ಇಂಗ್ಲಿಷ್ ವಿದ್ಯಾಭ್ಯಾಸದಿಂದ ಅವರು ಪಡೆದ ನವೀನ ಸಂಸ್ಕಾರ ಪುಣೆಯಲ್ಲಿಯ ವಾಸದಿಂದ ದೊರಕಿದ ರಾಜಕೀಯ ಸಾಮಾಜಿಕ ದೃಷ್ಟಿಕೋನ ಮತ್ತು ಮರಾಠಿಯ ಪ್ರಭಾವ, ಮೈಸೂರು ಪ್ರವಾಸದಿಂದ ಪಡೆದ ಮೈಸೂರು ಕನ್ನಡದ ವರ್ಚಸ್ಸು, ಇತಿಹಾಸ ವಾಚನದಿಂದ ಅವರಲ್ಲಿ ಕುದುರಿದ ಕಲ್ಪನಾಶಕ್ತಿ ಮತ್ತು ಅವರು ಮಾಡಿಕೊಂಡ ಉರ್ದು ಭಾಷೆಯ ಪರಿಚಯ ಮುಂತಾದವನ್ನು ನೆನೆಯಬೇಕು. ಮುಖ್ಯವಾಗಿ ಸಂಸ್ಕೃತ ಸಾಹಿತ್ಯ ಮತ್ತು ಉತ್ತರ ಕರ್ನಾಟಕದ ದೇಸಿ ಇವೆರಡರ ಗಾಢ ಸಂಸ್ಕಾರಗಳ ಗರ್ಭದಿಂದ ಅವರ ವಿಶಿಷ್ಟ ಶೈಲಿ ಜನ್ಮ ತಾಳಿದೆ" ಎಂದಿದ್ದಾರೆ. ಮುಗಳಿ ಅವರು.

ವಾಸುದೇವಾಚಾರ್ಯರ ಈ ವಿಶಿಷ್ಟ ಶೈಲಿಯನ್ನು ರಾಯ ಧಾರವಾಡಕರರು ಆಚಾರ್ಯ ಶೈಲಿ ಎಂದು ಕರೆದು ಅದನ್ನು ಹೀಗೆ ವಿವರಿಸಿದ್ದಾರೆ. 'ಇವರ ಶೈಲಿ ಸಂಸ್ಕೃತ ಭೂಯಿಷ್ಠತೆ. ಇಂಗ್ಲಿಷ್ ಪರಿಜ್ಞಾನ, ಪುರಾಣಾದಿಗಳ ಸಾಹಚರ್ಯ ಉತ್ತರ ಕರ್ನಾಟಕದ ದೇಸಿಯ ಕೆಚ್ಚು, ವಿವರಗಳ ಸಜೀವ ಚಿತ್ರಣ ಸುಂದರ ಮತ್ತು ಹರಿತವಾದ ವ್ಯಂಗ್ಯ ಕೊಂಕುಗಳ ಸಮನ್ವಯವೆಂದು ಹೇಳಬಹುದು. ಅವರು ಯಾವ ವಿಷಯದ ಬಗೆಗೆ ಬರೆದರೂ– ಅದು ಸಾಮಾಜಿಕವೇ ಇರಲಿ, ರಾಜಕೀಯವೇ ಇರಲಿ, ತಾತ್ತ್ವಿಕವೇ ಇರಲಿ ಈ ಶೈಲಿ ಅವರ ಅಭಿವ್ಯಕ್ತಿಗೆ ಹಿತವಾಗಿ ಅಳವಡುತ್ತದೆ.'

ಆಚಾರ್ಯರು ತಮ್ಮ ವ್ಯಕ್ತಿತ್ವದಿಂದ ಕೃತಿ ರಚನೆಗಳಿಂದ ಕನ್ನಡಕ್ಕೆ ನೀಡಿದ ಕೊಡುಗೆಗಳನ್ನು ಕನ್ನಡ ಸಾಹಿತ್ಯ ಲೋಕದ ಕಣ್ಮಣಿಗಳು ಹೀಗೆ ಗುರುತಿಸಿದ್ದಾರೆ.

ವಿ. ಸೀತಾರಾಮಯ್ಯನವರ ಮಾತಿದು.

"ವೆಂಕಟಾಚಾರ್ಯರು ಬಂಗಾಲಿಯಿಂದಲೂ ಗಳಗನಾಥರು ಮರಾಠಿಯಿಂದಲೂ ಕೆರೂರು ವಾಸುದೇವಾಚಾರ್ಯರು ಸ್ವಂತವಾಗಿಯೂ ಬರೆದು ಪ್ರಪಂಚಕ್ಕೆ ತಂದ ಕಾದಂಬರಿಗಳು ಕನ್ನಡಿಗರಿಗೆ ಹೊಸ ಬಗೆಯ ಶಿಲ್ಪವನ್ನೂ ಪ್ರಪಂಚವನ್ನೂ ಕಾಣಿಸಿ ಜನರಿಗೆ ಓದುವ ಚಟವನ್ನು ಹುಟ್ಟಿಸಿದವು."

ಕೇಶವ ಶರ್ಮ ಗಲಗಲಿ ಅವರು ಆಚಾರ್ಯರ ಪತ್ರಿಕೋದ್ಯಮದ ಕೊಡುಗೆ ಬಗ್ಗೆ ಹೇಳಿದ ಮಾತು:

"ಕನ್ನಡ ವೃತ್ತ ಪತ್ರಿಕೆಗಳನ್ನು ಓದಲು ಹಿಡಿಯಬಾರದೆಂದು ಪ್ರತಿಜ್ಞೆ ಮಾಡಿದವರು ಕೂಡ ಆಚಾರ್ಯರ ಬರವಣಿಗೆಯ ಶೈಲಿಯಿಂದ ಮುಗ್ಧರಾಗಿ 'ಶುಭೋದಯ'ವನ್ನು ಎತ್ತಿ ಹಿಡಿದು ಮುದ್ದಾಡಿ ಕೊಂಡಾಡಿದರು".

ಡಿ.ಕೆ. ಭಾರದ್ವಾಜರು ವಾಸುದೇವಾಚಾರ್ಯರ ಕಾದಂಬರಿ ಕೊಡುಗೆ ಬಗ್ಗೆ ಹೇಳಿದ ಮಾತು.

"ಕನ್ನಡಿಗರ ವಾಲ್ಟರ್ ಸ್ಕಾಟ್ ಎನಿಸಿ ಕೀರ್ತಿ ಕಾಯರಾಗಿರುವವರು ಶ್ರೀ ಕೆರೂರು ವಾಸುದೇವಾಚಾರ್ಯರು."

ಅನಕೃ ಅಭಿಪ್ರಾಯ: "ಭಾಷಾಂತರ ಯುಗದಲ್ಲಿ ಸ್ವತಂತ್ರ ಕಾದಂಬರಿ ಬರೆಯುವ ಎದೆಗಾರಿಕೆ ತೋರಿದವರು ಎಂ. ಎಸ್. ಪುಟ್ಟಣ್ಣನವರು ಮತ್ತು ಕೆರೂರು ವಾಸುದೇವಾಚಾರ್ಯರು."

ಕನ್ನಡಿಗರ ಅಭಿರುಚಿಯನ್ನು ವಿವಿಧವಾಗಿ ಬೆಳೆಸುವ ಸಾಹಿತ್ಯ ಇನ್ನೂ ಹೊರಹೊಮ್ಮಬೇಕಾಗಿತ್ತು. ಈ ಕಾರ್ಯವನ್ನು ಸಾಧಿಸುವವರಲ್ಲಿ ನಾವು ಮುಖ್ಯವಾಗಿ ಮೂವರನ್ನು ನೆನೆಯಬೇಕಾಗಿದೆ. ಬಿ.ವೆಂಕಟಾಚಾರ್ಯರು ಗಳಗನಾಥರು ಮತ್ತು ಕೆರೂರು ವಾಸುದೇವಾಚಾರ್ಯರು ಎಂದು ಸ.ಸ.ಮಾಳವಾಡರು ಹೇಳಿದ್ದಾರೆ.

ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜಗಳು ಕೆರೂರು ವಾಸುದೇವಾಚಾರ್ಯರ ಸೇವೆಯನ್ನು ಗುರುತಿಸಿದ್ದಾರೆ. ಕನ್ನಡದಲ್ಲಿ ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ಪ್ರಮುಖ ಪುಟದಲ್ಲಿ ಪ್ರಮುಖ ವ್ಯಕ್ತಿ ಆದವರಲ್ಲಿ ಕೆರೂರು ವಾಸುದೇವಾಚಾರ್ಯ ಅವರು ಅಗ್ರಗಣ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ನಮ್ಮಲ್ಲಿ ಸಾಹಿತಿಗಳು ಕಲಾವಿದರು ನಾಡಿಗೆ ನುಡಿಗೆ ದುಡಿದಾಗ ಅವರ ತನು ಮನ ಧನ ಸೇವೆಯನ್ನು ಪಡೆದು ಜನ ಕೊಂಡಾಡುತ್ತಾರೆ. ಅವರ

ಸೇವೆಯ ಲಾಭವನ್ನು ಪಡೆಯುತ್ತಾರೆ. ಆದರೆ ಅಪೂರ್ವ ಸೇವೆ ಸಲ್ಲಿಸಿ. ನಾಡನ್ನು ಕಟ್ಟಿದ ನುಡಿಯನ್ನು ಬೆಳೆಸಿದ ತಮ್ಮ ಜೀವನವನ್ನೇ ಸವೆಸಿದ ಅವರು ಇಳಿಗಾಲದಲ್ಲಿ ಕಾಯಿಲೆ ಬಿದ್ದು ಅಶಕ್ತರಾದಾಗ ಆರ್ಥಿಕ ಮುಗ್ಗಟ್ಟಿನಿಂದ ಮುಗ್ಗರಿಸಿ ಮೂಲೆ ಗುಂಪಾದಾಗ ತಮ್ಮ ಕಲಾಸೇವೆ ಸಾಹಿತ್ಯ ಸೇವೆ ಮಾಡಲಾರದ ಪರಿಸ್ಥಿತಿಗೆ ಬಂದಾಗ ಸಾರ್ವಜನಿಕರ ಕಣ್ಣಿಂದ ತೆರೆ ಮರೆಯಾಗಿ ಜೀವನ ನಡೆಸುವಾಗ ಯಾರೂ ಅವರತ್ತ ತಿರುಗಿ ನೋಡುವುದಿಲ್ಲ. ಇದು ನಮ್ಮ ನಾಡಿನ ಇತಿಹಾಸದಲ್ಲಿ ಎದ್ದು ಕಾಣುವದೇ ಆಗಿದೆ, ಇದಕ್ಕೆ ಕೆರೂರು ವಾಸುದೇವಾಚಾರ್ಯರು ಅಪವಾದವಾಗಿರಲಿಲ್ಲ.

ಆರ್ಥಿಕ ಮುಗ್ಗಟ್ಟು, ಅನಾರೋಗ್ಯದಿಂದ ಆಚಾರ್ಯರು ಬಳಲತೊಡಗಿದರು. ಆ ಸಂದರ್ಭದಲ್ಲಿ ಪತ್ರಿಕೆಯನ್ನು ನಡೆಸಲು ಕಷ್ಟವಾದಾಗ ಗುರುರಾವ ಬೇವೂರ ೨೫ ರೂ, ಡೆಕ್ಕನ್ ಕಾಲೇಜಿನ ವಿದ್ಯಾರ್ಥಿಗಳು ೨೫ ರೂ ಮತ್ತಿತರರು ಧನ ಸಹಾಯ ಮಾಡಿದರೂ ಏನೂ ಪ್ರಯೋಜನವಾಗದೆ ಪತ್ರಿಕೆಯು ಕೊನೆಯುಸಿರು ಎಳೆಯಬೇಕಾಯಿತು.

ಇಂಥ ಪ್ರಸಂಗದಲ್ಲಿ ಅವರ ಹೆಂಡತಿ ಮತ್ತು ಮಗಳು ವಾಸುದೇವಾಚಾರ್ಯರನ್ನು ಕೇಳಿದರು. "ನೀವು ಮಾಸ್ತರರ ಕೆಲಸ ಮತ್ತು ವಕೀಲಿ ಕೆಲಸ ಮಾಡಿದಿರಿ. ಉಳಿದವರು ಮಾಡಿ ಸಾಕಷ್ಟು ಹಣ ಗಳಿಸಿದರು. ಬಂಗಾರ ಮಾಡಿದರು. ಮನೆಕಟ್ಟಿಸಿದರು. ನೀವು ಮಕ್ಕಳಿಗೆಲ್ಲ ಸಾಲ ಮಾಡಿ ಇಟ್ಟಿರಲ್ಲ ಸರಿಯೇ" ಎಂದು ಕೇಳಿದಾಗ ಆಚಾರ್ಯರು ಹೇಳಿದ ಮಾತಿದು.

ಹಣ ಆಸ್ತಿ ತೆಗೆದುಕೊಂಡು ಏನು ಮಾಡುವುದು ನಾನು ಸತ್ತ ಬಳಿಕ ಇಡೀ ಕರ್ನಾಟಕದ ಜನರು ನನ್ನ ಚಿತ್ರವನ್ನು ತಮ್ಮ ಮನೆಯಲ್ಲಿ ಇಟ್ಟು ಪೂಜೆ ಮಾಡುವರು ತಿಳಿಯಿತೇ? ಎಂದರಂತೆ. ನನ್ನ ನುಡಿ ಸೇವೆಯನ್ನು ಜನ ಸ್ಮರಿಸುತ್ತಾರೆ. ಆನಂದಿಸುತ್ತಾರೆ. ಆದ್ದರಿಂದಲೇ ನಾನು ಧನ್ಯ ಎಂಬ ಅವರ ಮಾತು ಸಾಹಿತಿ ಕಲಾವಿದ ಹಣಕ್ಕಾಗಿ ಕೀರ್ತಿ ಪ್ರತಿಷ್ಠೆಗಾಗಿ ದುಡಿಯಬಾರದು ನಾಡಿನ ಜನರ ಆನಂದಕ್ಕಾಗಿ ನುಡಿಯ ಬೆಳವಣಿಗೆಗೆ ನಾಡಿನ ಪ್ರಗತಿಗೆ ಶ್ರಮಿಸಿ ಧನ್ಯವಾಗಬೇಕು ಎಂಬ ಸಂದೇಶ ಕೊಟ್ಟರು. ವಾಸುದೇವಾಚಾರ್ಯರು ಇಂಥ ನಾಡು ನುಡಿಸೇವಕ ೧೧-೧-೧೯೨೧ರಲ್ಲಿ ಅಸ್ತಂಗತರಾದರು ಕನ್ನಡ ಕಾದಂಬರಿ ನಾಟಕ ಪತ್ರಿಕಾರಂಗದ ಇತಿಹಾಸದಲ್ಲಿ ಚಿರಸ್ಥಾಯಿಯಾದರು.

ಕೆರೂರು ವಾಸುದೇವಾಚಾರ್ಯರು ನಿಧನರಾದಾಗ ನಾಡಿನಾದ್ಯಂತ ಪ್ರಸಿದ್ಧ ಸಾಹಿತಿಗಳು, ಕವಿಗಳು ಕಲಾವಿದರು ಶ್ರದ್ಧಾಂಜಲಿ ಅರ್ಪಿಸಿದರು.


ವಾಸುದೇವಾಚಾರ್ಯರ ಭಾವಪಟವನ್ನು ಅನಾವರಣಗೊಳಿಸುತ್ತಾ ಬಾಗಿಲುಕೋಟೆಯಲ್ಲಿ ೧೯೨೭ರಲ್ಲಿ ಹಾರ್ಡಿಂಜ್ ವಾಚನಾಲಯದಲ್ಲಿ ವಾಸುದೇವಾಚಾರ್ಯರನ್ನು ಕುರಿತು. ದ.ರಾ.ಬೇಂದ್ರೆ ಅವರು ಹೀಗೆ ನುಡಿದರು.

ಲೀಲಾ ವಿನೋದಿಗೆ ವಾಸುದೇವನಿಗೆ
ಒಂದೇ ಕೌಸ್ತುಭದಿಂದೆ ಭೂಷಿತನ್ ಅವಂ
ಶ್ರೀ ವಾಸುದೇವಂ ಸದಾ
ಇಂದು + ಈ ರಂಗ ಚತುಷ್ಕಮಂ ತುಡಿಸಿದಂ
ಕೇ. ವಾಸುದೇವರಿಗೆ ತಾಂ

ಉತ್ತರ ಕರ್ನಾಟಕದ ಪ್ರಸಿದ್ಧ ಕವಿಗಳಲ್ಲಿ ಒಬ್ಬರಾದ ಕನ್ನಡವಾಮನ ಅವರು ಬರೆದ ದುಃಖಾಂಜಲಿ ಪದ್ಯದ ಕೆಲವು ಸಾಲುಗಳಿವು. "ಏನು ಹೇಳಿದೆ! ಕೆಟ್ಟ ಸುದ್ದಿಯ ವಾಸುದೇವನು ಪೋದನೇ ನಾನು ನೋಡಿದೆನಾತನನ್ನಯ ನಿನ್ನೆ ಬಾಗಡ ಕೋಟೆಯೊಳ್ ಯಾರು ನಿನ್ನಯ ಶುಭೋದಯಕ್ಕೆ ಸ್ವದೇಶ ಭಕ್ತರು ಮುಖ್ಯರು ಯಾರು ಬರೆವರಯ್ಯ? ನಿನ್ನಯ ಹಾಗೆ ನಿಸ್ಪೃಹ ಲೇಖನ ಆಟವಾಡುವ ಮುಂದೆ ಬರೆದಿರುವ ಪುಸ್ತಕದೊಳಗಿನ ಪಾಠ ಓದುವ ಮುಂದೆ ನೀ ನೆನಪಾಗಿ ಮಾನಸದೊಳಗಿನ ಶೋಕವಾಗಲೆ ಪೆರ್ಚಿ ಮೇಜಿನ ಮೇಲೆ ಬಿದ್ದೆನೊ, ಧೊಪ್ಪನೆ ಏಕೆ ನಿನ್ನನು ಅಯ್ದು ಒಯ್ದನೊ ಹರಿ ಎಂದು ಬಯ್ದೆನೋ ಥಟ್ಟನೆ."

ತಿಲಕರ ಗೀತಾರಹಸ್ಯದ ಭಾಗಶಃ ಅನುವಾದ ಮಾಡಿದ ವಾಸುದೇವಾಚಾರ್ಯ ನಾಟಕಗಳನ್ನು ಆಡಲು ವಾಸುದೇವ ವಿನೋದಿನಿ ನಾಟ್ಯ ಸಭಾ ಬಾಗಿಲು ಕೋಟೆಯಲ್ಲಿ ಸ್ಥಾಪಿತವಾಗಿ ಅನೇಕ ನಟರನ್ನು ಬೆಳಕಿಗೆ ತಂದಿತು. ವಾಸುದೇವಾಚಾರ್ಯರ ಪತಿವಶೀಕರಣ ನಾಟಕವನ್ನು ಆಡಿ ಜನಪ್ರಿಯ ಗೊಳಿಸಿತು. ಕನ್ನಡ ಸಂಸ್ಕೃತಿ ಇಲಾಖೆ ಇಂದಿರಾ ಕಾದಂಬರಿಯನ್ನು ಪುನರ್ಮುದ್ರಣಗೊಳಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಶೋಕ ಸಭೆ ನಡೆಸಿ ಭಾವಚಿತ್ರವನ್ನು ಅನಾವರಣಗೊಳಿಸಿತು.

❐



೧೧. ದೇಶಭಕ್ತ ಸಾಹಿತಿ

ದ.ಕೃ. ಭಾರದ್ವಾಜ

"ನಿಮಗೆ ೩೦ನೇ ತಾರೀಖು ಗುರುವಾರ ಬೆಳಿಗ್ಗೆ ೧೦ ಗಂಟೆಗೆ ಸರಿಯಾಗಿ ಬಂದು ಶ್ರೀ ಮದ್ಯುವರಾಜರ ಭೇಟಿಯಾಗಲು ಅವಕಾಶವೀಯಲಾಗಿದೆ."

ಈ ಪತ್ರದ ಪ್ರಕಾರ ಪ್ರಸಿದ್ಧ ಕನ್ನಡ ಸಾಹಿತಿಯೊಬ್ಬರು ೧೯೩೧ನೇ ಇಸವಿ ಸುಮಾರಿನಲ್ಲಿ ಯುವರಾಜರನ್ನು ನೋಡಲು ಹೊರಟರು. ಉದ್ದೇಶ ತಾವು ಬರೆ ಪುಸ್ತಕಗಳನ್ನು ಯುವರಾಜರಿಗೆ ಅರ್ಪಿಸುವುದು.

ಪಾಯಿಜಾಮಸಾಹಿತಿ ಕಚ್ಚೆ ಪಂಚೆ ಹಾಕಿ ಧೋತರ ಉಟ್ಟು ಶುಭ್ರವಾದ ಖಾದಿ ಕುಡತ, ಟೋಪಿ, ಶಾಲನ್ನು ಧರಿಸಿ ಪುಸ್ತಕಗಳನ್ನು ನೆಟ್‌ಬ್ಯಾಗಿನಲ್ಲಿ ಹಾಕಿ ಕೊಂಡು ಬೈಸಿಕಲ್ಲನಲ್ಲಿ ಕುಳಿತು ಅರಮನೆ ಕಡೆಗೆ ಹೊರಟರು.

ಪಹರೆಯವರು, 'ಯಾರು ನೀವು ಎಲ್ಲಿಗೆ?' ಎಂದು ತಡೆದರು. ಆ ವೇಳೆಗೆ ಯುವರಾಜರ ಕಾರ್ಯದರ್ಶಿಗಳು ಅಲ್ಲಿಗೆ ಬಂದವರು ಆ ಸಾಹಿತಿಯನ್ನು ಗುರುತಿಸಿದರು.

"ಬಂದರೋ, ಪ್ರಭುಗಳು ೯.೩೦ರಿಂದ ನಿಮ್ಮ ದಾರಿಯನ್ನು ನೋಡುತ್ತಿದ್ದಾರೆ." ಎಂದರು ಸಾಹಿತಿಗಳು ತಮ್ಮ ಗಡಿಯಾರ ನೋಡಿದರು. ೧೦ ಘಂಟೆಗೆ ೨ ನಿಮಿಷ ಇತ್ತು. ಇಗೋ ನೋಡಿ ಪ್ರಭುಗಳು ೧೦ ಘಂಟೆಗೆ ಬನ್ನಿ ಎಂದು ಕಾಗದ ಬರೆದಿದ್ದಾರೆ ಎಂದು ಪತ್ರ ತೋರಿಸಿದಾಗ, ಅವರನ್ನು ಒಳಕ್ಕೆ ಪ್ರಭುಗಳ ಬಳಿಗೆ ಕರೆದುಕೊಂಡು, ಹೋದರು ಹೀಗೆ ಕರಾರುವಕ್ಕಾಗಿ ಹಾಜರಾದವರು ಕನ್ನಡದ ಪ್ರಸಿದ್ಧ ನಿಘಂಟುಕಾರರಾದ ಡಿಕೆಬಿ ಅರ್ಥಾತ್ ದ.ಕೃ.ಭಾರದ್ವಾಜ್ ಎಂದರೆ ದತ್ತಾತ್ರೇಯ ಕೃಷ್ಣ ಭಾರದ್ವಾಜರು.

ಸಮಯಪಾಲನೆಗೆ ಪ್ರಸಿದ್ಧರಾದವರು ಸರ್.ಎಂ. ವಿಶ್ವೇಶ್ವರಯ್ಯನವರು ಇದು ಎಲ್ಲರಿಗೂ ತಿಳಿದ ವಿಚಾರ. ದ.ಕೃ. ಭಾರದ್ವಾಜರೂ ಸಮಯ

ಪಾಲನೆಗಾಗಿ ವಿದ್ಯಾರ್ಥಿಗಳಾಗಿದ್ದಾಗಿನಿಂದಲೂ ಶ್ರಮಿಸುತ್ತಿದ್ದವರು. ಈ ಬಗ್ಗೆ ಅವರೇ ಹೇಳಿದ ಮಾತುಗಳು. "ಬೆಂಗಳೂರು ಸೆಂಟ್ರಲ್ ಕಾಲೇಜಿನ ಕ್ಲಾಕ್ ಟವರ್ ಇರುವ ಮಧ್ಯಭಾಗದ ಕಟ್ಟಡದಲ್ಲಿ ಕನ್ನಡದ ತರಗತಿಗಳು ಅಕ್ಕ ಪಕ್ಕಗಳಲ್ಲಿ ನಡೆಯುತ್ತಿದ್ದವು. (ಆಗ ಗಣಿತ ಮತ್ತು ವಿಜ್ಞಾನ ಭವನಗಳಿರಲಿಲ್ಲ.) ಹೈಸ್ಕೂಲು ತರಗತಿಗಳೂ ಆಗ ಸೆಂಟ್ರಲ್ ಕಾಲೇಜಿನ ಕಟ್ಟಡದಲ್ಲಿಯೇ ಇದ್ದವು. ಬೆಳ್ಳಾವೆ ವೆಂಕಟನಾರಣಪ್ಪನವರು ರಾವ್ ಬಹಾದ್ದೂರ್ ಬಿ.ವೆಂಕಟೇಶಾಚಾರ್ಯರು ಅಧ್ಯಾಪಕರಾಗಿದ್ದರು. ನಮ್ಮ ಮನೆ ಬಸವನಗುಡಿ ಪೊಲೀಸ್ ಸ್ಟೇಷನ್ ಹತ್ತಿರವಿತ್ತು. ನಮ್ಮ ಸೋದರತ್ತೆಯವರು "ಹುಡುಗ ಪಾಪ! ಡಿಸ್ಟ್ರಿಕ್ಟ್ ಕಚೇರಿ ಹತ್ತಿರ ಇರುವ ಕಾಲೇಜಿಗೆ ಹೋಗುವ ಹೊತ್ತಿಗೆ ಅವನಿಗೆ ಊಟಕ್ಕೆ ಬಡಿಸಬೇಕು" ಎಂದು ೧೦.೩೦ ಗಂಟೆಗೆ ಸರಿಯಾಗಿ ಎಲೆಯಲ್ಲಿ ಬಿಸಿ ಬಿಸಿ ಅನ್ನ ಹಾಕಿ "ಇವತ್ತು ಬೇಳೆ ಇನ್ನೂ ಬೆಂದಿಲ್ಲ ಸಾಯಂಕಾಲದ ಊಟಕ್ಕೆ ಸಾರು ಮಾಡುತ್ತೇನಪ್ಪಾ" ಎಂದು ಉಪಚರಿಸುತ್ತಿದ್ದರು. ಊಟವಿಲ್ಲದೆ ಉಪವಾಸ ಹೋಗೋಣವೆಂದರೆ ನನ್ನ ಅಣ್ಣಂದಿರು, ಇವನಿಗೇನು ಅವಸರ ಬಿಎ ಕ್ಲಾಸಿನ ಹುಡುಗರೇ ೧೧ ಗಂಟೆಗೆ ಮನೆ ಬಿಟ್ಟು ಹೋಗುತ್ತಾರೆ ಎಂದು ನನ್ನನ್ನೇ ಬೈದುಬಿಡುತ್ತಿದ್ದರು. ನಾನು ಹೇಗೋ ೫ ನಿಮಿಷದೊಳಗೆ ಊಟ ಮುಗಿಸಿಕೊಂಡು ಅಂಗಿ ಬಟ್ಟೆ ಹಾಕಿಕೊಂಡು ಓಡುತ್ತಾ ನ್ಯಾಷನಲ್ ಹೈಸ್ಕೂಲ್ ಇರುವ ಸ್ಥಳಕ್ಕೆ ಬರುವ ಸಮಯಕ್ಕೆ ನಮ್ಮ ಅಧ್ಯಾಪಕರು ವೆಂಕಟೇಶಾಚಾರ್ಯರು ಕೂತಿದ್ದ ಎತ್ತಿನ ಗಾಡಿ ನನ್ನ ಪಕ್ಕದಲ್ಲಿ ಹಾದು ಹೋಗುತ್ತಿತ್ತು. ಆಗ ವಿಶ್ವೇಶ್ವರಪುರ ಶಂಕರಪುರದ ಪ್ರದೇಶಗಳು ಕಾಡು ಅಥವಾ ತೋಟದ ಪ್ರದೇಶಗಳಾಗಿದ್ದವು. ನನ್ನ ಅಧ್ಯಾಪಕರ ಗಾಡಿ ಹೋದುದ್ದನ್ನು ಕಂಡು ನನ್ನ ಓಟದ ವೇಗವು ಇನ್ನೂ ಹೆಚ್ಚುತ್ತಿತ್ತು. ಕೆಮಿಸ್ಟ್ರಿ ಹಾಲಿಗೆ ಬರುವ ಹೊತ್ತಿಗೆ ೫-೬ ನಿಮಿಷ ತಡವಾಗಿ ಬಿಡುತ್ತಿದ್ದು ಹಾಲ್ ಬಾಗಿಲು ಸ್ವಲ್ಪ ತೆರೆದಿರುತ್ತಿತ್ತು. "ಮೇ ಐಕಂ ಇನ್ ಸಾರ್" ಎನ್ನುವಷ್ಟು ಹೊತ್ತಿಗೆ ವೆಂಕಟೇಶಾಚಾರ್ಯರು ಎಸ್‌ಕಮ್‌ಇನ್ ಅಂಡ್ ಲಾಕ್ ದಿ ಡೋರ್ ಎನ್ನುತ್ತಿದ್ದರು. ಹೀಗೆ ಓಡೋಡಿ ವೆಂಕಟನಾರಣಪ್ಪನವರ ಕ್ಲಾಸಿಗೂ ಹೋಗುತ್ತಿದ್ದೆ. ಅವರು ಹಾಜರಾತಿ ಹಾಕುತ್ತಿದ್ದಾಗ ಆ ಕಡೆ ಮುಖ ತಿರುಗಿಸಿದಾಗ ಶಬ್ದವಾಗದಂತೆ ಮುಂಗಾಲ ಮೇಲೆ ಓಡಿ ಹೋಗಿ ಹಿಂದಿನ ಬೆಂಚಿನ ಮೇಲೆ ಕೂತು ಬಿಡುತ್ತಿದ್ದೆ. ಆದರೆ ಒಂದು ದಿನ ಸಿಕ್ಕಿ ಬಿದ್ದೆ ಯಥಾಪ್ರಕಾರ ೧-೨ ನಿಮಿಷ ಲೇಟಾಗಿತ್ತು. ಅಟೆಂಡನ್ಸ್ ಮುಗಿಯುವವರೆಗೆ ಸ್ವಲ್ಪ ಬಾಗಿಲು ತೆಗೆದಿದ್ದು ಪಾಠ

ಶುರು ಮಾಡುವ ಮೊದಲು ಬಾಗಿಲು ಪೂರಾ ಹಾಕುವುದು ಅವರಿಬ್ಬರ ಪದ್ಧತಿ ಆಗಿತ್ತು. ಅರೆತೆರೆದ ಬಾಗಿಲಲ್ಲಿ ಸದ್ದಿಲ್ಲದೆ ಕಳ್ಳ ಬೆಕ್ಕಿನಂತೆ ಒಳಕ್ಕೆ ಹಾಜರಾತಿ ಹಾಕುತ್ತಿದ್ದಾಗ ಹಿರದಿನ ಬೆಂಚಿಗೆ ಹೋಗಿ ಕೂಡುವಾಗ ಅವರ ಕಣ್ಣಿಗೆ ಬಿದ್ದೆ. ತಕ್ಷಣ ಎತ್ತರದ ವ್ಯಕ್ತಿ ಅವರು ಉದ್ದುದ್ದ ಹೆಜ್ಜೆ ಇಡುತ್ತ ದಾಪುಗಾಲಲ್ಲಿ ನನ್ನ ಬಳಿ ಬಂದು, ವೈ ಡಿಡ್ ಯು ಕಂ ಲೇಟ್? ಇಫ್‌ಯು ಕಮ್‌ಲೇಟ್ ಐ ವಿಲ್ ಬ್ರೇಕ್‌ಯವರ್ ಹೆಡ್ ಎಂದು ಸ್ವಲ್ಪ ಹೊತ್ತು ನನ್ನ ನಿಲ್ಲಿಸಿ ಅನಂತರ ಕುಳ್ಳಿರಿಸಿಬಿಟ್ಟರು. ಆಮೇಲೆ ನಾನು ಲೇಟ್ ಆದಾಗಲೆಲ್ಲ "ದೇವರೇ ನಮ್ಮ ಫಿಜಿಕ್ಸ್ ಮೇಷ್ಟ್ರು ನನಗಿಂತ ಲೇಟಾಗಿ ಕ್ಲಾಸಿಗೆ ಬರುವ ಹಾಗೆ ಮಾಡಪ್ಪ ಎಂದು ದೇವರನ್ನು ಪ್ರಾರ್ಥಿಸುತ್ತಿದ್ದೆ. ಆಗ ಮೇಷ್ಟು ವೆಂಕಟನಾರಣಪ್ಪ ಎಂದರೆ ನಮಗೆಲ್ಲ ಅಷ್ಟು ಭೀತಿಯಿರುತ್ತಿತ್ತು" ಸಮಯಪಾಲನೆ ಶಿಸ್ತನ್ನು ಸರ್ ಎಂ ವಿಶ್ವೇಶ್ವರಯ್ಯನವರು ಬೆಳ್ಳಾವೆ ಅವರಿಂದಲೆ ಕಲಿತಿರಬೇಕು. ಅವರೂ ಅವರ ವಿದ್ಯಾರ್ಥಿ ಆಗಿದ್ದರು.

ಹೀಗೆ ಧಾವಂತದಲ್ಲಿ ಓದುತ್ತಿದ್ದ ವಿದ್ಯಾರ್ಥಿ ಭಾರದ್ವಾಜರಾಗಿದ್ದರು. ಚಿಕ್ಕಂದಿನಿಂದಲೂ ಸಾಹಿತ್ಯಾಸಕ್ತಿ ಹೊಂದಿದ ಭಾರದ್ವಾಜರ ಬಗ್ಗೆ ತಂದೆ ಕೃಷ್ಣಾಜಿ ಅವರಿಗೆ ಅಷ್ಟು ಆದರವಿರಲಿಲ್ಲ. ಒಮ್ಮೆ ಪ್ರಖ್ಯಾತ ವಿದ್ವಾಂಸರಾದ ಲೋಕಪ್ರಿಯ ಗ್ರಂಥಗಳನ್ನು ರಚನೆ ಮಾಡಿದ ಭಾರತಿ ಸಂಪಂಗಿ ರಾಮಯ್ಯನವರು ಭಾರದ್ವಾಜರ ಮನೆಗೆ ಬಂದಿದ್ದರು. ಆಗ ಇವರ ತಂದೆ ಅವರಲ್ಲಿ "ನೋಡಿ ಇವನ ಸಾಹಿತ್ಯ ಸೇವೆ ಯಾರಿಗೆ ಬೇಕು. ಸುಮ್ಮನೆ ಏನಾದರೂ ಬರೆಯುತ್ತಿರುವುದು ಪತ್ರಿಕೆಗಳಿಗೆ ಕಳಿಸುತ್ತಿರುವುದು, ಕಂಡ ಕಂಡ ಪುಸ್ತಕಗಳನ್ನು ತರುವುದು, ಓದುವುದು ಇದೇ ಇವನ ಕೆಲಸ" ಎಂದಾಗ ಭಾರತಿ ಸಂಪಂಗಿ ರಾಮಯ್ಯ ಹೇಳಿದರು. "ದತ್ತ (ಭಾರದ್ವಾಜರನ್ನು ಕರೆಯುತ್ತಿದ್ದ ಹೆಸರು) ಹುಟ್ಟಿದ ಊರು ಯಾವ ಊರು ನೋಡಿ. ಹೊಸಕೋಟೆ. ಕೋಟೆ ನೀರು ಎಂದರೆ ಅದು ಹಾಗೆ ಎಂಥವರಲ್ಲೂ ಸಾಹಿತ್ಯ ಸ್ಫೂರ್ತಿಯನ್ನು ತಂದು ಕೊಡುತ್ತದೆ ಇಂಥ ಯುವಕರಿಂದ ಕನ್ನಡದ ಏಳಿಗೆಯಾಗಬೇಕು" ಎಂದು ಬಿಟ್ಟರು. ಹೀಗೆ ಅವರು ಬಾಲ್ಯದಲ್ಲಿಯೇ ಇತರ ಸಾಹಿತಿಗಳ ದೃಷ್ಟಿಯಲ್ಲಿ ಆಶಾದಾಯಕ ಸಾಹಿತಿ ಆಗಿದ್ದರು.

ದ.ಕೃ. ಭಾರದ್ವಾಜರು ಎಂದೊಡನೆ ನೆನಪಾಗುವುದು ಅವರ ಬಹುಮುಖ ಪ್ರತಿಭೆ. ಆಯುರ್ವೇದ ಪ್ರವೀಣರು; ಮಕ್ಕಳ ಪುಸ್ತಕ ಪತ್ರಿಕೆ ಸಂಪಾದಕರು;

ರಂಗಭೂಮಿ ಪತ್ರಿಕೆ ಪ್ರಾರಂಭಿಸಿದವರು; ಹಿಂದೀ ಪ್ರಚಾರಕರು, ಗಾಂಧೀ ಭಕ್ತರು, ಗಾಂಧೀ ಸಾಹಿತ್ಯ ರಚಕರು, ಹಾಸ್ಯಗಾರರು, ಪುಸ್ತಕ ಸಂಗ್ರಾಹಕರು, ಸಮಾಜ ಸುಧಾರಕರು ಎಲ್ಲಾ ಪತ್ರಿಕೆಗಳಿಗೂ ಬರೆಯುತ್ತಿದ್ದವರು. ಸುಬೋಧ ಪತ್ರಿಕೆಯಲ್ಲೂ ಬರೆಯುತ್ತಿದ್ದರು. ದಾಂಪತ್ಯ ವಿಜ್ಞಾನ, ಆಹಾರ ವಿಜ್ಞಾನ, ಸಂತಾನ ವಿಜ್ಞಾನ ಮೊದಲಾದ ಕೃತಿಗಳ ಅನುವಾದಕರು, ಬಹು ಭಾಷಾ ವಿಶಾರದರು ಹೀಗೆ ಬಹುಮುಖ ಪ್ರತಿಭೆಯ ಸಾಹಿತಿ ವಿದ್ವಾಂಸರು ದ.ಕೃ. ಭಾರದ್ವಾಜರು.

ಕನ್ನಡದಲ್ಲಿ ಮಕ್ಕಳಿಗಾಗಿ ೧೯೨೭ರಲ್ಲಿ ಆರಂಭವಾದ ಮೊದಲ ಮಕ್ಕಳ ಮಾಸ ಪತ್ರಿಕೆ. ಮಕ್ಕಳ ಪುಸ್ತಕ ವಿಶ್ವಕೋಶದ ರೀತಿ ಹತ್ತಾರು ವಿವಿಧ ವಿಷಯಗಳ ರಸವತ್ತಾದ ಕಥೆ ಕವನ ಪ್ರಬಂಧ ಜೀವನಚರಿತ್ರೆ ಭೂಗೋಳ, ಇತಿಹಾಸ ನಾಟಕ ಚಿತ್ರಗಳಿಂದ ಕೂಡಿದ ಈ ಪತ್ರಿಕೆಗಾಗಿ ಒಂದು ಕಾಲದಲ್ಲಿ ಮಕ್ಕಳು ಹೇಗೆ ಕಾತುರದಿಂದ ಕಾಯುತ್ತಾ ಬಂದಾಗ ಈ ರೀತಿ ಹಾಡು ಹೇಳಿಕೊಂಡು ಕುಣಿಯುತ್ತಿದ್ದರಂತೆ.

ಬಂತೈ ! ಬಂತೈ । ಬಂತೈ ಪುಸ್ತಕ । ಬಂತೈ ಮಕ್ಕಳ ಪುಸ್ತಕ
ತೆರೆಯುತ ಪುಟಗಳ ಪರಿ ಪರಿ ಕಥೆಗಳ । ಸರಸರ ನೋಡುವೆ ಬೇಕಾದಲಿ
ಪರಿ ಪರಿ ಚಿತ್ರವ ಸರ ಸರ ವೆನ್ನುತ । ಬರೆಯಲು ಕಲಿಯುವೆ ತೋಷದಲಿ

ಜನರು, "ಮಕ್ಕಳೆ ನೋಡಿರಿ ಮಕ್ಕಳಿಗಾಗಿಯೆ, ಮಕ್ಕಳ ಪುಸ್ತಕ ಬಂದಿಹುದು ತಿರುಳು ಕನ್ನಡದ ಹುರುಳಿನ ಪುಸ್ತಕ, ಪರಮಾನಂದವ ತರಿಸುವುದು" ಎಂದು ಹೇಳಿ ಮಕ್ಕಳಿಗೆ ಕೊಡಿಸುತ್ತಿದ್ದರಂತೆ. ಮಕ್ಕಳ ಪತ್ರಿಕೆ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟವರು ದ.ಕೃ.ಭಾರದ್ವಾಜರು ಸಾಹಿತಿಗಳಷ್ಟೆ ಅಲ್ಲ ಕಲಾವಿದರೂ ಆಗಿದ್ದರು. ಭಾರದ್ವಾಜರು ಸುಂದರ ಲಿಪಿ ವಿನ್ಯಾಸಕಾರರೂ ಆಗಿದ್ದ ಅವರು ಅಕ್ಷರಗಳನ್ನು ನಾನಾರೀತಿ ಗಾತ್ರಗಳಲ್ಲಿ, ಚೆಲುವುಗಳಲ್ಲಿ ಬರೆಯುತ್ತಿದ್ದ ಅಲಂಕಾರ ಲಿಪಿ ತಜ್ಞರಾಗಿದ್ದರು.

ಕಲಾತ್ಮಕವಾಗಿ ಅಕ್ಷರಗಳನ್ನು ಬರೆಯುವ ಭಾರದ್ವಾಜರು ಸೂಕ್ಷ್ಮ ಲಿಪಿಕಾರರೂ ಆಗಿದ್ದರು. ಎಷ್ಟರ ಮಟ್ಟಿಗೆ ಎಂದರೆ, ಒಂದೇ ಪೋಸ್ಟ್ ಕಾರ್ಡಿನಲ್ಲಿ ಗೀತೆಯ ೧೮ ಅಧ್ಯಾಯಗಳನ್ನೂ ಬರೆದಿದ್ದರಂತೆ ಅಲ್ಲ ಕೊರೆದಿದ್ದರಂತೆ ಅದನ್ನು ಕಂಡ ಪತ್ರಕರ್ತರೊಬ್ಬರು "ಸ್ವಾಮಿ ಇನ್ನು ಮೇಲೆ ತಾವು ಅಕ್ಷರಗಳನ್ನು ಹಾರೆಯಿಂದ ಕೊರೆದು ಕಳಿಸಬೇಕಾಗಿ ವಿನಂತಿ" ಎಂದಿದ್ದರಂತೆ.

ಕನ್ನಡ ಬರಹ ಎಂದಾಗ ನೆನಪಾಗುತ್ತೆ ಕನ್ನಡದ ಪ್ರಸಿದ್ಧ ಐತಿಹಾಸಿಕ ಕಾದಂಬರಿಕಾರರೊಬ್ಬರು ಕೃತಿ ರಚಿಸಲು ಪ್ರಶಾಂತತೆಗಾಗಿ ಹಳ್ಳಿಗೆ ಹೋಗಿ ಅಲ್ಲಿ ಕುಳಿತು ಕಾದಂಬರಿ ಬರೆಯುತ್ತಿದ್ದರು. ಬರೆಯುವ ಆವೇಶದಲ್ಲಿ ಪುಟಕ್ಕೆ ೩-೪ ಸಾಲುಗಳಾಗಿ ಬೀದಿ ಗೋಡೆ ಚೀಟಿಯ ಜಾಹಿರಾತುಗಳಂತೆ ದಪ್ಪಕ್ಷರಗಳಿಂದ ಕೂಡಿದ್ದ ಹಸ್ತಪ್ರತಿ ನೂರಾರು ಪುಟಗಳಾಗಿ ಬಿಡುತ್ತಿದ್ದವು. ಅದನ್ನು ಶುದ್ಧ ಪ್ರತಿ ಮಾಡಿದರೆ ಅರ್ಧಕ್ಕರ್ಧ ಗಾತ್ರ ಇಳಿಯುತ್ತಿತ್ತು. ಇನ್ನು ಅವರು ಸೀಸದ ಕಡ್ಡಿಯಲ್ಲಿ ಬರೆಯುತ್ತಿದ್ದರು. ಕಿತ್ತೂರು ರಾಣಿ ಕತ್ತಿಯನ್ನು ಝಳಪಿಸಿದಳು ಎಂದು ಬರೆಯಲು ಕತ್ತಿಯನ್ನು ಝಳಪಿಸಿದ ಹಾಗೆ ಸೀಸದ ಕಡ್ಡಿ ಬಳಸಿ ಹಾಳೆಗಳು ಹರಿದೇ ಹೋಗುತ್ತಿದ್ದವು. ಇತಿಹಾಸದ ಆವೇಶವೇ ಅವರಲ್ಲಿ ಬರೆಯುವಾಗ ಆವಿರ್ಭವಿಸುತ್ತಿತ್ತು. ಭಾರದ್ವಾಜರು ಅಚ್ಚುಕಟ್ಟಾಗಿ ಸಣ್ಣಕ್ಕರಗಳಲ್ಲಿ ಮುದ್ದಾಗಿ ಬರೆಯುತ್ತಿದ್ದು ಅವರು ೪ ಸಾಲು ಬರೆದರೆ ಅಚ್ಚಿನಲ್ಲಿ ಒಂದು ಪುಟವಾಗುತ್ತಿತ್ತು. ಇವರು ಬರಹ ಕಂಡಾಗ ತಾಳೆಗರಿಯ ಸುಂದರ ಸೂಕ್ಷ್ಮ ಬರಹ ನೆನಪಾಗುತ್ತದೆ. ತಾವೇ ಪತ್ರಿಕಾ ಸಂಪಾದಕರಾಗಿರುತ್ತಿದ್ದ ಜತೆಗೆ ಇತರ ಪತ್ರಿಕೆಗಳಿಗೂ ಅವರು ಪ್ರಚಲಿತ ಪ್ರಪಂಚ ಎಂಬ ಅಂಕಣವನ್ನು ಜಯ ಕರ್ನಾಟಕ ಪತ್ರಿಕೆಯಲ್ಲಿಯೂ ಪ್ರಪಂಚ ಪರಿಚಯ ಎಂಬ ಅಂಕಣವನ್ನು ಸ್ವಧರ್ಮ ಪತ್ರಿಕೆಯಲ್ಲೂ ಪ್ರಾಸಂಗಿಕ ಟಿಪ್ಪಣಿ ಎಂಬ ಅಂಕಣ ಬರಹಗಳನ್ನು ಆ ಕಾಲದ ಎಲ್ಲ ಕನ್ನಡ ಪತ್ರಿಕೆಗಳಲ್ಲಿ ಬಂದ ಉತ್ತಮ ವಿಚಾರ ಬರಹಗಳನ್ನು ಕುರಿತು ಸಮೀಕ್ಷೆ ವಿವರ ಪರಿಚಯ ಮಾಡುತ್ತಿದ್ದರು. ಅವರ ಬಹುಶ್ರುತತ್ವದ ಲೋಕ ಜ್ಞಾನಕ್ಕೆ ಇದು ಸಾಕ್ಷಿಯಾಗಿತ್ತು. ಪತ್ರಿಕಾ ರಂಗದಲ್ಲಿ ಅವರಂತೆ ವಿವಿಧ ವಿಷಯಗಳ ಸರ್ವಜ್ಞರಾಗಿದ್ದವರು ಇನ್ನೊಬ್ಬರಿರಲಿಲ್ಲ. ಎಂದರೆ ತಪ್ಪಾಗಲಾರದು.

ಕರ್ನಾಟಕದಲ್ಲಿ ಅಚ್ಚಕನ್ನಡಿಗರಂತೆ ವಲಸೆ ಬಂದ ಕನ್ನಡಿಗರಾದ ಅನ್ಯಭಾಷಾ ಕನ್ನಡಿಗರು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ನೂರಾರು ವರುಷಗಳಿಂದ ಕರ್ನಾಟಕದಲ್ಲಿ ನೆಲಸಿ ಇಲ್ಲಿನ ಜನಜೀವನದಲ್ಲಿ ಬೆರತು ಇಲ್ಲಿನ ಸಂಸ್ಕೃತಿಯನ್ನು ಅಳವಡಿಸಿಕೊಂಡು ಎಷ್ಟರಮಟ್ಟಿಗೆ ಅಚ್ಚ ಕನ್ನಡಿಗರಾಗಿದ್ದಾರೆ ಎಂದರೆ ಅವರು ಒಂದು ಕಾಲಕ್ಕೆ ವಲಸೆ ಬಂದವರು ಎಂಬುದನ್ನೇ ಗುರುತಿಸಲು ಕಷ್ಟ ಎಂಬಂತೆ ಬದಲಾಗಿದ್ದಾರೆ. ಅವರ ಮನೆ ಮಾತು ಪೂರ್ವಿಕರ ಚರಿತ್ರೆಯಿಂದ ವಲಸೆ ಬಂದವರು ಎಂದು ಗುರುತಿಸಬೇಕಷ್ಟೆ. ಹೀಗೆ ಬೆಂಗಳೂರಿಗೆ ಬಂದ ಅನೇಕ ವಲಸೆಗಾರ

ಕುಟುಂಬಗಳಲ್ಲಿ ಧಾರವಾಡದ ಕುಂದಗೋಳ ಗ್ರಾಮದಿಂದ ಕೃಷ್ಣಾಜಿ ಸಂಭಾಜಿರಾವ್ ಕುಂದುಗೋಳಕರ್ ಅವರ ಕುಟುಂಬವೂ ಒಂದು.

ಬ್ರಿಟಿಷರು ಮೈಸೂರು ಸಂಸ್ಥಾನದಲ್ಲಿ ಭೂ ಮಾಪನ (ಲ್ಯಾಂಡ್ ಸರ್ವೇ ಮಾಡಿಸಿ ಕಂದಾಯ ಗೊತ್ತು ಮಾಡಲು ಭೂಮಿ ಅಳತೆ ಕೆಲಸಕ್ಕೆ ಮುಂಬೈ ಕರ್ನಾಟಕದಲ್ಲಿ ಈ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದವರಲ್ಲಿ ಕನ್ನಡ ಬಲ್ಲ ಮೋಜಣಿದಾರರನ್ನು ನೇಮಿಸಿದರು. ಆ ಪೈಕಿ ಕೃಷ್ಣಾಜಿ ಸಂಬಾಜಿ ಕುಂದಗೋಳಕರ್ ಕುಟುಂಬವು ಒಂದಾಗಿತ್ತು. ಮರಾಠಿ ಮಾತಾಡುತ್ತಿದ್ದ ಸ್ಮಾರ್ತ ದೇಶಸ್ಥರಾದ ಬ್ರಾಹ್ಮಣ ವರ್ಗಕ್ಕೆ ಸೇರಿದ ಹಲವು ಕುಟುಂಬಗಳು ಮೋಜಣಿ ಕಾರ್ಯ ನಿಮಿತ್ತ ಬೆಂಗಳೂರಿನ ಬಸವನಗುಡಿಯಲ್ಲಿ ನೆಲೆ ನಿಂತರು. ಇವರನ್ನು ಬಾಂದುನವರು (ಗಡಿಕಲ್ಲುನೆಡುವವರು) ಎಂದು ಕರೆಯುತ್ತಿದ್ದರು. ಆದ್ದರಿಂದಲೇ ಬಾಂದಿನವರ ರಸ್ತೆ ಎಂದೇ ಆ ರಸ್ತೆಗೆ ಹೆಸರಾಗಿತ್ತು. ಈಗ ಅದೇ ರಸ್ತೆಗೆ ಕನ್ನಡದ ದ್ರೋಣಾಚಾರ್ಯರೆನಿಸಿದ ಪ್ರಸಿದ್ಧ ಸಾಹಿತಿ ವಿದ್ವಾಂಸ ಆಚಾರ್ಯ ಎ.ಆರ್. ಕೃಷ್ಣಶಾಸ್ತ್ರಿಗಳ ರಸ್ತೆ ಎಂದು ಹೆಸರಿಟ್ಟಿದ್ದಾರೆ.

ಮೋಜಣಿದಾರರಾಗಿ ಬಂದ ಕೃಷ್ಣಾಜಿ ಅವರು ಭೀಮಾಬಾಯಿ ಅವರನ್ನು ಮದುವೆ ಆಗಿ ಸಮಾಜದಲ್ಲಿ ಮೂಢನಂಬಿಕೆ, ಕಂದಾಚಾರಗಳನ್ನು ವಿರೋಧಿಸುವ ಸಮಾಜ ಸುಧಾರಕರಾಗಿದ್ದರು.

ಇವರು ಕೇವಲ ಇತರರಿಗೆ ಉಪದೇಶ ಮಾಡುವ ಸಮಾಜಸುಧಾರಕ ರಾಗಿರಲಿಲ್ಲ. ತಮ್ಮ ಬಾಳಿನಲ್ಲೂ ಆಚರಣೆಯಲ್ಲಿ ಸುಧಾರಣಾಭಾವಗಳನ್ನು ಅಳವಡಿಸಿಕೊಂಡಿದ್ದರು. ನುಡಿದಂತೆ ನಡೆವವರೇ ಆದರ್ಶಪುರುಷರಲ್ಲವೇ! ಅವರ ತಂಗಿ ಅಂಬಾಬಾಯಿ ಅವರಿಗೆ ಬಾಲ್ಯದಲ್ಲೇ ವಿವಾಹವಾಗಿ ಚಿಕ್ಕ ವಯಸ್ಸಿನಲ್ಲೇ ವಿಧವೆ ಆದರು. ಆಗಿನ ಸಮಾಜದಲ್ಲಿ ಪ್ರಚಲಿತವಿದ್ದ ಸಂಪ್ರದಾಯದಂತೆ, ಶಿರೋಮುಂಡನ ಮಾಡಿಸಿ, ಮಡಿ ಹಿಡಿಸಲು ಕುಟುಂಬದ ಹಿರಿಯರು ನಿರ್ಧರಿಸಿದಾಗ ಕೃಷ್ಣಾಜಿ ಅವರು ಹಠಮಾಡಿ ತಂದೆ ತಾಯಿ, ಹಿರಿಯರು ಎಲ್ಲರಿಗೂ ತಿಳಿವಳಿಕೆ ಮೂಡಿಸಿದರು. ಆದರೂ ಅವರು ನಿರ್ಧಾರ ಬದಲಿಸಲು ಸಿದ್ಧರಿಲ್ಲದಿದ್ದಾಗ, ತಂಗಿಯ ಮುಂಡನಕ್ಕೆ ಅವಕಾಶ ಕೊಡದೆ ಅಂಬಾ ಬಾಯಿಯ ಪೂರ್ಣ ಬದುಕಿನ ಜವಾಬ್ದಾರಿ ಹೊತ್ತು ಜೀವನಪರ್ಯಂತ ಅವರನ್ನು ಸಾಕಿ ಸಲಹಿದರು. ಇಂಥ ಧೀರ ನಿಲುವಿನ ಸಮಾಜ ಸುಧಾರಕರಾಗಿದ್ದ ಕೃಷ್ಣಾಜಿ ಭೀಮಾಬಾಯಿ ದಂಪತಿಗಳಿಗೆ ಸುಪುತ್ರರಾಗಿ ಜನಿಸಿದವರು. ದತ್ತಾತ್ರೇಯ

ಕೃಷ್ಣ ಭಾರದ್ವಾಜರು. ೨೯–೧೨–೧೮೯೧ರಲ್ಲಿ ಜನಿಸಿದರು. ಆಗ ಬೆಂಗಳೂರಿನ ಹೊಸ ಕೋಟೆಯಲ್ಲಿ ಕೃಷ್ಣಾಜಿಯವರು ಮೋಜಣಿದಾರರಾಗಿದ್ದರು.

ಭಾರದ್ವಾಜರಿಗೆ ಮೂರು ಜನ ಸೋದರರೂ ಒಬ್ಬ ಸೋದರಿಯೂ ಇದ್ದು ತುಂಬು ಕುಟುಂಬದಲ್ಲಿ ಬಾಲ್ಯ ಕಳೆದರು. ಮಕ್ಕಳ ಸ್ಕೂಲ್ ಮನೆಯಲ್ಲಿ ಅಲ್ಲವೇ ಎಂಬಂತೆ ಮನೆಯಲ್ಲಿ ಉತ್ತಮ ಸಂಸ್ಕೃತಿ ಶಿಕ್ಷಣ ಸಿಕ್ಕಿತು. ತಾಯಿ ಭಗವದ್ಭಕ್ತೆ ಆಗಿದ್ದು ಮಕ್ಕಳಿಗೆ ಸ್ತೋತ್ರ, ಭಜನೆ, ಹೇಳಿಕೊಟ್ಟಿದ್ದರು. ಪೌರಾಣಿಕ ಕಥೆಗಳನ್ನು ಹಬ್ಬ ಹರಿದಿನಗಳಲ್ಲಿ ಹೇಳುತ್ತಾ ರಾಮಾಯಣ ಭಾರತ ಭಾಗವತ ಮೊದಲಾದವುಗಳ ಪರಿಚಯ ಮಾಡಿಸಿ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಿದ್ದರು. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ಶಾಲಾವಿದ್ಯಾಭ್ಯಾಸ ಮಾಡಿದ ಭಾರದ್ವಾಜರಿಗೆ ಹಲವಾರು ಭಾಷೆಗಳಲ್ಲಿ ಪ್ರಭುತ್ವ ಉಂಟಾಯಿತು.

ಮನೆ ಮಾತು ಮರಾಠಿ, ಜನಭಾಷೆ ಕನ್ನಡ. ಕಲಿತ ಭಾಷೆ ಸಂಸ್ಕೃತ ಶಾಲೆಯಲ್ಲಿ ಇಂಗ್ಲಿಷ್ ಕಲಿತ ಭಾರದ್ವಾಜರು ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸುವ ವೇಳೆಗೆ ದೇಶದಲ್ಲಿ ಬಂಗಾಳಿ ವಿಭಜನೆಯಿಂದ ರಾಷ್ಟ್ರೀಯ ಆಂದೋಳನ ಆರಂಭವಾಯಿತು. ಬಾಲಗಂಗಾಧರ್ ತಿಲಕ್, ಮಹರ್ಷಿಕರ್ವೆ, ವೀರ ಸಾವರಕರ್ ಮೊದಲಾದ ದೇಶಭಕ್ತರ ಭಾಷಣಗಳನ್ನು ಆಲಿಸಿದರು. ಬರಹಗಳನ್ನು ಓದಿದರು. ದೇಶಪ್ರೇಮದಿಂದ ಗುಜರಾತಿ, ಬಂಗಾಳಿ ಭಾಷೆಗಳಲ್ಲೂ ಪರಿಣಿತಿ ಪಡೆದಿದ್ದರು. ಕನ್ನಡದಲ್ಲಂತೂ, ಪ್ರಸಿದ್ಧ ಸಾಹಿತಿಗಳಾದ ಗಳಗನಾಥರು, ಬಿ. ವೆಂಕಟಾಚಾರ್ಯ ಬಿಎಂಶ್ರೀ ಮೊದಲಾದವರ ಭಾಷಣಗಳನ್ನು ಕೇಳಿ ಬರಹಗಳನ್ನು ಓದಿ ಕನ್ನಡಾಭಿಮಾನಿ ಆದರು. ಹೀಗೆ ಸ್ವಾತಂತ್ರ್ಯ ಹೋರಾಟಗಾರರು ಕನ್ನಡ ಸಾಹಿತ್ಯ ಪ್ರೇಮಿಗಳೂ ಆದ ದ.ಕೃ. ಭಾರದ್ವಾಜರು ದೇಶಾಭಿಮಾನದಿಂದ ದೇಶ ಸೇವೆಗೆ ಸಿದ್ಧರಾದರು. ಅವರು ದೇಶ ಪ್ರೇಮಿಗಳಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸಂಗತಿ ಸುತ್ತಮುತ್ತಲು ಎಲ್ಲರೂ ತಿಳಿದು ಮೆಚ್ಚಿದ್ದರು. ತಂದೆಯ ಮಾತಿನಂತೆ ಕೆಲಸಕ್ಕಾಗಿ ಒಬ್ಬ ಹಿರಿಯರ ಬಳಿ ಹೋದಾಗ ಅವರು ಹೇಳಿದ ಮಾತಿದು.

“ನೀನು ಪರದೇಶೀಯರ ಕೈ ಕೆಳಗೆ ಆಳಾಗಿ ದುಡಿಯಲು ಹುಟ್ಟಿದವನಲ್ಲ, ದೇಶಕ್ಕಾಗಿ ಹೋರಾಡಲು ಹುಟ್ಟಿರುವ ತರುಣ ನೀನು” ಎಂದು ಹೇಳಿ ಕಳಿಸಿದರಂತೆ! ಹೀಗಾಗಿ ದೇಶಸೇವೆಗೆ ಸಾಹಿತ್ಯಕೃಷಿಗೆ ತಮ್ಮ ಬಾಳನ್ನೇ ಬಾಲ್ಯದಲ್ಲೇ ದ.ಕೃ. ಭಾರದ್ವಾಜರು ಮುಡುಪಾಗಿಟ್ಟರು.

ಭಾರದ್ವಾಜರ ಬಾಲ್ಯದ ಶಿಕ್ಷಣ ಒಂದು ಕಡೆ ನಡೆಯಲಿ ಎಂದು ಅವರ ತಂದೆ ಚಿತ್ರದುರ್ಗದಲ್ಲಿ ಎ.ವಿ. ಸ್ಕೂಲ್ ಹೆಡ್ಮಾಸ್ಟರು ಎ. ಕೃಷ್ಣಪ್ಪನವರಲ್ಲಿ ಶಿಕ್ಷಣಕ್ಕೆ ಬಿಟ್ಟಿದರು. ಸರ್ವೇ ಇಲಾಖೆಯಲ್ಲಿ ಪದೇ ಪದೇ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಕೃಷ್ಣಾಜಿಯವರು ಹೋಗುತ್ತಿದ್ದರು. ಮಗ ಅಲೆಮಾರಿಯಾಗಿ ಶಿಕ್ಷಣ ವಂಚಿತನಾಗಬಾರದೆಂದು ಈ ವ್ಯವಸ್ಥೆ ಮಾಡಿದ್ದರು. ಆಗ ಮಾಧ್ಯಮಿಕ ಶಾಲಾ ವಿದ್ಯಾರ್ಥಿ ಭಾರದ್ವಾಜ. ಆಗ ಚಿತ್ರದುರ್ಗದಲ್ಲಿ ಸೀನೀರಿನ ಬವಣೆ ಅಪಾರವಾಗಿತ್ತು.

ಹೆಡ್‌ಮೇಷ್ಟ್ರರ ಮನೆಯಲ್ಲಿ ಬೇಳೆ ಬೇಯುವುದಕ್ಕಾಗಿ ನಲ್ಲಿಯ ನೀರು ಅಥವಾ ಗೋಪಾಲಸ್ವಾಮಿ ಬೆಟ್ಟದ ಹೊಂಡದ ನೀರನ್ನು ಒದಗಿಸುವುದು ಭಾರದ್ವಾಜರ ಶಿಕ್ಷಣದ ಒಂದು ಭಾಗವಾಗಿತ್ತು. ಒಂದು ದಿನ ಇವರಿಗೆ ಜ್ವರ ಬಂದು ನೀರು ತರಲಾಗದಾಗ ಮಾರನೇ ದಿನ ಸೀನೀರು ತರಲೇಬೇಕಿತ್ತು. ಅದಕ್ಕಾಗಿ ನಲ್ಲಿಯನ್ನು ಹುಡುಕಿಕೊಂಡು ಕೋಟೆಯ ಮುಂದೆ ಹೈಸ್ಕೂಲ್ ಹಾಸ್ಟೆಲ್ ಬಳಿಯಿದ್ದ ಪೋಸ್ಟಾಫೀಸಿನ ಮುಂದಿದ್ದ ನಲ್ಲಿ ಬಳಿ ಬಂದರು. ಎಲ್ಲ ಕಡೆ ನೀರು ಸಿಗದೆ ಕೊನೆಗೆ ಹಾಸ್ಟೆಲಿನ ಅಡಿಗೆಯವನಿಂದ ಆಗ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದ ಟಿ.ಎಸ್. ವೆಂಕಣ್ಣಯ್ಯನವರು ಕೊಡಿಸಿದ್ದರು. ಹೀಗೆ ಚಿತ್ರದುರ್ಗದಲ್ಲಿ ಶಾಲಾವಿದ್ಯಾಭ್ಯಾಸ ಮಾಡಿದಮೇಲೆ ಮದ್ರಾಸಿನ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ತೆಗೆದುಹಾಕಿ ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷಾ ಪದ್ಧತಿ ಜಾರಿಗೆ ಬಂತು. ಆಗ ಭಾರದ್ವಾಜರು ಮೆಟ್ರಿಕ್ ಪರೀಕ್ಷೆಗಾಗಿಯೇ ಓದಲು ನಿರ್ಧರಿಸಿದರು. ೧೯೧೦-೧೧ರಲ್ಲಿ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನ ವಿದ್ಯಾರ್ಥಿ ಆದರು. ಆಗಲೇ ಪುಸ್ತಕ ಓದುವ ಚಟ ವಿಪರೀತವಾಗಿತ್ತು. ಸರಸ್ವತಿ ದೇವಿಯನ್ನೇ ನನ್ನ ಅಧೀನವಾಗಿಟ್ಟುಕೊಳ್ಳಬೇಕೆಂದು ಬಾಲ ಬುದ್ಧಿಯವ ನಾಗಿದ್ದೆನು ಎಂದು ಅವರು ಹೇಳಿಕೊಂಡಿದ್ದಾರೆ. ಧಾರವಾಡದಲ್ಲಿ ಪುಸ್ತಕ ದಾಹ ತೀರಿಸಿಕೊಳ್ಳಲು ಪುಸ್ತಕಭಂಡಾರಗಳನ್ನು ಹುಡುಕಿಕೊಂಡು ಹೋಗುತ್ತಿದ್ದಾಗ ಆಲೂರು ವೆಂಕಟರಾಯರ ಪರಿಚಯವಾಗಿ ಅವರು ವಿದ್ಯಾವರ್ಧಕ ಸಂಘದ ವಿದ್ಯಾರಣ್ಯ ಗ್ರಂಥಭಂಡಾರ, ಶಂಕರ ಮಠದ ಸಂಸ್ಕೃತ ಪಾಠಶಾಲೆಯ ಪುಸ್ತಕಭಂಡಾರ ಮೊದಲಾದುವನ್ನು ಭಾರದ್ವಾಜರಿಗೆ ಆಲೂರು ಪರಿಚಯಿಸಿದರು. ಅಷ್ಟೇ ಅಲ್ಲ ಆಗ ವಿದ್ಯಾವರ್ಧಕ ಸಂಘದಲ್ಲಿ ಪುಸ್ತಕ ಭಂಡಾರಿಯಾಗಿದ್ದ ನಾ.ಶ್ರೀ. ರಾಜಪುರೋಹಿತರಿಗೆ ಭಾರದ್ವಾಜರನ್ನು ಪರಿಚಯಿಸಿ ಹೇಳಿದರು. "ಇವನಿಗೆ ಬೇಕಾದ ಪುಸ್ತಕವನ್ನು ಕೊಡು. ನಮ್ಮ ಕರ್ನಾಟಕ ಗತ

ವೈಭವವನ್ನು ಓದಿಸು. ಮತ್ತೆ ಯಾವ ಯಾವ ಪುಸ್ತಕಗಳನ್ನು ಓದಬೇಕೆಂದು ಹೇಳು. ಇವನು ಮುಂದೆ ನಮ್ಮ ನಾಡಸೇವೆಯಲ್ಲಿ ಹೆಚ್ಚು ಸಹಾಯ ಮಾಡಬಹುದು" ಎಂದರು. ಹೀಗೆ ಆಲೂರು, ರಾಜಪುರೋಹಿತರ ಮಾರ್ಗದರ್ಶನದಲ್ಲಿ ಪುಸ್ತಕ ಭಂಡಾರಗಳನ್ನೇ ಭಾರದ್ವಾಜರು ಆಪೋಶನ ತೆಗೆದುಕೊಂಡರು.

ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿ ವಿದ್ಯಾರ್ಥಿದೆಸೆಯಲ್ಲೇ ಅಗಾಧ ಪಾಂಡಿತ್ಯಗಳಿಸಿದ ಭಾರದ್ವಾಜರಿಗೆ ೧೯೧೩ರ ಸುಮಾರಿನಲ್ಲಿ ತಂದೆ ಕೃಷ್ಣಾಜಿ ಅವರು ಅರಮನೆ ಪೇಷ್ಕಾರರಾದ ವೆಂಕೋಬರ ಮಗಳು ಕಮಲಾ ಬಾಯಿಯನ್ನು ತಂದು ಮಗನಿಗೆ ವಿವಾಹ ಮಾಡಿದರು ಕಮಲಾಬಾಯಿ ಸುಸಂಸ್ಕೃತಳು ಆಗಿದ್ದು ವಿಷ್ಣುಸಹಸ್ರನಾಮ ಭಗವದ್ಗೀತೆಗಳನ್ನು ಕಂಠಪಾಠ ಮಾಡಿದ್ದರು. ಹೊರಗಿನ ರಾಜಕೀಯ ವಿದ್ಯಮಾನಗಳನ್ನು ಪತ್ರಿಕೆಗಳಲ್ಲಿ ಓದಿ ತಂದೆಯವರಿಂದ ಕೇಳಿ ವ್ಯವಹಾರಕುಶಲಿಯಾಗಿ ಸಾಮಾಜಿಕಪ್ರಜ್ಞೆ ಉಳ್ಳವರಾಗಿ ಪತಿ ಭಾರದ್ವಾಜರ ರಾಷ್ಟ್ರೀಯ ಚಳುವಳಿಯ ಚಟುವಟಿಕೆಗಳಲ್ಲಿ ಬೆಂಬಲ ನೀಡಿದರು. ಇದರಿಂದ ಭಾರದ್ವಾಜರಿಗೆ ವಿವಾಹ ಬಂಧನವಾಗದೆ. ಹೋರಾಟದ ಸ್ಫೂರ್ತಿಗೆ ಬೆಂಬಲಿಸುವ ವ್ಯಕ್ತಿ ಸಿಕ್ಕಂತಾಯಿತು. ಅಗಾಧ ಪಾಂಡಿತ್ಯ ಹೊಂದಿದ್ದ ಭಾರದ್ವಾಜರು ಅನಿಬೆಸೆಂಟರು ಸ್ಥಾಪಿಸಿದ ನ್ಯಾಷನಲ್ ಕಾಲೇಜಿನ ರಾಜ್ಯಶಾಸ್ತ್ರ ಪತ್ರಿಕೋದ್ಯಮಗಳಲ್ಲಿ ವ್ಯಾಸಂಗ ಮಾಡಿ, ರಾಷ್ಟ್ರೀಯ ಶಿಕ್ಷಕಿಯರ ಶಾಲೆಯಲ್ಲಿ ಅಧ್ಯಾಪಕರಾದರು. ಈ ಮೊದಲು ೧೯೩೧ರಲ್ಲಿ ಒಕ್ಕಲಿಗರ ಪತ್ರಿಕೆಯ ಉಪಸಂಪಾದಕರಾಗಿ ಕಾರ್ಯನಿರ್ವಹಿಸಿ ಪಡೆದ ಅನುಭವ ಉತ್ತಮ ಲೇಖಕರಾಗಲು ನೆರವಾಗಿತ್ತು.

ದೇಶಾಭಿಮಾನಿ ಭಾರದ್ವಾಜರು ಗಾಂಧಿಯವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮ್ಮುಕ್ಕಿದ್ದರು. ಸಭೆ ಸಮಾರಂಭಗಳಲ್ಲಿ ಭಾಷಣ ಮಾಡುತ್ತಿದ್ದರು. ರಾಷ್ಟ್ರೀಯ ಜಾಗೃತಿಯ ಲೇಖನಗಳನ್ನು ಬರೆಯುತ್ತಿದ್ದರು. ಖಾದಿ ಧರಿಸುತ್ತಿದ್ದರು. ಗಾಂಧೀಜಿ ಅವರ ಆಶ್ರಮದಲ್ಲಿ ಕೆಲವು ಕಾಲ ವಾಸವಾಗಿದ್ದರು. ಗಾಂಧಿ ಅವರಿಂದಲೇ ಸ್ಫೂರ್ತಿ ಪಡೆದರು. ೧೯೨೦ರಲ್ಲಿ ಗಾಂಧಿ ಮಂಗಳೂರಿಗೆ ಬಂದಾಗ ಅಲ್ಲಿ ಅಧ್ಯಾಪಕರಾಗಿದ್ದ ಭಾರದ್ವಾಜರು ಗಾಂಧಿ ಚಟುವಟಿಕೆಗಳಲ್ಲಿ ತೀವ್ರವಾಗಿ ಪಾಲ್ಗೊಂಡರು. ಆಗ ಅನಿಬೆಸೆಂಟರು ಹೇಳಿದರು. "ನೀನು ಅಧ್ಯಾಪಕನಾಗಿದ್ದು ಚಳುವಳಿಕಾರನಾಗುವುದು ಸರಿಯಿಲ್ಲ. ಅಧ್ಯಾಪಕನಾಗಿ

ಅಧ್ಯಯನ ಮುಂದುವರೆಸು ಇಲ್ಲದಿದ್ದರೆ ಇದನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟಗಾರನಾಗು" ಈ ಎರಡರಲ್ಲಿ ಒಂದನ್ನು ಆರಿಸಿಕೊ ಎಂದರು.

ಕೂಡಲೇ ಶಿಕ್ಷಕಿಯರ ಕಾಲೇಜಿನ ಅಧ್ಯಾಪಕ ವೃತ್ತಿ ತೊರೆದು ನೇರವಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ ಹೋರಾಟ ನಡೆಸಿ ದೇಶಭಕ್ತರಾದರು.

ಗಾಂಧಿ ಅನುಯಾಯಿಗಳಾಗಿ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಂಡ ಭಾರದ್ವಾಜರು ಅತ್ಯಂತ ಸರಳ ಜೀವನ ನಡೆಸುತ್ತಿದ್ದರು.

ಬೆಳಿಗ್ಗೆ ಬೇಗನೆ ಏಳುತ್ತಿದ್ದ ಅವರು ಗ್ರಂಥಪಠನ, ಸ್ನಾನ, ಪೂಜೆ ಇತ್ಯಾದಿ ಮುಗಿದ ಮೇಲೆ ದಿನವೆಲ್ಲಾ ಸ್ವಲ್ಪವೂ ಸಮಯ ವ್ಯರ್ಥವಾಗದಂತೆ ಕರ್ಮಯೋಗಿಗಳಾಗಿ ದೇಶಸೇವಾ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದರು. ರಾತ್ರಿ ಊಟದ ಯೋಚನೆ ಇರಲಿಲ್ಲ. ಒಂದು ಹಿಡಿ ಕಡಲೆಕಾಯಿ ಒಂದೆರಡು ಬಾಳೆಹಣ್ಣು ತಿನ್ನುತ್ತಿದ್ದರು. ದಿನವೂ ಚರಕದಿಂದ ನೂಲು ತೆಗೆಯುತ್ತಿದ್ದರು. ಇಂದು ಹೀಗೆ ಗಾಂಧೀ ಜೀವನ ನಡೆಸಿದವರು ಎಷ್ಟು ಮಂದಿ ಇದ್ದಾರೆ?

ಭಾರದ್ವಾಜರು ಜೈಲುವಾಸವನ್ನು ಅನುಭವಿಸಿದರು. ಎಂದೂ ಜೈಲು ವಾಸಕ್ಕೆ ಅಂಜಿದವರೇ ಅಲ್ಲ. ಗಾಂಧೀಜಿಯವರ ಹಾಗೆ 'ನಿಮ್ಮನ್ನು ಬಂಧಿಸುತ್ತಿದ್ದೇವೆ' ಎಂದರೆ ತಾವೇ ಮುಂದಾಗುತ್ತಿದ್ದರು. ಒಮ್ಮೆ ಇವರು ಮನೆಯಲ್ಲಿ ಅಭ್ಯಾಸನಿರತರಾಗಿ ಸಣ್ಣ ಡೆಸ್ಕಿನ ಮುಂದೆ ಪಾಣಿ ಪಂಚೆ (ಮೊಣಕಾಲಿನವರೆಗಿನ ಮಡಿಪಂಚೆ) ಉಟ್ಟು ಬರೆಯುತ್ತಿದ್ದರು. ಆಗ ಪೊಲೀಸರು ಇವರನ್ನು ತಿಲಕ್ ಸಂದೇಶದಲ್ಲಿ ಬರೆದ ಉಗ್ರಲೇಖನಕ್ಕಾಗಿ ಬಂಧಿಸಲು ಬಂದಿದ್ದರು. ಇವರು ಪೊಲೀಸರನ್ನು ಕಂಡೊಡನೆ "ಏನ್ಸಮಾಚಾರ" 'ಬನ್ನಿ ಬನ್ನಿ' ಎಂದು ಸ್ವಾಗತಿಸಿ ಕೇಳಿದರಂತೆ. ಅದಕ್ಕೆ ಅವರು ನಿಮ್ಮನ್ನು ಬಂಧಿಸಲು ಬಂದಿದ್ದೇವೆ 'ಎಂದಾಗ' ಓಹೋ ಹೋ ಅದಕ್ಕೇನು ಅಡ್ಡಿ. ಹೀಗೇ ಮೊಣಕಾಲ್ ಪಂಚೆಯಲ್ಲಿಯೇ ಬರಲೇ? ಒಳಗೆ ಹೋಗಿ ಬಟ್ಟೆ ಬದಲಿಸಿ ಕೊಂಡು ಬರಲು ಸಮಯವಿದೆಯೇ? 'ಎಂದರಂತೆ' ಹೀಗೆ ಸೆರೆಗೆ ಹೋಗಲು ಉತ್ಸುಕರಾಗಿದ್ದರು ದೇಶ ಸೇವೆಗಾಗಿ.

ಭಾರದ್ವಾಜರಂತೆಯೇ ಸತಿ ಕಮಲಾಬಾಯಿ ಸಹ ಖಾದಿಧಾರಿಣಿ ಆಗಿ ದೇಶ ಸೇವೆಯಲ್ಲಿ ನಿರತರಾಗಿ ಸಾರ್ವಜನಿಕ ಸಭೆಗಳಲ್ಲಿ ಚಳುವಳಿ ಬಗ್ಗೆ ಭಾಷಣಗಳನ್ನು ಮಾಡಿದ್ದರು. ಅವರ ದೇಶ ಪ್ರೇಮ ಎಷ್ಟಿತ್ತು ಎಂದರೆ ಒಮ್ಮೆ ಅವರು ತಾಯಿ ಮನೆಗೆ ಮದುವೆಯೊಂದಕ್ಕೆ ಹೋಗಿದ್ದರು. ಮದುವೆ

ಮನೆಯಲ್ಲಿ ಖಾದಿಧಾರಿಣಿಯಾಗಿದ್ದ ಮಗಳಿಗೆ ತಾಯಿ ಭಾರಿ ಜರಿಯ ಸೀರೆ ಉಡಲು ಹೇಳಿದರಂತೆ. ಹೀಗೆ ಖಾದಿ ಉಡುಪಿನಲ್ಲಿ ಬಂದರೆ ಚೆನ್ನಾಗಿರುವುದಿಲ್ಲ ಎಂದರಂತೆ. ಆಗ ಮಗಳು ತಾಯಿಗೆ ಹೇಳಿದ ಮಾತಿದು "ಆಯಿತು ನಿನ್ನ ಸಂತೋಷಕ್ಕಾಗಿ ನೀನು ಹೇಳಿದಂತೆ ಜರಿ ಸೀರೆ ಉಡುತ್ತೇನೆ. ಒಂದು ಷರತ್ತು ಮತ್ತೆ ಭಾರದ್ವಾಜರ ಮನೆಗೆ ಕಳಿಸಬೇಡ" ಎಂದಾಗ ತಾಯಿ ಅವಾಕ್ಕಾದರು. ಮಕ್ಕಳಿಗೂ ತಾಯಿ ತಂದೆಯರ ಪ್ರಭಾವ ಉಂಟಾಗಿತ್ತು. ಮಕ್ಕಳು ಮನೆಯಲ್ಲಿ ಸಾರ್ವಜನಿಕ ಭಾಷಣ ಮಾಡುವ ಭಾಷಣದಾಟ ಆಡುತ್ತಿದ್ದರು. "ನೀ ಸಭಾಧ್ಯಕ್ಷ ನಾನು ರಾಷ್ಟ್ರೀಯ ನಾಯಕ ಇಗೋ ನನ್ನ ಭಾಷಣ ಶುರುವಾಯಿತು ಇತ್ಯಾದಿ."

ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರಲ್ಲಿ ಬಹುಮಂದಿ ಕೇವಲ ಹೋರಾಟಗಾರರಾಗಿರಲಿಲ್ಲ. ವಿದ್ವಾಂಸರೂ ಸಾಹಿತಿಗಳೂ ಆಗಿದ್ದು ಪ್ರಚಂಡ ಬರಹಗಾರರೂ ಆಗಿದ್ದರು. ಎಷ್ಟೋ ಸಲ ಇವರು ಸಾಹಿತಿಗಳೇ ಹೋರಾಟಗಾರರೇ ಎಂದು ಅನುಮಾನಿಸುವ ಹಾಗಾಗಿತ್ತು. ಸೆರೆಮನೆ ಯಲ್ಲಿದ್ದಾಗಲೂ ಸಾಹಿತ್ಯಾಧ್ಯಯನ ರಚನೆ ಬಿಡದವರಾಗಿದ್ದರು. ಉದಾಹರಣೆಗೆ ಹೇಳುವುದಾದರೆ ಬಾಲಗಂಗಾಧರ್ ತಿಲಕ್ ಅವರು ಮಾಂಡಲೆ ಜೈಲಿನಲ್ಲಿದ್ದಾಗ ಜಗತ್ಪ್ರಸಿದ್ಧ ಗೀತಾ ರಹಸ್ಯ ಬರೆದರು. ನೆಹ್ರೂ ತಂದೆ ಮಗಳಿಗೆ ಓಲೆ ರಚಿಸಿದರು. ವಿನೋಬಾ ಅವರ ಗೀತಾ ಪ್ರವಚನ ಮಾಡಿದ್ದು ಯರವಾಡಾ ಜೈಲಿನಲ್ಲಿ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದಾಗ ಜಾನಪದ ಗೀತೆಗಳನ್ನು ಖೈದಿಗಳಿಂದ ಸಂಗ್ರಹಿಸಿದರು. ಹೀಗೆಯೇ ಭಾರದ್ವಾಜರು ಜೈಲಿನಲ್ಲಿ ಸಾಹಿತ್ಯಾಧ್ಯಯನ ನಡೆಸಿದ್ದರು. ಜೈಲಿನಿಂದ ಹಿಂತಿರುಗಿದ ಭಾರದ್ವಾಜರು ಗಾಂಧಿ ಸಾಹಿತ್ಯ ನಿರ್ಮಾಣದಲ್ಲಿ ನಿರತರಾದರು. ೧೯೨೪ರಲ್ಲಿ ಬೆಳಗಾಂವಿನಲ್ಲಿ ನಡೆದ ೩೯ನೇ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧಿ ವಹಿಸಿದ್ದರು. ಆ ಸಮ್ಮೇಳನಕ್ಕೆ ಸ್ವಯಂಸೇವಾತಂಡವನ್ನು ರಚಿಸಿದ ಹಿಂದೂಸ್ಥಾನಿ ಸೇವಾದಳದ ನಾಯಕರಾದ ಡಾ. ಹರ್ಡೀಕರರ ಜತೆ ಕಾರ್ಯದರ್ಶಿಗಳಾಗಿ ಭಾರದ್ವಾಜರು ದುಡಿದರು. ಎಂಬುದು ಗಮನಾರ್ಹ ಸಂಗತಿ ಆಗಿದೆ. ಆ ಅಧಿವೇಶನ ಕಾಲಕ್ಕೆ ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸ ಮತ್ತು ಕರ್ನಾಟಕ ಕೈಪಿಡಿ ಗ್ರಂಥದ ಇಂಗ್ಲಿಷ್ ಆವೃತ್ತಿಯನ್ನು 'ದಿ ಕರ್ನಾಟಕ ಎ ಹ್ಯಾಂಡ್‌ಬುಕ್' ಎಂಬುದನ್ನು ರಚಿಸಿ ಪ್ರಕಟಿಸಿದರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಪರವಾಗಿ ಕೈಪಿಡಿಯ ರಚನೆಗೆ ಸಂಪಾದಕ ಮಂಡಳಿಯೊಂದು ರಚನೆಯಾಗಿ ಈ ಗ್ರಂಥ ಪ್ರಕಟವಾಯಿತು. ಇದರಲ್ಲಿ ಭಾರದ್ವಾಜರು ಹೇಳಿದಂತೆ "೧೯೨೦ರಲ್ಲಿ ಭಾಷೆಗಳಿಗನುಸಾರವಾಗಿ ಪ್ರಾಂತ್ಯಗಳನ್ನು ವಿಭಾಗ ಮಾಡಿ ರಾಷ್ಟ್ರೀಯ ಸಭೆಗೆ ವೈಶಿಷ್ಟ್ಯವನ್ನು ತಿಳಿಸಿ ಕೊಡುವವರೆಗೂ ಕರ್ನಾಟಕದ ಹೆಸರು ಹೊರಗಿನವರ ಕಿವಿಗೆ ಬಿದ್ದಿರಲಿಲ್ಲ ಹಿಂದೆ ಕರ್ನಾಟಕವು ಭರತ ವರ್ಷದ ಇತಿಹಾಸದಲ್ಲಿ ಎಂತಹ ಸ್ಥಾನ ಹೊಂದಿ ಏನೇನು ಕಾರ್ಯಗಳನ್ನು ಮಾಡಿತು. ಈಗ ಯಾವ ಸ್ಥಿತಿಯಲ್ಲಿ ಇದೆ ಅದರ ಚಳುವಳಿಗಳೇನು ಎಂಬ ವಿಷಯಗಳನ್ನು ತಿಳಿಸುವುದೇ ಈ ಪ್ರಯತ್ನದ ಮುಖ್ಯೋದ್ದೇಶವಾಗಿದೆ. ಈ ಗ್ರಂಥದಲ್ಲಿ ಕರ್ನಾಟಕದ ಭೂವಿವರಣೆ, ಕರ್ನಾಟಕ ಚರಿತ್ರೆ, ಧಾರ್ಮಿಕ ಚಲನೆಗಳು, ಲಲಿತ ಕಲೆ ಸಾಹಿತ್ಯ ೧೯೨೪ರ ವೇಳೆಯಲ್ಲಿ ಕನ್ನಡ ನಾಡಿಗೆ ದುಡಿಯುತ್ತಿದ್ದ ಮಹನೀಯರ ಪರಿಚಯ, ಕನ್ನಡ ಸಾಹಿತಿಗಳ ಸಂಕ್ಷಿಪ್ತ ಪರಿಚಯ ಕನ್ನಡದಲ್ಲಿ ಬರುತ್ತಿದ್ದ ದಿನಪತ್ರಿಕೆ ೪ ವಾರ ಪತ್ರಿಕೆ ಮಾಸಪತ್ರಿಕೆ ೨೩ ತ್ರೈಮಾಸಿಕ ೭ ಇತರ ಪತ್ರಿಕೆಗಳು ೧೪ರ ಪಟ್ಟಿ ಇದೆ. ಕನ್ನಡ ಸಂಘ ಸಂಸ್ಥೆಗಳ ಪರಿಚಯವಿದೆ. ಭಾರದ್ವಾಜರು ತಮ್ಮ ಬಗ್ಗೆ ಹೇಳಿಕೊಂಡ ಮಾತುಗಳಿವು. "ದತ್ತಾತ್ರೇಯ ಕೃಷ್ಣ ಭಾರದ್ವಾಜ ವಿದ್ಯಾಭೂಷಣ ಎಂ.ಎಲ್.ಎಸ್. ಸಂಪಾದಕ ಭಕ್ತಿ ಸಂದೇಶ ಮಂಗಳೂರು. ಜನನ ೧೮೯೧, ಗ್ರಂಥಗಳು: ಅಡವಿಯ ರಾಜ. ಅನಂತನ ಅದೃಷ್ಟ, ತಿಲಕ ಸಂದೇಶ, ತಿಲಕ ಮಹಾರಾಜ ಅಸಹಕಾರ ಪತ್ರಗಳು ಹಿಂದ್ ಸ್ವರಾಜ್ಯ, ಸ್ವರಾಜ್ಯ ವಿಶ್ವಕೋಶ ಭಾಗಗಳು ೩–೪ ಹಿಂದೀ ಭಾಷಾಸಾರಾ ಇತ್ಯಾದಿ.

ಕನ್ನಡದಲ್ಲಿ ಗಾಂಧೀ ಸಾಹಿತ್ಯ ರಚಿಸಿದವರಲ್ಲಿ ಎರಡು ಬಗೆ ಲೇಖಕರಿದ್ದಾರೆ. ಆಧುನಿಕ ಲೇಖಕರು ಗಾಂಧೀಜಿ ನಿಧನಾನಂತರ ಸಾಹಿತ್ಯ ರಚನೆಗೆ ತೊಡಗಿದವರಲ್ಲಿ ಬಹು ಮಂದಿ ಕೇವಲ ಓದಿನ ಬಲದಿಂದ ಗಾಂಧಿ ಬಗ್ಗೆ ಕವನ, ಕತೆ ಕಾದಂಬರಿ ನಾಟಕ ಬರೆದಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧಿಯನ್ನು ಕಂಡವರು. ಗಾಂಧಿಚಳುವಳಿಯಲ್ಲಿ ನೇರವಾಗಿ ಭಾಗವಹಿಸಿದವರು. ಜೈಲನ್ನು ಕಂಡವರು, ಜೀವನದಲ್ಲಿ ಗಾಂಧಿತತ್ವಗಳನ್ನು ಅನುಸರಿಸಿದವರು. ಬರೆದ ಗಾಂಧೀ ಸಾಹಿತ್ಯ, ಪ್ರಾಮಾಣಿಕ ಸಾಹಿತ್ಯ, ಅನುಭವ ಸಾಹಿತ್ಯ, ಗಾಂಧಿ ಹೋರಾಟದ ಬಗ್ಗೆ ಸಹಜ ಚಿತ್ರಣ ನೀಡುವ ಸಾಹಿತ್ಯವಾಗಿದೆ. ಸಿದ್ದವನಹಳ್ಳಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೊ. ಶ್ರೀನಿವಾಸಯ್ಯ,

ತಿರುಮಲೆ ತಾತಾ ಚಾರ್ಯಶರ್ಮ, ತಿರುಮಲೆ ರಾಜಮ್ಮ, ರಂಗನಾಥ, ರಾಮಚಂದ್ರ ದಿವಾಕರ ನಾರಾಯಣ ಮೂರ್ತಿ ಮುಂತಾದ ಅನೇಕರ ಬರಹ ಕೃತಿಗಳು ಕನ್ನಡದ ಶ್ರೇಷ್ಠ ಗಾಂಧಿ ಕೃತಿಗಳಾಗಿವೆ. ಈ ಸಾಲಿಗೆ ಸೇರಿದವರು. ದ.ಕೃ. ಭಾರದ್ವಾಜರು. ಅವರು ರಚಿಸಿದ ಸಾಹಿತ್ಯ ನಿಜವಾದ ಗಾಂಧಿ ಸಾಹಿತ್ಯ.

ದ.ಕೃ. ಭಾರದ್ವಾಜರು ಅನೇಕ ಗಾಂಧಿ ರಚಿಸಿದ ಕೃತಿಗಳನ್ನು ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ. ಅವುಗಳಲ್ಲಿ ಹಿಂದ್ ಸ್ವರಾಜ್ಯ. ನೀತಿಧರ್ಮ ಅಥವಾ ಧರ್ಮನೀತಿ, ಅನಾಸಕ್ತಿಯೋಗ ಇವುಗಳು ಗಾಂಧಿ ರಚಿಸಿದ ಕೃತಿಗಳ ನೇರ ಭಾಷಾಂತರ ರಾಷ್ಟ್ರಸಭೆಯ ಇತಿಹಾಸ, ಕರ್ನಾಟಕ ಕೈಪಿಡಿ, ಬ್ರಹ್ಮಚರ್ಯೆಯೇ ಕಾಮ ಸಾಧನೆಯು, ಆಂಡ್ರೂಸರ ಅಸಹಕಾರ ಪತ್ರಗಳು, ಸ್ವರಾಜ್ಯ ಡೈರಿ, ಸ್ವರಾಜ್ಯ ವಿಶ್ವಕೋಶ ಮುಂತಾದ ಗ್ರಂಥಗಳು ಕನ್ನಡ ಗಾಂಧಿ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಗಳಾಗಿವೆ.

ಈ ಗ್ರಂಥಗಳಲ್ಲಿ ಹಿಂದಿ ಸ್ವರಾಜ್ಯ ಇಂಗ್ಲಿಷಿನಲ್ಲಿ ಗಾಂಧಿ ಬರೆದ Indian Home rule ಗ್ರಂಥದ ಅನುವಾದ. ಕನ್ನಡದ ಜನರನ್ನು ಚಳುವಳಿಯಲ್ಲಿ ಭಾಗವಹಿಸಲು ಸ್ಫೂರ್ತಿ ನೀಡಿದ ಗ್ರಂಥ ಈ ಅನುವಾದ.

ಬ್ರಹ್ಮಚರ್ಯೆಯೇ ಕಾಮಸಾಧನೆಯು ಎಂಬ ಗ್ರಂಥ ಬಹಳ ಪರಿಣಾಮಕಾರಿ ಗ್ರಂಥವಾಗಿದೆ. ನಮ್ಮ ಸಮಾಜದ ಪ್ರಕೃತಿಯ ಹೀನದೆಸೆಗೆ ಪ್ರಾಚೀನ ಯುಗದ ಧರ್ಮಸೂತ್ರಗಳನ್ನು ಕೇವಲ ಪೂಜಿಸುತ್ತಾ ಆಚರಣೆಯಲ್ಲಿ ಮಾತ್ರ ಪಾಶ್ಚಾತ್ಯಾನುಕರಣೆ ಮಾಡುತ್ತಿರುವುದೇ ಕಾರಣವಾಗಿದೆ ಎಂಬ ಅಂಶವನ್ನು ಈ ಗ್ರಂಥದಲ್ಲಿ ಗಾಂಧೀಜಿ ತುಂಬ ಚೆನ್ನಾಗಿ ವಿವರಿಸಿದ್ದಾರೆ. ಅನಾಸಕ್ತಿ ಯೋಗವನ್ನು ೧೯೩೦ ಮೊದಲಿಗೆ ಕನ್ನಡಕ್ಕೆ ತಂದವರು. ಭಾರದ್ವಾಜರು ಗಾಂಧೀ ಗೀತೆಯನ್ನು ಹೇಗೆ ಅರ್ಥೈಸಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಕಾಣಬಹುದು.

ಅಸಹಕಾರ ಪತ್ರಗಳು ವಿಶಿಷ್ಟ ಗ್ರಂಥವಾಗಿದೆ. ೧೯೨೧ರಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ಕ್ರಿಸ್ತನು ಹೇಳಿದ ಮಾತುಗಳಿಗೆ ತಮ್ಮ ತತ್ವಗಳು ವಿರುದ್ಧವಲ್ಲವೆಂದು ಅಸಹಕಾರ ಚಳುವಳಿಯ ನಿಯಮಗಳನ್ನು ವಿವರಿಸಿ ಆಂಡ್ರೂಸರಿಗೆ ಬರೆದ ಪತ್ರಗಳ ಸಂಗ್ರಹವಾಗಿದೆ. ಹೀಗೆ ಭಾರದ್ವಾಜರ ಗಾಂಧಿ ಕೃತಿಗಳು ಕನ್ನಡದಲ್ಲಿ ವಿಶಿಷ್ಟ ಗಾಂಧಿ ಸಾಹಿತ್ಯವಾಗಿದೆ.

ದ.ಕೃ. ಭಾರದ್ವಾಜರು ಬಹುಭಾಷಾಕೋವಿದರಾಗಿದ್ದರು. ಅದರಿಂದ ಕನ್ನಡಕ್ಕೆ ಬಂಗಾಳಿ, ಗುಜರಾತಿ, ಇಂಗ್ಲಿಷ್, ಸಂಸ್ಕೃತ ಹಿಂದಿ ಭಾಷೆಗಳಿಂದ ಆಯಾ ಭಾಷೆಗಳ ಶ್ರೇಷ್ಠ ಕೃತಿಗಳು ಕನ್ನಡಕ್ಕೆ ಬಂದು ಕನ್ನಡ ಸಂಪನ್ನವಾಯಿತು.

ರಾಮಚರಿತ ಮಾನಸ, ತುಳಸಿದಾಸರ ಲೋಕ ವಿಖ್ಯಾತ ಕೃತಿ. ಹಿಂದಿ ವ್ರಜ ಭಾಷೆಯಲ್ಲಿದೆ ಅದನ್ನು ಮೂಲದೊಡನೆ ಟೀಕೆ ಸಹಿತ ಅನುವಾದ ಮಾಡಿದ್ದಾರೆ. ಹಲವು ಗ್ರಂಥಗಳ ಆಧಾರದಿಂದ ಓದುಗರಿಗೆ ಮೂಲಕೃತಿ ಚೆನ್ನಾಗಿ ಅರ್ಥವಾಗಲು ಹಲವಾರು ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಮನೋಹರವೆಂಬ ಕನ್ನಡ ಟೀಕೆ ಸಹ ಇದಕ್ಕಿದೆ. ಭಾರದ್ವಾಜರು ಒಂದು ಕಾಂಡವನ್ನು ಮಾತ್ರ ಅನುವಾದಿಸಿ ಪ್ರಕಟಿಸಿದ್ದಾರೆ. ಉಳಿದೆಲ್ಲ ಕಾಂಡಗಳನ್ನು ಅನುವಾದಿಸಿದ್ದರು. ಆದರೆ "ಮೊದಲನೆಯ ಬಾಲ ಕಾಂಡದ ಪ್ರಕಟನೆಯಲ್ಲಿ ಆದ ಸಾಲದ ಹೊರೆಯನ್ನು ಹೊರಲಾಗದೆ ಉಳಿದ ಭಾಗಗಳನ್ನು ಭಾರದ್ವಾಜರು ಪ್ರಕಟಿಸಲಿಲ್ಲ. ಒಮ್ಮೆ ಈ ಬಗ್ಗೆ ಶ್ರೀಮದ್ ಯುವರಾಜ ಕಂಠೀರವ ನರಸರಾಜ ಒಡೆಯರು ಶ್ರೀಮದ್ ಜಯಚಾಮರಾಜ ಒಡೆಯರ್ ಅವರ ತಂದೆ. ಭಾರದ್ವಾಜರನ್ನು ಕೇಳಿದರು "ನಿಮ್ಮ ತುಳಸೀರಾಮಾಯಣದ ಉಳಿದ ಭಾಗಗಳ ಪ್ರಕಟನೆಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಹಾಯವನ್ನು ಏಕೆ ಕೇಳಲಿಲ್ಲ?" ಅದಕ್ಕೆ ಭಾರದ್ವಾಜರು ಕೊಟ್ಟ ಉತ್ತರ ಮಾರ್ಮಿಕವಾಗಿದೆ. "ಪರಿಷತ್ತಿನ ಆರ್ಥಿಕ ಸ್ಥಿತಿ ಹೇಗಿದೆ ಎಂದರೆ ಆ ಸಂಸ್ಥೆಯನ್ನು ನಡೆಸಿಕೊಂಡು ಹೋಗಲು ಕೋರುತ್ತಿದ್ದಾರೆ. ಇನ್ನು ನಮ್ಮಲ್ಲಿ ಧನಿಕರು. ಗುಡಿ ಛತ್ರಾದಿಗಳನ್ನು ಕಟ್ಟಿಸಲು ಮುಂದೆ ಬಂದಂತೆ ಸಾಹಿತ್ಯದಲ್ಲಿ ಬಗೆಬಗೆಯ ಸವಿ ಊಟಗಳನ್ನು ಜನರಿಗೆ ಉಣಿಸಲು ಧನಿಕರು ಮುಂದೆ ಬಂದು ಸಹಾಯ ಮಾಡಬೇಕಾಗಿದೆ. ಆಗ ನನ್ನ ಗ್ರಂಥದ ಉಳಿದ ಭಾಗಗಳು ಪ್ರಕಟವಾಗಬಹುದು." ಹೀಗಾಗಿ ಕನ್ನಡಿಗರಿಗೆ ಮೊದಲ ಭಾಗವಷ್ಟೆ ಲಭ್ಯವಾಯಿತು. ಆದರೆ ಈಚೆಗೆ ಬಹಳ ಪರಿಶ್ರಮದಿಂದ ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ಭಾರತೀರಮಣಾಚಾರ್ಯರೆಂಬ ಹಿಂದಿ ವಿದ್ವಾಂಸರು ಕನ್ನಡದಲ್ಲಿ ಅಚ್ಚುಕಟ್ಟಾಗಿ ಮೂಲ ಅನುವಾದ ವಿಮರ್ಶೆಗಳೊಂದಿಗೆ ಸಮಗ್ರ ತುಳಸೀ ರಾಮಾಯಣವನ್ನು ಪ್ರಕಟಿಸಿದ್ದಾರೆ.

ಕನ್ನಡದಲ್ಲಿ ಉತ್ತರ ಭಾರತದ ಭಾಷೆಗಳಲ್ಲಿ ಹಿಂದಿಯನ್ನು ಬಿಟ್ಟರೆ ಹೆಚ್ಚು ಗ್ರಂಥಗಳು ಕನ್ನಡಕ್ಕೆ ಬಂದಿರುವುದು ಬಂಗಾಳಿಯಿಂದ ಎಂದರೆ ತಪ್ಪಿಲ್ಲ ಕನ್ನಡದ ಮಹಾನ್ ಸಾಹಿತಿಗಳಲ್ಲಿ ಅನೇಕರು ಬಂಗಾಳಿಭಾಷೆ, ಸಾಹಿತ್ಯಕ್ಕೆ ಮಾರು

ಹೋಗಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿಗಳು, ಆರ್.ವ್ಯಾಸರಾವ್, ಬಿ. ವೆಂಕಟಾಚಾರ್ಯ ಗೋವಿಂದ ಪೈ ಮುಂತಾದವರೆಲ್ಲ ಬಂಗಾಳಿ ಕಲಿತು ಕನ್ನಡ ಸಾಹಿತ್ಯ ಕಣಜವನ್ನು ಶ್ರೇಷ್ಠ ಅನುವಾದಗಳಿಂದ ತುಂಬಿದ್ದಾರೆ. ರವೀಂದ್ರನಾಥ ಠಾಗೋರ್, ಬಂಕಿಮಚಂದ್ರ, ಹರಿಶ್ಚಂದ್ರ ಮೊದಲಾದ ಪ್ರಸಿದ್ಧ ಬಂಗಾಳಿ ಲೇಖಕರ ಕೃತಿಗಳನ್ನು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ್ದಾರೆ. ಬಿ.ವೆಂಕಟಾಚಾರ್ಯರ ಬಂಗಾಳಿ ಕಾದಂಬರಿಗಳು ಕನ್ನಡದಲ್ಲಿ ಓದುಗರಿಗೆ ಅಕ್ಷಯ ಪಾತ್ರೆ ಆಯಿತು. ಕೃಷ್ಣಶಾಸ್ತ್ರಿಗಳು, ಬಂಕಿಮಚಂದ್ರರ ಸಮಗ್ರ ಕೃತಿಗಳನ್ನು ಪರಿಚಯಿಸುವ ಬಂಕಿಮಚಂದ್ರ ಕೃತಿ ಕನ್ನಡದ ಶ್ರೇಷ್ಠಕೃತಿಗಳಲ್ಲಿ ಒಂದಾಗಿದೆ. ಶಾಸ್ತ್ರಿಗಳು ಬರೆದಿರುವ ಗ್ರಂಥಕ್ಕೆ ಸಮನಾದ ಗ್ರಂಥಗಳು ಬಂಗಾಳಿಯಲ್ಲೂ ಕೆಲವೇ ಅಂತೆ.

ದ.ಕೃ. ಭಾರದ್ವಾಜರೂ ಕನ್ನಡಕ್ಕೆ ಬಂಗಾಳಿಯಿಂದ ಕೃತಿಗಳನ್ನು ತಂದವರಲ್ಲಿ ಒಬ್ಬರಾಗಿದ್ದಾರೆ. ಕಮಲಾಕಾಂತನ ಕಡತ (ವಿಡಂಬನ ಕೃತಿ) ದ್ವಿಜೇಂದ್ರಲಾಲ್‌ರ ಸೀತಾದೇವಿ ನಾಟಕ (೧೯೨೯) ಮತ್ತು ಭೀಷ್ಮ ನಾಟಕ ಕನ್ನಡಕ್ಕೆ ತಂದಿದ್ದಾರೆ.

ಸಂಸ್ಕೃತದಿಂದ ಭರತನ ನಾಟ್ಯ ಶಾಸ್ತ್ರವನ್ನು ರಂಗಭೂಮಿ ಪತ್ರಿಕೆ ಮೂಲಕ ಪ್ರಕಟಿಸಿದ್ದಾರೆ.

ಭಾರದ್ವಾಜರು, ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ತಜ್ಞರಾಗಿದ್ದರು. ನಮ್ಮಲ್ಲಿ ಅನೇಕರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಿದವರು ಇದ್ದಾರೆ. ಆದರೆ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸುವರು ಕಡಿಮೆ. ಇನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸಬಲ್ಲ ಉಭಯ ಭಾಷಾ ವಿದ್ವಾಂಸರು ಇನ್ನೂ ವಿರಳ. ಅಂಥ ವಿರಳರಲ್ಲಿ ಭಾರದ್ವಾಜರು ಒಬ್ಬರು. ಇವರು ಇಂಗ್ಲಿಷಿನಲ್ಲಿ ಬರೆದ ಪುಸ್ತಕಗಳಲ್ಲಿ ಕೆಲವು ಹೀಗಿವೆ.

1. Swary cyclopedea (2 vols)
2. The Karnataka Handbook
3. Rangabhoomi pictoreals (4 vols)
4. Dangers of vacination

ಇಂಗ್ಲಿಷಿನಲ್ಲಿ ಸ್ವತಂತ್ರ ಗ್ರಂಥಗಳನ್ನು ಬರೆದಂತೆ ಕನ್ನಡದಲ್ಲಿ ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ. ತಿಲಕ ಮಹಾರಾಜರ ಚರಿತ್ರೆ, ಜೀವನ ಚಿತ್ರ ಕಥಾ

ಸಂಕಲನ (೧೯೫೦), ಸಚಿತ್ರ ಭಾರತಯಾತ್ರೆ (೨ ಸಂಪುಟ), ಜನನ ನಿಯಂತ್ರಣ, ದಾಂಪತ್ಯ ವಿಜ್ಞಾನ, ಸಂತಾನ ನಿಯಂತ್ರಣ, ಆಹಾರ ವಿಜ್ಞಾನಗಳೆಂಬ ವೈಜ್ಞಾನಿಕ ಗ್ರಂಥಗಳು ಇವು ಕನ್ನಡಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ.

ಭಾರದ್ವಾಜರು ಲೋಕವಿಖ್ಯಾತರಾದುದು ಇಂದಿಗೂ ಅವರ ಹೆಸರು ಎಲ್ಲರಿಗೂ ಚಿರಪರಿಚಿತರಾಗಿರುವುದು ಅವರ ಇಂಗ್ಲಿಷ್-ಇಂಗ್ಲಿಷ್ ಕನ್ನಡ ನಿಘಂಟಿನಿಂದ ಎಂದರೆ ತಪ್ಪಿಲ್ಲ. ಹೈಸ್ಕೂಲ್ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ಕೊಂಡು ರಚಿಸಿದ ಈ ನಿಘಂಟು ಕೇವಲ ವಿದ್ಯಾರ್ಥಿಗಳಿಗಷ್ಟೆ ಅಲ್ಲ. ಅಧ್ಯಾಪಕರಿಗೆ ಇಂಗ್ಲಿಷ್ ಅಭ್ಯಾಸಿಗಳಿಗೆ ಅನುವಾದಕರಿಗೆ ಉಪಯುಕ್ತವಾಗಿದೆ. ಕಾಲಕಾಲಕ್ಕೆ ಪ್ರತಿ ಮರು ಮುದ್ರಣದಲ್ಲಿ ತಿದ್ದುಪಡಿ ಮಾಡುತ್ತ ಉಪಯುಕ್ತ ವಿಷಯಗಳನ್ನು ಸೇರ್ಪಡೆ ಮಾಡುತ್ತಾ ಹೋಗಿರುವುದು ಇದರ ವೈಶಿಷ್ಟ್ಯ ವಾಗಿದೆ. ಮೊದಲು ೧೯೪೦ರಲ್ಲಿ ೧೪೦೦೦ ಇಂಗ್ಲಿಷ್ ಪದಗಳಿಗೆ ಅನಂತರ ೨೫೦೦೦೦ ಕ್ಕೂ ಹೆಚ್ಚು ಪದಗಳನ್ನು ಈ ನಿಘಂಟು ಒಳಗೊಂಡಿತು. ಇವತ್ತಿನ ಹತ್ತಾರು ಇಂ-ಕ ನಿಘಂಟುಗಳು ಮಾರುಕಟ್ಟೆಗೆ ಬಂದಿವೆ. ಆದರೆ ಡಿಕೆಬಿ ಅವರ ಇಂಗ್ಲಿಷ್ – ಇಂಗ್ಲಿಷ್ ಕನ್ನಡ ನಿಘಂಟಿನ ಜನಪ್ರಿಯತೆ ಕುಗ್ಗಿಲ್ಲ.

ಪತ್ರಿಕೋದ್ಯಮಿಗಳಾಗಿ ಒಕ್ಕಲಿಗರ ಪತ್ರಿಕೆ, ರಂಗಭೂಮಿ ಮಕ್ಕಳ ಪುಸ್ತಕ ಪತ್ರಿಕೆಗಳ ಸಂಪಾದಕರಾಗಿ ವಿನೂತನ ಪ್ರಯೋಗಗಳನ್ನು ಮಾಡಿದ್ದಾರೆ. ಈವತ್ತಿಗೂ ರಂಗಭೂಮಿ ಮಕ್ಕಳಪುಸ್ತಕ ಪತ್ರಿಕೆಗಳು ಮಕ್ಕಳಿಗಾಗಿ ಕಲಾವಿದರಾಗಿ ಹೊರಡುವ ಪತ್ರಿಕೆಗಳಿಗೆ ಆದರ್ಶಪ್ರಾಯವಾಗಿವೆ.


ಪ್ರವಾಸಸಾಹಿತ್ಯ ಕೃತಿ ಸಚಿತ್ರ 'ಉತ್ತರ ಭಾರತಯಾತ್ರೆ' ಭಾರದ್ವಾಜರ ಇನ್ನೊಂದು ಜನಪ್ರಿಯ ಕೃತಿ. ಈ ಪುಸ್ತಕದಲ್ಲಿ ಉತ್ತರ ಭಾರತದ ಪ್ರಸಿದ್ಧ ದೇವಾಲಯಗಳ ಐತಿಹಾಸಿಕ ಸ್ಮಾರಕಗಳ ಅಲ್ಲಿಯ ಕ್ಷೇತ್ರಗಳಲ್ಲಿ ನಡೆಯುವ ಜಾತ್ರೆ- ಯಾತ್ರೆ ವಿವರಗಳನ್ನು ಸಚಿತ್ರವಾಗಿ ವಿವರಿಸಲಾಗಿದೆ. ಯಾತ್ರಾರ್ಥಿಗಳಿಗೆ ಉಪಯುಕ್ತ ಕೈಪಿಡಿಯಾಗಿದೆ. ತಮಿಳು ತೆಲುಗು ಭಾಷೆಗಳಿಗೂ ಇದು ಅನುವಾದವಾಗಿದೆ. ೧೯೩೯ರಲ್ಲಿ ಪ್ರಕಟವಾದ ಈ ಪ್ರವಾಸ ಗ್ರಂಥ ಇಂದಿಗೂ ಕನ್ನಡದ ಉತ್ತಮ ಪ್ರವಾಸ ಗ್ರಂಥಗಳಲ್ಲಿ ಒಂದಾಗಿದೆ.

ಜನಸಾಮಾನ್ಯರಿಗೆ ಡಿ.ಕೆ. ಭಾರದ್ವಾಜರು ಪರಿಚಿತರಾಗಿದ್ದುದು ಅವರು ಸಾಹಿತಿಗಳಾಗಿ ಅಲ್ಲ. ವಿದ್ವಾಂಸರಾಗಿ ಅಲ್ಲ ಗಾಂಧೀವಾದಿಗಳಾಗಿ ಅಲ್ಲ.

ಅದಕ್ಕಿಂತ ಹೆಚ್ಚಾಗಿ ಆಯುರ್ವೇದ ಪಂಡಿತರಾಗಿ ಪರಿಚಿತರಾಗಿದ್ದರು. ಆಯುರ್ವೇದ ಕ್ಷೇತ್ರದಲ್ಲಿ ಭಾರತದಲ್ಲಿ ಪ್ರಸಿದ್ಧರಾದ ಪಂಡಿತರಲ್ಲಿ ಒಬ್ಬರಾಗಿದ್ದರು. ೧೯೩೦ರಲ್ಲಿ ಅಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಸ್ಥಾನಿಕಕೇಂದ್ರದ ಅಧ್ಯಕ್ಷರಾಗಿದ್ದರು. ಅಖಿಲ ಕರ್ನಾಟಕ ಆಯುರ್ವೇದ ಪ್ರಚಾರ ಪರಿಷತ್ತಿನ ಅಧ್ಯಕ್ಷರಾಗಿದ್ದರು. (೧೯೪೭ರಲ್ಲಿ) ಅಖಿಲ ಕರ್ಣಾಟಕ ಆಯುರ್ವೇದ ಸಮ್ಮೇಳನದ ೧೮ನೇ ಅಧಿವೇಶನದ ಅಧ್ಯಕ್ಷರಾಗಿದ್ದರು. ರಾಮಕೃಷ್ಣ ಚಿಕಿತ್ಸಾಲಯ ತೆರೆದರು. ರಾಮಕೃಷ್ಣ ವಿದ್ಯಾಪೀಠ ಸ್ಥಾಪಿಸಿ ನೂರಾರು ಆಯುರ್ವೇದ ಪಂಡಿತರನ್ನು ತಯಾರು ಮಾಡಿದರು. ಆಯುರ್ವೇದದ ಜತೆಗೆ ನಾಡೀವಿದ್ಯೆ ಹಸ್ತ ಸಾಮುದ್ರಿಕದಲ್ಲೂ ಪರಿಣತರಾಗಿದ್ದರು. ಝುಂಡು ಔಷಧಿ ಕಂಪನಿ ಯವರಿಗಾಗಿ ಆಯುರ್ವೇದ ಚಿಕಿತ್ಸಾ ಸಾರಸಂಗ್ರಹವೆಂಬ ಗ್ರಂಥವನ್ನು ಕನ್ನಡದಲ್ಲಿ ರಚಿಸಿದ್ದಾರೆ. ಇವರ ಆಯುರ್ವೇದ ಪಾಂಡಿತ್ಯಕ್ಕೆ ಒಂದು ನಿದರ್ಶನವೆಂದರೆ "ರಸ್ತೆಯಲ್ಲಿ ಸಾಮಾನ್ಯ ಜನರು ಹೋಗುತ್ತಿದ್ದರೆ ಅವರ ಅಂಗಾಂಗಗಳ ಚಲನೆಯನ್ನು ಗಮನಿಸುತ್ತಾ ಅವರ ಮಾನಸಿಕ ರೋಗಗಳ ಬಗೆಗೆ ಚಿಂತೆಗಳ ಬಗ್ಗೆ ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಬಲ್ಲ ಮಾನಸತಜ್ಞರೂ ಆಗಿದ್ದರು. ಪಂಡಿತ ತಾರಾನಾಥರಂತೆ ಡಾ. ಅನುಪಮ ಡಾ. ರಾಶಿ ಅವರಂತೆ ಭಾರದ್ವಾಜರು ಕನ್ನಡದಲ್ಲಿ ಸಾಹಿತಿಗಳೂ ವೈದ್ಯರೂ ಆಗಿ ಸೇವೆ ಸಲ್ಲಿಸಿದವರಾಗಿದ್ದಾರೆ."

ಹೀಗೆ ಬಹುಮುಖಿ ಸಾಹಿತಿ, ದೇಶಾಭಿಮಾನಿ, ವೈದ್ಯ, ಗಾಂಧಿವಾದಿ ಡಿ.ಕೆ. ಭಾರದ್ವಾಜರು ೨೨–೪–೧೯೫೩ರಲ್ಲಿ ನಿಧನರಾದರು. ವೈದ್ಯರಂಗ, ನಿಘಂಟು ಕ್ಷೇತ್ರ ಗಾಂಧಿ ಸಾಹಿತ್ಯ ಕೃತಿಗಳನ್ನು ರಚಿಸಿ ಕನ್ನಡದ ಚಿರಸ್ಮರಣೀಯ ಸಾಹಿತಿಗಳಲ್ಲಿ ಒಬ್ಬರಾಗಿ ಅಮರರಾಗಿದ್ದಾರೆ.

❐



೧೨. ಕನ್ನಡ ನುಡಿಸೇವಕ

ವಿದ್ವಾನ್ ಬಾಲ ಸರಸ್ವತಿ

ಇಪ್ಪತ್ತನೆಯ ಶತಮಾನದ ಪ್ರಾರಂಭದ ಎರಡನೇ ದಶಕ ಎಂದರೆ ೧೯೨೦ಕ್ಕೆ ಮುಂಚೆ ಬೆಂಗಳೂರಿನ ಕೋಟೆ ಹೈಸ್ಕೂಲನ್ನು ಆಗತಾನೆ ಸೆಂಟ್ರಲ್ ಕಾಲೇಜ್ ಕಟ್ಟಡದಿಂದ ಈಗಿನ ಕಟ್ಟಡಕ್ಕೆ ವರ್ಗಾಯಿಸಿತ್ತು. ಅಲ್ಲಿ ಒಬ್ಬ ಡ್ರಾಯಿಂಗ್ ಟೀಚರ್ ಇದ್ದರು. ಅವರ ಬಗ್ಗೆ ಕನ್ನಡದ ಹಿರಿಯರಲ್ಲಿ ಒಬ್ಬರಾದ ಡಿ.ವಿ.ಜಿಯವರು ಹೀಗೆ ಬರೆದಿದ್ದಾರೆ: "ಆಳು ಗಿಡ್ಡೆಂದೇ ಹೇಳಬೇಕು, ದಪ್ಪವೂ ಅಲ್ಲ, ಬಣ್ಣ ಎಣ್ಣೆಗೆಂಪು ಸೊಗಸಾಗಿ ಬಾಚಿ ಪೋದಿ ಮಾಡಿದ ಗಡ್ಡ. ತಲೆಯ ತುಂಬಾ ಕೂದಲು. ಬೈತಲೆ ತೀಡಿ ಹಾಕಿದ ಎಣೆಗಂಟು. ಹಣೆಯಲ್ಲಿ ದಮ್ಮಡಿ ಅಗಲದ ಕುಂಕುಮದ ಬೊಟ್ಟು."

ಆ ಡ್ರಾಯಿಂಗ್ ಮಾಸ್ಟರರು ಶಾಲೆಯಲ್ಲಿ ಕೇವಲ ಪಾಠ ಮಾಡುವ ಉಪಾಧ್ಯಾಯರಾಗಿರಲಿಲ್ಲ. ಕನ್ನಡ, ಸಂಸ್ಕೃತ, ತೆಲುಗು, ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿ ಪ್ರಚಂಡ ಪಂಡಿತರಾಗಿದ್ದರು. ಪ್ರಸಿದ್ಧ ವಾಗ್ಮಿಗಳಾಗಿದ್ದರು. ಪತ್ತೆದಾರಿ ಕಥೆಗಳನ್ನು, ಕಾದಂಬರಿಗಳನ್ನು ಬರೆದು ಪ್ರಸಿದ್ಧರಾಗಿದ್ದರು.

ಆ ಡ್ರಾಯಿಂಗ್ ಮಾಸ್ಟರ್ ಬೀದಿಯಲ್ಲಿ ಹೋಗುತ್ತಿದ್ದರೆ ವಿದ್ಯಾರ್ಥಿಗಳು. "…. ಲೋ, 'ಗುರುತು ಕಂಡ ಕಳ್ಳ' ಬಂದರಪ್ಪ." ಎನ್ನುತ್ತಿದ್ದರು. ಏಕೆ ಗೊತ್ತೇ? ಅವರ ಅನೇಕ ಕೃತಿಗಳ ಪೈಕಿ ಒಂದು ಪತ್ತೇದಾರಿ ಕಾದಂಬರಿಯ ಹೆಸರು– ಗುರುತು ಕಂಡ ಕಳ್ಳ! ಆ ಪುಸ್ತಕದಲ್ಲಿ ಮುಖ್ಯ ಚಿತ್ರದ ಕೆಳಗೆ ಆ ಡ್ರಾಯಿಂಗ್ ಮಾಸ್ಟರ್ ಅರ್ಥಾತ್ ವಿದ್ವಾನ್ ಬಾಲಸರಸ್ವತಿ ಅವರ ಚಿತ್ರ ಪ್ರಕಟವಾಗಿತ್ತು. ಅದಕ್ಕೇ ವಿದ್ಯಾರ್ಥಿಗಳು ಹಾಗೆನ್ನುತ್ತಿದ್ದರು.

ಪ್ರಸಿದ್ಧ ವಾಗ್ಗೇಯಕಾರ ವಾಸುದೇವಾಚಾರ್ಯರ ಮೊಮ್ಮಗ ಎಸ್. ಕೃಷ್ಣಮೂರ್ತಿಗಳು ತಮ್ಮ ಬಾಲ್ಯದ ವಿದ್ಯಾರ್ಥಿ ಜೀವನದ ನೆನಪುಗಳಲ್ಲಿ ಹೇಳಿದ ಮಾತುಗಳಿವು. "ನಮ್ಮ ತಂದೆಯವರು ಬಾಲ ಸರಸ್ವತಿಯವರನ್ನು

ಚೆನ್ನಾಗಿ ಬಲ್ಲವರಾಗಿದ್ದರು. ಸಂಜೆ ಹೊತ್ತು ಮೈಸೂರಿನ ಅಗ್ರಹಾರದಲ್ಲಿದ್ದ ಆಯುರ್ವೇದ ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ ಅಂಗಡಿಯಲ್ಲಿ ಮಿತ್ರಕೂಟ ಸೇರುತ್ತಿತ್ತು. ಅಲ್ಲಿ ಬಾಲಸರಸ್ವತಿಯವರೂ, ನಮ್ಮ ತಂದೆಯವರೂ ಇರುತ್ತಿದ್ದರು. ಇಬ್ಬರ ಪರಿಚಯ ಎಷ್ಟು ನಿಕಟವಾಗಿತ್ತು ಎಂದರೆ ಬಾಲಸರಸ್ವತಿ ಯವರು, ತಾವು ಬರೆದ ಪತ್ತೇದಾರಿ ಕಾದಂಬರಿಗಳ ಹಸ್ತಪ್ರತಿಗಳನ್ನೇ ಓದಲು ನಮ್ಮ ತಂದೆಯವರಿಗೆ ಕೊಡುತ್ತಿದ್ದರು. ನಮ್ಮ ತಾಯಿಗಂತೂ ಬಾಲಸರಸ್ವತಿ ಯವರ ಎಲ್ಲ ಕಾದಂಬರಿಗಳೂ ಕಂಠಸ್ಥವಾಗಿದ್ದವು. 'ಕಂಠಾಭರಣ', 'ಪಿಶಾಚ ಪರಿವಾರ' 'ಕಮಲಾಕಾಂತನ ಉಯಿಲು', 'ದುಷ್ಟಚತುಷ್ಟಯ', 'ದೇವೀ ಚೌಧುರಾಣಿ' 'ಹೆಂಗಸು ಎಂದರೆ ಹೆಂಗಸು' ಈ ಕಾದಂಬರಿಗಳ ಕತೆಗಳನ್ನು ರಾತ್ರಿಯ ಹೊತ್ತು ಕೈ ತುತ್ತು ಹಾಕುತ್ತಾ ತುಂಬಾ ಸ್ವಾರಸ್ಯವಾಗಿ ಹೇಳುತ್ತಿದ್ದರು.

ಹೀಗೆ ವಿದ್ಯಾರ್ಥಿಗಳಿಗೆ, ಹಿರಿಯರಿಗೆ ಎಲ್ಲರಿಗೂ ಪ್ರಿಯರಾಗಿದ್ದವರು ವಿದ್ವಾನ್ ಬಾಲಸರಸ್ವತಿಯವರು.

'ವಿದ್ವಾನ್ ಬಾಲಸರಸ್ವತಿ' ಕಾವ್ಯನಾಮ, ಅವರ ಪಾಂಡಿತ್ಯಕ್ಕೆ ಬಂದ ಪ್ರಶಸ್ತಿ. ಅವರ ನಿಜವಾದ ಹೆಸರು ನರಹರಿ ಆಚಾರ್ಯ. ಮಿತ್ರರ ಬಾಯಲ್ಲಿ ನರಹರಿ ರಾಯರು.

ವಿದ್ವಾನ್ ಬಾಲಸರಸ್ವತಿಯವರು ೧೮೮೦ರಲ್ಲಿ ಮೈಸೂರಿನ ರಮಾವಿಳಾಸ ಅಗ್ರಹಾರದಲ್ಲಿ ಪಂಡಿತ ಲಕ್ಷ್ಮೀನರಸಿಂಹಾಚಾರ್ಯರ ಪುತ್ರರಾಗಿ ಜನಿಸಿದರು. ಬೆಂಗಳೂರಿನ ಆಚಾರ್ಯ ಪಾಠಶಾಲೆಯ ಸ್ಥಾಪಕರಾದ ಅನಂತಾಚಾರ್ ಇವರ ಬಂಧುಗಳು. ಮಾಧ್ವ ಮನೆತನದವರು, ಬಾಲ್ಯದ ವಿದ್ಯಾಭ್ಯಾಸ ಮೈಸೂರಿನ ಸದ್ವಿದ್ಯಾಪಾಠಶಾಲೆಯಲ್ಲಿ ಆಯಿತು. ವ್ಯಾಕರಣಪಂಡಿತರಾದ ಪಂಡಿತ ಲಕ್ಷ್ಮೀನರಸಿಂಹಾಚಾರ್ಯರು ಇವರಿಗೆ ಸಂಸ್ಕೃತ ಬೋಧಿಸಿದರು. ವಿದ್ಯಾರ್ಥಿ ಯಾಗಿದ್ದಾಗಲೇ ಸಂಸ್ಕೃತದಲ್ಲಿ ಆಶುಕವಿತ್ವ ಮಾಡುವ ಸಾಮರ್ಥ್ಯ ಹೊಂದಿದ್ದ ಇವರ ಸಂಸ್ಕೃತ ಪಾಂಡಿತ್ಯ ಎಷ್ಟಿತ್ತು ಎಂದರೆ, ಮುಂದೆ ಸಂಸ್ಕೃತದ ಘನ ಪಂಡಿತರೊಡನೆ ದಿನವೆಲ್ಲಾ ಚರ್ಚೆ ಮಾಡುವಷ್ಟು. ಮಹಾಕವಿಗಳ ಕಾವ್ಯಗಳನ್ನು ಉದಾಹರಿಸುತ್ತಾ ಇವರು ತಮ್ಮ ಮಾತುಗಳನ್ನು ಹೇಳುತ್ತಿದ್ದರೆ, ಅವು ಇವರ ಮಾತೋ ಮಹಾಕವಿಯ ಮಾತೋ ಎಂಬುದೇ ತಿಳಿಯಲಾಗದಷ್ಟು ಅಗಾಧವಾದ ಸಂಸ್ಕೃತ ಪಂಡಿತ್ಯ ಇವರಿಗಿತ್ತು. ಇದ್ದಕ್ಕಿದ್ದಂತೆ ಸಂಸ್ಕೃತ ಕವಿತೆ

ಇವರಿಂದ ಹೊರಹೊಮ್ಮುತ್ತಿತ್ತು. ಸ್ಫೂರ್ತಿ ಉಕ್ಕಿದಾಗ ನಡುರಾತ್ರಿ ಹಾಸಿಗೆಯಿಂದ ಎದ್ದು, ಗೋಡೆ ಮೇಲೆ ಕವನದ ಸಾಲುಗಳನ್ನು ಬರೆಯುತ್ತಿದ್ದರು. ಅದಕ್ಕಾಗಿ ಹಾಸಿಗೆಯ ಪಕ್ಕದಲ್ಲೇ ಸೀಮೆಸುಣ್ಣದ ಡಬ್ಬಿ ಇಟ್ಟುಕೊಂಡಿರುತ್ತಿದ್ದರು. ಸಂಸ್ಕೃತ ವಿದ್ಯಾಭ್ಯಾಸದ ಜೊತೆಗೆ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಾಡಿ, ಮದ್ರಾಸ್ ವಿಶ್ವವಿದ್ಯಾಲಯ ನಡೆಸುತ್ತಿದ್ದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ್ನೂ ಎಸ್.ಎಸ್.ಎಲ್.ಸಿ. ಪರೀಕ್ಷಾ ಪದ್ಧತಿ ಜಾರಿಗೆ ಬಂದಿರಲಿಲ್ಲ. ಅನಂತರ ಜೆ.ವೀರ್ ಅವರು ಮುಖ್ಯೋಪಾಧ್ಯಾಯರಾಗಿದ್ದ ಮಹಾರಾಜ ಕಾಲೇಜಿನಲ್ಲಿ ಎಫ್.ಎ. ಪರೀಕ್ಷೆ ಪಾಸ್ ಮಾಡಿದರು. ಇದೇ ಕಾಲದಲ್ಲಿ ಪ್ರಸಿದ್ಧ ಚಿತ್ರ ಕಲಾವಿದರಾದ ರಾಜಾ ರವಿವರ್ಮರಲ್ಲಿ ಇವರು ಚಿತ್ರಕಲೆಯನ್ನು ಕಲಿತರು. ಆಗ ರಾಜಾ ರವಿವರ್ಮರು ಕೇರಳದಿಂದ ಬಂದು ಮೈಸೂರು ಮಹಾರಾಜರ ಕೋರಿಕೆಯ ಮೇರೆಗೆ ಅರಮನೆಯಲ್ಲಿ ಚಿತ್ರನಿರ್ಮಾಣದಲ್ಲಿ ನಿರತರಾಗಿದ್ದರು. ಹಾಗಾಗಿ ಬಾಲಸರಸ್ವತಿಯವರಿಗೆ ಈ ಮಹಾನ್ ಕಲಾವಿದರಿಂದ ನೇರವಾಗಿ ಚಿತ್ರಕಲೆ ಕಲಿಯುವ ಅಪೂರ್ವ ಭಾಗ್ಯ ದೊರೆಯಿತು. ಇದಕ್ಕೆ ಜೆ.ವೀರರೇ ಕಾರಣರಾಗಿದ್ದರು. ಇವರ ಪಾಂಡಿತ್ಯವನ್ನು ಮೆಚ್ಚಿಕೊಂಡಿದ್ದ ವೀರ್ ಅವರೇ ಬಾಲಸರಸ್ವತಿಯವರಿಗೆ ಮೈಸೂರಿನ ಶಾಲೆಯೊಂದರಲ್ಲಿ ಪಂಡಿತ ಉದ್ಯೋಗವನ್ನು ದೊರಕಿಸಿಕೊಟ್ಟರು.

ಇವರು ಮೈಸೂರಿನ ಶಾಲೆಯಲ್ಲಿ ಪಂಡಿತರಾಗಿದ್ದಾಗ, ಆ ಶಾಲೆಯಲ್ಲಿ ಉರ್ದು ಪಂಡಿತರಾಗಿದ್ದ ಮೌಲ್ವಿಯೊಬ್ಬರ ಜೊತೆ ಮಾತನಾಡುತ್ತಾ, ಮಾತು ವಾಗ್ವಾದಕ್ಕೆ ಬಂದು ಸವಾಲಾಯಿತು. “ಉರ್ದು ಭಾಷಾ ಪಾಂಡಿತ್ಯ ನಿಮ್ಮಂತಹ ಸಂಸ್ಕೃತ ಪಂಡಿತರಿಗೆ ಬರಲು ಸಾಧ್ಯವಿಲ್ಲ. ಏಕೆಂದರೆ ನೀವು ಸಂಪ್ರದಾಯಸ್ಥರು. ಇದೆಲ್ಲಾ ಕಲಿಯಲು ಹೇಗೆ ಸಾಧ್ಯ? ಕಲಿತರೂ ಹರಕು ಮುರುಕು ಭಾಷೆ ಕಲಿಯಬಹುದಷ್ಟೆ. ಅದರಲ್ಲಿ ನಮ್ಮ ಹಾಗೆ ಮೌಲ್ವಿ ಪರೀಕ್ಷೆ ಮಾಡಲು (ಪಂಡಿತ ಪರೀಕ್ಷೆ ಇದ್ದಹಾಗೆ. ಆ ಕಾಲದಲ್ಲಿ ಉರ್ದು ಪರೀಕ್ಷೆ ಮೌಲ್ವಿ ಪರೀಕ್ಷೆಯಾಗಿತ್ತು) ನಿಮ್ಮಿಂದಾಗದು” ಎಂದು ಆ ಉರ್ದು ಪಂಡಿತರು ಬಾಲ ಸರಸ್ವತಿಯವರಿಗೆ ಸವಾಲು ಹಾಕಿದರು. “ಹಾಗೇನಿಲ್ಲ. ಆಸಕ್ತಿ ಇದ್ದರೆ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಯಾರೂ ಬೇಕಾದರೂ, ಯಾವ ವಿದ್ಯೆಯನ್ನಾಗಲೀ ಕಲಿಯಬಹುದು ತಿಳಿಯಿತೇ? ವಿದ್ಯೆ ಕಲಿಯಲು ಜಾತಿ, ಮತ, ವಯಸ್ಸು, ಲಿಂಗಭೇದ ಏನೂ ಇಲ್ಲ” ಎಂದು ಹೇಳಿ, ಬಾಲಸರಸ್ವತಿಯವರು ಉರ್ದು ಮೌಲ್ವಿ ಪರೀಕ್ಷೆಗೆ

ಕುಳಿತು ಉತ್ತೀರ್ಣರಾದರು. ಹೀಗೆ ಕಲಾವಿದರೂ, ಪಂಡಿತರೂ, ಬಹುಭಾಷಾ ವಿಶಾರದರೂ ಆಗಿದ್ದ ಬಾಲ ಸರಸ್ವತಿಯವರು, ಯಾವುದೋ ಕೌಟುಂಬಿಕ ಕಾರಣಗಳಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೆಂಡತಿಯನ್ನು ತೌರಿಗೆ ಕಳುಹಿಸಿ ಕಲ್ಕತ್ತೆಗೆ ಹೊರಟುಹೋದರು. ಕಲ್ಕತ್ತೆಯಲ್ಲಿ ಈಶ್ವರಚಂದ್ರ ವಿದ್ಯಾಸಾಗರರ ಮಗ ಜೀವಾನಂದ ವಿದ್ಯಾಸಾಗರರ ಬಳಿ ಇದ್ದು, ಬಂಗಾಳಿ ಭಾಷೆ, ಸಾಹಿತ್ಯಾಭ್ಯಾಸ ಮಾಡಿದರು. ಬಂಗಾಳಿ ಭಾಷಾ ಪಾಂಡಿತ್ಯ ಗಳಿಸಿದರು. ವಿದ್ಯಾಸಾಗರರು ಇವರ ಪ್ರತಿಭೆಯನ್ನು ಕಂಡು ಬೆರಗಾಗಿ, ತಮ್ಮ ಮಗಳನ್ನು ಕೊಟ್ಟು ಇವರಿಗೆ ಮದುವೆ ಮಾಡಲು ಪ್ರಯತ್ನಿಸಿದರು. ಆಗ ತಮಗೆ ಮದುವೆ ಆದದ್ದನ್ನು ಹೇಳಿದರೆ ಅನ್ನದಾತರೂ, ವಿದ್ಯಾದಾತರೂ ಆದವರಿಗೆ ನಿರಾಸೆ ಆದೀತೆಂದು, ಮದುವೆ ವಿಚಾರ ಬಂದಕೂಡಲೆ ಬೇರೆ ನೆಪ ಹೇಳಿ ಕಲ್ಕತ್ತೆಯಿಂದ ಹೊರಟು ಪ್ರಯಾಗಕ್ಕೆ ಬಂದರು. ಪ್ರಯಾಗದಲ್ಲಿ ಕ್ರೈಸ್ತ ಸಂಘದವರು ಇವರ ಬಂಗಾಳಿ, ಸಂಸ್ಕೃತ ಪಾಂಡಿತ್ಯ ಕಂಡು ಇಂಗ್ಲಿಷಿನಲ್ಲಿದ್ದ ಕೆಲವು ಕ್ರೈಸ್ತ ಗ್ರಂಥಗಳನ್ನು ಸಂಸ್ಕೃತಕ್ಕೂ, ಬಂಗಾಳಿಗೂ ಅನುವಾದ ಮಾಡಿಸಿಕೊಂಡರು.

ಇವರ ಭಾಷಾಂತರಗಳನ್ನು ಕಂಡ ಆ ಕ್ರೈಸ್ತ ಸಂಘದವರು, ಇಂತಹ ಪಂಡಿತರು ತಮ್ಮವರಾಗಿ, ತಮ್ಮಲ್ಲೇ ಇದ್ದರೆ ಮತ ಪ್ರಚಾರಕ್ಕೆ ಅನುಕೂಲ ವಾಗುವುದೆಂದು ಭಾವಿಸಿ ಅವರಿಗೆ ಕ್ರೈಸ್ತ ಕನ್ಯೆಯೊಡನೆ ವಿವಾಹ ಮಾಡಿಸಿ, ಮತಾಂತರ ಮಾಡಲು ಯತ್ನಿಸಿದರು. ಆದರೆ ಏಕಪತ್ನೀ ವ್ರತಸ್ಥರಾದ ಇವರು, ಸದ್ದಿಲ್ಲದೆ ಪ್ರಯಾಗವನ್ನು ತೊರೆದು ಬೆಂಗಳೂರಿಗೆ ಹಿಂದಿರುಗಿದರು.

ಆಗ ಬೆಂಗಳೂರಿನಲ್ಲಿದ್ದ ಹೆಚ್.ಜೆ. ಬಾಬಾ ಅವರಿಗೆ ಸಾಹಿತಿಗಳನ್ನೂ, ಪಂಡಿತರುಗಳನ್ನು ಕಂಡರೆ ಎಲ್ಲಿಲ್ಲದ ಪ್ರೀತಿ, ಅವರ ಶಿಫಾರಸ್ಸಿನಿಂದಾಗಿ ಬಾಲಸರಸ್ವತಿಯವರು ಕೋಟೆ ಹೈಸ್ಕೂಲಿನಲ್ಲಿ ಚಿತ್ರಕಲಾ ಅಧ್ಯಾಪಕರಾದರು. ಇವರ ಕಾಲದಲ್ಲಿ ವಿದ್ಯಾರ್ಥಿಯಾಗಿದ್ದವರೊಬ್ಬರು ಹೇಳಿದ ಪ್ರಸಂಗ ಹೀಗಿದೆ.

ಬೋರ್ಡಿನ ಮೇಲೆ ಚಿತ್ರ ಬರೆದು, ಚಿತ್ರಕಲೆ ಕಲಿಸುತ್ತಿದ್ದರು. ಬಹಳ ಶಿಸ್ತಿನ ಅಧ್ಯಾಪಕರಾಗಿದ್ದರು. ವಿದ್ಯಾರ್ಥಿಗಳು ತಪ್ಪು ಮಾಡಿದರೆ ಬೆತ್ತದ ರುಚಿ ತೋರಿಸುತ್ತಿದ್ದರು. ಚಿತ್ರಕಲೆ ಪಾಠವನ್ನು ತುಂಬಾ ಸೊಗಸಾಗಿ, ಎಲ್ಲರಿಗೂ ಅರ್ಥವಾಗುವಂತೆ ಕಲಿಸುತ್ತಿದ್ದರು. ಒಮ್ಮೆ ಒಂದು ನೀರಿನ ಹೂಜಿ ಚಿತ್ರವನ್ನು ಹೇಗೆ ಬರೆಯಬೇಕೆಂದು ಬೋರ್ಡಿನ ಮೇಲೆ ಬರೆದು ತೋರಿಸಿದರು.

ಅದರಂತೆ ಬರೆಯಲು ಹೇಳಿದರು. ಒಬ್ಬ ವಿದ್ಯಾರ್ಥಿ (ಆತ ಮುಂದೆ ಒಳ್ಳೆಯ ಚಿತ್ರಕಲಾವಿದ ಆದನಂತೆ) ಚಿತ್ರವನ್ನು ಬೋರ್ಡಿನ ಮೇಲೆ ಇದ್ದಂತೆಯೇ ಬರೆದನು. ಚಿತ್ರದಲ್ಲಿ ಹೂಜಿ ನಡುವೆ ಒಂದು ತಿರುಪಿನ ಮೊಳೆ (ಸ್ಕ್ರೂ) ಇದ್ದುದನ್ನು ಆತ ಚಿತ್ರಿಸಿದ್ದ. ತಾವು ಬರೆದದ್ದೇ ಒಂದು, ಇವನು ಬರೆದದ್ದೇ ಇನ್ನೊಂದು ಎಂದು ಬಾಲಸರಸ್ವತಿಯವರಿಗೆ ಕೋಪಬಂತು. 'ನಾನು ಬರೆದ ಹಾಗೆ ಚಿತ್ರ ಬರಿ ಅಂತ ಹೇಳಿದರೆ ಹೂಜಿ ಮೇಲೆ ಮೊಳೆ ಚಿತ್ರ ಬರಿಯಲು ನಿನಗೆ ಹೇಳಿದವರಾರು? ಅಧಿಕ ಪ್ರಸಂಗಿ!' ಎಂದು ಬೈದು ಬೆತ್ತದಿಂದ ಎರಡೇಟು ಬಿಗಿದರು. ವಿದ್ಯಾರ್ಥಿ ಅಳುತ್ತಾ, 'ನಾನು ಅಲ್ಲಿರೋದನ್ನೇ ಬರೆದಿರೋದು, ನೀವೇ ನೋಡಿ, ಹೂಜಿ ಮೇಲೆ ಮೊಳೆ ಚಿತ್ರ ಬರೆದಿದ್ದೀರಿ' ಎಂದ. 'ಎಲ್ಲಿ ಬರೆದಿದ್ದೇನೆ ತೋರಿಸು' ಎಂದು ಬೋರ್ಡ್ ಕಡೆ ತಿರುಗಿದರು. ಅಲ್ಲಿ ಬೋರ್ಡನ್ನು ಹಲಗೆಗೆ ಜೋಡಿಸುವಾಗ ಒಂದು ಬೋಲ್ಟನ್ನು ಜೋಡಿಸಿದ್ದರು. ಅದು ಹೂಜಿ ಚಿತ್ರದ ನಡುವೆ ಮೊಳೆ ಹೊಡೆದ ಹಾಗೆ ಕಾಣಿಸುತ್ತಿತ್ತು. ಚಿತ್ರ ಇದ್ದ ಹಾಗೆ ಬರೆದಿದ್ದ ವಿದ್ಯಾರ್ಥಿ ಮಕ್ಕಿ ಕಾ ಮಕ್ಕಿ ಮಾಡಿದ್ದ. ಗೋಡೆ ಮೊಳೆ ಹೂಜಿ ನಡುವೆ ಕಾಣಿಸುತ್ತಿದ್ದುದ್ದನ್ನು ಕಂಡು ವಿದ್ಯಾರ್ಥಿಗೆ "ನಾನು ನಿನ್ನನ್ನು ಹೊಡೆಯಬಾರದಾಗಿತ್ತು" ಎಂದರಂತೆ. ತಪ್ಪಾದಾಗ, ತಾವು ಮಾಡಿದ್ದು ಸರಿಯಲ್ಲ ಎನಿಸಿದಾಗ ವಿಷಾದ ವ್ಯಕ್ತಪಡಿಸುವುದು ಅವರ ಸ್ವಭಾವವಾಗಿತ್ತು. ಪಶ್ಚಾತ್ತಾಪವೇ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತ ಎಂಬುದು ಅವರ ನಿಲುವಾಗಿತ್ತು.

ಅವರು ಪತ್ತೇದಾರಿ ಕಾದಂಬರಿಗಳನ್ನು ಕನ್ನಡದಲ್ಲಿ ಮೊದಲಿಗೆ ಬರೆದವರಲ್ಲಿ ಒಬ್ಬರು. 'ತರಂಗಿಣಿ' ಎಂಬ ಮಾಸ ಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳನ್ನು ಪ್ರಕಟಿಸಲು ಸ್ವಂತ ಮುದ್ರಣಾಲಯವನ್ನೇ ಸ್ಥಾಪಿಸಿದರು. ಅದರಲ್ಲಿ "ಚಿತ್ರಗುಪ್ತನ ದಫ್ತರ" ಎಂಬ ಪತ್ತೇದಾರಿ ಕಥಾಮಾಲೆ ಪ್ರಾರಂಭಿಸಿ, ೨ ಆಣೆಗೆ ಒಂದು ಪುಸ್ತಕವನ್ನು ತಿಂಗಳಿಗೊಂದರಂತೆ ಕೊಡಲು ಯತ್ನಿಸಿದರು. ಮೊದಲ ವರ್ಷದಲ್ಲಿ ದುಷ್ಟ ಚತುಷ್ಟಯ, ಗುರುತು ಕಂಡ ಕಳ್ಳ, ನರಬಲಿ ಮಾಯಾವಿನಿ, ವಿಷಮುಹೂರ್ತ, ನೀಲಾಂಬರಿ, ಚೋರಚಕ್ರವರ್ತಿ, ನರ ರಾಕ್ಷಸಿ ಶೋಣಿತ ದರ್ಪಣ ಎಂಬ ಒಂಬತ್ತು ಪುಸ್ತಕಗಳನ್ನು ಪ್ರಕಟಿಸಿದರು ಎಂದು ದ.ಕೃ. ಭಾರದ್ವಾಜರು ಹೇಳಿದ್ದಾರೆ. (ಆದರೆ ೧೨ ಪುಸ್ತಕಗಳು ಪ್ರಕಟವಾಗಿವೆ). ೧೫ ವರ್ಷಗಳ ನಂತರ ತಿಂಗಳಿಗೊಂದು ಪುಸ್ತಕ ಕೊಡಲು ಯತ್ನಿಸಿ "ಚಿತ್ರಗುಪ್ತನ ದಫ್ತರ" ಎರಡನೆ ಮಾಲೆಯನ್ನು ಪ್ರಕಟಿಸಿದರು. ಅದರಲ್ಲಿ ಮೊದಲನೆ ಪುಸ್ತಕವಾಗಿ

೧೯೩೧ ಮಾರ್ಚ್ ೬ರಲ್ಲಿ "ಪಿಶಾಚ ಪರಿವಾರ" ಎಂಬ ಪತ್ತೇದಾರಿ ಪುಸ್ತಕ ಪ್ರಕಟಿಸಿದರು.

ಅದರಲ್ಲಿ ಹೇಳಿರುವ ಮಾತುಗಳು ಹೀಗಿವೆ:

"ಶ್ರೀಮತ್ಕರ್ನಾಟಕ ದೇಶ ಬಾಂಧವ ಮಹಾಶಯರಲ್ಲಿ ಬಾಲಸರಸ್ವತಿಯ ಸವಿನಯ ವಿಜ್ಞಾಪನೆ.

ಇಂದಿಗೆ ೧೫ ವರ್ಷಗಳ ಹಿಂದೆ ಚಿತ್ರಗುಪ್ತನ ಮೊದಲನೆಯ ದಫ್ತರವನ್ನು ಬಿಚ್ಚಿ ಅದರಲ್ಲಿ ೧೨ ಪುಸ್ತಕಗಳನ್ನು ಆರಿಸಿಕೊಂಡು, ನಮ್ಮ ಪ್ರಿಯ ಪಾಠಕರ ಮನೋವಿನೋದಕ್ಕಾಗಿ ತಿಂಗಳಿಗೆ ಒಂದರಂತೆ ೧೨ ಪುಸ್ತಕಗಳನ್ನು ಒಂದು ವರ್ಷದಲ್ಲಿ ಮುದ್ರಿಸಿ, ಕರ್ನಾಟಕ ಭಾಷಾಪ್ರಪಂಚದ ಸೇವೆಯನ್ನು ಯಥಾವತ್ತಾಗಿ ನೆರವೇರಿಸಿದೆನು. ಅಲ್ಲಿಂದ ಮುಂದೆ ನನ್ನಿಂದ ಭಾಷಾ ಸೇವೆಯು ನಡೆಯುವುದಕ್ಕೆ ಕುಂದು ಕೊರತೆಯುಂಟಾಗಿ ನಾನು ಕಾರ್ಯಾಂತರಗಳಲ್ಲಿ ಮಗ್ನನಾಗಿಬಿಟ್ಟೆನು. ಹೀಗೆಯೇ ನನ್ನ ಜೀವಮಾನದಲ್ಲಿ ೧೫ ವರ್ಷಗಳು ವ್ಯರ್ಥವಾಗಿ ಕಳೆದು ಹೋದುದಕ್ಕಾಗಿ ನಾನು ಬಹುವಾಗಿ ವಿಷಾದಿಸುವೆನು" ಎಂದಿದ್ದಾರೆ.

ಉತ್ತರ ಭಾರತಕ್ಕೆ ಹೋಗಿ ಬೆಂಗಳೂರಿಗೆ ವಾಪಸ್ ಬರುವವರೆಗೆ ೧೫ ವರ್ಷಗಳ ಕಾಲ ಅವರು ಸಂಸ್ಕೃತ, ಬಂಗಾಳಿ ಭಾಷೆಗಳಲ್ಲಿ ಗ್ರಂಥ ರಚನೆ, ಅನುವಾದಗಳನ್ನು ಮಾಡಿದ್ದರೂ, ಸಾಹಿತ್ಯ ಸೇವೆ ನಡೆಸಿದ್ದರೂ, ಕನ್ನಡ ಭಾಷಾ ಸೇವೆ ಮಾಡಲಾಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಅವರ ಕನ್ನಡಾಭಿಮಾನ ಅಷ್ಟರಮಟ್ಟಿಗಿತ್ತು. "ದೇಶಭಾಷಾ ಪ್ರಪಂಚದ ಸೇವೆಯನ್ನೇ ಜನ್ಮ ವ್ರತವನ್ನಾಗಿ ಕೈಗೊಂಡು ಕೆಲಸ ಮಾಡಬೇಕೆಂದು ಅನೇಕ ದೇಶಾಭಿಮಾನಿಗಳಾದ ಇತರ ಮಹೋದಯರು ಬಗೆಬಗೆಯಾಗಿ ಪ್ರೋತ್ಸಾಹಿಸುತ್ತಿರುವ ಕಾರಣ ನಾನು ಮಹಾಸಾರಸ್ವತ ದೀರ್ಘಸತ್ರದಲ್ಲಿ ದೀಕ್ಷೆಯನ್ನು ತಾಳಿ ಕಾರ್ಯಕ್ಷೇತ್ರದಲ್ಲಿ ಮುಂದುವರೆದು ಬಂದು ನಿಂದಿರುವೆನು" ಎಂದು ಆ ಪೀಠಿಕೆಯಲ್ಲಿ ಹೇಳಿದ್ದಾರೆ. ಬಾಲಸರಸ್ವತಿಯವರು ಅಪ್ರತಿಮ ವಾಗ್ಮಿಗಳಾಗಿದ್ದರು. ನಾನಾ ಸಾರ್ವಜನಿಕ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಅದ್ಭುತ ಭಾಷಣ ಮಾಡುತ್ತಿದ್ದರು. ಅನೇಕರು 'ನೀವು ಇಷ್ಟು ಚೆನ್ನಾಗಿ ಮಾತನಾಡಬಲ್ಲಿರಿ. ನೀವು ಬರೆಯಬೇಕು' ಎಂದು ಒತ್ತಾಯಿಸುತ್ತಿದ್ದರು. ಅದರ ಫಲವಾಗಿ ನಿರಂತರ ಸಾಹಿತ್ಯ ಪ್ರಕಟಣೆಗೆ ತೊಡಗಿದರು.

"ಚಿತ್ರಗುಪ್ತನ ದಫ್ತರ" ಮಾಲೆಯಲ್ಲಿ, "ಬಾಲ ಕಥಾವಳಿಮಾಲೆ", "ಬೋಧಾವಳಿ ಗ್ರಂಥಮಾಲೆ", "ಅಡಗೂಲಜ್ಜಿ ಮಾಲೆ" ಎಂಬ ಮಾಲೆಗಳಲ್ಲಿ ಮತ್ತು ಇತರ ಪ್ರಕಟಣೆಗಳಲ್ಲಿ ೭೦ ಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದಿದ್ದಾರೆ. ಅಧಿಕವಾಗಿ ಪತ್ತೇದಾರಿ ಕಥೆಗಳನ್ನು ಬರೆದಿರುವುದಲ್ಲದೆ ಬೇರೆ ವಿಷಯದ ಮೇಲೂ ಗ್ರಂಥಗಳನ್ನು ಬರೆದಿದ್ದಾರೆ.

ನಾಮ ರೂಪಾವಳೀ (ಸಂಸ್ಕೃತ ಶಬ್ದಾವಳಿ ಗ್ರಂಥ), ಯತೀಂದ್ರ ಶತಕಂ, ಚಂದ್ರಶೇಖರ ಸಪ್ತಶತಿ, ಶ್ರೀ ಗುರುಸ್ತುತಿ ರತ್ನಮಾಲಾ, ಸಂಸ್ಕೃತ ನೀತಿಸಾರ ಭಾಗ ೧ ಮತ್ತು ಭಾಗ ೨ ಎಂಬ ಸಂಸ್ಕೃತ ಗ್ರಂಥಗಳನ್ನು ಕಂಠಾಭರಣ, ದೇವಿ ಚೌಧುರಾಣಿ ಕಮಲಾಕಾಂತನ ಉಯಿಲು, ಮಹಾರಾಜ ಸಿಂಹ, ಬ್ರಾಹ್ಮಣ ರಮಣಿ ಮುಂತಾದ ಬಂಗಾಳಿ ಕಾದಂಬರಿಗಳ ಅನುವಾದವನ್ನು ಮಾಡಿದ್ದಾರೆ. ಇವರ ಪಾಂಡಿತ್ಯವನ್ನು ಆ ಕಾಲದ ಸಂಸ್ಕೃತ ಕನ್ನಡ ವಿದ್ವಾಂಸರೆಲ್ಲ ಮೆಚ್ಚಿ ಕೊಂಡಿದ್ದರು. ಡಿ.ವಿ.ಜಿ., ದೊಡ್ಡಬೆಲೆ ನಾರಾಯಣಶಾಸ್ತ್ರಿ, ವೆಂಕಟಾಚಾರ್ಯರು, ವಿದ್ವಾನ್ ಗೋಪಾಲಯ್ಯನವರು ಮುಂತಾದ ಘನವಿದ್ವಾಂಸರ ನಿಕಟವರ್ತಿ ಗಳಾಗಿದ್ದರು. ಇವರೆಲ್ಲ ಒಂದು ಕಾಲದಲ್ಲಿ ಪ್ರತಿದಿನವೂ ಒಂದು ಘಂಟೆಯಾದರೂ ಒಂದೆಡೆ ಸೇರಿ ಹರಟುತ್ತಿದ್ದರು. ಅವರ ಹರಟೆ ವಿಷಯವನ್ನು ಡಿ.ವಿ.ಜಿ., ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ. ಪ್ರಸ್ತಾಪಿಸಿದ್ದಾರೆ. "ನಮ್ಮಗಳ ಮಾತುಕತೆಗೆ ಗೊತ್ತಾದ ವಿಷಯವೇನೂ ಇರಲಿಲ್ಲ. ಆಯಾ ಹೊತ್ತು ಏನೇನು ತೋರಿದರೆ ಅದದೇ ಮಾತು. ಬೇಳೆಹುಳಿಗೆ ಇರಬೇಕಾದ ತರತೀಪು ಏನು? ತರಕಾರಿಗಳ ಪರುಠವಣಿ ಹೇಗೆ? ಜಿಲೇಬಿ ರುಚಿಯೇ? ಲಾಡು ಹೆಚ್ಚು ರುಚಿಯೇ? ಊದುಬತ್ತಿಯಲ್ಲಿ ಯಾವುದು ಚೆನ್ನ? ರಾಗ ಪ್ರಸ್ತಾರ ಹೇಗಿರಬೇಕು? ಮಾಘ ಕವಿಯ ಪದಶಯ್ಯೆ– ಹೀಗೆ ಏನೆಂದರೆ ಅದು, ರಾಜಕೀಯವೂ ಆಗಾಗ ಬರುತ್ತಿದ್ದುದುಂಟು."

ಹಿಂದಿನ ಕಾಲದ ಪಂಡಿತರ ಮಾತು ಕಥೆಯ ರೀತಿ, ಪಾಂಡಿತ್ಯ ಯಾವ ರೀತಿ ಇತ್ತು ಎಂಬುದನ್ನು ಈ ಮಾತುಗಳು ತಿಳಿಸುತ್ತವೆ. ಡಿ.ವಿ.ಜಿ., ವಿ.ಸೀ., ವೆಂಕಣ್ಣಯ್ಯ ಮೊದಲಾದ ವಿದ್ವಾಂಸರು ಎಷ್ಟು ಗಂಭೀರವಾಗಿ ಶಾಸ್ತ್ರ, ಸಾಹಿತ್ಯ ಚರ್ಚೆ ಮಾಡುತ್ತಿದ್ದರೋ, ಅಷ್ಟೇ ಲೋಕಾಭಿರಾಮವಾಗಿ, ಹಾಸ್ಯವಾಗಿ ಹರಟುತ್ತಿದ್ದರು. ಘನ ವಿದ್ವಾಂಸರು ಎಂದರೆ ಅವರು ಸರಳವಾಗಿ ಮಾತನಾಡುವವರಲ್ಲ ಎಂಬ ಭಾವನೆ ಅನೇಕರಿಗಿದೆ. ಅದು ಸಾಕಷ್ಟು ನಿಜ ಸಂಗತಿಯೂ ಹೌದು. ಆದರೆ ಅನೇಕ ಘನ ವಿದ್ವಾಂಸರು ಹಾಗಿರಲಿಲ್ಲ.

ನಾನು ಕಂಡಂತೆ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಯವರು ಹೀಗಿದ್ದವರು. ಅವರು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಂಪಾದಕರಾಗಿ ದಿನವೂ ಪರಿಷತ್ ಬಳಿ ಬಂದು, ಸಂಜೆ ಕೆ.ಎಸ್. ನರಸಿಂಹಸ್ವಾಮಿ, ವಿ.ಸೀ. ಯವರುಗಳ ಜೊತೆ ಹರಟುತ್ತಾ ಲಾಲ್‌ಬಾಗಿಗೆ ವಾಕಿಂಗ್ ಹೋಗುತ್ತಿದ್ದರು. ವಾಪಸ್ ಬರುವಾಗ ಎಂ.ಟಿ.ಆರ್.ನಲ್ಲಿ ದೋಸೆ ತಿಂದು ಬರುವುದು, ಜೊತೆಯಲ್ಲಿದ್ದ ವರಿಗೆ ಕೊಡಿಸುವುದು ಪದ್ಧತಿಯಾಗಿತ್ತು. ದಾರಿಯಲ್ಲಿ ಅವರು ಚರ್ಚಿಸದ ವಿಷಯಗಳೇ ಇರಲಿಲ್ಲ. ಒಮ್ಮೊಮ್ಮೆ ಮೋಟಗಾನಹಳ್ಳಿಯವರು ಇಲ್ಲವೇ ನರಸಿಂಹಸ್ವಾಮಿಗಳು ಬಾರದೆ ಇದ್ದ ದಿನ ನಮ್ಮಂತಹ ಹುಡುಗರನ್ನೇ ವಿ.ಸೀ.ಯವರು ಲಾಲ್‌ಬಾಗಿಗೆ, ಎಂ.ಟಿ.ಆರ್.ಗೆ ಕರೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ನಮಗೆ ಇಂಗ್ಲಿಷ್ ಸಾಹಿತ್ಯ, ಸಂಸ್ಕೃತಿ, ಹಿಂದಿನ ಕಾಲದ ವಿದ್ವಾಂಸರ ವಿಚಾರ ನಡುನಡುವೆ ಹಾಸ್ಯ ಪ್ರಸಂಗಗಳನ್ನು ಹೇಳುತ್ತಿದ್ದರು. ಮೋಟಗಾನಹಳ್ಳಿಯವರೂ ಅಷ್ಟೆ. ಪರಿಷತ್ತಿನ ಬಳಿ ಘನ ವಿದ್ವಾಂಸರೊಂದಿಗೆ ಗಂಭೀರ ಚರ್ಚೆ ಮಾಡುತ್ತಿದ್ದರು. ನಮ್ಮಂಥ ವಿದ್ಯಾರ್ಥಿ ಯುವಕರೊಂದಿಗೆ ತಮಾಷೆಯಾಗಿ ಮಾತನಾಡುತ್ತಿದ್ದರು. ಡಿ.ವಿ.ಜಿ. ಮೊದಲಾದವರು ಇದೇ ವರ್ಗದವರಾಗಿದ್ದರು.

ಬಾಲಸರಸ್ವತಿಯವರು ಬೆಂಗಳೂರಿನಲ್ಲಿ ಮುದ್ರಣಾಲಯ ಸ್ಥಾಪಿಸಿ, ಪತ್ತೇದಾರಿ ಪುಸ್ತಕಗಳನ್ನು ಪ್ರಕಟಿಸಿ, ಲೇಖಕರೂ, ಪ್ರಕಾಶಕರೂ, ಮುದ್ರಕರೂ ಆಗಿ ಕಾರ್ಯ ನಿರ್ವಹಿಸಿದ ಮೇಲೆ ವ್ಯವಹಾರದಲ್ಲಿ ನಷ್ಟವಾಗಿ, ಮೈಸೂರಿಗೆ ಹೋದರು. ಮೈಸೂರಿನಲ್ಲಿ ಶ್ರೇಷ್ಠ ಸಾಹಿತಿಗಳೂ, ರಾಜ ಮನೆತನದವರೂ ಆದ ಭಕ್ಷಿ ಲಿಂಗರಾಜ ಅರಸ್‌ರವರ ನೆರವಿನಿಂದ ಛತ್ರ ಒಂದರ ಮೇಲ್ವಿಚಾರಕರಾಗಿ ಉದ್ಯೋಗಿಗಳಾದರು. ಸಂಬಳ ಎಷ್ಟು ಗೊತ್ತೇ? ತಿಂಗಳಿಗೆ ಮೂರೂವರೆ ರೂಪಾಯಿ. ಆ ಕಾಲ ಹಾಗಿತ್ತು. ಆದರೆ ಅವರ ವಿದ್ವತ್ತು ಕಂಡು ಮಹಾರಾಜರು, ಜಯಚಾಮರಾಜ ಒಡೆಯರಿಗೆ ಶಿಕ್ಷಣ ಕೊಡಲು ನೇಮಿಸಿದರು.

ಬಾಲಸರಸ್ವತಿಗಳ ಸ್ವಭಾವವೆಂದರೆ ಒಂದು ಕಡೆ ಬಹುಕಾಲ ನಿಲ್ಲುತ್ತಿರಲಿಲ್ಲ. ಸರ್ಕಸ್ ಕಂಪನಿಯ ಹಾಗೆ ಮತ್ತು ಸ್ವತಂತ್ರ ಮನೋಭಾವದವರು. ಡಿ.ವಿ.ಜಿ., ದೇವುಡು ಅವರ ಹಾಗೆ ಇವರೂ ಸಹ ಇನ್ನೊಬ್ಬರ ಹಂಗಿನಲ್ಲಿರಲು ಇಷ್ಟಪಡುತ್ತಿರಲಿಲ್ಲ, 'ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು' ಎನ್ನುವ ಮನೋಧರ್ಮದವರು. ಹಾಗಾಗಿ ಅರಸು ಬೋರ್ಡಿಂಗ್ ಸ್ಕೂಲ್‌ನಲ್ಲಿ

ಅಧ್ಯಾಪಕರಾದವರು, ಅದನ್ನು ಬಿಟ್ಟು ತಿರುಮಕೂಡಲು ನರಸೀಪುರಕ್ಕೆ ಹೋದರು. ತಿರು ಎಂದರೆ ಶ್ರೇಷ್ಠ, ಮುಕ್ಕೂಡಲು ಎಂದರೆ ಮೂರು ನದಿಗಳು ಸೇರುವ ಸ್ಥಳ ಎಂದರ್ಥ. ಬಲಗಡೆ ಕಪಿಲಾ, ಎಡಗಡೆ ಕಾವೇರಿ, ಮಧ್ಯೆ ಸ್ಫಟಿಕ ಸರೋವರ ಎಂಬ ಗುಪ್ತಗಾಮಿನಿ. ಮೂರೂ ಕೂಡುವ ಸ್ಥಳವಾದ್ದರಿಂದ ಈ ಕ್ಷೇತ್ರಕ್ಕೆ ತಿರುಮಕ್ಕೂಡಲು ಅರ್ಥಾತ್ ತಿರುಮಕೂಡಲು ಎಂಬ ಹೆಸರು ಬಂದಿದೆ. ಬಹಳ ಪ್ರಶಾಂತವಾದ ಜಾಗವಿದು. ಹೊಸಕೆರೆ ಚಿದಂಬರಯ್ಯ ನವರೂ ಸಹ ತಮ್ಮ ಜೀವನದ ಕೊನೆಗಾಲವನ್ನು ಇಲ್ಲಿಯೇ ಕಳೆದರು. ಇಲ್ಲಿಗೆ ಬಂದ ಬಾಲಸರಸ್ವತಿಯವರು ಪ್ರಾಚೀನ ಗುರುಕುಲ ಪದ್ಧತಿ ಪ್ರಕಾರ ಶಾಲೆ ನಡೆಸಲು ನಿರ್ಧರಿಸಿ 'ಸಚ್ಚಿದಾನಂದ ಪರದೇಶಿ ಪಾಠಶಾಲೆ'ಯನ್ನು ಸ್ಥಾಪಿಸಿ ನಡೆಸಿದರು. ಆದರೆ ಇದೂ ಬಹುಕಾಲ ನಡೆಯಲಿಲ್ಲ. ಆಗ ಮತ್ತೆ ಬೆಂಗಳೂರಿಗೆ ಹಿಂದಿರುಗಿದರು. ಬಸವನಗುಡಿಯಲ್ಲಿ ಬಾಂದಿನವರ ಬೀದಿ ಎರಡನೆ ಕ್ರಾಸ್‌ನಲ್ಲಿ "ಗುರುಕುಲ" ವೆಂಬ ಮಕ್ಕಳ ಶಾಲೆ ಪ್ರಾರಂಭಿಸಿದರು. ಬೆಂಗಳೂರಿನಲ್ಲಿ ಮಕ್ಕಳಿಗಾಗಿ ಶಿಶುವಿಹಾರ ಶಿಕ್ಷಣ (ಕಿಂಡರ್ ಗಾರ್ಟನ್ ಶಿಕ್ಷಣ), ಕೊಡಲು ಪ್ರಾರಂಭವಾದ ಮೊದಮೊದಲ ಶಾಲೆಗಳಲ್ಲಿ ಇದೂ ಒಂದಾಗಿತ್ತು. ಆ ಶಾಲೆಯನ್ನು ನಡೆಸುತ್ತಿದ್ದಾಗ "ಭಾರತಮಾತಾ ವಿದ್ಯಾಶಾಲೆ"ಯ ಸ್ಥಾಪಕರಾದ, ಆರ್. ಗೋಪಾಲಕೃಷ್ಣ ಐಯ್ಯಂಗಾರರನ್ನು ಅವರ ಮಾವ, ಬಾಲಸರಸ್ವತಿ ಯವರ ಬಳಿ ಕರೆದುಕೊಂಡು ಹೋಗಿ "ಬಾಲಸರಸ್ವತಿಯವರೇ ಈ ನಮ್ಮ ಹುಡುಗ ಮೆಟ್ರಿಕ್ಯುಲೇಷನ್ ಪರೀಕ್ಷೆಪಾಸ್ ಮಾಡಿದ್ದಾನೆ. ಅವನಿಗೆ ಸ್ವಲ್ಪ ಸಂಸ್ಕೃತ ಕಲಿಸಿಕೊಡಿ. ನಿಮ್ಮ ಬಳಿ ಇದ್ದರೆ ಅವನಿಗೆ ಒಳ್ಳೆಯ ತಯಾರಿ ಸಿಗುತ್ತದೆ" ಎಂದು ಅವರಲ್ಲಿ ಬಿಟ್ಟರು. ಆಗ ಬಾಲಸರಸ್ವತಿಯವರು ಶಿಶುವಿಹಾರವನ್ನು ಹೇಗೆ ನಡೆಸುತ್ತಿದ್ದರು ಎಂಬುದನ್ನು ಆರ್. ಗೋಪಾಲಕೃಷ್ಣ ಐಯ್ಯಂಗಾರರು ಹೀಗೆ ವಿವರಿಸಿದ್ದಾರೆ: "ಚಿಕ್ಕಮಕ್ಕಳ ಶಿಕ್ಷಣ, ಅವರ ಅಂಗಪಟುತ್ವದಿಂದಲೇ ಆಗಬೇಕು. ಅಂದರೆ ಇಂದ್ರಿಯಗಳೇ ಜ್ಞಾನಕ್ಕೆ ಹೆದ್ದಾರಿಗಳು. ಇದಕ್ಕಾಗಿ ಬಣ್ಣಬಣ್ಣದ ವಿವಿಧಾಕೃತಿಗಳ ಶಿಕ್ಷಣ ಸಾಧನಗಳು (ಟೀಚಿಂಗ್ ಏಡ್ಸ್) ಮತ್ತು ವಿವಿಧ ಮಣಿಗಳು, ಕವಡೆ, ಗಜ್ಜುಗ ಗೋಲಿ (ಮಕ್ಕಳು ಮೂಗಿನಲ್ಲಿ, ಕಿವಿಯಲ್ಲಿ ಹಾಕಿಕೊಳ್ಳಲಾರದಷ್ಟು ದಪ್ಪನಾದವು) ಮೊದಲಾದ ವಸ್ತುಗಳನ್ನು ಬಳಸಿ ಮಕ್ಕಳನ್ನು ಆಕರ್ಷಿಸಬೇಕು. ಮಕ್ಕಳು ಆಡುತ್ತಾ ಆಡುತ್ತಾ ಅಕ್ಷರ, ಕಾಗುಣಿತ, ಸಂಖ್ಯೆಗಳನ್ನು ಕಲಿಯಬೇಕು. ವಿವಿಧ ಆಕೃತಿಗಳನ್ನು ತಯಾರಿಸಿಕೊಂಡು ಅವುಗಳ ಮೂಲಕವೇ ಓದು, ಬರಹ, ಗಣಿತ ಕಲಿಯಬೇಕು. ಇದು ಶಿಶು ಶಿಕ್ಷಣ

ತಜ್ಞರ ಶೈಕ್ಷಣಿಕ ಸಿದ್ಧಾಂತವಾಗಿತ್ತು. ಇದನ್ನು ಬಾಲಸರಸ್ವತಿಯವರು ಬುದ್ಧಿವಂತಿಕೆಯಿಂದ ತಮ್ಮ ಬದುಕುವ ಸನ್ನಿವೇಶಕ್ಕೆ ತಕ್ಕಂತೆ ಅಳವಡಿಸಿಕೊಂಡಿದ್ದರು. ಅದಕ್ಕೆ ಬೇಕಾದ ಮಾದರಿ ಆಟಿಕೆಗಳನ್ನು ತಯಾರಿಸಿದ್ದರು."

ಮಕ್ಕಳಿಗೆ ಪಾಠ ಹೇಳುವುದರಲ್ಲಿ ತಜ್ಞರಾಗಿದ್ದ ಅವರು ದೊಡ್ಡವರಿಗೆ ಪಾಠ ಹೇಳುವುದರಲ್ಲಿ, ಅದರ ರೀತಿ ನೀತಿಗಳೇ ಬೇರೆಯಾಗಿರುತ್ತಿದ್ದವು. ಅವರ ಬಳಿ ದೊಡ್ಡವರು ಪಾಠ ಹೇಳಿಸಿಕೊಳ್ಳುವುದು ಸುಲಭವಿರಲಿಲ್ಲ. ಇತಿಹಾಸತಜ್ಞ ಸೂರ್ಯನಾಥ ಕಾಮತರು ಒಮ್ಮೆ ಹೇಳಿದಂತೆ, ಪ್ರಸಿದ್ಧ ಇತಿಹಾಸ ಮತ್ತು ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎಂ.ವಿ. ಕೃಷ್ಣರಾಯರು ಬಾಲಸರಸ್ವತಿಯವರನ್ನು 'ನಿಮ್ಮಿಂದ ಸಂಸ್ಕೃತ ಕಲಿಯಲು ಅಪೇಕ್ಷೆಯಾಗಿದೆ. ಅದಕ್ಕಾಗಿ ತಮಗೇನು ಫೀ ಕೊಡಬೇಕು? ತಿಳಿಸಬೇಕು ದಯವಿಟ್ಟು' ಎಂದು ಕೇಳಿಕೊಂಡರು. ಆಗ ಬಾಲಸರಸ್ವತಿಯವರು 'ನಾನು ದಿನಾ ನಿಮ್ಮ ಮನೆಗೆ ಪಾಠಕ್ಕೆ ಬಂದಾಗ ಒಂದು ಲೋಟ ಹಾಲು ಕೊಟ್ಟರೆ ಸಾಕು' ಎಂದರಂತೆ.

ಡಿ.ವಿ.ಜಿ.ಯವರು ಬಾಲಸರಸ್ವತಿಯವರಲ್ಲಿ ಸಂಸ್ಕೃತ ವ್ಯಾಕರಣ ಹೇಳಿಸಿಕೊಳ್ಳಲು ಅಪೇಕ್ಷಿಸಿದಾಗ, "ಓಹೋ, ಅದಕ್ಕೇನು ಒಂದೊಂದಾಗಿ ಎಲ್ಲ ಪ್ರಕರಣ ಮಾಡೋಣ" ಎಂದರು. ಆದರೆ ಒಂದೆರಡು ವಾರಗಳ ನಂತರ ಡಿ.ವಿ.ಜಿ. ಪಾಠಕ್ಕೆ ಬರುವುದನ್ನು ಬಿಟ್ಟರು. ಏಕೆಂದರೆ ಪಾಠ ಪ್ರಾರಂಭಿಸಿದ ನಿಮಿಷಗಳಲ್ಲಿ ಬೇರೇನೋ ವಿಷಯ ಪ್ರಸ್ತಾಪಕ್ಕೆ ಬಂದು, ಅಂದಿನ ಪಾಠ ಅಲ್ಲಿಗೇ ನಿಲ್ಲುತ್ತಿತ್ತು. ಪ್ರತಿದಿನ ಹಾಗಾಗಿ ಪಾಠ ಸಾಗಲಿಲ್ಲ. ಡಿ.ವಿ.ಜಿ. ಕಲಿಯುವ ಆಸೆ ಬಿಟ್ಟರು. ಬೆಂಗಳೂರಿನಲ್ಲಿ ಗುರುಕುಲ ಸ್ಥಾಪಿಸಿದಾಗ ಅವರ ಮನೆ ಮುಂದೆ "ಸಚ್ಚಿದಾನಂದ ಪರದೇಶಿ" ಎಂಬ ನಾಮಫಲಕ ಹಾಕಿಕೊಂಡಿದ್ದರು. ಅದೇ ಹೆಸರಿನಲ್ಲಿ ತಿರುಮಕೂಡಲಿನಲ್ಲಿ ಶಾಲೆಯೊಂದನ್ನು ತೆರೆದಿದ್ದರು.

ವಿದ್ವಾನ್ ಬಾಲಸರಸ್ವತಿಯವರು ಆಚಾರ್ಯ ಪಾಠಶಾಲೆಯ ಸ್ಥಾಪನೆಗೆ ಕಾರಣಕರ್ತರಾದರು. ಹತ್ತಿರದ ನೆಂಟರಾದ ಅನಂತಾಚಾರ್, ಎಮ್.ಎ., ಮಾಡಿ ಖಾಯಂ ಕೆಲಸವಿಲ್ಲದೆ ಇದ್ದರು. ಆಗ ವಿದ್ಯಾಸಂಸ್ಥೆಯೊಂದನ್ನು ಸ್ಥಾಪಿಸಿ ಸಮಾಜಸೇವೆ ಶಿಕ್ಷಣಸೇವೆ ಸಲ್ಲಿಸಲು ಪ್ರೇರೇಪಿಸಿದವರೇ ಬಾಲಸರಸ್ವತಿಯವರು. "ಆಚಾರ್ಯ ಪಾಠಶಾಲಾ" ಎಂಬ ಹೆಸರಿಡಲು ಬಾಲಸರಸ್ವತಿಯವರೇ ಕಾರಣರು. ಅಷ್ಟೇ ಅಲ್ಲ, ಅಲ್ಲಿ ಶಿಶು, ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭದ ದಿನಗಳಲ್ಲಿ ಕೆಲವು ಕಾಲ ಪಾಠವನ್ನೂ ಹೇಳಿದ್ದಾರೆ.

ಲೌಕಿಕ ಜೀವನದಲ್ಲಿ ಒಂದು ರೀತಿಯಲ್ಲಿ ಅವಧೂತರಂತೆ ಇದ್ದರು. ಬಾಲಸರಸ್ವತಿಯವರು. ವಾಗ್ಮಿಗಳಾಗಿ ಸೊಗಸಾಗಿ ಮಾತನಾಡುತ್ತಿದ್ದ ಅವರನ್ನು ಸಭೆಗಳಿಗೆ ಎಲ್ಲ ಬಗೆಯ ಜನ ಕರೆದೊಯ್ಯುತ್ತಿದ್ದರು. ಸಭೆಗಳಿಗೆ ಹೋಗುವಾಗ ಒಳ್ಳೆಯ ಉಡುಪನ್ನು ಧರಿಸಿ ಹೋಗಲು ವಿಶೇಷ ಗಮನ ಕೊಡುತ್ತಿರಲಿಲ್ಲ. ಡಿ.ವಿ.ಜಿಯವರು ಹೇಳುವಂತೆ "ಸ್ವಲ್ಪ ಮಾಸಿ, ನಲುಗಿದ ಬಟ್ಟೆಗಳನ್ನು ಧರಿಸುತ್ತಿದ್ದರು. ಅವರು ಬಟ್ಟೆಗಳನ್ನು ಒಗೆದುದನ್ನು ಮಾತ್ರ ನಾನು ಕಾಣೆ. ಎರಡು ತಿಂಗಳಿಗೋ, ಮೂರು ತಿಂಗಳಿಗೋ ಒಂದು ಸಾರಿ ಸುತ್ತಮುತ್ತ ಇದ್ದ ಮೂರೇ ಮಾಸಿದ ಬಟ್ಟೆಗಳನ್ನು ಆಗಸನಿಗೆ ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ." ಇನ್ನು ಅವರಿಗೆ ಬಟ್ಟೆಗಳೆಲ್ಲ ಕೊಳೆಯಾಗಿದೆ ಅನ್ನಿಸಿದಾಗ ಪೇಟೆಗೆ ಹೋಗಿ ಧೋತ್ರಗಳನ್ನು ಕೊಂಡು ತಂದು, ಇನ್ನ ಆರುತಿಂಗಳು ಯೋಚನೆ ಇಲ್ಲ ಎನ್ನುತ್ತಿದ್ದರು. ಯಾವುದಾದರೂ ಸಭೆಗೋ, ದೊಡ್ಡ ಮನುಷ್ಯರನ್ನು ನೋಡಲೋ ಹೋಗುವಾಗ, ಉಟ್ಟು ಬದಲಿಸಿದ್ದ ಬಟ್ಟೆ ರಾಶಿಯಲ್ಲಿ ಕಡಿಮೆ ಕೊಳೆ ಆದದ್ದನ್ನು ಆರಿಸಿಕೊಂಡು ಉಟ್ಟುಕೊಂಡು ಹೋಗುತ್ತಿದ್ದರಂತೆ.

ಕನ್ನಡದಲ್ಲಿ ಆಧುನಿಕ ಪತ್ತೇದಾರಿ ಕಾದಂಬರಿಗಳ ರಚನೆ ಪ್ರಾರಂಭ ವಾದುದು ೨೦ನೇ ಶತಮಾನದ ಪ್ರಾರಂಭದಲ್ಲಿ. ಆಗ ಹಲವು ಪ್ರಸಿದ್ಧ ಸಾಹಿತಿಗಳಾದ ಗಳಗನಾಥ ಬಿ.ವೆಂಕಟಾಚಾರ್ಯ, ಶಿವರಾಮ ಕಾರಂತ, ದೇವುಡು, ವೆಂಕಟಾದ್ರಿಶಾಸ್ತ್ರಿ ಮೊದಲಾದವರ ಕೃತಿಗಳು ಬೆಳಕಿಗೆ ಬಂದಿದ್ದವು. ಆ ಪೈಕಿ ಬಾಲಸರಸ್ವತಿಯವರ ಪತ್ತೇದಾರಿ ಕಾದಂಬರಿಗಳು ಅತಿ ಜನಪ್ರಿಯ ವಾಗಿದ್ದವು. ಇವರ ಕಾದಂಬರಿಗಳನ್ನು ಕುರಿತು ಕೆ.ಕೃಷ್ಣಮೂರ್ತಿಗಳು ಹೇಳಿದಂತೆ ನೀತಿ ಪ್ರತಿಪಾದನೆ ಹಾಗೂ ಅದ್ಭುತ ರಮ್ಯ ವಾತಾವರಣ ಹಗಲು-ಕತ್ತಲು ಸ್ಪಷ್ಟ ವಿರೋಧ ಉಳ್ಳ ನಾಯಕ, ಖಳ ನಾಯಕರ ಕಲ್ಪನೆ, ಐತಿಹಾಸಿಕ, ಸಾಮಾಜಿಕ ಸಾಮಗ್ರಿಗಳ ಸಂಯೋಜನೆ ಅವರ ಕಾದಂಬರಿಗಳು ವೈಶಿಷ್ಟ್ಯಗಳಾಗಿದ್ದವು.

ಪ್ರತಿಭಾನ್ವಿತ ವ್ಯಕ್ತಿಯಾದರೂ ಸುಖ, ಕೀರ್ತಿಗಳು ದೊರಕಬೇಕಾದರೆ ವಿಧಿ ಲಲಾಟದಲಿ ಬರೆದಿರಬೇಕು. ವಿದ್ವಾನ್ ಬಾಲಸರಸ್ವತಿಯವರು ಜೀವನದುದ್ದಕ್ಕೂ ಸ್ವತಂತ್ರವಾಗಿ, ಸ್ವಾಭಿಮಾನಿಯಾಗಿ ಬದುಕಲು ಯತ್ನಿಸಿದವರು. ಅದಕ್ಕಾಗಿ ಅವರು ಊರು ದೇಶ ತಿರುಗಿದರು, ಸಂಸ್ಥೆಗಳನ್ನು ಸ್ಥಾಪಿಸಿದರು. ಸಾಹಿತ್ಯ ರಚನೆ ಮಾಡಿ, ತಾವೇ ಅಚ್ಚುಮಾಡಿ ಪ್ರಕಟಿಸಿದರು. ಅವರಂತೆ ಪ್ರಯತ್ನಶೀಲತೆಯ

ಲೇಖಕರು ಆ ಕಾಲಕ್ಕೆ ಅಪರೂಪವೆನ್ನಬಹುದು. ಅಷ್ಟೆಲ್ಲಾ ಮಾಡಿದರೂ ಜೀವನದಲ್ಲಿ ಒಂದು ರೀತಿಯಲ್ಲಿ ಯಶಸ್ವಿಗಳಾಗಲಿಲ್ಲ.

ತಾವೇ ಪ್ರಕಾಶಕರಾಗಿ ಕೃತಿ ರಚಿಸಿ ಪ್ರಕಟಿಸುತ್ತಿದ್ದವರು, ಇತರರಿಗಾಗಿ ಕೃತಿ ರಚಿಸಿಕೊಡುವ ಸನ್ನಿವೇಶ ಅವರಿಗೆ ಬಂತು. ಜೀವನ ನಿರ್ವಹಣೆಗಾಗಿ ಪುಸ್ತಕಗಳನ್ನು ಬರೆದುಕೊಡುವ ಪರಿಸ್ಥಿತಿ ಅವರಿಗೆ ಬಂದದ್ದುಂಟು. ಜೀವನದ ಎಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಅವರ ಬರವಣಿಗೆಯ ಶಕ್ತಿ ಕುಂದಲಿಲ್ಲ. ಬತ್ತದ ತೊರೆಯಾಗಿ ಸಾಹಿತ್ಯ ಅವರಲ್ಲಿ ಚಿಮ್ಮುತ್ತಿತ್ತು. ಒಂದು ಸಂದರ್ಭದಲ್ಲಿ, ಒಂದೇ ರಾತ್ರಿಯಲ್ಲಿ "ಸೌಭಾಗ್ಯ ಸಂಪತ್ಕುಮಾರ್" ಎಂಬ ೬೪ ಪುಟಗಳ ಕಥೆ ಪುಸ್ತಕವನ್ನು ಪ್ರಕಾಶರೊಬ್ಬರಿಗೆ ಬರೆದುಕೊಟ್ಟರು ಎಂದು ಡಿ.ಕೆ. ಭಾರದ್ವಾಜರು ಹೇಳಿದ್ದಾರೆ. ನಿಜವಾಗಿ ಹೇಳುವುದಾದರೆ ಅವರ ಪ್ರತಿಭೆ ಪಾಂಡಿತ್ಯಕ್ಕೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯಂತಹ ಗೌರವ ದೊರೆಯಬೇಕಾಗಿತ್ತು. ಕೀರ್ತಿ ಗೌರವಗಳಿರಲಿ, ಕೆಲವೊಮ್ಮೆ ದುರದೃಷ್ಟ ಸಂಗತಿಗಳು ಅವರ ಹೆಗಲೇರುತ್ತಿದ್ದವು.

ಬಾಲಸರಸ್ವತಿಯವರ ಆಪ್ತ ಮಿತ್ರರಲ್ಲಿ ಒಬ್ಬರು ಹೇಳಿದ ಪ್ರಸಂಗವಿದು. ಜೀವನದಲಿ ಅನೇಕ ಕ್ಲೇಶಗಳಿಗೆ ಬಾಲಸರಸ್ವತಿಯವರು ಒಳಗಾದರು. ಅದರಲ್ಲಿ ಒಂದು ಈ ಪ್ರಸಂಗ:

ಕನ್ನಡದಲ್ಲಿ ಬೌದ್ಧ ಧರ್ಮದ ಕೃತಿಗಳು ೧೯ನೇ ಶತಮಾನದಲ್ಲಿ ಮೊದಲಿಗೆ ಪ್ರಕಟವಾದವು. ಆ ಕಾಲದಲ್ಲಿ "ವಿದ್ಯಾದಾಯಿನಿ" ಪತ್ರಿಕೆಯಲ್ಲಿ ಸಾಹಿತಿಗಳೂ ಶಿಕ್ಷಣವೇತ್ತರೂ, ಚಾರಿತ್ರಿಕ ಗ್ರಂಥಗಳನ್ನು ರಚಿಸಿದವರೂ ಆದ ಎಂ. ಶಾಮರಾವ್ ಅವರು ಬೌದ್ಧಧರ್ಮ ಕುರಿತು ಬರೆದ ಲೇಖನಗಳು ಮೊದಲಿಗೆ ಬಂದವು. ಆದರೆ ಬಿದರೆ ಅಶ್ವತ್ಥನಾರಾಯಣಶಾಸ್ತ್ರಿ ಎಂಬ ವಿದ್ವಾಂಸರು (೧೯೦೮ರಲ್ಲಿ?) ರಚಿಸಿ ಪ್ರಕಟಿಸಿದ "ಧರ್ಮಪದ"ವೆಂಬ ಬುದ್ಧ ಗೀತೆಯು ಕನ್ನಡದಲ್ಲಿ "ಧರ್ಮಪದ" (ದಮ್ಮಪದ) ಗದ್ಯ ಅನುವಾದ ಮೊಟ್ಟಮೊದಲನೇ ಗ್ರಂಥವಾಗಿದೆ. ಅನಂತರ ಜಿ.ಪಿ. ರಾಜರತ್ನಂ ಮೊದಲಾದವರು "ಧರ್ಮಪದ" ಗ್ರಂಥವನ್ನು ಕನ್ನಡಕ್ಕೆ ತಂದಿದ್ದಾರೆ.

ಆದರೆ ಬಿದರೆ ಅಶ್ವತ್ಥನಾರಾಯಣಶಾಸ್ತ್ರಿಯವರು, ಬಾಲಸರಸ್ವತಿಯವರ ಪರಮ ಸ್ನೇಹಿತರಲ್ಲಿ ಒಬ್ಬರಾಗಿದ್ದರು. ಅವರು ಸಂಸಾರ ತಾಪತ್ರಯಗಳಿಂದ ಬಳಲಿ ಆತ್ಮಹತ್ಯೆ ಮಾಡಿಕೊಂಡರು. ಸಾಯುವ ಮುನ್ನ ಪೊಲೀಸ್ ಇಲಾಖೆಗೆ

ಒಂದು ಪತ್ರವನ್ನು ಬರೆದು "ಆತ್ಮಹತ್ಯೆಗೆ ನಾನೇ ಕಾರಣ. ವಿವರಗಳು ಬೇಕಿದ್ದಲ್ಲಿ ನನ್ನ ಗೆಳೆಯ ಬಾಲಸರಸ್ವತಿಯವರನ್ನು ವಿಚಾರಿಸಬಹುದು" ಎಂದು ತಿಳಿಸಿದ್ದರು. ಇದರ ಫಲವಾಗಿ ಪೊಲೀಸರ ವಿಚಾರಣೆಗೆ ಒಳಪಟ್ಟು, ನನಗೇನೂ ತಿಳಿಯದು ಎಂದು ಹೇಳಿದರೂ ಬಾಲಸರಸ್ವತಿಯವರನ್ನು ಪೊಲೀಸರು ಸಾಕಷ್ಟು ಗೋಳು ಹೊಯ್ದುಕೊಂಡರು. "ಸಾಯುವವನು ಸತ್ತ ನನಗೇಕೆ ಈ ಶಿಕ್ಷೆಯನ್ನು ಕೊಟ್ಟ' ಎಂದು ಬಾಲಸರಸ್ವತಿಯವರು ಪರಿತಪಿಸಿದರು. ಇಂಥ ಅನೇಕ ಕ್ಲೇಶಗಳಿಂದ ಜರ್ಜರಿತರಾಗಿ ವ್ಯಾಧಿಗ್ರಸ್ತರೂ ಆದ ಅವರು, ಬೆಂಗಳೂರಿನಲ್ಲಿ ಗುರುಕುಲ ಶಾಲೆ ಪ್ರಾರಂಭವಾಗುವ ಕಾಲಕ್ಕೆ (೧೯೩೮) ಮಹೋದರವ್ಯಾಧಿಯಿಂದ ನರಳಿದಾಗ, ಅವರೊಂದಿಗೆ ಸಹಾಯೋಪಾಧ್ಯಾಯರಾಗಿದ್ದ ಎಂ. ನಾರಾಯಣ ಶಾಸ್ತ್ರಿಗಳು ಔಷಧೋಪಚಾರ ಮಾಡಿದರೂ ಪಥ್ಯ ಪರಿಪಾಲಿಸಲಾಗದೆ ೧೯೩೮ ಮೇ ೨೮ನೇ ತಾರೀಖಿನಂದು ದೈವಾಧೀನರಾದರು.

ಸ್ವತಂತ್ರ ವೃತ್ತಿಯ ಸಾಹಿತಿ, ಮಕ್ಕಳ ಶಿಕ್ಷಕ, ಅನುವಾದಕ, ವಾಗ್ವಿಶಾರದ, ಸಂಸ್ಕೃತ ಪಂಡಿತವರೇಣ್ಯ, ೪೦ಕ್ಕೂ ಹೆಚ್ಚು ಪತ್ತೇದಾರಿ ಕೃತಿಗಳನ್ನು ರಚಿಸಿದ ಮಹಾನ್ ಸಾಹಿತಿ, ಶಿಕ್ಷಣಸಂಸ್ಥೆಗಳ ಸಂಸ್ಥಾಪಕ ಬಾಲಸರಸ್ವತಿಯವರು. ವನಸುಮವೊಂದು ಕಾಡಿನಲ್ಲಿ ಬೆಳೆದು ಅದರ ಹುಟ್ಟನ್ನೂ, ರೂಪನ್ನೂ ಯಾರೂ ನೋಡದಿದ್ದರೂ, ಅದು ಅರಳಿ ನಲಿದು, ಬಾಳಿ, ಬೇರೆಯವರಿಗೆ ತನ್ನ ಸುಗಂಧ ಬೀರಿ, ಬಾಡಿ, ಬತ್ತಿ, ಬಿದ್ದುಹೋಗುವ ಹಾಗೆ ನಾಡು, ನುಡಿಗಳಿಗೆ ಸೇವೆಗೈದರು. ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಪತ್ತೇದಾರಿ ಕಾದಂಬರಿಗಳ ಇತಿಹಾಸ ಸೃಷ್ಟಿಸಿ, ಬಂಗಾಳಿಯಿಂದ ಅನುವಾದಮಾಡಿ, ಕನ್ನಡ ಸಿರಿ ಹೆಚ್ಚಿಸಿ, ಸಂಸ್ಕೃತ ಸೌರಭವನ್ನು ಎಲ್ಲೆಡೆ ಬೀರಿ, ಕನ್ನಡದ ಓದುಗರಿಗೆ ತಮ್ಮ ಕೃತಿಗಳಿಂದ ಅಜರಾಮರರಾಗಿ ವಿದ್ವಾಂಸ ಬಾಲಸರಸ್ವತಿಯವರು ಇಂದಿಗೂ ಮರೆಯಲಾಗದ ಮರೆಯಬಾರದ ಸಾಹಿತಿ ವಿದ್ವಾಂಸರಾಗಿದ್ದಾರೆ.

❐

ಸಿಂಚನ ಕನ್ನಡ ವೇದಿಕೆ

ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಬೆಂಗಳೂರು-560 041.

ಪ್ರೊ. ಜಿ. ಅಶ್ವತ್ಥನಾರಾಯಣ (ಅನಾಜಿ) ಅವರು ಕರ್ನಾಟಕದಲ್ಲಿ ಸದ್ದಿಲ್ಲದೆ ಕನ್ನಡ ಸಾಹಿತ್ಯ ಪರಿಚಾರಿಕೆ ಮಾಡುತ್ತಿರುವ ನಿವೃತ್ತ ಕನ್ನಡ ಪ್ರಾಧ್ಯಾಪಕರು; ವಾಗ್ಮಿ, ಸಾಹಿತಿಗಳಾದ ಇವರು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮೂವತ್ತು ವರ್ಷಗಳ ಕಾಲ ನಾಡಿನ ವಿವಿಧ ಪದವಿ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳಿದ್ದಾರೆ. ಅಮೆರಿಕೆಯಲ್ಲಿ ಕನ್ನಡ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ; ಅನಕೃ-ರಾಮಮೂರ್ತಿ ನೇತೃತ್ವದ ಕನ್ನಡ ಚಳವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಇವರು ಸಿಂಚನ ಕನ್ನಡ ವೇದಿಕೆ, ದೇವುಡು ಪ್ರತಿಷ್ಠಾನ, ಅಖಿಲ ಕರ್ನಾಟಕ ಮಕ್ಕಳಕೂಟ, ಬಿಎಂಶ್ರೀ ಪ್ರತಿಷ್ಠಾನ ಮೊದಲಾದ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಶಾಲಾ-ಕಾಲೇಜು ಪಠ್ಯಪುಸ್ತಕ ತಯಾರಿಕೆಯಲ್ಲಿ ಪಾಲ್ಗೊಂಡಿದ್ದಾರೆ. ಎಂಫಿಲ್., ಪಿಎಚ್.ಡಿ. ವ್ಯಾಸಂಗಿಗಳಿಗೆ ಮಾರ್ಗದರ್ಶಕ ರಾಗಿದ್ದಾರೆ. ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಮಹಲಿಂಗರಂಗನ ಅನುಭವಾಮೃತ ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ. ದೇವುಡು ನರಸಿಂಹಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ ಮೊದಲಾದವರ ಜೀವನಚರಿತ್ರೆಗಳನ್ನು ಇತರ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ನಾಡಿನಾದ್ಯಂತ ಕನ್ನಡ ನಾಡು-ನುಡಿಗಳ ಬಗ್ಗೆ ಸಾವಿರಾರು ಉಪನ್ಯಾಸಗಳನ್ನು ನೀಡಿ ದೂರದರ್ಶನ, ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಇವರು ಪ್ರಸಿದ್ಧ ವಾಗ್ಮಿಗಳಲ್ಲಿ ಒಬ್ಬರಾಗಿದ್ದಾರೆ. ಕನ್ನಡನಾಡಿನ ಹೊಸಗನ್ನಡ ಸಾಹಿತ್ಯಕ್ಕೆ ಅಪೂರ್ವಸೇವೆ ಸಲ್ಲಿಸಿ ಕರ್ನಾಟಕಕ್ಕೆ ದುಡಿದ ಪ್ರಸಿದ್ಧ ಸಾಹಿತಿ-ವಿದ್ವಾಂಸರ ಪರಿಚಯದ ವ್ಯಕ್ತಿಚಿತ್ರಗಳಲ್ಲಿ ಕೆಲವನ್ನು ನಿಮ್ಮ ಕೈಯಲ್ಲಿರುವ 'ಕನ್ನಡ ಸಾಹಿತ್ಯ ದಿಗ್ಗಜರು' ಗ್ರಂಥದಲ್ಲಿ ನೀಡಿದ್ದಾರೆ. ಸಿಂಚನ ಕನ್ನಡ ವೇದಿಕೆಯ ೨೩ನೇ ಪ್ರಕಟನೆಯಾದ ಈ ಗ್ರಂಥ ಕನ್ನಡಕ್ಕೆ ವಿಶಿಷ್ಟ ಕೊಡುಗೆ ಆಗಿದೆ.

